
ಸುಮಧುರ ಮಾಸಿಕ

ಭಾವನಾ

ಮೇ 2000 ರೂ.6







ನಮ್ಮ ಚೊಚ್ಚಲು ಸಂಚಿಕೆಯನ್ನು, ಬಿಡುಗಡೆಯಾದ ವಾರದೊಳಗೇ, ಮಾರುಕಟ್ಟೆಯಲ್ಲಿ ಒಂದೂ ಪ್ರತಿ ಉಳಿಸದಂತೆ, ಮನೆ ತುಂಬಿಸಿಕೊಂಡಿರಿ. ನಿಮ್ಮ ಅಕ್ಕರೆಗೆ ಋಣಿ ಎಂದುಬಿಟ್ಟರೆ ಆಗಲಿಲ್ಲ. ನಿಮ್ಮ ಅಭಿಲಾಷೆ, ಪ್ರತೀಕ್ಷೆಗಳಿಗೆ ತಕ್ಕಂತೆ ಈ ಮಾಸಿಕವನ್ನು ಜೀವಂತಿಕೆ, ತಾಜಾತನಗಳೊಂದಿಗೆ ಬೆಳೆಸುವುದು, ನಾಡಿನ ಮೂಲೆ ಮೂಲೆಗಳಲ್ಲಿರುವ ನಿಮ್ಮೆಲ್ಲರನ್ನೂ ತಲುಪುವುದು - ನಮ್ಮ ಗುರಿ, ದಾರಿ ಎರಡೂ ಆಗಿವೆ, ಎಂದಷ್ಟೆ ಹೇಳಬಲ್ಲೆವು.

ಖಾಸಗೀ ಮೋಹ ಮತ್ತು ಮನುಕುಲದ ದಾಹ ಇವೆರಡರ ಅನಾಮಿಕ ಸಂಗಮದಲ್ಲಿ ಒಳ್ಳೆಯ ಸಾಹಿತ್ಯ ಹುಟ್ಟುತ್ತದೆ. ಶಾಲೆ ಕಾಲೇಜುಗಳು ಮುಗಿದಷ್ಟಕ್ಕೇ ನಮ್ಮ ಶಿಕ್ಷಣ ಆಗಿಹೋಗಲಿಲ್ಲ, ಅದು 'ಜೀವನ ಶಿಕ್ಷಣ'ವಾಗಿ ಸಾಹಿತ್ಯದಲ್ಲಿ ಮುಂದುವರಿಯುತ್ತದೆ. ಒಂದು ಸಮಾಜದಲ್ಲಿ ಮೂಡಿಬರುವ ಚೆನ್ನಾದ ಸಾಹಿತ್ಯ ಎಷ್ಟೊಂದು ವಿಭಿನ್ನ ವ್ಯಕ್ತಿಗಳ ಬಾಳಿನ ಪುಟಗಳಿಂದ ತುಂಬಿರುತ್ತದೆ! ಜೀವನದ ಅಗಾಧತೆಯನ್ನು ಮತ್ತು ಅನುಕ್ಷಣದ ಚಂಚಲತೆಯನ್ನು ಒಟ್ಟಿಗೇ ಭಾಷೆಯ ಭಾರವಿಲ್ಲದೆ ದಯಪಾಲಿಸುವ ಸಾಹಿತ್ಯ, ನಿಷ್ಠುರ ಸಮಯಗಳಲ್ಲಿ ನಮ್ಮನ್ನು ಸಂತೈಸಿ ಸಲಹಬಲ್ಲುದು. ಈ ದಾರಿಯಲ್ಲಿ ಓದಿನ ಮತ್ತು ಬರವಣಿಗೆಯ ರುಚಿಯನ್ನು ಕಿಂಚಿತ್ತಾದರೂ ಉದ್ದೀಪಿಸುವೆಡೆ ನಮ್ಮ ಪ್ರಯತ್ನಗಳಿವೆ.

ಕನ್ನಡದ ಕಳೆದೆರಡು ತಲೆಮಾರುಗಳ ಪುಸ್ತಕಪ್ರೇಮ ಆರಂಭವಾಗಿದ್ದೇ ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಿಂದ. ಇಪ್ಪತ್ತು ವರುಷಗಳ ಹಿಂದೆ ಐನೂರಕ್ಕೂ ಮಿಕ್ಕಿ ಜನಪ್ರಿಯ ಕಾದಂಬರಿಗಳನ್ನು ಬರೆದು ಮನೆಮಾತಾಗಿ, ಈಗ ನಮ್ಮ ನಡುವೆ ಇದ್ದೂ ಅಜ್ಞಾತವಾಸದಲ್ಲಿರುವ ಎನ್.ನರಸಿಂಹಯ್ಯನವರನ್ನು ಹುಡುಕಿಕೊಂಡು ಹೋಗಿ ಮಾತನಾಡಿಸಿದ್ದೇವೆ. ಈ ಸಂಚಿಕೆಯ ಮುಖ್ಯ ಅತಿಥಿ ಅವರು. ಬಿಂಕ ಬಿಗುಮಾನಗಳಿಲ್ಲದ ಈ ಸರಳ ಲೇಖಕರ 'ಸಹವಾಸ'ದೊಂದಿಗೆ ಅವರ ಹೊಚ್ಚಹೊಸ ಪತ್ತೇದಾರಿ ಕತೆಯೊಂದರ ಮೊದಲ ಕಂತು ಕೊಡುತ್ತಿದ್ದೇವೆ. ನಿಮಗಿಷ್ಟವಾಗಬಹುದು ಎಂಬ ನಂಬಿಕೆಯೊಂದಿಗೆ.

ಸಂಪಾದಕ



Keshav

ಭಾವ ಲೋಕ

ಕತೆಗಳು

ಆಯಿ ಬರೆದ ಭಾಷ್ಯ / 4
ಸುಮಂಗಲಾ ಬಾದರದಿನ್ನಿ

ಇಳಿವಯಸ್ಸಿನ ಡೈವೋರ್ಸ್ / 24
ಕೆ. ಸತ್ಯನಾರಾಯಣ

ಸುನೀತಾಗೆ ಮಲ್ಲಿಗೆ ಎಂದರೆ ಇಷ್ಟ / 40
ಭಾಸ್ಕರ ಹೆಗಡೆ

ನನಗೂ ಒಂದು ಸೀಟು / 52
ಶಾಂತಾದೇವಿ ಕಣವಿ

ಸಾರಿ, ಪದ್ಮಿನಿ / 68
ಅಪಾರ

ಪರಾಧೀನ / 84
ವಸುಧೇಂದ್ರ

ಬೆದರಿಕೆಯ ಫಲ / 104
ಎನ್. ನರಸಿಂಹಯ್ಯ

ಶತಮಾನದ ಮೆಲುಕು


ಮಿಸ್ 1954 / 35
ಕೊರಡ್ಕಲ್ ಶ್ರೀನಿವಾಸರಾವ್


ಜಾನಿ ಮೆಟ್ಟಿಲು ಹತ್ತಿದಳು / 128
ಕೆ. ಸದಾಶಿವ

ವಿಶ್ವ ಭಾರತಿ

ನನ್ನಮ್ಮ ಎಲ್ಲಿ ಹೋದಳು-
ಶಣ್ಯೈ ಗೋಂಯಬಾಬ / 62
ಶಾ.ಮಂ. ಕೃಷ್ಣರಾಯ

ಮಂಗಳವಾರದ ಒಂದು ಮಧ್ಯಾಹ್ನ-
ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್./138
ನರಹಳ್ಳಿ ಬಾಲಸುಬ್ರಹ್ಮಣ್ಯ





ಭಾವನಾ

ಕವಿ ಸಮಯ

ಸುಜಾತ ಕುಮಟಾ / 80

ಎಸ್. ಮಂಜುನಾಥ್ / 82

ಸಹವಾಸ

ಎನ್. ನರಸಿಂಹಯ್ಯ / 100

ಕ್ಯಾನ್‌ವಾಸ್

ಶಂಕರ ಪಾಟೀಲ / 124

ಮಧುವನ

ಕಸ್ತೂರಿ ಬಾಯರಿ / 146

ಅಂಕಣಗಳು

ಕಥನ ಕುತೂಹಲ / 50

ಮಾನಸೋಲ್ಲಾಸ / 98

ಶಬ್ದತೀರ / 78

ಕೊನೇ-ಸಿಪ್ / 160

ಕಾಗದದ ದೋಣಿ / 20

ಗರಿ / 120

ತೆರೆದ ಅಂಚೆ / 154

ಸಂಪುಟ -1 ಸಂಚಿಕೆ - 2

ಮೇ 2000

ಪ್ರಕಾಶಕರು, ಮುದ್ರಕರು, ಮಾಲಿಕರು

ವಿಜಯ ಸಂಕೇಶ್ವರ

ಆನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಪ್ರಧಾನ ಸಂಪಾದಕರು

ಸಂತೋಷಕುಮಾರ ಗುಲ್ವಾಡಿ

ಸಂಪಾದಕ

ಜಯಂತ ಕಾಯ್ಕಿಣಿ

ಮುಖಪುಟ ತೈಲಚಿತ್ರ: ವಿಜಯ ಸಿಂಧೂರ್

ಸಂಚಿಕೆಯ ಕಲಾವಿದರು: ಇಕ್ಬಾಲ್ ಅಹ್ಮದ್, ಸೃಜನ್,
ಶಂಕರ ಪಾಟೀಲ, ಸ್ಮಿತಾ, ಶ್ರೀಪಾದ್, ಸಂಗು.

ಹಿಂಪುಟ ಪಾರದರ್ಶಿಕೆ : ಕೆ. ಎಸ್. ರಾಜಾರಾಮ್

ಸಂಪಾದಕೀಯ ಕಾರ್ಯಾಲಯ

ನಂ. 32, 2ನೆಯ ಮುಖ್ಯರಸ್ತೆ, ವೈಯಾಳಿಕಾವಲ್

ಬೆಂಗಳೂರು - 560 003

ದೂರವಾಣಿ : 3365312, 3365313

ಫ್ಯಾಕ್ಸ್: 080-3340311

ಪ್ರಧಾನ ಕಛೇರಿ

ಗಿರಿರಾಜ ಅನೆಕ್ಸ್

ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ

ದೂರವಾಣಿ: 0836-253656, 253657

ಫ್ಯಾಕ್ಸ್: 0836-253630



ಸುಮಂಗಲಾ ಬಾದರದಿನ್ನಿ

ಆಯಿ ಬರೆದ ಭಾಷ್ಯ



ಹೊರಗೆ ಸಣ್ಣದಾಗಿ ಮಳೆ ಹನಿಯುತ್ತಿತ್ತು. ಆಕಾಶದ ತುಂಬ ತುಂಬಿಕೊಂಡಿದ್ದ ಕಾರ್ಮೋಡಗಳನ್ನು ನೋಡಿದರೆ ಮಳೆ ಇನ್ನೂ ಹೆಚ್ಚಾಗುವ ಸೂಚನೆಯಿತ್ತು. ಮನೀಷಾ ಕಿಟಕಿಯಾಚೆ ನೋಡುತ್ತ ವರಾಂಡದಲ್ಲಿ ಕುಳಿತಿದ್ದಳು. ಕಿಟಕಿಯಿಂದ ಅಲ್ಲಿಯ ಮುಖ್ಯರಸ್ತೆ ಕಾಣಿಸುತ್ತಿತ್ತು. ರಸ್ತೆಯ ಅಕ್ಕಪಕ್ಕದಲ್ಲಿ ದಟ್ಟವಾಗಿ ಬೆಳೆದಿದ್ದ ಗುಲ್ ಮೊಹರ್ ಮರಗಳ ಹಚ್ಚ ಹಸಿರು ಎಲೆಗಳ ಮೇಲೆ ಬೀಳುತ್ತಿದ್ದ ಮಳೆಯ ಹನಿಗಳು... ಎದೆಯಾಳದ ಕೆಂಪು ನೆನಪುಗಳ ಮೇಲೆ ಬೀಳುವ ಕಂಬನಿಯ ಹನಿಗಳ ಹಾಗೆ. ಹಗಲಿನ ಹೊತ್ತು ಅಥವಾ ಮುಸ್ಸಂಜೆಯ ಹೊತ್ತು ಸಣ್ಣಗೆ ಹನಿಯುವ ಮಳೆಯೆಂದರೆ ಮನೀಷಾಗೆ ತುಂಬ ಇಷ್ಟವಾಗುತ್ತಿತ್ತು.

ಎಷ್ಟೋ ಸಲ ತನ್ನ ಕಂಪನಿಯ ಆಫೀಸಿನಲ್ಲಿದ್ದಾಗಲೂ ಅಷ್ಟೇ... ಮಾಡುತ್ತಿರುವ ಕೆಲಸ ಬಿಟ್ಟು ಮೊದಲ ಮಹಡಿಯಲ್ಲಿರುವ ಆ ಸುಸಜ್ಜಿತ ಹವಾ ನಿಯಂತ್ರಿತ ಛೇಂಬರಿನ ದೊಡ್ಡ ಕಿಟಕಿಯ ಗಾಜಿಗೆ ಆತುಕೊಂಡು ತಾಸುಗಟ್ಟಲೆ ಹೊರಗೆ ನೋಡುತ್ತಾ ನಿಂತಿರುತ್ತಿದ್ದಳು. ಆಗೆಲ್ಲ ಸ್ಕೂಲಿನ ಬ್ಯಾಗು ಬೆನ್ನಿಗೇರಿಸಿ, ಹರಕು ರೈನ್‌ಕೋಟಿನೊಳು ಮುದುರಿ ನಿಂತು ಬಾಬಾನಿಗೆ ಕಾಯ್ತಾ ನಿಂತ

ಹುಡುಗಿಯ ಚಿತ್ರ, ಸೈಕಲ್ ಮೇಲೆ ಹಿಂದೆ ಕುಳಿತು ಒದ್ದೆಯಾಗ್ತಿರೋ ಬಾಬಾನಿಗೆ ಛತ್ರಿ ಹಿಡಿಯಲು ಪ್ರಯತ್ನಿಸುತ್ತಿರುವ ಹುಡುಗಿಯ ಚಿತ್ರ... ಮನೆ ಹಿಂದಿನ ಹಿತ್ತಲಿನಲ್ಲಿ ಮಳೆಯಲ್ಲಿಯೇ ಆಯೀ ಕೆಲಸ ಮಾಡುವುದನ್ನು ನೋಡಿ "ಆಯೀಗೆ ಥಂಡಿಯಾಗುತ್ತೆ" ಅಂತ ಬಿಕ್ಕುತ್ತಿದ್ದ ಹುಡುಗಿಯ ಚಿತ್ರ... ಹೀಗೇ ಒಂದೊಂದು ಮಳೆಹನಿಯೂ ನಿರ್ಜೀವ ಟಾರ್ ರೋಡಿಗೆ ಬಡಿಯುವಾಗ ಏನೇನೋ ಬಾಲ್ಯದ ಚಿತ್ರಗಳ ಚಿತ್ತಾರವನ್ನೇ ಮೂಡಿಸಿದ ಹಾಗನ್ನಿಸಿ ಕಣ್ಣುತುಂಬಿ ಬಂದರೂ ಮನದಲ್ಲಿ ಆಹ್ಲಾದತೆ ಆವರಿಸಿದ ಹಾಗನ್ನಿಸಿ ಖುಷಿಯಾಗುತ್ತಿದ್ದಳು.

ಅಪರೂಪಕ್ಕೊಮ್ಮೆ ಮಧ್ಯಾಹ್ನ ಮನೆಯಲ್ಲಿರುವಾಗ ಮಳೆ ಬಂದರೆ ಕಪ್ ತುಂಬ ಕಾಫಿ ಸುರಿದುಕೊಂಡು ವರಾಂಡದಲ್ಲೋ, ಹೊರಗಿನ ಹಾಲ್‌ನಲ್ಲಿಯೋ ಕಿಟಕಿ ಬಳಿ ನಿಂತು ಮಳೆಯನ್ನೇ ಕಣ್ಣಲ್ಲಿ ತುಂಬಿಕೊಳ್ಳುವಂತೆ ತಲ್ಲೀನಳಾಗಿ ನೋಡುತ್ತಿದ್ದಳು.

ಹಗಲಿನ ಮಳೆಯನ್ನು ಇಷ್ಟಪಟ್ಟ ಹಾಗೆ ರಾತ್ರಿಯಿಡೀ ಸುರಿಯುವ ಮಳೆಯನ್ನು ಅವಳು ಇಷ್ಟಪಡುತ್ತಿರಲಿಲ್ಲ. ಅದು ಇತ್ತೀಚೆಗೆ... ಮಗಳು ಹುಟ್ಟಿದ ನಂತರ. ರಾತ್ರಿ ಹೊರಗೆ ಮಳೆ ಹೊಯ್ಯುತ್ತಿದ್ದರೆ ಒಂದೊಂದು ಹನಿಯೂ ಎದೆಯೊಳಕ್ಕೆ ತಣ್ಣಗೆ ಇಳಿದ ಹಾಗನ್ನಿಸಿ... ಜೊಂಯ್ ಎನ್ನುವ ಮಳೆಯ ಸದ್ದಿನಲ್ಲಿ ಬೇರೇನೋ ಧ್ವನಿ ಇದ್ದಂತೆ ಅನ್ನಿಸಿ ಅಸ್ವಸ್ಥಳಾಗುತ್ತಿದ್ದಳು. ರಾತ್ರಿಯಿಡೀ ಎಂಥದೋ ತಲ್ಲಣ... ಕನವರಿಕೆ... ಸುಸ್ತಾಗಿ ಬೆಳಗಿನ ಜಾವದ ಹೊತ್ತಿಗೆ ಕಣ್ಣು ಮುಚ್ಚುವ ಹಾಗಾಗಿ ಬೆಳಗ್ಗೆ ಸರಿಯಾಗಿ ಆರೂವರೆಗೆ ಅಲಾರಾಂ ಸದ್ದಿಗೆ ಅವಳು ಕಣ್ಣು ಬಿಡುವಷ್ಟರಲ್ಲಿ ಹೊಸತೇ ಬೆಳಗು ಕಿಟಕಿಯಾಚೆ ಕಣ್ಣು ಪಿಳುಕಿಸುತ್ತಿತ್ತು. ರಾತ್ರಿಯಿಡೀ ಮಳೆ ಹೊಯ್ದಿದ್ದೇ ಸುಳ್ಳೇನೋ ಎಂಬಂತೆ ಒಣಗಿರುತ್ತಿದ್ದ ಟಾರುರೋಡು, ಎಳೆಬಿಸಿಲಿಗೆ ಹೊಳೆಯುವ ಹೂಗಿಡಗಳು ಮತ್ತು ರಸ್ತೆಯಂಚಿನ ಗುಲ್‌ಮೊಹರ್ ಮರಗಳು... ಏಳುವ ಮುಂಚೆ ನೋಡಿದರೆ ಒದ್ದೆಯಾದ ದಿಂಬಿನ ಕವರ್ ಕೂಡ ತುಸು ಒಣಗಿ ಬೆಚ್ಚಗಿದ್ದ ಹಾಗೆ ಮನೀಷಾಗನ್ನಿಸುತ್ತಿತ್ತು.

ಆ ಸಂಜೆ... ಮಳೆ ಹನಿಯುತ್ತಲೇ ಇತ್ತು. ಮನೀಷಾ ಕಾಯುತ್ತ ಕುಳಿತಿದ್ದು ಕನ್ಸಲ್ಟಂಟ್ ಆಗಿ ಬರಲಿರುವ ವ್ಯಕ್ತಿಗಾಗಿ. ಅಮೆರಿಕಾದಿಂದ ಬಂದಿದ್ದ ಅವನೊಡನೆ ಕಂಪನಿಯ ಸಮಸ್ಯೆಗಳನ್ನು ಚರ್ಚಿಸುವುದಿತ್ತು. ಆತ ಹಾಗೆಲ್ಲ ಯಾರಿಗೂ ಕನ್ಸಲ್ಟಂಟ್ ಆಗುವುದಿಲ್ಲ, ತಣ್ಣನೆಯ ವಿಕ್ಷಿಪ್ತ ಸ್ವಭಾವದ ವ್ಯಕ್ತಿ, ಅಮೆರಿಕಾದಲ್ಲಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ವಲಯದಲ್ಲಿ ತುಂಬ ಹೆಸರುವಾಸಿ. ಇದೇ ಮೊದಲ ಬಾರಿಗೆ ಭಾರತದಲ್ಲಿ ನಡೆಯುವ ಕಾನ್ಫರೆನ್ಸ್‌ಗೆ ಬಂದಿದ್ದಾನೆ...ಇತ್ಯಾದಿ ವಿವರಗಳನ್ನೆಲ್ಲ ವಿಕ್ರಮ್‌ನ ಪಿ.ಎ. ಸಂಗ್ರಹಿಸಿದ್ದ. ಕಡೇ ಗಳಿಗೆಯಲ್ಲಿ ತಾನು ವಾಪಾಸು ಹೋಗಲಿರುವ ಹಿಂದಿನ ದಿನದ ಒಂದು ಗಂಟೆಯ ಅವಧಿಯನ್ನು ಇವರಿಗೆ ಕೊಡಲು ಒಪ್ಪಿದ್ದನಾತ. ವಿಕ್ರಮ್, ಮನೀಷಾ, ಕಂಪನಿಯ ಇನ್ನೊಂದಿಬ್ಬರು ಮೊದಲೇ ಚರ್ಚಿಸಿ ಅವನೊಂದಿಗೆ ಕೇಳಬೇಕಾದ ಪ್ರಶ್ನೆಗಳನ್ನು, ಆಗ ಏಳಬಹುದಾದ ಸಂದೇಹಗಳನ್ನು, ಚರ್ಚಿಸಿ ತಿಳಿದುಕೊಳ್ಳಬೇಕಾದ ವಿಷಯಗಳನ್ನು ಎಲ್ಲ ಮೊದಲೇ ಪಟ್ಟಿ ಮಾಡಿಕೊಂಡಿದ್ದರು. ಒಂದು ಗಂಟೆಯ ಅವಧಿಯಲ್ಲಿ ಒಂದು ನಿಮಿಷವೂ ವ್ಯರ್ಥವಾಗಬಾರದು. ಅದಕ್ಕೆಂದೇ ಪೂರ್ವತಯಾರಿ.

ಆದರೆ ಅಚಾನಕ್ ವಿಕ್ರಮ್ ಬಾಂಬೆಗೆ ಹೋಗಬೇಕಾಗಿ ಬಂದಿತ್ತು. ವಿಕ್ರಮ್ ಕಾರಿನಲ್ಲಿ ಕುಳಿತುಕೊಳ್ಳುವವರೆಗೆ ಹೇಳ್ತಾನೆ ಇದ್ದ.

"ಏಳೂವರೆಗೆ ಡ್ರೈವರ್ ಜೊತೆ ಕಾರು ಕಳಿಸಿಬಿಡು. ಸರಿಯಾಗಿ ಎಂಟಕ್ಕೆ ಅವರು ಬರೋದು. ಒಂಬತ್ತರವರೆಗೆ ಡಿಸ್ಕಷನ್... ಏನೂ ಮರೆಯಬೇಡ. ಎಲ್ಲ ಸರಿಯಾಗಿ ಕೇಳು. ಆಮೇಲೆ ಈ ಚೆಕ್ ಕೊಡು. ಅಪಾಯಿಂಟ್‌ಮೆಂಟ್ ಸಿಕ್ಕಿರೋದು ನಮ್ಮ ಅದೃಷ್ಟ".

ಹೊರಗೆ ಮಳೆ ಮತ್ತೆ ಶುರುವಾಗಿತ್ತು... ಆ ದಿನ ವಿಕ್ರಮ್ ಹೇಳಿದ ಮಾತು, ''ನಿಂಗೆ ಆ ಕನ್ನಡದವರು ಅಂದ್ರೆ ಪ್ರೀತಿ'' ನೆನಪಾಗುತ್ತಿದ್ದಂತೆ ಮನದ ಮೂಲೆಯಲ್ಲಿ ಅಡಗಿದ್ದ ಸಂಗತಿಯೊಂದು ಮಳೆಯ ಸದ್ದಿನೊಂದಿಗೆ ಸೇರಿಕೊಂಡು ಮೆಲ್ಲನೆ ಮೇಲೇಳಲು ಹವಣಿಸುತ್ತಿರುವಂತೆ ಭಾಸವಾಯಿತವಳಿಗೆ. ಈ ಮಳೆಯ ಹನಿಗಳು ಯಾವುದೋ ಎಲೆಯ ಮೇಲೆ ಬಿದ್ದು, ಕೆಳ ಸಿಡಿದ ನೀರು ಮತ್ತೆ ಯಾವುದೋ ನೆನಪುಗಳ ಮರಳಿನ ಕಣಕ್ಕೆ ತಾಗಿ, ಎಲ್ಲ ಒದ್ದೆಯಾದಂತೆ... ಈಗಲೇ ಯಾಕೆ ಹೀಗೆಲ್ಲ ಅನ್ನಿಸುತ್ತಿದೆ... ಮನೀಷಾ ಯೋಚಿಸುತ್ತ ಮತ್ತೆ ಹೊರ ನೋಡುತ್ತಿದ್ದಂತೆ ಮಳೆ ಜೋರಾಗಿ ಹೊಯ್ಯಲಾರಂಭಿಸಿತ್ತು. ರಪ್‌ರಪ್ ಹೊಡೆಯುತ್ತಿದ್ದ ಮಳೆ... ಈ ಸದ್ದು ಮಾತ್ರ ಥೇಟ್ ಪಾಲ್ಘಾರಿನ ಆ ಹಂಚಿನ ಮನೆಯ ಮೇಲೆ ಬೀಳುತ್ತಿದ್ದ ಮಳೆಯ ಸದ್ದಿನ ಹಾಗೆ ಅನ್ನಿಸಿ ಗಕ್ಕನೆ ಆ ಜಾಡು ಹಿಡಿದು ಹೊರಟ ಅವಳು ಹೋಗಿ ನಿಂತಿದ್ದು ಮಾತ್ರ ಪಾಲ್ಘಾರಿನ ಆ ಮನೆಯ ಜಗುಲಿಯಲ್ಲಾಗಿತ್ತು.

ಸೋರುವ ಆ ಮನೆಯಲ್ಲಿ ಎಲ್ಲೆಡೆ ಅಲ್ಯೂಮಿನಿಯಂ ಪಾತ್ರೆ ಇರಿಸಿ ಕೆಲವು ಬಾರಿ ಕುಳಿತೇ ಕಳೆಯುತ್ತಿದ್ದ ರಾತ್ರಿಗಳು... ಎಲ್ಲರಿಗಿಂತ ಚಿಕ್ಕವಳಾಗಿದ್ದ ಮನೀಷಾ ಮಳೆ ಸದ್ದು ಕೇಳ್ತಾ ಆಯಿಯ ಮಡಿಲಲ್ಲಿ ತಲೆಯಿಟ್ಟು ಅವಳಿಗೆ ಆತುಕೊಂಡು ಕುಳಿತೇ ನಿದ್ದೆ ಹೋಗಿರುತ್ತಿದ್ದಳು. ಆ ಕೈಮಗ್ಗದ ಒರಟು ಸೀರೆಯ ವಾಸನೆ, ಪಾತ್ರೆ ಮಸಿಯಿಂದ ಕಪ್ಪಾದ ಬಿಳಿಯ ಬೆರಳಿನ ಉಗುರು ತುದಿಗಳು, ಇನ್ನೇನು ರಕ್ತ ಒಸರುತ್ತದೆ ಎಂಬಂತೆ ಬಿರುಕು ಬಿಟ್ಟಿರುತ್ತಿದ್ದ ಆಯಿಯ ಹಿಮ್ಮಡಿ... ಯಾವುದನ್ನೂ ಮರೆಯುವ ಹಾಗೇ ಇಲ್ಲ. ಆ ಮನೆಯಲ್ಲಿದ್ದಾಗ ಮಳೆಯೆಂದರೆ ಹೊರಗಷ್ಟೇ ಸುರಿಯುವ ನೀರಲ್ಲ, ಮನೆಯೊಳಗೆ ಎಲ್ಲೆಂದರಲ್ಲಿ ಹಂಚಿನ ಬಿರುಕಿನಿಂದ ಸೋರುವ ನೀರಿನ ಧಾರೆ. ಆಗಿನಿಂದ ಮನೀಷಾಗೆ ಮಳೆಯೆಂದರೆ ಮನೆ ಹೊರಗಿನ, ಮನೆ ಒಳಗಿನ... ಎಲ್ಲಕ್ಕಿಂತ ಮನದೊಳಗಿನ ಜಲಧಾರೆಯಿದ್ದಂತೆ.

ಮೊದಲು ನಾಸಿಕದಲ್ಲಿ ಬಟ್ಟೆಯ ಮಿಲ್ ಒಂದರಲ್ಲಿ ಒಳ್ಳೆಯ ಕೆಲಸದಲ್ಲಿದ್ದ ಮನೀಷಾನ ಬಾಬಾ ತಮ್ಮ ಉಳಿತಾಯದ ಹಣವನ್ನೆಲ್ಲ ಪಾಲ್ಘಾರಿನಲ್ಲಿ ಗದ್ದೆ, ತೋಟ ನೋಡಿಕೊಳ್ಳುತ್ತಿದ್ದ ಅಣ್ಣತಮ್ಮಂದಿರಿಗೆ ಕೊಟ್ಟುಬಿಡುತ್ತಿದ್ದರು. ನಂತರ ಅಣ್ಣ ತಮ್ಮಂದಿರು ಪಾಲಾಗುವಾಗ ನೀರಾವರಿಯ ಜಮೀನನ್ನು ತಾವಿಟ್ಟುಕೊಂಡು ಮನೀಷಾನ ಬಾಬಾನಿಗೆ ಕಲ್ಲಿನ ಗುಡ್ಡೆಯಂತಹ ಒಣ ಜಮೀನನ್ನು ಕೊಟ್ಟಿದ್ದರು. ಅಣ್ಣತಮ್ಮಂದಿರನ್ನು ಅತಿಯಾಗಿ ನಂಬಿದ್ದ ಅವರಿಗೆ, ಅದೃಷ್ಟ ಪೂರ್ಣ ಕೈಕೊಟ್ಟಿದೆ ಎಂದರಿವಾಗಿದ್ದು ಮಿಲ್ ಲಾಕೌಟ್ ಆಗಿ ಕೆಲಸ ಕಳೆದುಕೊಂಡು ತಮ್ಮ ಹಿಸ್ಸೆಗೆ ಬಂದಿದ್ದ ಆ ಸೋರುವ ಮನೆಗೆ ಹೆಂಡತಿ, ಮೂರು ಮಕ್ಕಳೊಡನೆ ಬಂದಿಳಿದಾಗಲೇ.

ಮೂರು ವರ್ಷ ಎಷ್ಟೇ ಕಷ್ಟಪಟ್ಟರೂ ಆ ಕಲ್ಲಿನ ಗುಡ್ಡೆಯಲ್ಲಿ ಹೂ ಅರಳಿಸಲಾಗಿರಲಿಲ್ಲ. ಅಲ್ಲಿ ಇಲ್ಲಿ ಸಾಲ, ಅಣ್ಣತಮ್ಮಂದಿರ ಅಟ್ಟಹಾಸ, ಸರೀಕರೆದುರಿನ ಅವಮಾನ... ಸೋತು ಸುಣ್ಣವಾದ ಮನೀಷಾನ ಬಾಬಾ ಬಂದ ಬೆಲೆಗೆ ಆ ಜಮೀನು ಮಾರಿ ಬೆಳಗಾಂವಿಗೆ ಬಂದಿದ್ದರು. ಪಾಲ್ಘಾರಿನ ಮನೆಯಲ್ಲಿ ಸಾಮಾನು ಕಟ್ಟಿಡುವಾಗ, ಅಲ್ಲಿಂದ ಹೊರಡುವಾಗ... ಹೀಗೇ ಜೋರು ಮಳೆ. ಯಾರೊಬ್ಬರೂ ಇವರನ್ನು ಕಳಿಸಲಿಕ್ಕೆ ಬಾರದ ಆ ಮಳೆಯ ಸಂಜೆ... ಪುಟ್ಟ ಮನೀಷಾಳಿಗನ್ನಿಸಿತ್ತು, ತಮ್ಮ ದುಃಖಕ್ಕೆ ಆಕಾಶ ಕೂಡ ಅಳ್ತಾ ಇದೆ... ಇದ್ದಕ್ಕಿದ್ದಂತೆ ಇಡೀ


ಪ್ರಪಂಚದಲ್ಲಿ ಒಂಟಿದ್ವೀಪದಂತಾದ ತಮ್ಮ ಕುಟುಂಬದ ಜೊತೆ ಆ ದೊಡ್ಡ ಕಪ್ಪು ಮೋಡವನ್ನು ಆಕಾಶ ಕಳಿಸ್ತಾ ಇದೆ ಅಂತ.

ಬೆಳಗಾಂವಿಯಲ್ಲಿ ಬಾಬಾನಿಗೆ ನಾಲ್ಕಾರು ಗೆಳೆಯರ ಬೆಂಬಲವಿತ್ತು. ಸಣ್ಣ ಬಾಡಿಗೆ ಮನೆಯೊಂದನ್ನು ಹಿಡಿದು ಹೂವಿನ ಗಿಡಗಳು, ಹಣ್ಣಿನ ಗಿಡಗಳು, ತೆಂಗಿನಗಿಡಗಳು... ಅನೇಕ ಗಿಡಗಳ ಚಿಕ್ಕ ನರ್ಸರಿಯನ್ನು ಪ್ರಾರಂಭಿಸಿದ್ದರು. ಬಾಬಾನ, ಆಯಿಯ ಕೈಯಲ್ಲಿ ಜೀವ ತುಂಬಿಕೊಂಡ ಗಿಡಗಳು ಯಾರದೋ ಕೈತೋಟದಲ್ಲಿ ಯಾರದೋ ಕುಂಡಾಳಿಗಳಲ್ಲಿ ಹಚ್ಚಹಸಿರಾಗಿ ನಗುವಾಗ ಇವರೆಲ್ಲರ ಕಣ್ಣಾಲಿಗಳಲ್ಲಿಯೂ ಕನಸು ಹೂಗಳು ನಗಲಿಕ್ಕೆ ಪ್ರಾರಂಭವಾಗಿದ್ದವು. ಬಾಬಾನ ಅದೃಷ್ಟ ಈ ಸಲ ಮುಗುಳ್ನಕ್ಕಿತ್ತು. ನಾಲ್ಕೈದು ವರ್ಷಗಳಲ್ಲಿ ಎರಡೇ ಕೋಣೆಯ ಚಿಕ್ಕ ಬಾಡಿಗೆ ಮನೆಯಿಂದ ಟಿಳಕವಾಡಿಯಲ್ಲಿ ಸ್ವಂತ ಮನೆ ಖರೀದಿಸುವಷ್ಟು ಹಣ ಗಳಿಸಿದ್ದರು.

ಬೆಳಗಾವಿಗೆ ಬಾಬಾ ಮತ್ತು ಮಕ್ಕಳು ಹೊಂದಿಕೊಂಡ ಹಾಗೆ ಆಯೀ ಮಾತ್ರ ಹೊಂದಿಕೊಳ್ಳಲೇ ಇಲ್ಲ. ಪಾಲ್ಘಾರಿನ ಭೂಮಿ-ಮನೆಯನ್ನು ಬಿಟ್ಟು ಅಲ್ಲಿಯವರೆಗೆ ಹೆಸರೂ ಕೇಳದಿದ್ದ ಕರ್ನಾಟಕದ ಈ ಊರಿಗೆ ಬಂದು ನಿಲ್ಲುವಂತಾದ ತಮ್ಮ ದೌರ್ಭಾಗ್ಯವನ್ನು ಸದಾ ಹಳಿಯುತ್ತಿದ್ದರು. ಬೆಳಗಾವಿ, ಅಲ್ಲಿಯ ಕನ್ನಡಿಗರು, ಎಲ್ಲದರ ಬಗ್ಗೆ ಏನೋ ಅಸಹನೆ... ಇಂತಹದೆಂದು ಹೇಳಲಾಗದ ದ್ವೇಷದಂತಹ ಭಾವನೆ ಆಯಿಯಲ್ಲಿ ಒಳಗೊಳಗೆ ಬೇರುಬಿಟ್ಟಿತ್ತೇನೋ... ಮಹಾರಾಷ್ಟ್ರದ ಒಂದು ಭಾಗವೇನೋ ಎಂದು ಭಾಸವಾಗುವಷ್ಟರ ಮಟ್ಟಿಗೆ ಮರಾಠಿಗರಿಂದಲೇ ತುಂಬಿದ, ಕನ್ನಡದ ಒಂದು ಶಬ್ದವನ್ನು ಗಾಳಿ ಕೂಡ ಪಿಸುಗುಡದಂತಹ ಆ ಟಿಳಕವಾಡಿ ಬಡಾವಣೆಯಲ್ಲಿ ಸ್ವಂತ ಮನೆಗೆ ಬಂದ ನಂತರ ಅವರ ಕನ್ನಡ ದ್ವೇಷ ಒಳಗೊಳಗೇ ಹೆಚ್ಚುತ್ತಾ ಹೋಗಿರಬೇಕು. ಬಾಬಾ ವ್ಯವಹಾರಕ್ಕೆ ಅಂತ ಸ್ವಲ್ಪ ಕನ್ನಡ ಕಲಿತರು. ಮಕ್ಕಳು ತಮ್ಮ ಕಾನಡೀ ದೋಸ್ತರ ಜೊತೆ ಆಡುತ್ತ ಕನ್ನಡ ಕಲಿತರು. ಆಯೀ ಮಾತ್ರ ಒಂದಕ್ಷರ ಕನ್ನಡ ಕಲಿಯಲಿಲ್ಲ. ಅದೊಂದು ಗಂಭೀರ ವಿಷಯ ಅಂತ ಯಾರೂ ಭಾವಿಸಿರಲೇ ಇಲ್ಲ.

ಮುಂದೆ ತಾಯಿಯ (ಅಕ್ಕನ) ಮದುವೆಯಾಗಿತ್ತು. ಎಂ.ಬಿ.ಎ. ಮುಗಿಸಿ ಬಾಂಬೆಯಲ್ಲಿ ಆಟೋ ಕನ್ಸಲ್ಟಂಟ್ ಲಿಮಿಟೆಡ್‌ನಲ್ಲಿ ಆಗತಾನೆ ಕೆಲಸಕ್ಕೆ ಸೇರಿದ್ದ ಮನೀಷಾಗೆ ಅಲ್ಲಿ, ಇಲ್ಲಿ ವರಗಳನ್ನು ಹುಡುಕುತ್ತಿದ್ದರು.

ಆಗಸ್ಟ್ ತಿಂಗಳಿನ ಒಂದು ರಾತ್ರಿ ಇದ್ದಕ್ಕಿದ್ದಂತೆ ಮನೀಷಾಗೆ ಮನೆಯಿಂದ ಬಾ ಅಂತ ಫೋನ್ ಕರೆ ಬಂದಿತ್ತು. ರಾತ್ರಿಯಿಡೀ ಸುರಿಯುತ್ತಿದ್ದ ಮಳೆ... ಸುವಿಹಾರಿ ಬಸ್ಸಿನಲ್ಲಿ ನಿದ್ದೆ ಮಾಡದೆ ನಸುಗತ್ತಲೆಯಲ್ಲಿ ಬಿಳೀ ಗಾಜಿನಿಂದಾಚೆ ಬೀಳುತ್ತಿರುವ ನೀರನ್ನೇ ನೋಡ್ತಾ ಕುಳಿತಿದ್ದ ಮನೀಷಾಗೆ ಬೆಳಗಿನ ಜಾವವಷ್ಟೇ ನಿದ್ದೆ ಹತ್ತಿತ್ತು.



ಬೆಳಗಾವಿಯಲ್ಲಿ ಬಸ್ಸಿಳಿದು ನೋಡಿದರೆ... ಮಳೆ ಬಂದ ಕುರುಹೂ ಇಲ್ಲದಂತೆ ಸ್ವಚ್ಛ, ತೊಳೆದಿಟ್ಟಹಾಗಿದ್ದ ಟಾರು ರಸ್ತೆ... ಹಚ್ಚಹಸಿರು ಎಲೆ ತುಂಬಿದ ಗಿಡಗಳು... ಒಂದೇ ಒಂದು ಮರಳಿನ ಕಣ ಕೂಡ ಇಲ್ಲದಂತಿದ್ದ ಆ ರೈಲ್ವೇ ಗೇಟಿನ ಕಂದು ಹಳಿಗಳು... ಅವಳು ಟಿಳಕ ವಾಡಿಯತ್ತ ಹೋಗುವಾಗ ಕಾಣುವ ಎಂದಿನ ದೃಶ್ಯಗಳು... ಆದರೆ ಯಾವುದೂ ಮನಸ್ಸಿಗೆ ಮುದ ಕೊಡದೆ ಎಂಥದೋ ಬೇಸರ ಮೆಲ್ಲನೆ ಆವರಿಸುತ್ತಿದ್ದಂತೆ ಅವಳಿಗನ್ನಿಸುತ್ತಿತ್ತು.

ರಾಜಕೋಟಾದಿಂದ ಬಂದಿದ್ದ ತಾಯಿ, ಪೂನಾದಿಂದ ಬಂದಿದ್ದ ತಮ್ಮ... ಹೇಳಿಕಳಿಸಿ ಬಂದಿದ್ದೇ? ಮನೆಯಲ್ಲಿನ ಒಂದು ರೀತಿಯ ಗಂಭೀರ ವಾತಾವರಣ, ತನ್ನನ್ನು ಅಳೆಯುವಂತೆ ನೋಡುತ್ತಿರುವ ಆಯಿಯ ಕಣ್ಣುಗಳು... ಏನೋ ಹಕೀಕತ್ತು ಇದೆ ಅಂತ ಮನೀಷಾಗೆ ತೀವ್ರವಾಗಿ ಅನ್ನಿಸುತ್ತಿತ್ತು. ನಾಷ್ಟಾ ಮುಗಿಸಿ ಕಾಫಿ ಕಪ್ಪನ್ನು ಕೈಗೆತ್ತಿಕೊಳ್ಳುವಾಗ ಮೆಲ್ಲನೆ ತೂರಿ ಬಂದ ಆಯಿಯ ಪ್ರಶ್ನೆ.

''ಮನೂ... ಯಾರೋ ಕಾನಡೀ ಜೊತೆ ಸುತ್ತಾಡ್ತೀಯಂತೆ ಹೌದಾ?'', ರೇಷ್ಮೆ ಬಟ್ಟೆಯೊಳು ಸುತ್ತಿದ ಚೂರಿಯನ್ನು ಮೆಲ್ಲನೆ ಚುಚ್ಚಿದ ಹಾಗೆ... ಮನೀಷಾ ಉಗುಳು ನುಂಗಿದಳು.

''ಆಯಿ... ಅಂವ ಯಾರೋ ಕಾನಡಿ ಅಲ್ಲ... ನನ್ನ ಸಹಪಾಠಿಯಾಗಿದ್ದವನು... ತುಂಬ ಒಳ್ಳೆಯ ಹುಡುಗ''.

''ಓ... ಅಂದ್ರೆ ನಿಮ್ಮಿಬ್ಬರ ಪ್ರೇಮ ಅವಾಗಿನಿಂದಲೇ ಇತ್ತು ಅಂದ ಹಾಗಾಯ್ತು. ಬಾಬಾ ಕಷ್ಟಪಟ್ಟು ದುಡಿದು ದುಡ್ಡು ಕಳಿಸಿದ್ರೆ ನೀನಲ್ಲಿ, ಧಾರವಾಡದಲ್ಲಿ, ಚಕ್ಕಂದ ಆಡ್ತಿದ್ಯಾ?''

ಈ ಸಲ ಚುಚ್ಚಿದ್ದು ತಾಯಿ... ತನ್ನ ಸ್ನೇಹಿತೆಯಂತಿದ್ದ ತಾಯಿ, ಇಷ್ಟು ಕೆಳಮಟ್ಟದಲ್ಲಿ ವಿಚಾರ ಮಾಡುವಷ್ಟು ಬದಲಾಗಿದ್ದಾಳೆಯೇ...? ಆಘಾತವೆನಿಸಿತ್ತು ಅವಳಿಗೆ. ಸಾವರಿಸಿಕೊಂಡು ಹೇಳಿದ್ದಳು.

''ತಾಯಿ... ಪ್ಲೀಸ್ ಫಾರ್ ಗಾಡ್ಸ್ ಸೇಕ್... ಹಾಗೆಲ್ಲ ಕೆಟ್ಟದಾಗಿ ಮಾತಾಡ್ಬೇಡ, ನೀನು ಯಾವುದನ್ನು ಚಕ್ಕಂದ ಅಂತೀಯಲ್ಲ... ಅದನ್ನ ನಾವೀಗ್ಲೂ ಆಡ್ತಿಲ್ಲ. ನೀನು ಹೇಳೊ ತರಹ ನಾನಿದ್ದಿದ್ರೆ ಎಂ.ಬಿ.ಎ.ನಲ್ಲಿ ಸೆಕೆಂಡ್ ರ್‍ಯಾಂಕ್, ಪರ್ಸೊನೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಗೋಲ್ಡ್ ಮೆಡಲ್ ಬರ್‍ತಿರಲಿಲ್ಲ. ಇಷ್ಟು ಒಳ್ಳೇ ಕೆಲಸ ಸಿಗ್ತಿರಲಿಲ್ಲ. ನಿನ್ನ ಮದುವೆಗೆ ಬಾಬಾ ಒಂದು ಲಕ್ಷಕ್ಕಿಂತ ಹೆಚ್ಚು ಖರ್ಚು ಮಾಡಿದರಲ್ಲ... ಆ ಸಾಲ ಹ್ಯಾಗೆ ತೀರ್‍ತಾ ಇದೆ ಅಂತ ಯೋಚಿಸಿದ್ಯಾ? ನಾನು ಬಾಬಾರಿಗೆ ಮಗಳಾಗಿ ಏನು ಮಾಡಬೇಕೋ ಅದನ್ನು ಮುಗಿಸಿಯೇ... ನೀನು ಚಕ್ಕಂದ ಅಂದೆಯಲ್ಲ, ಅದರ ಬಗ್ಗೆ ಯೋಚಿಸುವುದು''.

ತಡತಡನೆ ಇಷ್ಟು ಹೇಳುವ ಹೊತ್ತಿಗೆ ಮನೀಷಾಗೆ ಅಳುವೇ ಬಂದಿತ್ತು. ತಾಯಿಗೆ ಮುಂದೆ ಮಾತನಾಡಲು ಶಬ್ದಗಳಿರಲಿಲ್ಲ. ''ಹಾಗಿದ್ರೆ ಅವನ ಜೊತೆ ಯಾವಾಗ್ಲೂ ಸುತ್ತೋದು ಸುಳ್ಳಾ... ಸದಾಶಿವ ಕಾಕಾ ನಮಗೆಲ್ಲ ಹೇಳಿದಾನೆ''.

ಮತ್ತೆ ಆಯಿಯ ವಿಚಾರಣೆ.

ಮನೀಷಾಗೆ ಅತೀವ ಹಿಂಸೆ, ಕಿರಿಕಿರಿ ಎನ್ನಿಸತೊಡಗಿತ್ತು. ಕಡೆಗೆ ಮೆಲ್ಲನೆ ತನ್ನ ನಿರ್ಧಾರ ಹೇಳಿದ್ದಳು.

''ನಾನು, ಅವನು ಮದುವೆಯಾಗಬೇಕಂತ ಇದ್ದೀವಿ. ಈಗಲ್ಲ... ಬಾಬಾನ ಎಲ್ಲ ಸಾಲ ತೀರಿದ ನಂತರ... ಮುಂದಿನ ವರ್ಷ''

ಬಾಬಾ ಇಂತಹದನ್ನೇನೋ ನಿರೀಕ್ಷಿಸಿದ್ದವರಂತೆ ಸುಮ್ಮನಿದ್ದುಬಿಟ್ಟಿದ್ದರು. ಆಯೀಗೆ ಮಾತ್ರ ತೀವ್ರ ಆಘಾತವಾಗಿತ್ತು. ಆ ಕನ್ನಡದವನನ್ನು ಬಿಟ್ಟು... ಬೇರೆ ಯಾರೇ... ಯಾವುದೇ ಜಾತಿಯವನಾದ್ರೂ ಸರಿ, ಒಟ್ಟಾರೆ ಮರಾಠಿ ಹುಡುಗನನ್ನು ಮಗಳು ಮದುವೆಯಾಗ್ತೀನಿ ಅಂದಿದ್ರೆ ಅವರು ಅದನ್ನು ಸ್ವೀಕರಿಸುತ್ತಿದ್ದರೇನೋ?

"ನಾನು ಅಥವಾ ಆ ಕಾನಡೀ... ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡ್ಕೋ" ಕಟುವಾಗಿ ನುಡಿದವರೇ ಅಲ್ಲಿಂದೆದ್ದು ರೂಮಿಗೆ ಹೋಗಿ ಬಾಗಿಲು ಮುಚ್ಚಿಕೊಂಡಿದ್ದರು. ಎಲ್ಲರೂ ದಿಗ್ಭ್ರಾಂತ ರಂತೆ ಕುಳಿತಿದ್ದರು. ತನ್ನನ್ನು ಹೆತ್ತು, ಹೊತ್ತು ಬೆಳೆಸಿದ ಪ್ರೀತಿಯ ಆಯಿ... ಇನ್ನೊಂದೆಡೆ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ, ಬಾಯ್ಬಿಟ್ಟು ಹೇಳದಿದ್ದರೂ ಮೌನದಲ್ಲೇ ಎಲ್ಲ ಅರ್ಥೈಸುವ, ಅರ್ಥೈಸಿ ಕೊಳ್ಳುವ ಸ್ನೇಹಿತ... ಯಾರನ್ನು ಬಿಟ್ಟು ಬದುಕುವ ಶಕ್ತಿ ತನಗುಂಟು? ಯೋಚಿಸುತ್ತ ಮನೀಷಾಗೆ ತಲೆ ಕೆಟ್ಟ ಹಾಗೆ... ಏನು ಮಾಡಲೂ ತೋಚದೆ, ಆಯಿಗೆ ಹೇಗೆ ತಿಳಿಸಿಹೇಳಬೇಕೆಂಬುದೂ ಅರ್ಥ ವಾಗದೆ ಸೂಟ್‌ಕೇಸ್ ತೆಗೆದುಕೊಂಡು ಬಸ್ ಸ್ಟಾಂಡ್‌ಗೆ ಬಂದುಬಿಟ್ಟಿದ್ದಳು.

ಒಂದು ಘಂಟೆ ನಂತರ ಹೊರಡಲಿರುವ ಬಾಂಬೆ ಬಸ್ಸಿಗೆ ಕಾಯುತ್ತ, ಕೆಸರಿನಿಂದ ಎಲ್ಲೆಡೆ ಮೂಡಿದ್ದ ಹೆಜ್ಜೆಗಳಲ್ಲಿ ಇದೇ ಈಗ ನಡೆದು ಬಂದ ತನ್ನ ಹೆಜ್ಜೆ ಯಾವುದಿರಬಹುದೆಂದು ಹುಡುಕುವ ವ್ಯರ್ಥಪ್ರಯತ್ನ ಮಾಡುತ್ತ ದಿಕ್ಕೆಟ್ಟವಳಂತೆ ಮನೀಷಾ ಕಾಯುತ್ತ ಕುಳಿತಾಗಲೇ ಅಜಯ್ ಧಾವಿಸಿ ಬಂದಿದ್ದ.

"ಆಯಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಬಿ.ಪಿ. ಹೈ ಆಗಿರಬೇಕು. ಇದೇ ಈಗ ಆಸ್ಪತ್ರೆಗೆ ಕರ್‍ಕೊಂಡು ಹೋದ್ರು..."

ಅವನು ಉದ್ವೇಗದಿಂದ ಹೇಳ್ತಾ ಇರೋದನ್ನು ಅರಗಿಸಿಕೊಳ್ಳುವ ಮೊದಲೇ ಇವಳ ಕೈ ಹಿಡಿದೆಳೆದು ಆಟೋ ಒಂದರಲ್ಲಿ ಅವನು ಹತ್ತಿದ್ದ.

ಇಂಟೆನ್ಸಿವ್ ಕೇರ್‌ನಲ್ಲಿ ಕಣ್ಣುಮುಚ್ಚಿ ಮಲಗಿದ್ದ ಆಯೀ, "ಅವರ ಮನಸ್ಸಿಗೆ ಆಘಾತ ವಾಗೋ ಹಾಗೆ ನಡ್ಕೋಬೇಡಿ, ಬೀ ಕೇರ್ ಫುಲ್" ಎಂದು ಮೆಲ್ಲನೆ ಎಚ್ಚರಿಸುತ್ತಿದ್ದ ಡಾಕ್ಟರ್, ಇವಳೆಡೆಗೆ ದೈನ್ಯಭಾವದಿಂದ ದಿಟ್ಟಿಸುತ್ತಿರುವ ಬಾಬಾ, ಕೊಲೆಪಾತಕಿಯನ್ನು ನೋಡುತ್ತಿರುವ ಹಾಗೆ ದುರುಗುಟ್ಟಿ ನೋಡುತ್ತಿರುವ ತಾಯಿ, ಅಜಯ್.... ಅಲ್ಲಿನ ಒಟ್ಟಾರೆ ಪರಿಸರವೇ ಹಾಗಿತ್ತು... ಎಲ್ಲ ಅವಘಡಕ್ಕೆ ಕಾರಣ ಮನೀಷಾ ಮತ್ತು ಆ ಕನ್ನಡದ ಹುಡುಗನ ಸ್ನೇಹ ಎಂಬಂತೆ. ತನ್ನೆಲ್ಲ ಭಾವನೆಗಳು, ಕಣ್ಣಂಚಿನ ಕನಸುಗಳ ಗಂಟನ್ನು ಎದೆಗವಚಿ ಹಿಡಿದು ಏಕಾಕಿಯಾಗಿ ನಿಂತುಬಿಟ್ಟಿರುವ ಹಾಗನ್ನಿಸಿತ್ತವಳಿಗೆ.

ಆ ರಾತ್ರಿ ಆಯಿಯೊಂದಿಗೆ ತಾಯಿ, ಅಜಯ ಆಸ್ಪತ್ರೆಯಲ್ಲಿದ್ದರು. ಟಿಳಕವಾಡಿಯ ಮೌನ ಹಬ್ಬಿನಿಂತ ಮನೆಯಲ್ಲಿ ಬಾಬಾ ಮತ್ತು ಮನೀಷಾ ಇಬ್ಬರೇ. ರಾತ್ರಿ ಊಟವಾದನಂತರ ಪರದೆ ಸರಿಸಿ ಕಿಟಕಿ ಬಳಿ ನಿಂತು ಹೊರಗೆ ಸಣ್ಣದಾಗಿ ಬೀಳ್ತಾ ಇರೋ ಮಳೆಯನ್ನು ನೋಡ್ತಾ ನಿಂತಿದ್ದ ಮನೀಷಾಗೆ ಯಾರೋ ಬಿಕ್ಕಿದ ಹಾಗನ್ನಿಸಿ ಪಕ್ಕಕ್ಕೆ ನೋಡಿದರೆ... ಒಂದೆರಡು ಹೆಜ್ಜೆ ಹಿಂದೆ ಕಣ್ಣೀರು ತಡೆದುಕೊಳ್ಳಲು ಯತ್ನಿಸುತ್ತ ನಿಂತಿದ್ದ ಬಾಬಾ ಕಾಣಿಸಿದ್ದರು. ಅವಳು "ಬಾಬಾ" ಎಂದುಸಿರಿದ್ದೇ ಅವರು ಚಿಕ್ಕಮಗುವಿನ ಹಾಗೆ ಇವಳ ಭುಜಕ್ಕೆ ತಲೆಯಾನಿಸಿ ಬಿಕ್ಕತೊಡಗಿದ್ದರು. ಹೊರಗೆ ಹನಿಯುತ್ತಿದ್ದ ಮಳೆಯ ಸದ್ದಿನಲ್ಲಿ ಇಬ್ಬರೂ ಮೆಲ್ಲನೆ ಬಿಕ್ಕುವ ಸದ್ದು ಕೂಡ ಸೇರತೊಡಗಿತ್ತು.

"ಮನೂ.. ಎಷ್ಟೆಲ್ಲ ಸೋಲು, ನೋವು, ಅಪಮಾನಗಳನ್ನು ನಾವೆಲ್ಲ ಒಟ್ಟಾಗಿ ಅನುಭವಿಸಿ ದ್ದೀವಿ, ಎದುರಿಸಿದ್ದೀವಿ.... ನಮಗೆಲ್ಲರಿಗಾಗಿ ಆಯೀ ಎಷ್ಟು ಸವೆದಿದ್ದಾಳೆ... ನಾವೆಲ್ಲ ಈ ಬೆಳಗಾವಿಗೆ ಹೊಂದಿಕೊಂಡ ಹಾಗೆ ಅವಳಿಗೆ ಸಾಧ್ಯವಾಗಲೇ ಇಲ್ಲ. ನಾವು ನಮ್ಮ ಕೆಲಸಗಳು, ನಮ್ಮ ಗೆಳೆಯರು.... ನಮ್ಮದೇ ಪ್ರಪಂಚ ದಲ್ಲಿದ್ದೆವು... ಅವಳ ಒಂಟಿತನ, ನೋವು, ನಿರಾಸೆ ಯಾವುದಕ್ಕೂ ನಾವು ಜೊತೆಯಾಗಲೇ ಇಲ್ಲ ಅಂತ ಕಾಣುತ್ತೆ. ಪಾಲ್ಘಾರನ್ನು ಬಿಟ್ಟು ಕಂಡುಕೇಳರಿಯದ ಈ ಊರಿಗೆ ಅನಾಥರಂತೆ ಬರುವಂತಾದ ದೌರ್ಭಾಗ್ಯವನ್ನು ಅವಳಿಗೆ

ಸಹಿಸಲಿಕ್ಕೆ ಆಗಲಿಲ್ಲವೇನೋ ಅನ್ನಿಸುತ್ತೆ. ಅವಳು ಹೆಚ್ಚು ಓದಿದವಳಲ್ಲ, ಹಳ್ಳಿಯವಳು... ಆದ್ರೆ ಇಲ್ಲಿ ನಾವಿಬ್ರೇ ಇರೋ ಈ ದಿನಗಳಲ್ಲಿ ನಾನು ಅವಳನ್ನು ಚೆನ್ನಾಗಿ ಓದಿಕೊಂಡಿದೀನಿ ಮನೂ. ಆಯಿಗೆ ನಿಮ್ಮ ತಲೆಮಾರಿನ ಭಾವನೆಗಳು, ನಿಮ್ಮ ದೃಷ್ಟಿಕೋನ ಇದೆಲ್ಲ ಅರ್ಥ ಆಗಲ್ಲ. ಆದ್ರೆ ನೀನು ಆಯೀನ ಅರ್ಥ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದೀಯ? ಈ ವಯಸ್ಸಿನಲ್ಲಿ ಅವಳನ್ನು ಕಳೆದುಕೊಂಡು ಬದುಕೋ ಶಕ್ತಿ ನಂಗಿಲ್ಲ ಮನೂ. ನೀನು ಆ ಕಾನಡಿ ಬಿಟ್ಟು ಬೇರೆ ಯಾರನ್ನಾದ್ರೂ, ಯಾರಾದ್ರೂ ಮರಾಠಾ ಹುಡುಗನ್ನ...'' ಮೆಲ್ಲನೆ ಹೇಳುತ್ತಿದ್ದ ಬಾಬಾ ಅರ್ಧಕ್ಕೆ ನಿಲ್ಲಿಸಿದ್ದರು. ಮನೀಷಾ ಮಾತನಾಡದೇ ತಲೆತಗ್ಗಿಸಿ ನಿಂತಿದ್ದಳು. ''ಆಯಿಯ ಸಾವು, ಬದುಕು ನಿನ್ನ ನಿರ್ಧಾರದ ಮೇಲೆ ನಿಂತಿದೆ ಮನೂ. ಈ ಬಾಬಾನಿಗಾಗಿಯಾದ್ರೂ...'' ದೈನ್ಯತೆಯಿಂದ ಹೇಳುತ್ತಿದ್ದ ಬಾಬಾ ಮುಂದೆ ಮಾತನಾಡದೆ, ಮನೀಷಾ ಕೂಡ ಇದೇನು ಎಮೋಷನಲ್ ಬ್ಲಾಕ್‌ಮೇಲ್ ಮಾಡಿದ ಹಾಗೆ ಎಂದುಕೊಳ್ಳ ಗೊಂದಲದಲ್ಲಿ ನಿಂತಿದ್ದಾಗ ಮೆಲ್ಲನೆ ಅಲ್ಲಿಂದ ಎದ್ದು ಹೋಗಿದ್ದರು.

ಯಾಕಿಂಥ ದ್ವೇಷ ಆಯಿಗೆ ಕಾನಡಿಗಳೆಂದ್ರೆ? ತನ್ನ ಮಕ್ಕಳೆಂದರೆ ಪ್ರೀತಿಯ ಮಹಾಪೂರವನ್ನೇ ಹರಿಸುವ ಆಯಿಗೆ ಈ ಕನ್ನಡದವರೆಂದ್ರೆ ಯಾಕಿಂಥ ವಿನಾಕಾರಣದ ದ್ವೇಷ? ಅದೂ ಒಡಲಲ್ಲಿ ಜಾಗಕೊಟ್ಟು ಆದರಿಸಿದ, ಬದುಕಿ ಬಾಳಿಸಿದ ಈ ಬೆಳಗಾಂ ಅಂದ್ರೆ, ಯಾಕಿಷ್ಟು ಅಸಹನೆ? ಮನೀಷಾಗೆ ಅರ್ಥೈಸಿಕೊಳ್ಳಲು ಸಾಧ್ಯವಾಗದೆ ಉಳಿದ ಸಂಗತಿಯಾಗಿತ್ತು ಅದು.

ಅವಳೊಮ್ಮೆ ಮಿಡ್ಲ್‌ಸ್ಕೂಲ್‌ನಲ್ಲಿದ್ದಾಗ ಟೂರ್‌ಗೆ ಹೋಗ್ತೀನಿ ಅಂತ ಹಠಹಿಡಿದು ಅಳುವಾಗ, ಇವಳಿಗಾಗಿ ದುಡ್ಡು ಹೊಂದಿಸಲು ಎರಡು ರಾತ್ರಿ ನಿದ್ದೆಗೆಟ್ಟು, ಯಾರೋ ಮದುವಣಗಿತ್ತಿಯ ರವಿಕೆಗಳನ್ನು ಆಯಿ ಹೊಲಿದಿದ್ದಳು. ಆಯಿಯ ಕೆಂಪಾದ ಅಂಗೈ ಮತ್ತು ಕಣ್ಣುಗಳು... ಮನೀಷಾ ''ನಾನು ಎಲ್ಲಿಗೂ ಹೋಗೋದಿಲ್ಲ ಆಯೀ'' ಅಂತ ಮತ್ತೆ ಅತ್ತಿದ್ದಳು. ಇಂತಹ ಎಷ್ಟೋ ಘಟನೆಗಳು ಮನೀಷಾಳ ಕಣ್ಣಮುಂದೆ ಆ ದಿನ ತಿಂಗಳ ಬೆಳಕಿನಲ್ಲಿ ಮೂಡುತ್ತಿತ್ತು. ಜೊತೆಗೆ ಬಾಬಾನ ದೈನ್ಯತೆ....

ಬೆಳಗ್ಗೆಯಾಗುವಷ್ಟರಲ್ಲಿ ಮನೀಷಾ ನಿರ್ಧಾರಕ್ಕೆ ಬಂದಿದ್ದಳು. ಆಸ್ಪತ್ರೆಗೆ ಹೋದವಳೇ ಹೇಳಿದಳು, ''ಆಯೀ...ನಂಗೆ ನೀನು ಬೇಕು ಆಯೀ... ಮಲಾ ತೂ ಪಾಹಿಜೆ ಆಯೀ''. ಇವಳ ತಲೆ ನೇವರಿಸಿದ ಆಯಿಯ ಕಣ್ಣುಗಳಲ್ಲಿ ತೆಳುವಾದ ನೀರಿನ ಪಸೆ ಮಾತ್ರ.... ಬಿಕ್ಕುವಷ್ಟು ಚೈತನ್ಯವೂ ಉಳಿದಿರಲಿಲ್ಲ. ಮನೀಷಾಗೆ ತಾನೊಂದು ಒಣಗಿದ, ಬೋಳುಬೋಳಾದ ಒಂಟಿಮರದಂತೆ, ಬಯಲೊಂದರಲ್ಲಿ ನಿಂತುಬಿಟ್ಟಿರುವಂತೆ ಅನ್ನಿಸಿತ್ತು.

ಅವಳು ತನ್ನ ನಿರ್ಧಾರವನ್ನು ಹೇಳಿದ ಆ ಸಂಜೆ ಅವನು ಆಘಾತಕ್ಕೊಳಗಾದಂತೆ ಸುಮ್ಮನೆ ಕುಳಿತಿದ್ದ. ತುಸುಹೊತ್ತಿನ ನಂತರ ಚೇತರಿಸಿಕೊಂಡವನಂತೆ ''ಥಿಂಕ್ ಎಗೈನ್ ಮನೂ. ಆಯೀಗೆ ತಿಳಿಸಿ ಹೇಳು. ಇಲ್ಲದಿದ್ರೆ ಇನ್ನೊಂದೆರಡು ವರ್ಷ ಹೀಗೇ ಸ್ನೇಹಿತರಾಗೇ ಇರೋಣ. ಅಷ್ಟರಲ್ಲಿ ಅವರ ಮನಸ್ಸು ಬದಲಾಗಬಹುದು. ಆದ್ರೆ ಪ್ಲೀಸ್, ಹೀಗೆ ನನ್ನನ್ನ ಬಿಟ್ಟು ಹೋಗ್ಬೇಡ್ವೇ'' ಮೆಲ್ಲನೆ ಉಸುರಿದ್ದ.


ಎಂತಹ ತೀವ್ರವಾದ ಬೇಡಿಕೆಯಿತ್ತು ಆ ಧ್ವನಿಯಲ್ಲಿ... ಎಷ್ಟು ಉತ್ಕಟ ಪ್ರೀತಿಯ ಭಾವವಿತ್ತು ಆ ಕಣ್ಣುಗಳಲ್ಲಿ... ಆದರೂ ಮನೀಷಾಳ ಕಣ್ಣಿಗೆ ಕಟ್ಟಿದ್ದು ಮಾತ್ರ, ಎಂದೂ, ಅವಳನ್ನು ಯಾವುದಕ್ಕೂ, ಒತ್ತಾಯಿಸದ ಬಾಬಾ ಅಂದು ದೈನ್ಯವಾಗಿ ನಿಂತ ಚಿತ್ರವಾಗಿತ್ತು. ಮನೀಷಾ ಬರಿದೇ ತಲೆಯಲ್ಲಾಡಿಸಿ ಮುಖ ತಗ್ಗಿಸಿ ಕುಳಿತಿದ್ದಾಗ ತುಸುಹೊತ್ತು ಮೌನವಾಗಿಯೇ ಕುಳಿತಿದ್ದ ಅವನು. ಇವಳ ನಿರಾಕರಣೆಯಿಂದ ತಲ್ಲಣ

ಗೊಂಡಂತೆ... ಆಳದಲ್ಲಿ ಅವಮಾನವೂ ಆದಂತೆ...?

''ಇದೇ ನಿನ್ನ ಕೊನೆಯ ನಿರ್ಧಾರವಾ.... ಸರಿ, ಹಾಗಾದ್ರೆ, ನಾನು ಯಾವತ್ತಿಗೂ ನಿನ್ನ ಎಲ್ಲ ನಿರ್ಧಾರಗಳ ಜೊತೆಯೇ ಇರ್ತೀನಿ. ಈ ನಿರ್ಧಾರದಿಂದ... ಈ ತ್ಯಾಗದಿಂದ ನೀನು ಖುಷಿಯಾಗಿರಬಲ್ಲೆ ಎಂದಾದ್ರೆ, ನಾನು ಕೂಡ ಖುಷಿಯಾಗಿರಲಿಕ್ಕೆ ಪ್ರಯತ್ನಿಸ್ತೀನಿ''.

ಕಡೆಯದಾಗಿ ಇವಳ ಕಣ್ಣನಲ್ಲಿ ಕಣ್ಣಟ್ಟು ಹೇಳಿದವನೇ ಎದ್ದುಹೋಗಿದ್ದ. ನಿರಾಕರಣೆಯನ್ನು ಮೆಟ್ಟಿ ನಿಲ್ಲುವ ಛಲವಿತ್ತೇ ಆ ಧ್ವನಿಯಲ್ಲಿ.... ನಿರಾಕರಣೆಯ ಜೊತೆಗೆ ಬದುಕುವ ಶಕ್ತಿ ಅವನಾಳದಲ್ಲಿತ್ತೆ.... ಮನೀಷಾ ಏನೂ ತಿಳಿಯದೇ ಇನ್ನೂ ಕುಳಿತಿದ್ದಾಗ ಎದ್ದು ಬೆನ್ನು ತಿರುಗಿಸಿ ನಡೆದಿದ್ದ. ಹಾಗೆ ಸದ್ದಿಲ್ಲದೆ ಅವನೆದ್ದು ಹೊರಟುಹೋಗಿದ್ದು ಮನೀಷಾನ ಪಕ್ಕದಿಂದ ಮಾತ್ರವಲ್ಲ... ಬಾಂಬೆಯಿಂದಲೇ ಆಗಿತ್ತು. ಹತ್ತಿರದ ಸ್ನೇಹಿತರಿಗೂ ಅವನೆಲ್ಲಿ ಹೋದ ಗೊತ್ತಾಗಿರಲಿಲ್ಲ. ಮತ್ತೆರಡು ದಿನದ ನಂತರ ಅವನ ರಾಜೀನಾಮೆ ಪತ್ರ ಆಫೀಸಿಗೆ ಬಂದು ತಲುಪಿತ್ತು. ಇವರಿಬ್ಬರ ನಡುವೆ ಸೇತುವೆಯಂತಿದ್ದ ಮಂಜುಳಾಗೂ ಗೊತ್ತಿರಲಿಲ್ಲ.

''ಅವನು ಹೋಗೋ ಹಿಂದಿನ ದಿನ ಎಲ್ಲದರಿಂದ ದೂರ ಹೋಗ್ತಿದೀನಿ; ಮೈಸೂರಲ್ಲಿರೋ ಅಪ್ಪ, ಅಮ್ಮನನ್ನು ಕರಕೊಂಡೇ ಹೋಗ್ತೀನಿ ಅಂತ ಅಷ್ಟೇ ಹೇಳಿದ. ನಿಂಗೇನೋ ನಿನ್ನ ಮುಂದೆ ಆಯಿಗಾಗಿ ಮಾಡೋ ದೊಡ್ಡ ತ್ಯಾಗವಿತ್ತು.... ಆ ಭ್ರಮೆಯಿತ್ತು. ಇಂತಹದು ಏನಾದ್ರೂ ಆಗಬಹುದು ಎಂಬ ಊಹೆಯನ್ನೂ ಮಾಡದೆ ನಿನ್ನ ಅತಿಯಾಗಿ ಹಚ್ಚಿಕೊಂಡಿದ್ದ ಅವನು ಮಾತ್ರ ತೀರಾ ತಣ್ಣಗಾಗಿದ್ದ. ಆದ್ರೆ, ಅವನು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿ ಯಲ್ಲ ಅಂತ ಮಾತ್ರ ಹೇಳಬಲ್ಲೆ'', ವಾರದ ನಂತರ ಮನೀಷಾ



ಶಂಕರ ಪಾಟೀಲ

ಮಂಜುಳಾನ ಜೊತೆ ಬಾಂದ್ರಾಬೀಚಿನಲ್ಲಿ ಕುಳಿತ ಸಂಜೆ... ದೂರದಲ್ಲಿ ಹೋಗುತ್ತಿದ್ದ ಒಂಟಿ ದೋಣಿಯನ್ನು, ಮುಳುಗುತ್ತಿರುವ ಕೆಂಪು ಸೂರ್ಯನನ್ನು ನೋಡ್ತಾ ಕುಳಿತಾಗ ಅವಳು ಹೇಳಿದ್ದಳು. ಆ ನಂತರ ಅವನು ಬರಿಯ ಒಂದು ನೆನಪಾಗಿ, ಕನಸಿನ ತುಣುಕಾಗಿ, ಅರ್ಧಂಬರ್ಧ ಬರೆದ ಕವನವೊಂದರ ಬಿಡಿ ಅಕ್ಷರಗಳ ಹಾಗೆ ಉಳಿದು ಬಿಟ್ಟಿದ್ದ ಮನದ ಮೂಲೆಯಲ್ಲಿ.

ಇದೆಲ್ಲ ಆಗಿ ವರ್ಷದ ನಂತರ ಬಾಬಾ-ಆಯೀ ಇಷ್ಟಪಟ್ಟ ಹುಡುಗ ವಿಕ್ರಮ್ ಸಾಳುಂಕೆಯೊಡನೆ ಮನೀಷಾಳ ಮದುವೆಯಾಗಿತ್ತು. ಪೂನಾದ 'ಫಾಲ್ಗುಣಿ' ಹೆಸರಿನ ಈ ಮನೆಗೆ ಬಂದ ನಂತರ ಮನೀಷಾಗೆ ಹೊಸ ಅಧ್ಯಾಯವೊಂದು ತೆರೆದ ಹಾಗನ್ನಿಸಿತ್ತು. ವಿಕ್ರಮ್‌ನೊಂದಿಗೆ ಶುರುವಾದ ಈ ಹೊಸ ಸಂಬಂಧದೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದವಳಿಗೆ ಹಿಂದಿನದೆಲ್ಲ ಬರಿಯ ನೆನಪಾಗಿ ಉಳಿದರೆ ಸಾಕೆನಿಸಿತ್ತು. ಮೊದಲು ಎಲ್ಲ ಸರಿಯಾಗಿಯೇ ಇತ್ತು. ಮನೀಷಾ ಕೂಡ ಹಿಂದಿನದೆಲ್ಲ ಮರೆತು ನೆಮ್ಮದಿಯಾಗಿದ್ದಳು. ಮಗಳು ಹುಟ್ಟಿದ ಮೂರು ನಾಲ್ಕು ವರ್ಷದ ನಂತರ... ಎಲ್ಲೋ ಏನೋ ತಪ್ಪುಗಂಟಾಗ್ತಿರುವ ಅನ್ನಿಸಿಕೆ... ಮೈಮನದ ತುಂಬ ಬಿಕ್ಕುವ ರಾತ್ರಿಗಳ ಕಂಬನಿಯ ಕಲೆಗಳು... ಅನ್ಯೋನ್ಯ ದಾಂಪತ್ಯದಲ್ಲಿ ಎಲ್ಲಿಂದಲೋ ಎದ್ದ ಕ್ರೌರ್ಯದ ಎಳೆ ಮೆಲ್ಲಮೆಲ್ಲನೆ

ಇಡೀ ಸಂಬಂಧವನ್ನು ಸುತ್ತಿಕೊಳ್ಳಲು ಹವಣಿಸಿದ ಹಾಗೆ...

ಹೊರಗೆ ಇನ್ನೂ ಮಳೆ ಬರುತ್ತಲೇ ಇತ್ತು. ಕತ್ತಲು ಹೆಚ್ಚಾಗಿದ್ದರಿಂದ ಮಳೆಹನಿಗಳು ಅಸ್ಪಷ್ಟ ವಾಗಿ ಕಾಣಿಸ್ತಿತ್ತು. ಹೊರಗೆ ಅಂಗಳದಲ್ಲಿ ಒಂದೇ ಒಂದು ಒಣ ಎಲೆ, ಒಣ ಮಣ್ಣಿನ ಕಣ ಉಳಿಯದ ಹಾಗೆ ಎಲ್ಲವನ್ನು ತೋಯಿಸಿ ತೊಪ್ಪೆ ಮಾಡಿ, ಎಲ್ಲಿಂದಲೋ ಬಂದ, ಯಾವುದೋ ಹಕ್ಕಿಯ ಹಿಕ್ಕೆಯಿಂದ ಉದುರಿದ ಬೀಜವೂ ಒದ್ದೆಯಾಗಿ ಮಣ್ಣಿನೊಳು ಸೇರಿ ಹಚ್ಚಹಸಿರಾಗಿ ಮೊಳಕೆಯೊಡೆಯುವಂತೆ ಮಾಡುವ ಈ ಮಳೆ.... ತನ್ನೊಳಗೂ ಆಳದಲ್ಲಿದ್ದ ನೆನಪು ಗಳನ್ನೆಲ್ಲಾ ಒದ್ದೆಮಾಡಿ... ಹಾಗಿದ್ರೆ ಮತ್ತೆಂಥ ಮೊಳಕೆಯೊಡೆಯಲಿದೆ ತನ್ನೊಳಗೆ... ಯಾಕೋ ಅಧೀರಳಾದಳು ಮನೀಷಾ. ಒಂದು ಸಣ್ಣ ಕಂಪನ ಹೊಕ್ಕಳಿನಲ್ಲಿ ಹುಟ್ಟಿ ಮೈಯೆಲ್ಲ ಹರಿದಾಡಿ... ಇವತ್ತೆಂತ ಆಗಿದೆ? ಯಾಕೆ ಇವತ್ತೇ ಎಲ್ಲ ನೆನಪಾಗಿದೆ? ಇವತ್ತೇ ಇದೆಂತ ಮಳೆ...? ಮನೀಷಾ ಚಡಪಡಿಸುತ್ತ ಕುಳಿ ತಾಗಲೇ ಹೊರಗೆ ಕಾರು ಬಂದ ಸದ್ದಾಯಿತು. ನೆನಪುಗಳಿಂದ ಬಿಡಿಸಿಕೊಂಡು ಧಡಕ್ಕನೆದ್ದು ಬಾಗಿಲಿಗೆ ಬಂದಳು. ಕಾರು ಪೋರ್ಟಿಕೋದಲ್ಲಿ ನಿಂತಿತ್ತು.

ಕಾರಿನಿಂದ ಇಳಿಯುತ್ತಿದ್ದವನನ್ನು ನೋಡಿದಾಗ ಈ ಭಂಗಿ... ಈ ನಿಲುವು ಎಲ್ಲಿಯೋ ನೋಡಿದಂತಿದೆ... ತೀರಾ ಪರಿಚಿತ.... ಅಷ್ಟರಲ್ಲಾಗಲೇ ಅವನು ಮೆಟ್ಟಿಲೇರಿ ಬರುತ್ತಿದ್ದ. ಅನುಮಾನವೇ ಇಲ್ಲ... ಇದು ಮಾತ್ರ ಅವನೇ...

''ಇಟ್ಸ್ ಯೂ... ಜೈ... ಜೈಪ್ರಕಾಶ್''

ಪಿಸುಗುಟ್ಟಿದ ಮನೀಷಾಗೆ ಇದೇನು ಕನಸೇ... ಭ್ರಮೆಯೇ ಎನ್ನಿಸಿತು. 'ಹದಿನಾರು ವರ್ಷಗಳ ಕೆಳಗೆ ತಟ್ಟನೆದ್ದು ಹೋದವ... ಕಣ್ಣಂಚಿನಿಂದ ಮರೆಯಾಗಿಯೇ ಹೋದವ... ಹೀಗೆ ತನ್ನ ಮನೆಗೇ ಬಂದೊಂದುದಿನ ಧುತ್ತನೆ ಎದುರು ನಿಲ್ಲಬಹುದು ಎಂದವಳು ಊಹೆ ಕೂಡ ಮಾಡಿರದಿದ್ದಾಗ... ಆ ಸಂಜೆ ಮಳೆಹನಿಗಳು ಸಿಡಿಸಿದ ನೆನಪಿನ ನೀರಹನಿಗಳಲ್ಲಿಯೇ ಇಂಥದೊಂದು ಭೇಟಿಯ ಪೂರ್ವಸೂಚನೆ ಯಿತ್ತೇ ಹಾಗಿದ್ರೆ....' ಎಂದವಳು ಯೋಚಿಸು ವಂತೆ ಮಾಡಿ ಎದುರಿಗೆ ನಿಂತಿದ್ದ.


''ನಾನೀಗ ಬರೀ ಜಯ್ ಪಿ.ಕೆ. ಹಿಂದಿನ ಜೈಪ್ರಕಾಶ್ ಕರಡಿ ಅಲ್ಲ, ಮಿಸೆಸ್ ಸಾಳುಂಕೆ''.

ತೀರಾ ಗಂಭೀರವಾಗಿದ್ದ ಧ್ವನಿ.... ಇವಳನ್ನ ಇಲ್ಲಿ ನಿರೀಕ್ಷಿಸಿದವನಂತೆ, ಎಲ್ಲದಕ್ಕೆ ಸಿದ್ಧನಾಗಿ ಬಂದವನಂತೆ ನಿಂತಿದ್ದ ಅವನು. ಅವನು ''ಮಿಸೆಸ್ ಸಾಳುಂಕೆ'' ಅಂತ ಒತ್ತಿ ಹೇಳಿದಾಗ ರಪ್ಪೆಂದು ಮುಖಕ್ಕೆ ಬಾರಿಸಿದ ಹಾಗೆ... ತಟ್ಟನೆ ನೆನಪಾಗಿದ್ದು ತಾನೀಗ ಮೊದಲಿನ ಮನೀಷಾ ಗಾಂವ್‌ಕರ್ ಅಲ್ಲ... ಬರೀ ಮಿಸೆಸ್ ಸಾಳುಂಕೆ ಎಂದು. ಪಕ್ಕಕ್ಕೆ ಸರಿದು ''ಸಾರಿ, ಕಮಿನ್ ಪ್ಲೀಸ್'' ಚುಟುಕಾಗಿ ಹೇಳಿ ಒಳನಡೆದಳು. ಜಯ್ ಪಿ.ಕೆ. ಎಂದರೆ ಜಯಪ್ರಕಾಶ್ ಕರಡಿಯೇ ಇರಬಹುದು... ಯಾಕಿರಬಾರದು ಈ ರೀತಿಯ ಚಿಕ್ಕ ಅನುಮಾನವೂ ಬರದೇ ಹೋಯಿತಲ್ಲ ತನಗೆ.... ಹಾಗೊಂದು ವೇಳೆ ಅನುಮಾನ ಬಂದಿದ್ದರೆ ಈ ಭೇಟಿಯನ್ನು ತಪ್ಪಿಸುತ್ತಿದ್ದನೆ... ಏನೂ ಸ್ಪಷ್ಟವಾಗಲಿಲ್ಲ.

ಅವಳನ್ನು ಹಿಂಬಾಲಿಸಿ ಬಂದ ಜಯ್ ಅವಳು ತೋರಿಸಿದೆಡೆ ಕುಳಿತು, ''ಶಲ್ ವಿ ಸ್ಟಾರ್ಟ್?'' ಅವಳತ್ತ ದೀರ್ಘವಾಗಿ ನೋಡುತ್ತ ಕೇಳಿದ. ''ಶ್ಯೂರ್''.

ಮನೀಷಾ ಮೊದಲೇ ಸಿದ್ಧಪಡಿಸಿಕೊಂಡ ಹಾಗೆ ಪ್ರಾರಂಭಿಸಿದಳು. ಅವಳು ಎಂ.ಬಿ.ಎ. ಸೇರಿಕೊಂಡ ಸ್ವಲ್ಪ ದಿನಗಳಲ್ಲಿಯೇ ಅರಿತಿದ್ದಳು...

ವ್ಯವಹಾರ ಮತ್ತು ಭಾವನೆಗಳನ್ನು ಬೇರೆಬೇರೆಯಾಗಿಯೇ ನೋಡಬೇಕೆಂದು. ಚರ್ಚೆಯ ನಡುವೆ ಆಗಾಗ ಕೈಗಡಿಯಾರದತ್ತ ನೋಡದಿರಲು ಮನೀಷಾಗೆ ಸಾಧ್ಯವಾಗಲಿಲ್ಲ. ಅವಳ ದುಗುಡ ಅವನಿಗೂ ಅರ್ಥವಾಗಿತ್ತು. ಒಂಬತ್ತು ಘಂಟೆಯಾಗಲು ಕೆಲವು ನಿಮಿಷ ಬಾಕಿಯಿತ್ತು.... ಅವರಿಬ್ಬರ ಗೆಳೆತನ ಆರಂಭವಾಗಿದ್ದೂ ತೀರಾ ವ್ಯಾವಹಾರಿಕವಾಗಿ... ಇಬ್ಬರೂ ಸೇರಿ ಒಂದು ಅಸೈನ್‌ಮೆಂಟ್‌ನ್ನು ಪೂರ್ಣಗೊಳಿಸಬೇಕಿತ್ತು. ಈಗ ಅವರಿಬ್ಬರ ನಡುವೆ ಹಲವಾರು ವರ್ಷಗಳ ಕರಿ ತೆರೆಯಿತ್ತು.... ಮತ್ತೆ ಎದುರು-ಬದುರು ಕುಳಿತಿರುವುದೂ ಒಂದು ವ್ಯವಹಾರದಡಿಯಲ್ಲಿ. ಕೆಲವು ನಿಮಿಷಗಳಲ್ಲಿ ಇದೂ ಮುಗಿಯಲಿದೆ. ಸಂಬಂಧದ ಕೊಂಡಿ ಸಡಿಲಾಗಿ ತನ್ನ ಕಣ್ಣ ಮುಂದೇ ಕಳಚಿ ಬೀಳುವುದನ್ನು ನೋಡಲು ಇನ್ನು ಸಾಧ್ಯವಿಲ್ಲ ಎನ್ನಿಸಿದ್ದೇ ಸರಕ್ಕನೆ ಎದ್ದು ನಿಂತಳು. ವಿಕ್ರಮ್ ಹೇಳಿದಂತೆ ಡಿನ್ನರ್ ಬಗ್ಗೆ ವಿಚಾರಿಸಲೂ ತ್ರಾಣವಿಲ್ಲದಂತೆ... ಅವನನ್ನು ಎದುರಿಸುವುದೂ ಶಕ್ಯವಿಲ್ಲದವಳಂತೆ ಮೆಲ್ಲನೆ ಶಬ್ದ ಹೊಂದಿಸಿಕೊಂಡು ಹೇಳಿದಳು:



''ಐ ವಿಲ್ ಬ್ರಿಂಗ್ ಸಮ್ ಕಾಫಿ''.

ಅವನತ್ತ ನೋಡದೆ ಹೊರಳುವುದರಲ್ಲಿದ್ದಳು...

''ಮನೂ... ಆಜ್ ಅಪಣ್ ದೋಗೆ ಮಿಳುನ್ ಜೇವೂಯಾತ್?''

ಸ್ವಚ್ಛ ಮರಾಠಿಯ ವಾಕ್ಯ.... ಸೋಫಾಕ್ಕೆ ಒರಗಿ ಕುಳಿತು ಕೇಳುತ್ತಿದ್ದವನ ಧ್ವನಿ, ಭಂಗಿ... ಎಲ್ಲ ಅದೇ... ಅನುಮಾನವೇ ಇಲ್ಲ. ಇವನು ಮಾತ್ರ ವರ್ಷಗಳ ಹಿಂದಿನ ಜೈ.

ನಾಲ್ಕು ಸೆಮಿಸ್ಟರ್ ಕೂಡಿ ಕಲಿಯುವಾಗ, ಒಂದೂವರೆ ವರ್ಷ ಬಾಂಬೆಯಲ್ಲಿ ಒಟ್ಟಿಗೇ ಕೆಲಸ ಮಾಡುವಾಗ, ಒಂದೇ ವಾಕ್ಯ ಮರಾಠಿ ಕಲಿಯದ ಜೈಪ್ರಕಾಶ ಟೈಫಾಯ್ಡ್ ಆಗಿ ಒಂದು ತಿಂಗಳು ಮೈಸೂರಿನ ಮನೆಯಲ್ಲಿದ್ದು ವಾಪಾಸು ಬರುವಾಗ ಅಲ್ಲಿದ್ದ ಮಹಾರಾಷ್ಟ್ರದವರೊಬ್ಬರ ಹತ್ತಿರ ಕಷ್ಟಪಟ್ಟು ಒಂದೆರಡು ವಾಕ್ಯ ಮರಾಠಿ ಕಲಿತು ಬಂದಿದ್ದ. ರಜೆಯಿಂದ ಬಂದು ಕೆಲಸಕ್ಕೆ ಅಟೆಂಡ್ ಆದ ಸಂಜೆ ಕಾಫಿಕುಡಿಯುತ್ತಿದ್ದಾಗ ಮನೀಷಾಳ ಹೊಳೆಯುವ ಕಣ್ಣುಗಳನ್ನೇ ನೋಡುತ್ತ ಹೇಳಿದ್ದ....

''ನಾನೀಗ ಮರಾಠಿ ಕಲ್ತಿದೀನಿ''.

''ಕ್ಯಾ ಸೀಖಾ'' ಅಪನಂಬಿಕೆಯಿಂದಲೇ ಮನೀಷಾ ಕೇಳಿದಾಗ, ''ಕಸಂ ಸೆ... ಸಚ್ಚೀ..'' ಎಂದವನೇ ಉರು ಹೊಡೆದಿದ್ದ ಆ ವಾಕ್ಯವನ್ನು ಮುತ್ತು ಉದುರಿಸಿ ದಂತೆ ಉದುರಿಸಿದ್ದ. ಅವನ ಮರಾಠಿ ಕೇಳಿ ಮನೀಷಾ ಜೋರಾಗಿಯೇ ನಕ್ಕಿದ್ದಳು.

''ಆದ್ರೆ ಇದ್ದಕ್ಕಿದ್ದ ಹಾಗೆ ಮರಾಠಿ ಕಲಿಯೋ ಶೋಕಿ ಯಾಕೆ ಬಂತು ನಿಂಗೆ? ಅದೂ ಇಷ್ಟು ದಿನಗಳ ಮೇಲೆ?''

''ಮರಾಠಿ ಲಡಕೀ ಕೆ ಲಿಯೇ ಥೋಡಾ ಮರಾಠಿ ಸೀಖನಾ ಜರೂರಿ ಹೈ ನಾ,'' ಮತ್ತದೇ ಹುಡುಗಾಟದ ಮಾತು.

ಆ ಮರಾಠಿ ವಾಕ್ಯ... ಆ ವಾಕ್ಯ

ಅವಳೆದುರಿಗೆ ಹೇಳಿದ್ದಕ್ಕೆ ಇಬ್ಬರೂ ಒಟ್ಟಾಗಿ ಊಟಮಾಡಬೇಕಾಗಿ ಬಂದ ಆ ರಾತ್ರಿ.... ಮತ್ತು ಸಮುದ್ರದಲೆಗಳ ಮೊರೆತದ ಸದ್ದನ್ನು ಎದೆಯಲ್ಲಿ ತುಂಬಿಸಿಕೊಳ್ಳುತ್ತ ಮೌನವಾಗಿ ಬೀಚಿನಲ್ಲಿ ಕಳೆದ ನಂತರದ ಎಷ್ಟೋ ಮೋಹಕ ಸಂಜೆಗಳು....

''ಮರಾಠಿ ಯಾಕೆ ಕಲಿತೆ ಗೊತ್ತ ಮನೂ... ಹುಶಾರಿಲ್ದೆ ಮಲಗಿದ್ದಾಗ ಈ ಒಂದೆರಡು ಮರಾಠಿ ವಾಕ್ಯ ಮನಸ್ಸಿನಲ್ಲಿ ಹೇಳಿಕೊಂಡ್ರೆ ನೀನು ಜೊತೆಗಿದ್ದ ಹಾಗನ್ನಿಸ್ತಿತ್ತು. ಬಹುಶಃ ಈ ವಾಕ್ಯಗಳಲ್ಲಿ ನಿನ್ನ ಸಾಮೀಪ್ಯ, ನಿನ್ನ ಸ್ಪರ್ಶ, ನಿನ್ನ ಕೂದಲಿನ ವಾಸನೆ ಎಲ್ಲ ಅನುಭವಿಸಿದ ಹಾಗಾಗ್ತಿತ್ತು''. ಪ್ರೀತಿಯ ಉತ್ಕಟ ಗಳಿಗೆಯೊಂದರಲ್ಲಿ ಪಿಸುಗುಟ್ಟಿದ್ದ ಜೈ. ಫಕ್ಕನೆ, ನೆನಪಿನ ಎಳೆ ಬಿಚ್ಚಿಕೊಳ್ಳಲಾರಂಭಿಸಿತ್ತು. ಸೋತುಹೋದವಳಂತೆ ಕುಸಿದು ಕುಳಿತಳು ಮನೀಷಾ.

''ಅದನ್ನ.... ಆ ವಾಕ್ಯವನ್ನು ನೀನಿನ್ನೂ ಮರೆತೇ ಇಲ್ಲವಾ....?''

''ಒಂದೇ.. ಎರಡೇ... ಯಾವುದನ್ನು ಅಂತ ಮರೆಯಲಿ ಮನೂ... ಹೇಳು.... ನೀನು ಎಲ್ಲ ಮರೆತಿದ್ದೀಯ?''

ಭಾರವಾದ ಧ್ವನಿಯಲ್ಲಿ ಪ್ರಶ್ನೆಗೆ ಪ್ರತಿಪ್ರಶ್ನೆ... ಏನು ಉತ್ತರಿಸಬೇಕೆಂದು ತಿಳಿಯದೇ ಸುಮ್ಮನಾದಳು.

ವರ್ಷಗಳ ನಂತರ ಹೀಗೊಂದು ರಾತ್ರಿ... ಅದೂ ಮಳೆಯ ರಾತ್ರಿಯೇ ತಾವಿಬ್ಬರೂ ಮುಖಾಮುಖಿಯಾಗಬಹುದೆಂದು ಅವಳು ರೆಪ್ಪೆತುದಿಯ ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ.

''ಮಕ್ಕಳೆಲ್ಲಿ... ಬೋರ್ಡಿಂಗ್ ಸ್ಕೂಲ್ ನಲ್ಲಿಟ್ಟಿದ್ದೀಯ ಹೇಗೆ?''

ಅವನೇ ಕೇಳಿದ.

''ಒಬ್ಬಳೇ ಮಗಳು... ಪಾಂಚ್‌ಗಣಿಯ ರೆಸಿಡೆನ್ಷಿಯಲ್ ಸ್ಕೂಲಿಗೆ ಕಳಿಸಬೇಕಂತ ವಿಕ್ರಮ್‌ಗೆ ತುಂಬ ಆಸೆ ಇತ್ತು. ಆದ್ರೆ ಇರೋ ಒಬ್ಬಳೇ ಮಗಳನ್ನ ಎಲ್ಲೋ ದೂರದಲ್ಲಿಟ್ಟು ನಮ್ಮ ಪ್ರೀತಿಯನ್ನು ನಾವು ಕಳಿಸೋ ದುಡ್ಡಿನ ಮೂಲಕ ತೋರಿಸ್ತಾ ಬೆಳೆಸೋದು ನಂಗಿಷ್ಟ ಇರಲಿಲ್ಲ. ಅವಳದು ಇವತ್ತು ಭರತನಾಟ್ಯ ಪ್ರೋಗ್ರಾಂ ಇದೆ... ಬೆಂಗಳೂರಲ್ಲಿ... ನಾಳೆ ಅಲ್ಲಿಂದ ವಾಪಾಸು ಬರ್ತಾಳೆ...'' ಮತ್ತೇನು ಮಾತನಾಡುವುದು ಅಂತ ತಿಳಿಯದೆ ಸುಮ್ಮನಾದಳು. ಮತ್ತೆ ತುಸು ಹೊತ್ತು ಮೌನ.... ಏನಾದ್ರೂ ಮಾತನಾಡಬೇಕು... ಮೌನ ಅಸಹನೀಯ ಎನ್ನಿಸ್ತಾ ಇದೆ... ಆದರೆ ಇಬ್ಬರ ನಡುವೆ ಅನೇಕ



ವರ್ಷಗಳ ಕಪ್ಪು ತೆರೆ... ಏನೋ ಅಪರಿಚಿತತೆ. ಕಿಟಕಿಯಾಚೆಗಿನ ಕತ್ತಲನ್ನೇ ನೋಡುತ್ತ ಕುಳಿತಿದ್ದ ಮನೀಷಾಳನ್ನು ಕಣ್ಣೊಳಗೆ ತುಂಬಿಕೊಳ್ಳುವಂತೆ ಅವಳನ್ನೇ ದಿಟ್ಟಿಸುತ್ತಿದ್ದ ಜೈಪ್ರಕಾಶ್ ಮೆಲ್ಲನೆ ಕೇಳಿದ:

''ಮನೂ... ನಿಜ ಹೇಳು... ನೀನು ಖುಷಿಯಾಗಿದೀಯ ತಾನೆ?'' ಏನಂತ ಹೇಳುವುದು... ಮನೀಷಾಳ ಆಯಿ... ತಾಯಿ ಎಲ್ಲರ ದೃಷ್ಟಿಯಲ್ಲಿ ಸುಖವೆಂದರೆ ಇದೇ... ಒಳ್ಳೆಯ ನೌಕರಿ, ಆಸ್ತಿ, ಬಂಗಲೆ, ಐಷಾರಾಮದ ಜೀವನ... ಎಲ್ಲಕ್ಕಿಂತ ಹೆಚ್ಚಾಗಿ ಏನೂ ದುಶ್ಚಟವಿಲ್ಲದ, ಹೆಂಡತಿಯನ್ನು ಹೂವಿನಂತೆ ನೋಡಿಕೊಳ್ಳುವೆನೆಂದು ಎಲ್ಲರೆದುರು ಹೇಳುವ ವಿಕ್ರಮ್... ಸುಖದ ಬದುಕು ಎಂದ್ರೆ ಇದಲ್ಲದೆ ಬೇರೇನಾದರೂ ವ್ಯಾಖ್ಯೆ ನೀಡಲು ಸಾಧ್ಯವೇ? ಹಗಲುಗಳಲ್ಲಿ ಮನೀಷಾಗೂ ಹೀಗೆಯೇ ಅನ್ನಿಸಿದರೂ ನೆಮ್ಮದಿ ಎನ್ನುವುದು ಬೇರೆ ಎಂಬ ಭಾವ ರಾತ್ರಿಗಳಲ್ಲಿ ಹುಟ್ಟುತ್ತಿತ್ತು. ಎ.ಸಿ. ಅಳವಡಿಸಿದ, ಕಲಾತ್ಮಕವಾಗಿ ಅಲಂಕರಿಸಿದ, ಆ ಸುಂದರ ಬೆಡ್ ರೂಂನ ನೀಲಿ ಬೆಡ್‌ಲ್ಯಾಂಪ್‌ನ ಮಸುಕು ಬೆಳಕಿನಡಿಯಲ್ಲಿ ನರಳುವ ರಾತ್ರಿಗಳು... ತಣ್ಣಗೆ ಕೊರೆಯುವ ರಾತ್ರಿಗಳು... ಆ ಕಪ್ಪುರಾತ್ರಿಗಳ ಕುರಿತು ಯಾರಿಗೆ ಹೇಳುವುದು...? ಅವಳ ಕಣ್ಣಿನಿಂದ ಫಳಕ್ಕನೆ ಉದುರಿದ ಎರಡು ಹನಿ ನೀರು.... ಜಯಪ್ರಕಾಶನಿಗೆ ಬೇರೆಯದೇ ಉತ್ತರವನ್ನು ಹೇಳಿತ್ತು.

''ಏಯ್... ಏನಾಯ್ತು ಹೇಳು...'' ಫಟಕ್ಕನೆ ಮನದಲ್ಲಿ ಹುಟ್ಟಿಕೊಂಡ ಕೆಟ್ಟ ಕೆಟ್ಟ ಊಹೆಗಳು... ಸಣ್ಣಗೆ ನಡುಗಿದ ಅವನು.

''ವಿಕ್ರಮ್‌ಗೆ ಮದುವೆಗೆ ಮುಂಚೆಯೇ ನನ್ನ ನಿನ್ನ ಸ್ನೇಹದ ಬಗ್ಗೆ... ನಿನ್ನ ಹೆಸರೊಂದನ್ನು ಬಿಟ್ಟು ಎಲ್ಲ... ಎಲ್ಲವನ್ನೂ ಹೇಳಿದ್ದೆ. ಮೊದಮೊದಲು ಎಲ್ಲ ಸರಿಯಾಗಿಯೇ ಇತ್ತು. ಅವನು ನನ್ನನ್ನ ತುಂಬ ಪ್ರೀತಿಸ್ತಾ ಇದ್ದ. ನಾನೂ ಅಷ್ಟೇ ನಿಷ್ಠಳಾಗಿದ್ದೆ. ಹಿಂದಿನದೆಲ್ಲ ಮರೆತಿದ್ದೆ. ಬೇರೆಯದೇ ಬಿಂದುವಿನಿಂದ ಬೇರೆ ಅಳತೆಯ ತ್ರಿಜ್ಯದಿಂದ ನಾನು ಹೊಸಾ ವೃತ್ತ ಎಳೆಯಲಿಕ್ಕೆ ಪ್ರಾರಂಭಿಸಿದ್ದೆ. ನಾನು ವಿಕ್ರಂಗೆ ಯಾವುದೇ ರೀತಿಯಲ್ಲೂ ಮೋಸಮಾಡಲಿಲ್ಲ. ನನ್ನನ್ನು ನಾನು ಸಮರ್ಪಿಸಿಕೊಂಡಿದ್ದೆ. ಅನೂಷಾ ಹುಟ್ಟಿ ಮೂರು ವರ್ಷವಾಗಿತ್ತು. ನಂತರ ಎಲ್ಲ ಶುರುವಾಯ್ತು...''

ತಲೆತಗ್ಗಿಸಿ ಹೇಳುತ್ತಿದ್ದ ಮನೀಷಾಗೆ ಗಂಟಲುಬ್ಬಿ ಬಂದಿತ್ತು. ಮೆಲ್ಲನೆ ಬಿಕ್ಕಿದಳು. ಜಯ್‌ಗೂ ಯಾಕೋ ತಾನೂ ಇದನ್ನೆಲ್ಲ ಕೇಳಬಾರದಿತ್ತೇನೋ ಅನ್ನಿಸತೊಡಗಿ ಹಿಂಸೆಯಾಗತೊಡಗಿತು.

''ಮನೂ... ಅಳ್ತಿದೀಯೇನೇ... ಬೇಡ ಬಿಡು.. ಏನೂ ಹೇಳ್ಬೇಡ, ನಂಗೆಲ್ಲ ಅರ್ಥ ಆಗುತ್ತೆ...''

ಇಂತಹ ಸಾಂತ್ವನ ಕೇಳದೆ... ಬೆಚ್ಚಗಿನ ಧ್ವನಿಯ ಕೇಳದೆ ಎಷ್ಟೊಂದು ವರ್ಷಗಳು ಜಾರಿ ಹೋದುವಲ್ಲ... ಕಣ್ಣೊರೆಸಿಕೊಂಡು ಮತ್ತೆ ಹೇಳಿದಳು: ''ಒಂದಿನ ರಾತ್ರಿ ಹೀಗೇ ಮಳೆ ಬರ್ತಾ ಇತ್ತು... ನಾನು ಮಳೆ ನೋಡ್ತಾ ಕಿಟಕಿಯಲ್ಲಿ ನಿಂತಿದ್ದೆ. ವಿಕ್ರಮ್ ಮಲಗಿದ್ದ. ಮಳೆ ಅಂದರೆ ಬರೀ ಬೀಳ್ತಾ ಇರೋ ನೀರು ಮಾತ್ರ ಅಲ್ಲ ನಂಗೆ... ಮಳೆಯ ಒಂದೊಂದು ಹನಿಗಳಲ್ಲಿ ಬಾಲ್ಯದ ಒಂದೊಂದು ಚಿತ್ರವೇ ಬಿಚ್ಚಿಕೊಂಡು ಒದ್ದೆಯಾದ ಹಾಗೆ... ಮಳೆಯನ್ನು ನೋಡಲಿಕ್ಕೆ, ಅನುಭವಿಸಲಿಕ್ಕೆ ಎಷ್ಟು ಹಾತೊರೀತೀನಿ ಅಂತ ನಿಂಗೂ ಗೊತ್ತಿದೆಯಲ್ಲ ಜೈ... ಅವತ್ತೂ ನಾನು ಹಾಗೇ ನಿಂತಿದ್ದೆ. ಮಲಗಿದ್ದ ವಿಕ್ರಮ್ ತಟ್ಟನೆ ಕೇಳಿದ. ಅವತ್ತು ಇಂತಹದೇ ರಾತ್ರಿ ಇತ್ತಾ... ಎಲ್ಲ ಹೀಗೇ... ಹೀಗೇ... ಇತ್ತೇನೋ ಅಲ್ಲವಾ ... ಅಂತ.

ಅವನ ಸ್ವರ ವಿಲಕ್ಷಣವಾಗಿತ್ತು. ತಿರುಗಿ ನೋಡಿದ್ರೆ, ಅವನ ಮುಖ ರೂಕ್ಷವಾಗಿ...

ಒಂಥರಾ ಹೆದರಿಕೆ ಹುಟ್ಟಿಸುವ ಹಾಗಿತ್ತು. ಅವನು ಯಾವ ರಾತ್ರಿಯ ಬಗ್ಗೆ ಹೇಳ್ತಿದಾನೆ... ಆ ಕ್ಷಣಕ್ಕೆ ಏನೂ ತಿಳಿಯದೇ ನಿಂತಿದ್ದಾಗ ತಟ್ಟನೆ ಹೇಳಿದ.''

'ಅವತ್ ನೀವಿಬ್ರೂ, ಹೀಗೇ... ಇಂಥದೇ ರಾತ್ರಿ... ಛೀ... ನಾನು ಎಲ್ಲ... ಎಲ್ಲ ನಂಬಿದೆ...'

''ಅವನ ಧ್ವನಿಯಲ್ಲಿ ಹೊಸದಾಗಿ ಹುಟ್ಟಿ ಕೊಂಡ ಅನುಮಾನವಿತ್ತು... ಕೀರಲು ಧ್ವನಿ ಯಲ್ಲಿ, ಅವನ ಅಸಹಜವಾದ ಭಂಗಿಯಲ್ಲಿ ಒಂಥರಾ ಕ್ರೂರತೆಯೂ ಇತ್ತು. ನಂಗೆ ಎಂಥ ಶಾಕ್ ಆಯ್ತು ಅಂದ್ರೆ... ತಣ್ಣಗಾಗಿ ನಿಂತು ಬಿಟ್ಟೆ... ಏನೂ ಮಾತಾಡಲಿಲ್ಲ... ಮತ್ತೆ ಮಾತ ನಾಡಿದ್ದು ಅವನೇ''.

'ಈಗ ಗೊತ್ತಾಯ್ತು... ನೀನು ಮಳೆ ನೋಡ್ತಾ ನಿಂತಾಗೆಲ್ಲ ಏನು ನೆನಪು ಮಾಡಿಕೊಳ್ತೀಯ... ಏನು ಅನುಭವಿಸ್ತೀಯ ಅಂತ'

''ನಾನು ಮರತೇಬಿಟ್ಟಿದ್ದ ಆ ರಾತ್ರಿಯನ್ನು ಅವನೇ ನೆನಪಿಸಿದ್ದ... ನಾನು ಏನು ಸಮ ಜಾಯಿಷಿ ಹೇಳಿದ್ರೂ, ಅವನು ಕೇಳುವ ಸ್ಥಿತಿ ಯಲ್ಲಿ ಇರಲಿಲ್ಲ. ಅಲ್ದೆ ಅವನು ಸಂಶಯದ ಕಣ್ಣಿ ನಿಂದ ಅಳೆಯುವಾಗ... ನಂಗೆ ನಾನು ಮಾತ ನಾಡೋದು ಏನಾದ್ರು ಉಳಿದಿದೆ ಎನ್ನಿಸಲಿಲ್ಲ. ನನ್ನ ಮಟ್ಟಿಗೆ ನಡೆದುಹೋದ ಘಟನೆಯೊಂದರ ತುಣುಕಾಗಿ ಉಳಿದಿದ್ದ, ಆಳದಲ್ಲಿ ನಿಷ್ಕ್ರಿಯವಾಗಿ ಮಲಗಿದ್ದ, ಆ ರಾತ್ರಿಯ ಚಿತ್ರವನ್ನು ಅವನು ಪ್ರತೀರಾತ್ರಿ ಕಲ್ಪಿಸಿಕೊಳ್ಳುತ್ತಿದ್ದ. ಅವನ ಮನಸ್ಸನ್ನು ಸಂಶಯದ ಗೆದ್ದಲು ಹಿಡಿದಿತ್ತು. ಎಷ್ಟೋ ರಾತ್ರಿಗಳು... ಹದ್ದೊಂದು ನನ್ನನ್ನು ಕುಕ್ಕಿ ಕುಕ್ಕಿ ತಿಂದ ಹಾಗೆ ಮೊದಲು ವಿರೋಧಿಸ್ತಾ ಇದ್ದೆ. ಕಡೆಕಡೆಗೆ ಅನ್ನಿಸ್ತು... ಸಮಜಾಯಿಷಿ ನೀಡು ವುದಕ್ಕೆ, ತಿಳಿಹೇಳುವುದಕ್ಕೆ ಏನೂ ಅರ್ಥ ಉಳಿದಿಲ್ಲ ಅಂತ. ಸುಮ್ಮನಾಗಿಬಿಟ್ಟೆ. ನಾನು ಬೇರೆ ರೀತಿಯಲ್ಲಿ ಉತ್ತರ ನೀಡಲಿಕ್ಕೆ ಅಂತಹ ರಾತ್ರಿಗಳಲ್ಲಿ ತೀರಾ ತಣ್ಣಗೆ ಇರುತ್ತಿದ್ದೆ. ಬೆಳಿಗ್ಗೆ ಕಂಪನಿಯ ವ್ಯವಹಾರಗಳಲ್ಲಿ ಮುಳುಗಿಹೋದೆ. ನನ್ನ ನಿರ್ಧಾರಗಳಿಂದ, ನನ್ನ ಚಿಂತನೆಗಳಿಂದ ಕಂಪನಿಯ ಭವಿಷ್ಯ ನಿರ್ಧಾರವಾಗುವಷ್ಟರ ಮಟ್ಟಿಗೆ ಬೆಳೆದೆ. ಕಡೆಗೊಂದು ದಿನ ಎಂ.ಡಿ. ಆದೆ. ಬೆಡ್‌ರೂಂನಲ್ಲಿ ಕೂಡ ಅವನ ಮನಸ್ಸಿನಲ್ಲಿ ಅದು ಉಳಿಯುವಂತೆ, ಹದ್ದಿನಂತೆ ಮೇಲೆರಗುವಾಗ ಕೂಡ ಅದು ನೆನಪಾಗುವಂತೆ ಮಾಡುವಲ್ಲಿ ನಾನು ಸಫಲಳಾದೆ. ಅದ್ರಿಂದ ನಾನೇನು ಕಳೆದು ಕೊಂಡೆ ಅಥವಾ ಪಡೆದುಕೊಂಡೆ... ಹೇಳೋದು ತುಂಬ ಕಷ್ಟ. ಯಾವ ಸಂಬಂಧ ಬದುಕಿನುದ್ದಕ್ಕೂ ಪರಿಪೂರ್ಣವಾಗಿರಬೇಕು ಅಂತ ಎಷ್ಟು ಉತ್ಕಟ ತೆಯಿಂದ ಅಂದುಕೊಂಡಿದ್ದೆನೋ ಆ ಎಲ್ಲ ಕನಸು ಹಾರಿಹೋಯ್ತು. ಯಾಕೆ ಹೀಗೆ ಎಲ್ಲ ಅಪೂರ್ಣ ವಾಗಿಬಿಡುತ್ತೆ... ಯಾಕಿಂಥ ಒಂಟಿತನ ಅಂತ...''


ಮನೀಷಾ ಮಾತು ನಿಲ್ಲಿಸಿ ಮೆಲ್ಲನೆ ಬಿಕ್ಕ ತೊಡಗಿದಳು. ಕುಳಿತು ಕೇಳುತ್ತಿದ್ದ ಜೈಪ್ರಕಾಶನಿಗೆ ಎಲ್ಲೋ ಪಾತಾಳಕ್ಕಿಳಿದ ಹಾಗೆ... ಆ ದಿನ ಲೋನವಾಳದ ಕಾಡಿನಲ್ಲಿ ಸುಮ್ಮನೆ ತಿರುಗಾಡ ಹೊರಟವರು ವಾಪಾಸು ಬರುವಾಗ ಸ್ಕೂಟರ್ ಕೈಕೊಟ್ಟು ಕಡೆಗೆ ಆ ಹಾಳು ಮಂಟಪದಲ್ಲಿ ಕಳೆಯಬೇಕಾಗಿ ಬಂದ ಆ ರಾತ್ರಿ... ಅವಳ ಕೈಹಿಡಿಯುವ ಧೈರ್ಯ ಕೂಡ ಮಾಡಿರಲಿಲ್ಲ. ತನ್ನ ಮನಸ್ಸಿನಲ್ಲಿ ಏಳುತ್ತಿದ್ದ ಹುಚ್ಚು ಕಾಮನೆಗಳಿಗೆ ಕಡಿವಾಣ ಹಾಕಿ ಮೌನವಾಗಿ ಕುಳಿತಿದ್ದ. ಸ್ವಲ್ಪ ಸಮಯದ ನಂತರ ಅವಳು ತಾನಾಗಿಯೇ ಇವನ ಭುಜದ ಮೇಲೆ ತಲೆಯಿಟ್ಟು ಮಲಗಿದ್ದಳು. ಅದೊಂದು ಸುಂದರ ಸದ್ದಿಲ್ಲದ ರಾತ್ರಿ... ಯಾರೊಬ್ಬರ ಬದುಕಿನಲ್ಲಿಯೂ ಒಮ್ಮೊಮ್ಮೆ ಮಾತ್ರ ಬರಬಹುದಾದ, ಒಮ್ಮೆ ಮಾತ್ರ ಅನುಭವಿಸಬಹುದಾದ ರಾತ್ರಿ... ನಂತರ ಒಂದು ಚಿತ್ರವಾಗಿ, ಅಪೂರ್ಣಗೊಂಡ ಕವಿತೆಯೊಂದರ ಅಪೂರ್ವ ಸಾಲುಗಳಂತೆ ಉಳಿದುಬಿಡಬಹು ದಾದ ರಾತ್ರಿ.

ಅವಳಿನ್ನೂ ಮುಖ ಮುಚ್ಚಿಕೊಂಡು ಅಳುತ್ತಿದ್ದಳು. ತಟ್ಟನೆದ್ದು ಅವಳ ಬಳಿ ಹೋದ ಜೈ ಅವಳ ಕೈ ತೆಗೆದು, ಕೆನ್ನೆಯ ಮೇಲಿಳಿಯುತ್ತಿದ್ದ ಕಣ್ಣೀರು ಒರೆಸಿ, ಮೆಲ್ಲನೆ ಭುಜದ ಮೇಲೆ ಕೈಯಿಟ್ಟು ತಟ್ಟಿದ. ಒಂದು ಸಾಂತ್ವನಕ್ಕೆ... ಒಂದು ಸಂತೈಸುವಿಕೆಗೆ ವರ್ಷಗಳಿಂದ ಕಾಯುತ್ತಿದ್ದಂತಹ ನಿರಂತರ ಪ್ರತೀಕ್ಷೆ ಅವಳ ಕಣ್ಣುಗಳಲ್ಲಿದ್ದಂತೆ ಅವನಿಗನ್ನಿಸಿತು.

ಇಬ್ಬರ ನಡುವೆ ಕಾಲಪ್ರವಾಹ ಸದ್ದಿಲ್ಲದೆ ಹರಿದುಹೋಗಿತ್ತು. ಇಬ್ಬರ ನಡುವೆ ವರ್ಷಗಳ ಕರೀಪರದೆ ತೂಗುಬಿದ್ದಿತ್ತು. ತಿಳಿದೋ, ತಿಳಿಯದೆಯೋ ''ಕಾನಡಿ'' ಎಂಬ ಪೂರ್ವಾಗ್ರಹ ಭಾವದಿಂದಲೋ ಇಬ್ಬರ ನಡುವಿನ ಸಂಬಂಧಕ್ಕೊಂದು ಭಾಷ್ಯ ಬರೆದುಬಿಟ್ಟಿದ್ದು ಮನೀಷಾಳ ಪ್ರೀತಿಯ ಆಯಿ. ಮನೀಷಾ ಆಯಿ ಬರೆದ ಭಾಷ್ಯವನ್ನು ಒಪ್ಪಿ ನಡೆದರೂ ಅದಕ್ಕೊಂದು ಬೇರೆಯದೇ ರೂಪ ಕೊಟ್ಟುಬಿಟ್ಟಿದ್ದ ವಿಕ್ರಮ್. ಈ ರಾತ್ರಿ ಮಾತ್ರ ಆ ಎಲ್ಲವನ್ನೂ... ಏನೆಲ್ಲ ಹಿಂಸೆ ಹೆದರಿಕೆಯನ್ನೂ ಮೀರುವಂತಿರುವುದೇ? ಮನೀಷಾಳ ಮನದಲ್ಲಿ ಪುಟ್ಟ ಪ್ರಶ್ನೆಯ ತರಂಗವೊಂದು ಮೆಲ್ಲನೆದ್ದು... ಮೈಯೆಲ್ಲ ಕಂಪಿಸಿದಂತಾಗಿ... ನಿಧಾನವಾಗಿ ಮೇಲೆದ್ದವಳು ಜೈನನ್ನು ಬಿಗಿಯಾಗಿ ತಬ್ಬಿಕೊಂಡಳು.

ನನ್ನ ಪಾತ್ರಗೆ ಕಥೆ ಅಂದ್ರ
ಏನೂ ಇಲ್ಲ ಮತ್ತು "ಏನೆಲ್ಲತ್ರಾ" ಹೇಳು.

ಸುಮಂಗಲ ಬಾದರದಿನ್ನಿ



ಮಗನೊಂದಿಗೆ ಕತೆಗಾರ್ತಿ ಸುಮಂಗಲಾ

ಕಾಗದದ ದೋಣಿ





ಪ್ರೀತಿಯ ಮೇಡಂ

ಹೇಗಿದ್ದೀರಾ? ಈಗ ಖಂಡಿತಾ ನಿಮಗೆ ರಿಟೈರ್ ಆಗಿರುತ್ತೆ. ವಯಸ್ಸೂ ಆಗಿರುತ್ತೆ. ಯಾಕೇಂದ್ರೆ ನನಗೇ ಇಪ್ಪತ್ತೈದು ವರ್ಷ ಸರ್ವಿಸ್ ಆಯ್ತು. ಆದ್ರೂ, ಮೂವತ್ತೆಂಟು ವರ್ಷಗಳ ಕೆಳಗೆ ನೀವು ಕೊಟ್ಟ ಪ್ರೀತಿ, ಕಲಿಸಿದ ಹಾಡುಗಳು, ಡ್ಯಾನ್ಸುಗಳು, ಹೇಳಿದ ಕತೆಗಳು ಎಲ್ಲಾ ಇಂದು ಕಲಿತು ಮನೆಗೆ ಬಂದಹಾಗೆ ನೆನಪಿದೆ.


ಮೈಸೂರಿನ ಹಳೆ ಅಗ್ರಹಾರದಲ್ಲಿ, ಆಂಜನೇಯನ ದೇವಸ್ಥಾನದ ಎದುರಿಗೆ ಆಗ ಇದ್ದ, ಚಾವಡಿ ಸ್ಕೂಲು ಎಂದು ಕರೆಯಲ್ಪಡುತ್ತಿದ್ದ ಹುಡುಗಿಯರ ಮೇನ್ ಮಿಡಲ್ ಸ್ಕೂಲ್‌ನಲ್ಲಿ ಐದನೇ ಕ್ಲಾಸಿನಿಂದ ಏಳನೇ ಕ್ಲಾಸಿನವರೆಗೆ ನಾನು ನಿಮ್ಮ ವಿದ್ಯಾರ್ಥಿನಿಯಾಗಿದ್ದೆ. ಝುಬೇದಾಬೇಗಂ ಮೇಡಂ ಅಂದರೆ ನಮಗೆಲ್ಲ ಖುಷಿ. ನಿಮ್ಮ ಹೆಸರನ್ನು ನಾವು ಸುಬೇದಾ ಅಥವಾ ಜುಬೇದಾ ಎಂದು ತಪ್ಪು ಹೇಳಿದರೆ ನೀವು ಪ್ರತಿಸಲವೂ ಝುಬೇದಾ ಎಂದು ತಿದ್ದಿ ಕಲಿಸುತ್ತಿದ್ದಿರಿ.

ನಮ್ಮ ಹೆಚ್.ಎಂ. ಯಶೋದಮ್ಮ ಸಹ ನಿಮ್ಮನ್ನು ತುಂಬ ಹಚ್ಚಿಕೊಂಡಿದ್ದರು. ನಿಮ್ಮ ಸಲಹೆಯಂತೆ ಹೆಚ್.ಎಂ. ರೂಮಿನ ಹೊರಗಿನ ವರಾಂಡದಲ್ಲಿ ಉದ್ದವಾದ ಬೆಂಚುಗಳನ್ನು ಹಾಕಿ, ಪ್ರಜಾಮತ, ಜನಪ್ರಗತಿ, ಕಸ್ತೂರಿ, ಮಲ್ಲಿಗೆಗಳನ್ನು ಇಟ್ಟಿದ್ದರು. ನಾವು ಬಿಡುವಿದ್ದಾಗ ಅದನ್ನೆಲ್ಲ ಓದಬಹುದಾಗಿತ್ತು. ನೀವು ನಮಗೆ ಕನ್ನಡ, ವಿಜ್ಞಾನ ತೆಗೆದುಕೊಳ್ಳುತ್ತಿದ್ದಿರಿ. ಆರನೆ ಕ್ಲಾಸಿನಲ್ಲಿ ಕ್ಲಾಸ್‌ಟೀಚರ್ ಆದಿರಿ. ಏಳರಲ್ಲಿ ಇಂಗ್ಲಿಷ್, ಸಮಾಜಶಾಸ್ತ್ರ ಕಲಿಸಿದಿರಿ. ಶುಕ್ರವಾರ ಮಧ್ಯಾಹ್ನ ಅಸೆಂಬ್ಲಿ ಮಾಡಿಸಿ ಡಿಬೇಟು, ಡ್ಯಾನ್ಸ್ ಎಲ್ಲ ಮಾಡಿಸ್ತಾ ಇದ್ದಿರಿ. ನಿಮ್ಮ ಜೊತೆಗೆ ಇದಕ್ಕೆಲ್ಲ ಸಹಾಯವಾಗಿ ರಾಜಲಕ್ಷ್ಮಿ ಎಂಬ ಹಿಂದಿಮೇಡಂ ಇದ್ರು. ಉತ್ತರ ಕುಮಾರನ ಏಕಪಾತ್ರಾಭಿನಯ ಮಾಡುತ್ತಿದ್ದ ನಾಗಮಣಿ, ಬಿಂಕದ ಸಿಂಗಾರಿ ಹಾಡು ಹೇಳುತ್ತಿದ್ದ ಶೋಭಾ, ಸ್ಫಟಿಕದ ಹೂ ಕಟ್ಟಿ ನಿಮಗೆ ತಂದುಕೊಡುತ್ತಿದ್ದ ಸಖ್ಖೂಬಾಯಿ, ಮುತ್ತಿನಹಾಗೆ ಅಕ್ಷರ ಬರೆಯುತ್ತಿದ್ದ ಜಂಭದಕೋಳಿ ಮಾಲಾ, ಮಾಲಾನ ಜೊತೆ ಸದಾ ಸ್ಪರ್ಧಿಸುತ್ತಿದ್ದ ಶಾಂತಲಕ್ಷ್ಮಿ ನಮ್ಮ

ಕ್ಲಾಸಿನಲ್ಲಿದ್ದರು. ನಮ್ಮ ಕ್ಲಾಸಿನ ಫಸ್ಟ್ ಮಾನೀಟರ್ ಆಗಿದ್ದ ಕಮಲಮ್ಮನ ಬಗ್ಗೆ ನಿಮಗೇನು ಜ್ಞಾಪಿಸುವುದು ಬೇಡ. ನೀವು ಅವಳಿಗೆ ತುಂಬಾ ದಿನ ಮಧ್ಯಾಹ್ನಗಳಲ್ಲಿ ನಿಮ್ಮ ಊಟದಲ್ಲಿ ಪಾಲು ಕೊಡುತ್ತಿದ್ದಿರಿ. ಅವಳ ತಾಯಿ ತೀರಿಕೊಂಡು ಮಲತಾಯಿ ಬಂದಮೇಲೆ ಅವಳ ಜಬರ್ದಸ್ತು ಕಡಿಮೆಯಾಗಿಬಿಟ್ಟಿತ್ತು. ತಲೆಯಲ್ಲಿ ಹೇನಾಗಿಬಿಟ್ಟಿತ್ತು. ನೀವು ಒಂದು ದಿನ ಅವಳ ತಲೆಗೆ ಕೀಟನಾಶಕ ಹಾಕಿ, ಸ್ಕೂಲಿನ ತೊಟ್ಟಿಯ ಹತ್ತಿರ ಅವಳು ಬಟ್ಟೆಯ ಮೇಲೇ ತಲೆತೊಳೆದುಕೊಳ್ಳೋ ಹಾಗೆ ಮಾಡಿ, ನಿಮ್ಮ ಅಕ್ಕನ ಮಗಳು ಫಾತಿಮಾಳ ಒಂದು ಜೊತೆ ಲಂಗ ಬ್ಲೌಸನ್ನು ಅವಳಿಗೆ ಹಾಕಿಕೊಳ್ಳಲು ಕೊಟ್ಟಿದ್ದಿರಿ. ಆಮೇಲೆ ಅವಳ ಮನೆಯಿಂದ ಒಬ್ಬ ಹೆಂಗಸು ಬಂದು ನಿಮ್ಮ ಜೊತೆ ಜಗಳವಾಡಿದರು. ನೀವು ಅವಳಿಗೆ ಊಟಕೊಟ್ಟು ಅವಳ ಜಾತಿ ಕೆಡಿಸಿದಿರಿ ಅಂತ. ಇನ್ನೊಂದು ದಿನ ನಿಮ್ಮನ್ನು ಡಿ.ಇ.ಓ. ಕರೆಸಿ ಕೇಳಿದರಂತೆ, ಕಮಲಮ್ಮನಿಗೆ ಏಕೆ ಊಟ ಕೊಟ್ಟಿರಿ ಅಂತ. ನೀವೇನು ಹೆದರಿಕೊಳ್ಳಲಿಲ್ಲವಂತೆ. ಹಸಿದುಕೊಂಡಿರೋ ಹುಡುಗೀಗೆ ಊಟ ಕೊಡೋದು ತಪ್ಪಾದರೆ ನಾನು ಮತ್ತೆ ಮತ್ತೆ ತಪ್ಪು ಮಾಡ್ತೀನಿ, ನನಗೆ ಏನು ಶಿಕ್ಷೆ ಬೇಕಾದರೂ ಕೊಡಿ ಅಂತ ಹೇಳಿದಿರಂತೆ – ಅಂತ ಕುಂಟೆಪಿಲ್ಲೆ ಪ್ರವೀಣೆ ಆರ್.ಕೆ. ಪದ್ಮ ಹೇಳಿದಳು.

ಮೇಡಂ, ನೀವು ನಮ್ಮನ್ನೆಲ್ಲ ಗರ್ಲ್‌ಗೈಡ್ ಕ್ಲಾಸಿಗೆ ಸೇರಿಸಿದ್ದಿರಿ. ಕುಕ್ಕರಹಳ್ಳಿ ಕೆರೆಯನ್ನು ನೀವೇ ನಮಗೆ ಮೊದಲು ತೋರಿಸಿದ್ದು. ಅಲ್ಲಿ ಗರ್ಲ್‌ಗೈಡ್ಸ್ ಆಫೀಸಿತ್ತು. ಅಲ್ಲಿ ನಾವೆಲ್ಲ ಒಂದು ಸಂಜೆ ಫಂಕ್ಷನ್ ಮಾಡಿ ಕುಣಿದು ಕುಪ್ಪಳಿಸಿ, ಡ್ಯಾನ್ಸು, ಹಾಡು, ಬೆಂಕಿ ಸುತ್ತ ಕುಣಿತ ಎಲ್ಲ ಮಾಡಿದೆವು. ಗೈಡ್ಸ್ ದಿನಾಚರಣೆಯ ದಿನ ನೀವು ನೀಲಿ ಸೀರೆ, ಬಿಳಿ ಬ್ಲೌಸ್ ಹಾಕಿ, ಬ್ಲೌಸಿನ ಭುಜಪಟ್ಟಿಯೊಳಗೆ ಸೆರಗನ್ನು ನೀಟಾಗಿ ಮಡಿಚಿ ಸೇರಿಸಿ ಚಕಚಕನೆ ಓಡಾಡುತ್ತಿದ್ದಿರಿ.

ಕಾಗದದ ದೋಣಿ



'ಕಾಗದದ ದೋಣಿ' ನಿಮ್ಮ ನೆನಪಿನ ಹಾಳೆಯಿಂದ ತಯಾರಿಸಿದ್ದು. ಮನುಷ್ಯ ಸಂಬಂಧಗಳಲ್ಲಿ ಹಾಸುಹೊಕ್ಕಾದ ಮುನಿಸು, ಮರೆವು, ಸಿಹಿ-ಕಹಿ ಅನುಭವಗಳನ್ನೆಲ್ಲ ಚಿತ್ತಾರ ಮಾಡಿ, ಬಿಡುವಂಥದ್ದು. ಕೊನೆಯಿರದ ಯಾನದಲ್ಲಿ, ಆಗಸದಿಂದ ದೂರ ಸಾಗುತ್ತಾ ಹೋಗುವ ಬದುಕಿನ ಪಯಣದಲ್ಲಿ ಕನವರಿಸಿದ್ದು, ಕಳವಳಿಸಿದ್ದನ್ನು ಬರೆದಿಡುತ್ತಾ ಸಾಗುವಂಥದ್ದು.

ನಿಮ್ಮ ಗೆಳೆಯ, ಹೆಂಡತಿ, ಪ್ರೇಯಸಿ, ಅಕ್ಕ, ತಂಗಿ, ಸಹೋದರ, ಸಹಪ್ರವಾಸಿ, ಉಪಾಧ್ಯಾಯರು, ಹಿತಶತ್ರುಗಳು, ಸಹಾಯಕರು, ವರಿಷ್ಠರು, ಇನ್ನಿತರ 'ಅನಾಮಿಕ' ಆಪ್ತರೊಂದಿಗೆ ನೀವು ಸನ್ನಿವೇಶದ ಒತ್ತಡದಲ್ಲಿ ಸರಳವಾಗಿ-ಸಹಜವಾಗಿ- ಮಾನವೀಯವಾಗಿ ನಡೆದುಕೊಳ್ಳಲಾಗದೇ ಹೋಗಿರ ಬಹುದು. ಅಥವಾ ಯಾವುದೋ ಮನುಷ್ಯ ಸಂಬಂಧವೊಂದರ ಆಪ್ತತೆ ಹರಳುಗಟ್ಟಲಾಗದೆ ಹೋಗಿದ್ದಿರ ಬಹುದು. ಹೊಸದೇನನ್ನಾದರೂ ಹೇಳುವುದಿರಬಹುದು...

ಈಗ ಅದನ್ನು ನೀವು ಬಹಿರಂಗ ಪತ್ರದಲ್ಲಿ ವ್ಯಕ್ತಪಡಿಸಬಾರದೇ? ಯಾರನ್ನೂ ನೋಯಿಸದ ನಿಮ್ಮ ಈ ಖಾಸಗಿದೋಣಿ ನಿಮ್ಮನ್ನು ಹಗುರಗೊಳಿಸುತ್ತಲೇ ಎಷ್ಟೊಂದು ಸಮಾನಸಂವೇದಿಗಳ ಮನದ ತೀರ ಮುಟ್ಟಬಹುದಲ್ಲವೇ?

ನಾವು ಆರನೇ ಕ್ಲಾಸಲ್ಲಿ ಇದ್ದಾಗ ಎಕ್ಸಿಬಿಷನ್ ಬಿಲ್ಡಿಂಗ್‌ನಲ್ಲಿ ಮಕ್ಕಳ ಕೂಟ ನಡೆಯಿತು. ನೀವು ನಮ್ಮನ್ನೆಲ್ಲ ಮಕ್ಕಳ ಕೂಟಕ್ಕೆ ಕರೆದುಕೊಂಡು ಹೋಗಿದ್ದಿರಿ. ಅಲ್ಲಿ ಚಂಚಲಕುಮಾರಿ ಅಧ್ಯಕ್ಷಳು, ಅನಿಲ್‌ಕುಮಾರ್ ಉಪಾಧ್ಯಕ್ಷ, ಕಾನ್ವೆಂಟಿನ ಹುಡುಗ, ಹುಡುಗಿಯರು ಸ್ವಲ್ಪ ಜಂಬ ಮಾಡುತ್ತಿದ್ದರು. ನೀವು, ನಾವೆಲ್ಲ ಬೇಜಾರು ಮಾಡಿಕೊಂಡಾಗ ನಿಜವಾದ ಜಾಣರು ಜಂಬ ಮಾಡುವುದಿಲ್ಲ, ಅಷ್ಟಕ್ಕೆಲ್ಲ ಬೇಜಾರು ಮಾಡಿಕೊಳ್ಳಬಾರದು ಎಂದು ಸಮಾಧಾನ ಮಾಡಿದಿರಿ. ಎರಡನೇ ದಿನ ಸಂಜೆಯ ಫಂಕ್ಷನ್ನಲ್ಲಿ ಅತ್ಯುತ್ತಮ ಶಿಕ್ಷಕರಿಗೆ ಕೊಡುವ ಬಹುಮಾನ ಬೇರೆ ಯಾವುದೋ ಸ್ಕೂಲಿನ ಟೀಚರಿಗೆ ಬಂತು. ನಾವೆಲ್ಲ ಆ ಬಹುಮಾನ ಖಂಡಿತಾ ನಿಮಗೇ ಬರುತ್ತೆ ಅಂತ ನಿರೀಕ್ಷಿಸುತ್ತಾ ಇದ್ದೆವು.


ನೀವು ಏನಾದರೂ ಹೇಳಿ ಮೇಡಂ, ನಾನು ಚಾವಡಿ ಸ್ಕೂಲು ಬಿಟ್ಟ ಮೇಲೆ ಬೇರೆ ಬೇರೆ ಸ್ಕೂಲಲ್ಲಿ–ಕಾಲೇಜುಗಳಲ್ಲಿ ಓದಿದೆ. ನಿಮ್ಮಷ್ಟು ಒಳ್ಳೆಯ ಮೇಡಂನ-ನಿಜವಾದ ಜಾಣರನ್ನು ನೋಡಲಿಲ್ಲ. ಚಾವಡಿ ಸ್ಕೂಲಿನ ಮಾನೀಟರ್ ಕಮಲಮ್ಮಳಿಗೆ, ಶಾಂತಾ, ಮಾಲಾ, ಸಖ್ಖೂಬಾಯಿ, ಉಷಾಳಿಗೆ ನೀವೇ ಆದರ್ಶ ಶಿಕ್ಷಕರು.

ನೀವೆಲ್ಲಿದ್ದೀರೋ, ಇದನ್ನು ಓದುತ್ತೀರೋ, ಬಿಡುತ್ತೀರೋ ನಾನಂತೂ ಈ ಜೀವನದ ಪ್ರವಾಹದಲ್ಲಿ ಒಂದು ಕಾಗದದ ದೋಣಿ ತೇಲಿಬಿಟ್ಟಿದ್ದೇನೆ. ಪತ್ರ ಮುಗಿಸಲಾ ಮೇಡಂ.?

ಇನ್ನೂ ನಿಜವಾದ ಜಾಣೆ ಆಗುವ ಪ್ರಯತ್ನದಲ್ಲೇ ಇರುವ

ನಿಮ್ಮ ಶಿಷ್ಯೆ
ಸ. ಉಷಾ

'ನಿನಾದ', ಮಾರುತಿ ನಗರ
ಅರಸೀಕೆರೆ



ಪ್ರಿಯ ಅಂಚೆಯಣ್ಣ (?) ಅಥವಾ ತಮ್ಮ,

ಈಗ್ಗೆ ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಮಾತು.

ಆಗ ನೀವು ಮೈಸೂರು ಮಹಾರಾಣಿ ಕಾಲೇಜಿನ ಏರಿಯಾದಲ್ಲಿ ಪೋಸ್ಟ್‌ಮನ್ ಆಗಿ ಕೆಲಸಮಾಡುತ್ತಿದ್ದಿರಿ. ನೆನಪು ಬಂತೇ?... ನಾನಾಗ ಎಂ.ಎ. ಕೊನೆಯ ವರ್ಷದ ವಿದ್ಯಾರ್ಥಿನಿ. ಮೈಸೂರು ಮಹಾರಾಣಿ ಕಾಲೇಜಿನ ಹಾಸ್ಟೆಲ್‌ನಲ್ಲಿಯೇ ತಂಗಿದ್ದೆ. ಮನೆಯಿಂದ ನಮ್ಮಕ್ಕ 50 ರೂ. ಕಳಿಸುತ್ತಿದ್ದರು. ನಮ್ಮ ಹಾಸ್ಟೆಲ್ ಬಿಲ್ ಆಗ ಕೇವಲ ಮೂವತ್ತು ರೂಪಾಯಿಗಳು! ಅಕ್ಕ ಕಳಿಸಿದ ಹಣದಲ್ಲಿ 30 ರೂ. ಹಾಸ್ಟೆಲ್‌ಗೆ ಕೊಟ್ಟು ಇನ್ನಿಪ್ಪತ್ತನ್ನು ನನ್ನ ಖರ್ಚಿಗೆ ಇಟ್ಟುಕೊಳ್ಳುತ್ತಿದ್ದೆ.

ಇನ್ನೂ ಸಣ್ಣ ವಯಸ್ಸಿನ, ಸಂಕೋಚ ಸ್ವಭಾವದ ಪೋಸ್ಟ್‌ಮ್ಯಾನ್ ಅಂತ ಎಲ್ಲರಿಂದ ಗುರುತಿಸಲ್ಪಡುತ್ತಿದ್ದ ನಿಮಗೆ ರಿಜಿಸ್ಟರ್ಡ್ ಕಾಗದಗಳು, ಪಾರ್ಸಲ್, ಮನಿ ಆರ್ಡರ್ ಬಂದವೆಂದರೆ ಜೀವಕ್ಕೇ ಬರುತ್ತಿತ್ತು. ಯಾಕೆಂದರೆ ಮಾಮೂಲಿ ಪೋಸ್ಟ್‌ಗಳನ್ನಾದರೆ ಆಫೀಸಲ್ಲಿ ಹಾಕಿ ಹೋಗಬಹುದಿತ್ತು. ಇಂಥವನ್ನು ಆಯಾ ಹುಡುಗಿಯ ರೂಮಿನ ಹತ್ತಿರವೇ ಹೋಗಿ ಸೈಕಲ್ ಟ್ರಿಂಣ್‌ಗುಟ್ಟಿಸಿ, ಅವರ ಸಿಗ್ನೇಚರ್ ತೆಗೆದುಕೊಂಡು, ಕೊಟ್ಟು ಬರಬೇಕಾಗುತ್ತಿತ್ತು.

ಇಷ್ಟು ಮಾಡಿ ಮುಗಿಸುವುದರಲ್ಲಿ ಪಾಪ, ನೀವು ಬೆವೆತು ಹೋಗಿರುತ್ತಿದ್ದಿರಿ... (ಕಳೆದ ದಿನಗಳ ನೆನಪು ಮನಸ್ಸಿಗೆಷ್ಟು ಮುದ ನೀಡುತ್ತದಲ್ಲವೇ?)

ಒಮ್ಮೆ ಹೀಗಾಯ್ತು. ನನಗೆ ಊರಿನಿಂದ ಮನಿ ಆರ್ಡರ್ ಬಂತು. 50 ರೂಗಳದ್ದು. ಉರಿಬಿಸಿಲಲ್ಲಿ ಸೈಕಲ್ ತುಳಿದುಕೊಂಡು ಬಂದು ನೀವದನ್ನು ನನಗೆ ತಲುಪಿಸಿದಿರಿ. ಎಂ.ಓ. ಫಾರ್ಮ್‌ನಲ್ಲಿ ಸಹಿ ಹಾಕಿ, ಹತ್ತು ರೂಪಾಯಿಯ ಐದು ನೋಟುಗಳನ್ನು ಎಣಿಸಿಕೊಳ್ಳುವಾಗ ನನಗೆ ಥಟ್ಟನೆ ಆ ದಿನ ನಿಮಗೆ ಐದು ರೂಪಾಯಿ ಭಕ್ಷೀಸು ಕೊಡಬೇಕೆನಿಸಿತು. ಚಿಲ್ಲರೆ ಇರಲಿಲ್ಲ. ಹತ್ತು ರೂಪಾಯಿಗೆ ಚಿಲ್ಲರೆ ಇದೆಯಾ ಎಂದು ನಿಮ್ಮನ್ನೇ ಕೇಳಿದೆ. ನೀವು ತಲೆತಗ್ಗಿಸಿಕೊಂಡೇ 'ಇದೆ' ಎಂದು ಹೇಳಿ ಒಂದೊಂದು ರೂಪಾಯಿನ ಹತ್ತು ನೋಟುಗಳನ್ನು ಕೊಟ್ಟಿರಿ. ನಾನು ಅದರಲ್ಲಿ ಐದು ರೂಪಾಯಿ ನಿಮಗೆ ಕೊಟ್ಟು, ಒಳಗೆ ನಡೆದೆ.

ಒಳಬಂದು ದುಡ್ಡು ಎಣಿಸಿಕೊಂಡು ನೋಡ್ತೀನಿ.... ಐವತ್ತೈದು ರೂಪಾಯಿಗಳಿವೆ! ಅದ್ಹೇಗೆ ಸಾಧ್ಯ ಅಂತ ಪುನಃ ಪುನಃ ಎಣಿಸಿದೆ. ನನಗೆ ಬಂದಿದ್ದ 50 ರೂಪಾಯಿಯಲ್ಲಿ ಪೋಸ್ಟ್‌ಮನ್‌ಗೆ ಐದು ರೂ. ಕೊಟ್ಟರೆ ಉಳಿಯುವುದೆಷ್ಟು?... ನಲ್ವತ್ತೈದಲ್ಲವೇ? ಅದು ಐವತ್ತೈದು ಹೇಗಾಯ್ತು ಎಂದು ತಲೆ ಕೆಡಿಸಿಕೊಂಡೆ. ತುಂಬಾ ಯೋಚಿಸಿದ ಮೇಲೆ 'ಓಹ್ ಹೀಗಾಯಿತೇ' ಅಂತ ತಲೆ ಮೇಲೆ ಕೈಹೊತ್ತು ಕೂರುವ ಹಾಗಾಯಿತು.

ಆದದ್ದೇನೆಂದರೆ ನಿಮಗೆ 'ಭಕ್ಷೀಸು' ಕೊಡುವ ಹುಮ್ಮಸ್ಸಿನಲ್ಲಿ, ನಿಮ್ಮಿಂದ ಹತ್ತು ರೂಪಾಯಿಗೆ ಚಿಲ್ಲರೆ ಪಡೆದವಳು, ಅದಕ್ಕೆ ನಾನು ಕೊಡಬೇಕಾದ ಹತ್ತು ರೂ. (ಉಂಡೆ) ನೋಟನ್ನು ಕೊಟ್ಟಿರಲೇ ಇಲ್ಲ! ನಿಮ್ಮಿಂದ ಪಡೆದ ನೋಟುಗಳಲ್ಲೇ ಐದನ್ನು ನಿಮಗೆ ಮರಳಿಸಿ ನಿಮ್ಮನ್ನು ಪುರಸ್ಕರಿಸಿದೆ ಎಂದು ಭೋಳೆತನ ಅನುಭವಿಸಿದ್ದೆ. ಈ ತಪ್ಪಿದ ಲೆಕ್ಕಾಚಾರಕ್ಕೆ ನನ್ನ ಮರೆವಷ್ಟೇ ಅಲ್ಲದೆ ನಿಮ್ಮ ನಾಚಿಕೆಯೂ ಕಾರಣವಾಗಿತ್ತು!

ಹೋಗಲಿ, ಆದ ತಪ್ಪು ಸರಿಪಡಿಸಿಕೊಂಡು ನಿಮಗೆ ಐದು ರೂ ಮರಳಿಸೋಣ ಎಂದು ಹೊಂಚುಹಾಕಿದರೆ ಮತ್ತೆ ನೀವತ್ತ ಸುಳಿಯಲೇ ಇಲ್ಲ. ಹಾಸ್ಟೆಲ್‌ಗೆ ಬೇರೊಬ್ಬ 'ಅಂಚೆಯಣ್ಣ' (ಈ ಬಾರಿ ನಿಖರವಾಗಿ ಅಣ್ಣ) ಬರಲಾರಂಭಿಸಿದ. ಆಮೇಲೆ ಪರೀಕ್ಷೆ ನಡೆದು ರಜಾ ಬಂದಿದ್ದರಿಂದ ನಾನು ಹಾಸ್ಟೆಲ್‌ಗೆ ಹೋಗಲೇ ಇಲ್ಲ.

ಈ ಮೂವತ್ತೈದು ವರ್ಷಗಳಲ್ಲಿ ಕೃಷ್ಣರಾಜಸಾಗರದಲ್ಲಿ ಕಾವೇರಿ ನೀರದೆಷ್ಟು ಹರಿಯಿತೋ.... ಆದರೆ ಆ ದಿನ ಪೋಸ್ಟ್ ಆಫೀಸ್‌ನಲ್ಲಿ ಲೆಕ್ಕ ಒಪ್ಪಿಸುವಾಗ ನನ್ನ 'ಭಕ್ಷೀಸಿ'ನಿಂದಾದ ಪೇಚಿನ ಪ್ರಸಂಗ ನೆನೆದುಕೊಂಡು ನೀವು ಎಷ್ಟು ಬೈದುಕೊಂಡಿರೋ ಎಂದು ಈಗಲೂ ಅನ್ನಿಸುತ್ತದೆ. ಆಗಿನ ನನ್ನ ಅತ್ಯುತ್ಸಾಹದಿಂದ ಆ ಕಾಲಕ್ಕೆ ಖಂಡಿತ ಜುಜುಬಿಯಲ್ಲದ ಐದು ರೂಪಾಯಿನ ನಷ್ಟ ನಿಮಗಾಯಿತಲ್ಲವೇ ಎನ್ನುವ ಸಂಗತಿ ಕಾಡುತ್ತದೆ.

'ಕಾಗದದ ದೋಣಿ'ಯಲ್ಲಿ ನನ್ನ ನಿವೇದನೆ ನಿಮ್ಮನ್ನು ತಲುಪುವುದೇನೋ ಎಂಬ ಆಸೆಯಲ್ಲಿ ಅರೆಮರೆವಿನಲ್ಲಿದ್ದ ಈ ವಿಷಯ ಹೆಕ್ಕಿ, ಮಸಕು ವಿವರಗಳನ್ನು ಒರೆಸಿ, ಬರೆದಿದ್ದೇನೆ. ಕದಾಚಿತ್, ದೋಣಿ ನಿಮ್ಮ ತೀರ ತಲುಪಿದರೆ ನನಗೆಷ್ಟೋ ಹಗುರ.

ನಿಮ್ಮ
ಶಾರದಾ ಶಾಮಣ್ಣ

C-44, ಶಂಕರವನ
ಶಂಕರಪುರಂ, ಬೆಂಗಳೂರು-4






ಕೆ. ಸತ್ಯನಾರಾಯಣ

ಇಳಿವಯಸ್ಸಿನ ಡೈವೊರ್ಸ್

ಈಗ ಮಂಡ್ಯ ನಗರದ ಭಾಗವಾಗಿರುವ ಗುತ್ತಲು ನಮ್ಮ ತಾಯಿಯ ಹುಟ್ಟೂರು. ಎಪ್ಪತ್ತರ ನಮ್ಮಮ್ಮ ಪ್ರತಿಸಲ ಊರಿಗೆ ಹೋಗಿಬಂದಾಗಲೂ ಅವರೆಕಾಯಿ, ತೆಂಗಿನಕಾಯಿ, ಹುಣಸೆಕಾಯಿ, ಹುಚ್ಚಳ್ಳೆಣ್ಣೆಯಷ್ಟನ್ನೇ ಅಲ್ಲದೆ ಊರಿನ ಪ್ರತಿಯೊಂದು ಮನೆಯ ಕತೆಗಳನ್ನು ತರುತ್ತಾರೆ. ಅಮ್ಮ ದೊಡ್ಡ ಅವಿಭಕ್ತ ಕುಟುಂಬದಲ್ಲಿ, ಹದಿನಾರು ಕಂಭದ ತೊಟ್ಟಿ ಮನೆಯಲ್ಲಿ, ನೂರಾರು ಜನರ ಜೊತೆ ಬೆಳೆದವರು. ಇಡೀ ಗ್ರಾಮವೇ ಒಂದು ಕುಟುಂಬದಂತೆ ಒಬ್ಬರಿಗೊಬ್ಬರು ಆಗಿಬರತಾಯಿದ್ದ ಕಾಲದವರು. ನಾಲ್ಕು ನೂರಕ್ಕೂ ಮಿಕ್ಕ ಮನೆಗಳ ಎರಡು-ಮೂರು ತಲೆಮಾರಿನ ಕತೆಗಳು ಅವರಿಗೆ ಗೊತ್ತು. ಅವರು ಹೇಳುವ ಕತೆಗಳನ್ನು ಕೇಳಿದಾಗಲೆಲ್ಲ ನನಗೆ ನವ್ಯ ಕತೆಗಳು ಸುಳ್ಳೆನಿಸುತ್ತದೆ, ಜಾನಪದ ಕತೆಗಳು ಕೂಡ ಕೊರೆ ಎನಿಸುತ್ತದೆ. ಅವರ ಕತೆಗಳಲ್ಲಿ ಮನುಷ್ಯರೇ ಅಲ್ಲದೆ ಹಸುವಿನ ಗರ್ಭ, ನಾಯಿಯ ಹುಚ್ಚು ಕೂಡ ಸೇರಿಕೊಂಡಿವೆ.

ಮೊನ್ನೆ ಊರಿಂದ ಬಂದಾಗ ಮಾತ್ರ ಹಾಗಾಗಲಿಲ್ಲ. ತಂದಿದ್ದ ಅವರೆಕಾಯಿಯನ್ನು ಒಟ್ಟುಹಾಕಿಕೊಂಡು ಅಮ್ಮ, ನಾನು, ನನ್ನ ಹೆಂಡತಿ ಸರಿರಾತ್ರಿಯವರೆಗೂ ಸುಲಿಯುತ್ತಾ ಕುಳಿತಿದ್ದೆವು. ಪದ್ಧತಿಯಂತೆ ಅಮ್ಮ ಹತ್ತಾರು ಮನೆಗಳ ಕತೆ ಹೇಳಿ, ಅವರೆಕಾಯಿಯು ಮುಗಿಯುತ್ತಾ ಬಂತು ಅನ್ನುವಾಗ ದೊಡ್ಡದಾಗಿ ಆಕಳಿಸುತ್ತಾ ''ಎಲ್ಲ ಸರಿ ನೋಡು, ಕೊನೆಗೂ ಅವರವರು ಪಡೆದು



ಕೊಂಡು ಬಂದದ್ದು. ಆದರೆ ನಿಮ್ಮ ನಂದಿನಿ ಆಂಟಿ ಮಾತ್ರ, ಈಗ ಅರವತ್ತರ ಇಳಿವಯಸ್ಸಿನಲ್ಲಿ ಹೀಗೆ ಮಾಡಬಾರದಿತ್ತು, ನಾಚಿಕೆಗೇಡು. ಹಾಯಾಗಿ ರಾಮ ಕೃಷ್ಣ ಅಂತ ಇರೋದುಬಿಟ್ಟು ಮೈಸೂರಿಗೆ ಹೋಗಿ ಸೇರಕೊತಾಳಂತೆ. ಸಂಗೀತಕ್ಕೆ ಸೇರಲೇ ಬೇಕಂತೆ.''

ನನಗೂ ಆಶ್ಚರ್ಯ. ನಂದಿನಿ ಆಂಟಿ ಈ ವಯಸ್ಸಿನಲ್ಲಿ ಅವರ ಮುದ್ದುಮಗ ಜಯರಾಂ, ಮೊನ್ನೆ ಮೊನ್ನೆಯಷ್ಟೇ ಅವರೇ ಆರಿಸಿ ತಂದ ಸೊಸೆ ಮಾಲತಿನ ಈಗೇಕೆ ಬಿಟ್ಟು ಹೋಗತಾರೆ. ಬಿಡಿಸಿ ಹೇಳುವಂತೆ ಅಮ್ಮನ್ನ ಕೇಳಿದ್ದಕ್ಕೆ ಮತ್ತಷ್ಟು ಒಗಟು ಮಾಡಿದಳು. ''ನನಗೇನೂ ಗೊತ್ತಿಲ್ಲಪ್ಪ. ಊರ ತುಂಬಾ ಇದೇ ಸುದ್ದಿ. ಸ್ಕೂಲು ಮಕ್ಕಳು ಕೂಡ ಮಾತಾಡ್ಕೊಂಡು ನಗತಾರೆ. ನನಗೇನು ಬೇಜಾರಿಲ್ಲಪ್ಪ. ಯಾವತ್ತಿದ್ದರೂ ಇದು ದದ್ದು ಬಳೆಯೇ, ಒಡೆದು ಮನೆಯಿಂದ ಹೊರಕ್ಕೆ ಎಸೀಬೇಕು ಅಂತ ಗೊತ್ತಿತ್ತು.'' ಹೆಂಡತಿ ಕಡೆ ನೋಡಿದರೆ ಕಿಲಾಡಿನಗು. So, your Nandini Aunty ಅನ್ನುವಂತೆ...

2



ನಂದಿನಿ ಆಂಟಿ ಬಂಧುವಲ್ಲ, ಬಳಗವಲ್ಲ, ನಮ್ಮ ಜಾತಿ ಜನ ಅಷ್ಟೆ. ನಾನು ಹೈಸ್ಕೂಲಿಗೆ ಹೋಗುವ ಹೊತ್ತಿಗೆ ಅವರು ಗಂಡನನ್ನು ಬಿಟ್ಟು ಎಷ್ಟೋ ವರ್ಷಗಳಾಗಿತ್ತು ಅಂತ ಕಾಣುತ್ತೆ.


ಹೆಸರಿಗೆ ನಮ್ಮ ಸ್ಕೂಲಿನ ಲೈಬ್ರರಿ ಮೇಡಂ. ಹಳ್ಳಿ ಸ್ಕೂಲಾದ್ದರಿಂದ ಸಕಲ ಕೆಲಸಗಳನ್ನು ಮಾಡ ಬೇಕು. ಗುಮಾಸ್ತ ಬರದೇ ಹೋದ್ರೆ, ಫೀಸ್ ರಶೀದಿ ಬರೆಯೋದು, ಪುಸ್ತಕದಂಗಡಿ ಹುಡುಗ ಬರದೇ ಹೋದ್ರೆ, ಅಂಗಡೀಲಿ ಕೂತು ವ್ಯಾಪಾರ ಮಾಡೋದು, ಹೆಡ್‌ಮೇಷ್ಟ್ರು ಮನೆಯಲ್ಲಿ ವಿಶೇಷ ಏನಾದ್ರು ಇದ್ರೆ ಅವರ ಹೆಂಡತಿಗೆ ಸುತ್ತು ಕೆಲಸದಲ್ಲಿ ಜೊತೆಯಾಗೋದು. ಮುಂದಿನ ಬೀದಿಯಲ್ಲಿ ಅವರ ಮನೆ. ಜೊತೆಗಿದ್ದವನು ಮಗ ಜಯರಾಂ ಮಾತ್ರ. ನಮ್ಮ ಮನೆಗೆ ಆಗಾಗ್ಗೆ ಹಬ್ಬ ಹರಿದಿನಕ್ಕೆ ಅರಿಷಿನ ಕುಂಕುಮಕ್ಕೆಂದು ಬಂದು ಹೋಗೋರು.

ಹಿಂದಿನ ಬೀದಿ ಹುಡುಗ, ಪರಿಚಿತ ಮುಖ ಎನ್ನುವ ಬಳಕೆ ಏನೋ, ಕಾರಣ ಕಂಡಾಗಲೆಲ್ಲ ವಿಶ್ವಾಸದಿಂದ ನಕ್ಕು ಮಾತಾಡಿಸುವರು. ಬಳಕೆ ಹೆಚ್ಚಾದಂತೆ ಆ ಪುಸ್ತಕ, ಈ ಪುಸ್ತಕ ಓದಲು ಸಲಹೆ. ಕಸ್ತೂರಿ, ರೀಡರ್ಸ್ ಡೈಜೆಸ್ಟ್ ಹಳೆಯ ಸಂಚಿಕೆಗಳ ಪರಿಚಯ. ಲೆಕ್ಕದಲ್ಲಿ ನಿಧಾನಸ್ಥನು, ದಡ್ಡನು ಆಗಿದ್ದ ನನಗೆ, ಅದೆಷ್ಟೋ ಹುಡುಗರಿಗೆ ತುಂಬಾ ವ್ಯವಧಾನದಿಂದ ಬಿಡಿಸಿ, ಬಿಡಿಸಿ ಲೆಕ್ಕ ಹೇಳಿಕೊಡೋರಲ್ಲ. ಒಂದೇ ಒಂದು ದಿನ, ಒಂದೇ ಒಂದು ಸಲ ಯಾತಕ್ಕೂ ಯಾವ ಹುಡುಗರನ್ನೂ ಗದರಿಕೊಂಡವರಲ್ಲ.

ನಂದಿನಿ ಮೇಡಂಗೆ ಅವರಿದ್ದ ಸ್ಥಿತಿಯಲ್ಲಿ ನಾನೆಷ್ಟು ಒಗ್ಗಿಹೋಗಿದ್ದೆನೆಂದರೆ ಅವರ ಜೊತೆ ಯಲ್ಲಿ ಗಂಡ ಇಲ್ಲದೆ ಇದ್ದುದು ಕೊರತೆಯಾಗಿ ಹೊಳದೇ ಇರಲಿಲ್ಲ. ಅದು ಅಸಹಜ ಅಂತನೂ ಅನಿಸಿರಲಿಲ್ಲ. ಆ ಕಾಲದ ನನ್ನ ಜಗತ್ತಿಗೆ ಆಕೆಯ ಗಂಡನ ಅವಶ್ಯಕತೆಯಾದರೂ ಏನಿತ್ತು. ಸುತ್ತಮುತ್ತಲವರ ಪಿಸುಮಾತುಗಳು, ಟೀಕೆ-ಟಿಪ್ಪಣಿಯ ಒಗ್ಗರಣೆಯೇ ಬೇರೆಯಿತ್ತು.

ಅವರಿಗೆ ತುಂಬಾ ಚಿಕ್ಕಂದಿನಿಂದಲೂ ತಾಯಿ ಇಲ್ಲ. ಅಪ್ಪ ಪಕ್ಕದೂರಿನ ಡ್ಯಾಮಿನ ಆಫೀಸಿಗೆ ಗುಮಾಸ್ತನಾಗಿ ಬಂದು ನಮ್ಮೂರಿನಲ್ಲೇ ಬಾಡಿಗೆ ಮನೆ ಹಿಡಿದು ಬೀಡು ಬಿಟ್ಟವನಂತೆ. ಮಗಳು ನಂದಿನಿಯೇ ಅವನಿಗೆ ಸರ್ವಸ್ವ. ಮಂಡ್ಯದಲ್ಲೇ ಓದಿಸಿ, ಬೆಳೆಸಿ, ಬಹು ಆಸೆಯಿಂದ ಕಾಫಿಪುಡಿ ಅಂಗಡಿ ಹಿರಣ್ಣಯ್ಯನ ಎರಡನೆ ಮಗ ಶಂಕರ ರಾಮನಿಗೆ ಮದುವೆ ಮಾಡಿಕೊಟ್ಟರಂತೆ. ಎಂತಹ ಅನುಕೂಲಸ್ಥ ಮನೆತನ ಅದು. ಹೆಸರಿಗೆ ಕಾಫಿಪುಡಿ ಹಿರಣ್ಣಯ್ಯ, ಆಸ್ತಿ ಮಾತ್ರ ಅಬ್ಬ. ಮಂಡ್ಯದ ಎರಡು ಮನೆಯೇ ಅಲ್ಲದೆ, ಮೈಸೂರಿನ ಯಾದವಗಿರೀಲು ಮನೆ ಕಟ್ಟಿ ಬಾಡಿಗೆಗೆ ಕೊಟ್ಟಿದ್ದರಲ್ಲ. ಲೇವಾದೇವಿ ಕೂಡ ಎಂತೆಂತವರ ಜೊತೆ. ಸಾ ಮಿಲ್ ಸಾಹುಕಾರರು, ಕಂಟ್ರಾಕ್ಟರ್‌ಗಳು, ಮುನಿಸಿಪಲ್ ಕೌನ್ಸಿಲರ್‌ಗಳು.

ಅಂತಹ ಲಕ್ಷ್ಮೀಪುತ್ರರ ಮನೆಯ ಮೆಚ್ಚಿನ ಸೊಸೆಯಾಗಿ ಬಾಳಲಾಗದೆ ನಂದಿನಿ ಮದುವೆ ಯಾದ ಆರು ತಿಂಗಳಿಗೇ ಗರ್ಭಿಣೀನು ಆಗಿ




ಅಪ್ಪನ ಮನೆಗೆ ಬಂದುಬಿಟ್ಟಳಂತೆ. ನಿವೃತ್ತಿಯಾಗಿದ್ದ ಅಪ್ಪ ಕೈ ಕಾಲು ಹಿಡಿದು ಅಂಗಲಾಚಿಕೊಂಡ. 'ಏನೇ ಆದರೂ ಗಂಡನ ಮನೆ ಬಿಡಬೇಡ, ಎಂತದೇ ತೊಂದರೆಯಾದ್ರು, ಕಾಲಕ್ರಮೇಣ ಸರಿಹೋಗಿಬಿಡುತ್ತೆ, ಇಡೀ ಸೀಮೆಗೆ ಹೆಸರುವಾಸಿಯಾದ ಮನೆತನ ಅವರದು. ನಮ್ಮನ್ನು ಯಾರು ಕೇಳ್ತಾರೆ.' ನಂದಿನಿ ಜಗ್ಗಲಿಲ್ಲ. "ಏನೇ ಹೇಳಿದರೂ ನಾನು ಹೋಗೋಲ್ಲ. ತುಂಬಾ ಹಠ ಮಾಡಿದ್ರೆ ನಿನ್ನೆದುರಿಗೆ ನೇಣು ಹಾಕಿಕೊಂಡು ಸಾಯತೀನಿ." ಅವರಪ್ಪ ಅದೇ ಕೊರಗಲ್ಲಿ ಸತ್ತದ್ದು. ಅವರಿವರ ಕೈ ಕಾಲು ಹಿಡಿದು ನಂದಿನಿ ನಮ್ಮ ಸ್ಕೂಲಿಗೆ ಕೆಲಸಕ್ಕೆ ಸೇರಿದ್ದು.

ಶಂಕರರಾಮನ್ನ ಎಷ್ಟು ಸಲ ನೋಡಿಲ್ಲ. ಸಿಲ್ಕ್ ಜುಬ್ಬ, ಅದರೊಳಗಿಂದ ಇಣುಕುವ ದಪ್ಪ ಸರ, ಹರಳುಂಗುರ. ಇನ್ನೊಂದು ಮದುವೆ ಆಗಿ, ಎರಡು ಗಂಡು ಮಕ್ಕಳೂ ಹುಟ್ಟಿ, ದಿವಿನಾಗಿ ವ್ಯಾಪಾರ ವ್ಯವಹಾರ ಮುಂದುವರೆಸಿಕೊಂಡು. ನಂದಿನಿ ಅವರನ್ನು ಯಾಕೆ ಬಿಟ್ಟದ್ದು. ಅದೆಷ್ಟು ರೀತಿಯ ಊಹೆ, ಸುದ್ದಿಗಳಲ್ಲಿ ಬಾಲ್ಯವೆಲ್ಲ ಕಳೆದು ಹೋಯಿತು. ಶಂಕರರಾಮನಿಗೆ ಒಬ್ಬ ಅರೆಹುಚ್ಚ ಅಣ್ಣ. ಅವನಿಗೆ ಇವಳ ಮೇಲೆ ಆಸೆ, ಪೀಡನೆ. ಅದನ್ನೆಲ್ಲ ಊರೊಳಗೆ ಹೇಳಬಾರದೆಂದು ಕಟ್ಟುನಿಟ್ಟು. ಅಣ್ಣ ಇವಳನ್ನು ಕಚ್ಚಿ, ಪರಚಿದ್ದು ಉಂಟಂತೆ. ಅಣ್ಣನದು ಹುಚ್ಚಾದರೆ, ಶಂಕರ ರಾಮನಿಗೆ ಮದುವೆಯೆಂಬುದು ನಂದಿನಿಯ ಜೊತೆಗೆ ಎರಡನೆಯದು. ಮೈಸೂರಲ್ಲಿ ಓದುತ್ತಿದ್ದಾಗಲೇ ನಜ಼ರ್‌ಬಾದ್ ಸ್ಕೂಲ್ ಮೇಡಂ ಮಗಳ ಜೊತೆ ಓಡಾಟ. ಮೇಡಂ ತುಂಬಾ ಚಾಲಾಕಿ. ಇವನ ಆಸ್ತಿ-ಪಾಸ್ತಿ ಕಂಡು ಚರ್ಚಿಗೆ ಕರೆದುಕೊಂಡು ಹೋಗಿ ಮದುವೇನು ಮಾಡಿಸಿಬಿಟ್ಟಳು, ಉಂಗುರ ತೊಡಸಿ. ಊರವರೆಲ್ಲ ಹೋಗಿ, ನ್ಯಾಯ ಪಂಚಾಯತಿ ಮಾಡಿ, ಆ ಹುಡುಗಿಗೆ ಸಾವಿರಾರು ರೂಪಾಯಿ ಪರಿಹಾರ ಕೊಟ್ಟು ಮಗರಾಯನ್ನ ಬಿಡಸಕೊಂಡು ಬಂದು ಗುಟ್ಟಾಗಿ ರಾತ್ರೋರಾತ್ರಿ ನಂದಿನಿ ಜೊತೆ ಮದುವೆ ಮಾಡಿದ್ದು. ಇಷ್ಟೆಲ್ಲ ಇಲ್ಲದೆ ಹೋದ್ರೆ ಯಃಕಶ್ಚಿತ್ ಗುಮಾಸ್ತನ ಮಗಳೊಬ್ಬಳನ್ನು ಯಾರು ತಂದಕೋಬೇಕು. ಮದುವೆಯಾಗಿ ನಂದಿನಿ ಗರ್ಭಿಣಿ ಅಂತ ಗೊತ್ತಾದ ಮೇಲೂ ಶಂಕರ ರಾಮನಿಗೆ ನಜ಼ರ್‌ಬಾದ್ ಹುಡುಗಿ ವಾಸನೆ ಬಿಟ್ಟಿರಲಿಲ್ಲವಂತೆ. ಅತ್ತೆ-ಮಾವ, ಅತ್ತಿಗೆ-ನಾದಿನಿ, ಜಾತ್ಯಸ್ಥರು, ಬಂಧು-ಬಳಗದವರದು ಎಲ್ಲರದು ತಾಕೀತು. ಎಲ್ಲವನ್ನು ಒಳಗೆ ಹಾಕಿಕೋ. ಸುಖವಾಗಿ ಮಹಾರಾಣಿಯಂತಿರು. ಊರಲ್ಲಿ ಯಾರಿಗೂ ಏನನ್ನೂ ಹೇಳಬೇಡ. ಸುಮ್ಮನೆ ನೀನು ಒತ್ತಾಯ ಮಾಡುತ್ತಿದ್ದರೆ, ವಂಕಿಯೇನು, ಡಾಬೇನು, ಕರಿಮಣಿಸರದ ತುಂಬಾ ಕೋವಿಯೆಷ್ಟೊಂದು.

ಇದೆಲ್ಲದರಲ್ಲಿ ಯಾವುದು ನಿಜ, ಎಷ್ಟು ನಿಜ, ತಿಳಿಹೇಳುವವರಾರು. ಊರಿನ ತಾಯಂದಿರು, ಸೋದರತ್ತೆಯರು, ಚಿಕ್ಕಮ್ಮಂದಿರು-ಎಲ್ಲರಿಂದಲೂ ನಂದಿನಿಯದೇ ವಿಶ್ಲೇಷಣೆ, ವ್ಯಾಖ್ಯಾನ. ಏನೇ ಆದರೂ ಗಂಡನ್ನ ಬಿಡಬಾರದಾಗಿತ್ತು. ಎಲ್ಲ ಗಂಡಸರಲ್ಲು ಹೀಗೆ ಒಂದಲ್ಲ ಒಂದು ಊನ ಅನ್ನೋದು ಇದ್ದೇ ಇರುತ್ತೆ. ಹಾಗಂತ ಊರವರೆಲ್ಲ ಗಂಡಂದಿರನ್ನ ಬಿಡತಾ ಕೂತಕೊಂಡ್ರೆ. ಶಂಕರರಾಮನಂತಹ ದೊರೆಮಗನ್ನ ಬಿಟ್ಟಳಲ್ಲ, ಏನಾಯಿತು ಅವನಿಗೆ. ಹಳೆಮನೆ ಕೆಡವಿಸಿ ಹೊಸ ಬಂಗಲೆ, ಮಂಡ್ಯಕ್ಕೇ ಮೊದಲ ಫಿಯೆಟ್ ಕಾರು, ಶೃಂಗೇರಿ ಸ್ವಾಮಿಗಳು ಬಂದಾಗ ಕಣ್ಣು ತುಂಬುವ ಹಾಗೆ ಪಾದಪೂಜೆ ಮಾಡಿದ. ಈಚೆಗೆ ಕಾನಕಾನಹಳ್ಳಿ ಹತ್ತಿರ ಗ್ರಾನೈಟ್ ಫ್ಯಾಕ್ಟರಿ ಬೇರೆ. ಮಹಾರಾಣಿ ತರ ಇರಬೋದಿತ್ತು.

ಇದನ್ನೆಲ್ಲ ಕೇಳಿಸಿಕೊಂಡು ಬೆಳಿಗ್ಗೆ ಎದ್ದು ಸ್ಕೂಲಿಗೆ ಹೋಗಿ ನಂದಿನಿ ಆಂಟಿ ಮುಖ ನೋಡಿದರೆ ಏನೂ ಗೊತ್ತೇ ಇಲ್ಲವೆಂಬಂತೆ ಯಾವುದೋ ಹುಡುಗನಿಗೆ ಪುಸ್ತಕ ತೆಗೆದು ಕೊಡುತ್ತಾ, ಇನ್ನೊಬ್ಬನಿಗೆ ಬಿಡಿಸಿದ ಲೆಕ್ಕವನ್ನೇ



ಮತ್ತೊಮ್ಮೆ ಬಿಡಿಸುತ್ತಾ ಮಗ ಜಯರಾಮನ್ನ ಓದಿಸಿ ಬೆಳೆಸುವುದೇ ಜೀವನದ ಉದ್ದೇಶ ಮಾತ್ರವೆನ್ನುವಂತೆ. ಆ ಆಸೆಗನುಗುಣವಾಗಿ ಅವನು ಓದಿದ, ಎಂಜಿನಿಯರ್ ಆದ. ಮಗನ ವಿಷಯದಲ್ಲಿ ಮಾತ್ರ ನಂದಿನೀದು ಎಂಥ ಅದೃಷ್ಟ ಎಂಬುದು ಊರೊಟ್ಟಿನ ವ್ಯಾಖ್ಯಾನ.

ಈ ಕಡೆ ನಾನೂ ಓದಿ, ಕೆಲಸಕ್ಕೆ ಸೇರಿ, ಮದುವೆ ಆದಮೇಲೂ ನಂದಿನಿ ಆಂಟಿಯ ಜೀವನ ಇನ್ನೂ ನಿಗೂಢವೇ ಆಗಿತ್ತು. ಮದುವೆಗೆ ಬಂದಿದ್ದ ಅವರನ್ನು ತುಂಬಾ ಉತ್ಸಾಹದಿಂದ ಆಫೀಸು ಸ್ನೇಹಿತರಿಗೆ, ಸಾಹಿತಿಮಿತ್ರರಿಗೆಲ್ಲ ಪರಿಚಯಿಸಿದ್ದೆ. ನನ್ನ ಒಳಮನಸ್ಸಿನ ಪದರಗಳ ಶ್ರೀಮಂತಿಕೆ ಬೆಳೆಯಲು ಕಾರಣರಾದವರು ಎಂದಿದ್ದೆ. ನನ್ನೆಲ್ಲ ಓದು, ತಿಳುವಳಿಕೆ, ಲೋಕಾನುಭವ ಹಿಡಿದು ಜಗ್ಗಿದರೂ ನಂದಿನಿ ಏಕೆ ಗಂಡನ್ನ ಬಿಟ್ಟು ಬಂದರು, ಹಾಗೆ ಬಿಟ್ಟು ಬಂದೂ ಮಂಡ್ಯದಂತಹ ಸಣ್ಣ ಊರಲ್ಲಿ, ಅಷ್ಟು ಸ್ಥಿತಿವಂತರನ್ನು ಲೆಕ್ಕಕಿಟ್ಟುಕೊಳ್ಳದೆ ಅಷ್ಟು ವರ್ಷ ಹೇಗೆ ಬದುಕಿದರು ಎನ್ನುವುದಕ್ಕೆ ಉತ್ತರ ಸಿಗಲಿಲ್ಲ. ಇಡೀ ಊರಲ್ಲಿ ಅವರ ಬಗ್ಗೆ ಒಂದೇ ಒಂದು ಪ್ರೀತಿಯ, ಅನುಕಂಪದ ಮಾತು! ಯಾವುದೇ ಕಾರಣಕ್ಕೆ ಅವರು ಗಂಡನ್ನ ಬಿಟ್ಟಿರಲಿ, ಆ ಕಾರಣ, ಆ ಕಾಲಕ್ಕೆ ಊರಿನವರಿಗೆ ಸಾಲ ದೆಂದೆನಿಸಿರಬೇಕು. ಯಾವ ಕಾರಣ ವಾಗಿದ್ದರೆ ಸಾಕಾಗುತ್ತಿತ್ತು? ಊರೊಟ್ಟಿನ ಪ್ರೀತಿ ಅನುಕಂಪ ಪಡೆಯುತ್ತಿತ್ತು?

ಮದುವೆಯ ಆಲ್ಬಂನಲ್ಲಿ ಅವರ ಫೋಟೋ ವನ್ನು ನನ್ನ ಹೆಂಡತಿಗೆ ತೋರಿಸಿದ್ದೆ. ವಿಶಾಲವಾದ ಹಣೆ, ನಿಮ್ಮನ್ನೇ ನೋಡುವ ಕಣ್ಣುಗಳು, ಬಾಯೊಳಕ್ಕೆ ಹೋಗುತ್ತಿರುವ ತುಟಿ. Nothing impressive ಅಂದಿದ್ದಳು. ಮಾತ್ರವಲ್ಲ, ನನ್ನ ಹೆಂಡತಿ ಹೇಳುವುದನ್ನೆಲ್ಲ ಕೇಳಿಸಿಕೊಂಡು ಅಮ್ಮನ ತರವೇ ಹೇಳಿದ್ದಳು: ಆದರೂ ಆಕೆ ಗಂಡನ್ನ ಬಿಡಬಾರದಾಗಿತ್ತು.

3



ಇಳಿವಯಸ್ಸಿನಲ್ಲಿ ಬದುಕಿನ ಸರ್ವಸ್ವವಾಗಿದ್ದ ಮಗನನ್ನ, ತಾನೇ ಆರಿಸಿ ತಂದ ಸೊಸೆಯನ್ನ ಬಿಟ್ಟು ಹೋಗುವಂತದ್ದು ಅದೇನಾಯಿತು, ಅತ್ತೆ-ಸೊಸೆ ಜಗಳವೆ. ನಂದಿನಿ ಆಂಟಿ ತಮ್ಮಲ್ಲಿದ್ದ ಚೂರು-ಪಾರು ಒಡವೇನ ಕೂಡ ಸೊಸೆ ಮೈಮೇಲೆ ಹಾಕಿ ಸಂತೋಷಪಟ್ಟಿದ್ದರಲ್ಲ. ಶುಕ್ರವಾರ, ಮಂಗಳವಾರ ತಾವೇ ನಿಂತು ಎಣ್ಣೆ ನೀರು ಹಾಕಿದರಲ್ಲ. ಸೊಸೆಯ ಮಂಗಳಗೌರಿ ವ್ರತಕ್ಕೆ ಅವರದ್ದೇ ಒತ್ತಾಸೆ. ಇಬ್ಬರನು ಜೊತೆ ಮಾಡಿ ಶೃಂಗೇರಿ, ಹೊರನಾಡು, ಸುಬ್ರಹ್ಮಣ್ಯ, ಕೊಲ್ಲೂರಿಗೆ ಕಳಿಸಿದ್ದರಲ್ಲ. ಹೀಗಿರುವಾಗ ಮಗ ಸೊಸೇನ ಬಿಟ್ಟು ಹೋಗೋಕೆ ಕಾರಣಾನ ಅಮ್ಮನ್ನ ಕೇಳುವ ಹಾಗಿಲ್ಲ, ಬಾಬ್‌ಕಟ್‌ನ, ಆಧುನಿಕ ಕಾಲದ ಹೆಂಡತಿಯದೂ ಅಮ್ಮನದೇ ಅಭಿಪ್ರಾಯ. ನನ್ನ ಹಾಗೇ ನಂದಿನಿಯವರನ್ನು

ತುಂಬಾ ಹಚ್ಚಿಕೊಂಡಿದ್ದ ಮೂರುನಾಲ್ಕು ಸಹಪಾಠಿಗಳಿಗೆ ಕಾಗದ ಬರೆದರೂ ಅದೇ ಉತ್ತರ. ಇಳಿವಯಸ್ಸಿನಲ್ಲಿ ಅವರು ಹೀಗೆ ಮಾಡಬಾರದಿತ್ತು.

ತೇರಿಗೆಂದು ಊರಿಗೆ ಹೋದಾಗ ಅವರ ಮನೆಗು ಹೋದೆ. ಪ್ರಶ್ನೆ, ಆತಂಕ ತುಂಬಿದ ಮುಖ ನೋಡಿ ಎಂದಿನ ಸಮಾಧಾನದ ನಗೆ ನಕ್ಕರು. ಒಳಗೇ ಉಳಿಯುತ್ತಿದ್ದ ಮಾತುಗಳನ್ನು ಜೋಡಿಸಿಕೊಳ್ಳುತ್ತಾ ನಿಮ್ಮನ್ನು ಮತ್ತೆ ಇಲ್ಲಿ ನೋಡತೀನೋ ಇಲ್ಲವೋ ಅಂತ ಕೇಳಿಸದ ಹಾಗೆ ಗುನಗಿದೆ. ಉತ್ತರ ಹೇಳದೆ ಅಡುಗೆ ಮನೆಗೆ ಹೋಗಿ ಬೇಲದ ಹಣ್ಣಿನ ಪಾನಕ ತಂದಿಟ್ಟರು. ನಿನಗೆ ತುಂಬಾ ಇಷ್ಟ ಅಲ್ಲವಾ, ಚಿಕ್ಕಂದಿನಲ್ಲಿ ಕೆಮ್ಮು ಬಂದರೂ ಬಿಡದೆ ತಿಂತಾ ಇದ್ದೆಯಲ್ಲ. ಗಂಟಲು ಒತ್ತರಿಸಿ ಬಂದು ನೆತ್ತಿ ಹತ್ತಿದ ಹಾಗೆ. ಆಂಟಿ ನಗುತ್ತಾ, ನಿನ್ನನ್ನು ಯಾರೋ ನೆನಸಕೊತಿರ ಬೇಕು ನಿಧಾನವಾಗಿ ಕುಡಿ ಎಂದರು. ಕುಡಿದ ಮೇಲೆ ಅವರು ಚೆನ್ನಾಗಿತ್ತಾ ಎಂದು ಕೇಳಿದ ಧಾಟಿ ನೀನಿನ್ನು ಹೊರಡಬಹುದು ಎನ್ನುವ ಹಾಗೆ. ಮತ್ತೆ ಮಾತುಗಳನ್ನು ಜೋಡಿಸಿ ನಿಮಗೆ ಯಾವಾಗ, ಏನು ಬೇಕಾದರೂ ನೆರವು ಕೇಳಿ ಎನ್ನುತ್ತಾ ಹೊರಬಂದಿದ್ದೆ. ಲೋಟ ಇಡಲು ಅಡುಗೆ ಮನೆಗೆ ಹೋದವರು ಹೊರಬರಲೇ ಇಲ್ಲ. ಇಲ್ಲ, ಇಲ್ಲ ನಾನು ಅವರ ಜೊತೆ ಆಡಬೇಕಾಗಿದ್ದ ಮಾತೇ ಬೇರೆ, ಈಗ ಆಡಿದ್ದಲ್ಲ ಅಂದೆನಿಸಿದರೂ ಹೇಳದೆ ಉಳಿದ ಮಾತುಗಳು ಎಂತಹವು, ಆ ಮಾತುಗಳು ಅವರಿಗೂ ಗೊತ್ತಿತ್ತೇ, ಗೊತ್ತಿದ್ದು ಬೇಲದ ಹಣ್ಣಿನ ಪಾನಕ ಕೊಟ್ಟು ಸಾಗಹಾಕಿದರೆ, ಅಥವಾ ಇದೆಲ್ಲವನ್ನು ನನ್ನೊಡನೆ ಮಾತಾಡು ವಷ್ಟು ನಾನು ಆಕೆಗೆ ವಿಶ್ವಾಸಾರ್ಹನಾಗಿ, ಪ್ರಬುದ್ಧ ನಾಗಿ ಕಾಣಲಿಲ್ಲವೆ. ನೀವು ಎಷ್ಟು ಯೋಚಿಸಿ ದರೂ ಅದು ಅಷ್ಟೇ, ಸುಮ್ಮನೆ ಮರೆತುಬಿಡಿ ಅವರನ್ನು. ನೀವು ಅವರ ಬಗ್ಗೆ ಯೋಚಿಸ ಬಹುದು, ಆದರೆ ಅವರಿಗೂ ನಿಮ್ಮ ಹತ್ತಿರ ಹೇಳಕೊಬೇಕು ಅನ್ನಿಸೋದು ಅಷ್ಟೇ ಮುಖ್ಯ ವಲ್ಲವೆ ಎಂಬ ತಿಳುವಳಿಕೆಯ ಮಾತು ಹೆಂಡತಿಯಿಂದ.

4

ಸುಮಾರು ಒಂದಾರು ತಿಂಗಳಾದ ಮೇಲೆ ಅವರಿಂದ ಒಂದು ಕಾಗದ-ಪುಸ್ತಕಗಳ ಪಾರ್ಸೆಲ್, ತಿರುವಣ್ಣಾಮಲೆಯ ಅರುಣಗಿರಿ ಆಶ್ರಮದಿಂದ. ಆವಾಗಲೇ ಗೊತ್ತಾದದ್ದು, ನಂದಿನಿಯವರು ಮೈಸೂರಿನಲ್ಲಿ ಬಹುದಿನ ಉಳಿಯದೆ ರಮಣಾ ಶ್ರಮಕ್ಕೆ ಹೋಗಿ ಸ್ವಯಂ ಸೇವಕಿಯಾಗಿ ಸೇರಿ ಕೊಂಡದ್ದು. ಕಾಗದದ ಜೊತೆಗೆ ರಮಣಮಹರ್ಷಿ ಗಳ ಪತ್ರಗಳ ಕನ್ನಡ ಅನುವಾದದ ಸಂಪುಟ ಮತ್ತು ಸ್ವಾಮಿ ಶಿವಾನಂದರ 'ಬದುಕುವುದನ್ನು ಕಲಿಯಿರಿ' ಪುಸ್ತಕ. ಸ್ಕೂಲುದಿನಗಳ ನನ್ನದೊಂದು ಫೋಟೋ ಅವರ ಜೊತೆ ತೆಗೆಸಿಕೊಂಡದ್ದು, ಸೇವಾದಳದ ಡ್ರಸ್ಸಿನಲ್ಲಿ. ಫೋಟೋದಲ್ಲಿ ನಾನು ಕಿವಿಗೆ ವಾಲೆ ಹಾಕಿಕೊಂಡಿದ್ದೇನೆ. ಮೇಡಂ ಇಷ್ಟು ದಿನ ಎಲ್ಲಿಟ್ಟುಕೊಂಡಿದ್ದರೊ ಈ ಫೋಟೋನ.

ಪ್ರೀತಿಯ ಮಗು,

ಈ ಪುಸ್ತಕಗಳನ್ನು ಓದಿ ಯಾವಾಗಲೂ ವ್ಯಗ್ರವಾಗಿರುವ, ತಹತಹಿಸುವ ನಿನ್ನ ಮನಸ್ಸು ಈಗಲಾದರೂ ಒಂದಿಷ್ಟು ನೆಮ್ಮದಿ, ನಿಲುಗಡೆ ಪಡೆಯಲಿ ಅಂತ ಆಶಿಸ್ತೇನೆ. ಸೃಷ್ಟಿಯಲ್ಲಿನ ಪ್ರತಿಯೊಂದು ವಿದ್ಯಮಾನಕ್ಕು ಕಾರಣವಿರ ಬಹುದು, ಕಾರ್ಯ-ಕಾರಣ ಸಂಬಂಧವಿರಬಹುದು. ಅದೆಲ್ಲವನ್ನು ತಿಳಿದುಕೊಳ್ಳಬೇಕು ಅನ್ನುವ ಹಠವೋ, ಆಸೆಯೋ ಯಾವುದೂ ಉಚಿತವಲ್ಲವೇ ಅಲ್ಲ. ನೆನಪಿರಲಿಕ್ಕಿಲ್ಲ ನಿನಗೆ, ನಂಜುಂಡಯ್ಯ ಮೇಷ್ಟ್ರು ಫ್ಯಾಮಿಲಿ ಪ್ಲಾನಿಂಗ್ ಆಪರೇಶನ್ ಮಾಡಿಸಿ ಕೊಂಡ ಮಾರನೇ ದಿನವೇ ಸತ್ತರು. ಬೆಳಿಗ್ಗೆ ಯಿಂದ ಸಂಜೆತನಕ ನೀನು ಅವರ ಹೆಣದ ಹತ್ತಿರಾನೇ ಕೂತಿದ್ದೆ. ದುಃಖಪಡತಾ ಅಲ್ಲ;

ಬಂದವರ, ಹೋದವರ ಮುಖನೋಡುತ್ತಾ, ಅವರೆಲ್ಲರ ಮಾತು ಕೇಳಿಸಕೊತಾ, ಅವರು ಬಂದರು ಇವರು ಬಂದರು ಅಂತಾ ತುಂಬಾ ಸಂಭ್ರಮ ನಿನಗೆ. ಅವರ ಶಿವಗಣಾರಾಧನೆ, ಕೈಲಾಸವೆಲ್ಲ ಮುಗಿದ ಮೇಲೂ ಅವರ ಹೆಂಡತಿಗೆ ಸಮಾಧಾನ ಹೇಳೋಕೆ ಅಂತ ನಾನು ಹೋಗಿ ಬಂದಾಗಲೆಲ್ಲ ನೀನು ಎಷ್ಟೊಂದು ಪೀಡಿಸುತ್ತಿದ್ದೆ. ಮೇಷ್ಟ್ರ ಹೆಂಡತಿ ಏನು ಹೇಳಿದರು, ಏನು ಹೇಳಿದರು. ಆವಾಗ ಉತ್ತರಿಸಲಿಲ್ಲ. ಈಗ ಹೇಳತೀನಿ. ಎಲ್ಲ ಸಮಯದಲ್ಲು ಮನುಷ್ಯನಿಗೆ ಹೇಳಕೊಳೋಕೆ ಏನಿರುತ್ತೆ ಹೇಳು. ಹೇಳಿ ಕೊಂಡರೆ ತಾನೆ? ಸುಮ್ಮನೆ ಬಂದದ್ದನ್ನ ಅನು ಭವಿಸಬೇಕಷ್ಟೆ.

ನಮ್ಮ ಮನೆಗೆ ಬಂದ ದಿವಸ ನಿನ್ನ ಮನಸ್ಸಿನಲ್ಲಿ ಏನಿತ್ತು ಅಂತ ಗೊತ್ತು. ಊರವರೆಲ್ಲರ ಮನಸ್ಸಿ ನಲ್ಲಿದ್ದುದೆ. ಇಳಿವಯಸ್ಸಿನಲ್ಲಿ ಇವಳೇಕೆ ಹೀಗೆ ಅಂತಾ. ಇದಕ್ಕೆ ಅಂತ ಬಿಡಿಸಿ ಹೇಳಿದದು ಕೇಳು ವಷ್ಟು ವ್ಯವಧಾನ ಇರುತ್ತಾ. ಸುಮ್ಮನೆ ಕೇಳ್ತಾರೆ ಅಷ್ಟೆ. ಕತೆ ಕೇಳೋಕೆ, ಸಣ್ಣ ಕುತೂಹಲಕ್ಕೆ ಕಾರಣ ತಿಳಕೊಂಡರು ಏನು ಮಾಡ್ತಾರೆ. ನನ್ನ ಮದುವೆ ಆಗೋಕೆ ಮುಂಚೆನೇ ಶಂಕರರಾಮನ ಮೈಸೂರು ಸಂಬಂಧದ ವಿಷಯ ಎಲ್ಲರಿಗೂ ಗೊತ್ತಿತ್ತಂತೆ. ಗೊತ್ತಿದ್ದು ಏನು ಮಾಡಿದರು. ಈಗ ಕಾರಣ ತಿಳಕೊಂಡರು ಅಷ್ಟೇ.


ಅಷ್ಟೇ ಅಲ್ಲ, ಈ ಭೂಮಿಯಲ್ಲಿ ಹುಟ್ಟಿದ ನಾವೆಲ್ಲರೂ ಸಾಯುವಾಗ ನಮ್ಮ ನಮ್ಮ ಗುಟ್ಟು ಗಳನ್ನು ಹೊತ್ತುಕೊಂಡು ಹೋಗಬೇಕಾಗುತ್ತೆ. ಪಾಪಪುಣ್ಯ ಇದೆಲ್ಲ ನಮ್ಮ ಜೊತೆ ಬರುತ್ತೋ ಇಲ್ಲವೋ ಗೊತ್ತಿಲ್ಲ. ದೊಡ್ಡವರ ಮಾತು ಅದೆಲ್ಲ. ಗುಟ್ಟುಗಳನ್ನು ಮಾತ್ರ ಕರಕೊಂಡು ಹೋಗಲೇ ಬೇಕು. ನಾನು ಗಂಡನ್ನ ಬಿಟ್ಟೆ ಅನ್ನುವ ಕೊರಗಲ್ಲಿ ಅಲ್ಲವೆ ಅಪ್ಪ ಸತ್ತಿದ್ದು. ನಡುರಾತ್ರಿಯಲ್ಲಿ ಅವನು ಸಾಯುವ ಮುಂಚೆ ಗಂಟಲಿಗೆ ಗಂಗಾಜಲ



ಬಿಡಲು ಹೋದರೆ, ಸಾಯುವ ಕ್ಷಣದಲ್ಲು ಪಾಪಿಮುಂಡೆ, ಕತ್ತೆರಂಡೆ, ಗಂಡನ್ನ ಬಿಟ್ಟುಬಂದು ನನ್ನ ಮರ್ಯಾದೆ ಬೀದಿಪಾಲು ಮಾಡಿದೆ ಅಂತ ಬಡಬಡಿಸುತ್ತಲೇ ಸತ್ತ. ಏನೂ ತೋಚದೆ ಗಂಗಾಜಲವನ್ನು ತುಟಿಗೆ ಸವರಿ ಮೈ ತುಂಬಾ ಹೊದೆಸಿ ಆಮೇಲೆ ಎಲ್ಲರಿಗೂ ಕೇಳುವಂತೆ ಅತ್ತೆ. ಬಂದವರೆಲ್ಲ ನಿನ್ನಪ್ಪನದು ಸುಖದ ಸಾವು, ನಿದ್ರೆಯಲ್ಲೆ ಹೋಗಿಬಿಟ್ಟ ಅಂದರು. ಈಗಲೂ ಅದೇ ನಂಬಿಕೆ.

ನಮ್ಮ ಜಯರಾಮ ನಿನಗಿಂತ ನಾಲ್ಕಾರು ವರ್ಷ ಚಿಕ್ಕವನಲ್ಲವೆ, ಕಣ್ಣಲ್ಲಿ ಕಣ್ಣಾಗಿ ಬೆಳೆಸಿದೆ. ಸುಳ್ಳು ಹೇಳಬಾರದು. ಮದುವೆ ಆಗುವ ಹಿಂದಿನ ದಿನದ ತನಕವು ನನ್ನ ಎಡಗೈನ ಗಟ್ಟಿಯಾಗಿ ಹಿಡಕೊಂಡು, ಅವನೆದೆಗೆ ಅವಚಿಕೊಂಡು ಮಲಗೋನು. ಅಷ್ಟೊಂದು ಅಕ್ಕರೆ. ಒಂದು ದುರಾಭ್ಯಾಸವೇ, ಹಠವೇ. ಇಲ್ಲದಿದ್ದರೆ ನಾನು ಒಂಟಿ ಹೆಣ್ಣುಹೆಂಗಸು ಎಂಜಿನಿಯರಿಂಗ್‌ಗೆ ಹೇಗೆ ಓದಿಸಬೇಕು? ಆದರೆ ಇದೇ ಮಗನಿಗೆ ಇಷ್ಟೊಂದು ವಿಷ ತುಂಬಿರುತ್ತೆ ಒಳಗಡೆ ಅಂತ ನನಗೆ ಹೇಗೆ ಗೊತ್ತಾಗಬೇಕು? ದೇವರು, ಗಾಳಿ ಯಂತೆ ಎದುರಿಗಿರುವ ವಿಷ ಕೂಡ ನಮ್ಮ ಕಣ್ಣಗೆ ಕಾಣುವುದಿಲ್ಲವೇನೋ.

ವಯಸ್ಸಾದ ಮೇಲೆ ನಿದ್ದೆ ಅನ್ನುವುದೇ ಕನಸಾಗಿಬಿಡುತ್ತೆ. ನಿದ್ದೆಯೂ ಇಲ್ಲದೆ, ಕನಸೂ



ಇಲ್ಲದೆ ಒದ್ದಾಡತಾಯಿದ್ದ ಒಂದು ರಾತ್ರಿ ಮಗ ಜಯರಾಂ, ಸೊಸೆಗೆ ಏನು ವಿವರಸ್ತಾ ಇದಾನೆ ಗೊತ್ತಾ?

ನಮ್ಮಮ್ಮ, ಇಲ್ಲದ ಕಷ್ಟವನ್ನ ತನ್ನ ಮೈಮೇಲೆ ಹಾಕಿಕೊಂಡದ್ದು ಮಾತ್ರವಲ್ಲ, ನನಗೂ ಹೇರಿದರು. ನಮ್ಮಪ್ಪ ಎಷ್ಟು ಒಳ್ಳೆಯವರು ಅಂತ ನಿಂಗೆ ಗೊತ್ತಿಲ್ಲ. ನನಗೂ ಗೊತ್ತಿರಲಿಲ್ಲ. ಎರಡನೇ ವರ್ಷದ ಎಂಜಿನಿಯರಿಂಗ್ ಶುರುವಾದಾಗಿನಿಂದಲೂ ಗುಟ್ಟಾಗಿ ಬಟ್ಟೆಬರೆ ಹೊಲಿಸಿಕೊಡೋರು. ಪ್ರತಿತಿಂಗಳು ಅಂಗಡಿಯವನು ಬಂದು ದುಡ್ಡು ಕೊಡತಾಯಿದ್ದ. ಕೊನೇವರ್ಷ ಮಾತ್ರ ನಾಲ್ಕಾರು ಸಲ ಅವರೇ ಬಂದು ಬೆನ್ನುತಟ್ಟಿ, ಪರೀಕ್ಷೆಲಿ ಚೆನ್ನಾಗಿ ಮಾಡಿ ಮನೆತನದ ಹೆಸರು ಮುಂದೆ ತರಬೇಕು ಅಂತ ಪ್ರೋತ್ಸಾಹಿಸಿದರು. ಒಂದೇ ಒಂದು ದಿನ ಕೂಡ ಅಮ್ಮನ್ನ ಬೈಯಲಿಲ್ಲ, ಅನ್ನಲಿಲ್ಲ. ಊರಿಗೇ ಶ್ರೀಮಂತರಾದ್ರು, ದಾನ ಧರ್ಮ ಜಾಸ್ತಿ ಅಂತೆ. ಇಂತವರನ್ನು ಯಾಕೆ ಅಮ್ಮ ಬಿಟ್ಟುಬರಬೇಕಾಗಿತ್ತು? ಅಮ್ಮನಿಗೆ ತುಂಬಾ ಜಂಭ, ಹಠ, ಅಭಿಮಾನ ಅಂತೆ. ಏನು ಸಾಧಿಸಿದ ಹಾಗಾಯಿತು? ಇರುವ ಊರಲ್ಲೇ ಅಪ್ಪ ಇದ್ದು, ಇಲ್ಲದ ಹಾಗೆ ನಾನು ಬೆಳೆದೆ.

ಹೇಗಾಗಬೇಡ ಇದನ್ನು ಕೇಳಿ. ಕತ್ತಲೆಯಲ್ಲು ಕಣ್ಣಿಗೆ ಇನ್ನಷ್ಟು ಕತ್ತಲು ತುಂಬಿದಂತಾಯಿತು. ಬೆಳಿಗ್ಗೆ ಆಗುವ ತನಕ ನಾನು ಬದುಕಬಹುದೇ ಅನ್ನುವಷ್ಟು ಕಸಿವಿಸಿ, ಎದೆಬಡಿತ. ಬಡಿದುಕೊಳ್ಳುತ್ತಿರುವ ಎದೆಗೂಡನ್ನೆ ಎದುರಿಗೆ ತೆಗೆದು ಇಟ್ಟು, ನೀನು ಸಾಯಿ, ಸಾಯಿ ಅಂತ ಯಾರೊ ಅಪ್ಪಣೆ ಕೊಟ್ಟ ಹಾಗೆ.

ಇಷ್ಟೊಂದು ವರ್ಷಗಳ ತ್ಯಾಗ, ಪ್ರೀತಿ, ಅಕ್ಕರೆ ಎಲ್ಲವೂ ಏನು ಅನಿಸಿತು. ಇಷ್ಟು ವರ್ಷ ಬಾಳಿ ಬದುಕಿಸಿದವಳ ನನ್ನ ದೃಷ್ಟಿಗಿಂತಲೂ ಅವರದು ಹೆಚ್ಚಾಯಿತು ಮಾತ್ರವಲ್ಲ, ನನ್ನನ್ನು ಕೂಡ ಅವರ ಕಣ್ಣಿನಿಂದ ನೋಡ್ತಿದಾನೆ, ಹೊಸದಾಗಿ ಬಂದ ಸೊಸೆಗೆ ನ್ಯಾಯ-ತೀರ್ಪು ಹೇಳಿಕೊಡ್ತಿದಾನೆ. ಎಲ್ಲವನ್ನು ವರ್ಷಾನುಗಟ್ಟಲೆ ಮುಚ್ಚಿಟ್ಟುಕೊಂಡಿದಾನೆ. ಅಪ್ಪನ ಮೇಲೆ ಪ್ರೀತಿ ಮಾತ್ರವಲ್ಲ, ನನ್ನ ಮೇಲೆ ಅಸಮಾಧಾನ, ತೀರ್ಪನ್ನು ಕೂಡ.

ಬೇಜಾರಿನಲ್ಲಿ ಯೋಚಿಸತಾ, ಯೋಚಿಸತಾ, ದಿನ ಕಳೆದಂತೆ ಜಯರಾಮನದೇನು ತಪ್ಪಿಲ್ಲ ಅನಿಸಿತು. ನೋಡು ಮಗು, ನಾವು ಒಬ್ಬರಿಗೆ ಜೀವನದಲ್ಲಿ ಬೇಕಾದಷ್ಟು ಪ್ರೀತಿ ಮಾಡಬಹುದು, ಅಕ್ಕರೆ ಕೊಡಬಹುದು, ಆದರೆ ಅಷ್ಟಕ್ಕೇ ಬದುಕನ್ನು ಅವರು ನಮ್ಮ ಕಣ್ಣಿಂದಲೇ ನೋಡಬೇಕು ಅಂತ ಆಸೆಪಡುವುದು, ಆಸೆ ನಿರಾಸೆಯಾದಾಗ ಕೊರಗುವುದು ತುಂಬಾ ತಪ್ಪು. ಮನಸ್ಸಿಗೆ ಈ ಮಾತು ಸಮಾಧಾನ ಕೊಟ್ಟರೂ ಜಿತ ಕೊಡುತ್ತಿರಲಿಲ್ಲ. ನಮ್ಮ ಬಗ್ಗೆ ಗುಟ್ಟಾಗಿ ಭಾವನೆಗಳನ್ನು ಇಟ್ಟುಕೊಂಡಿರುವವರ ಹತ್ತಿರ ಇರುವುದೆಂದರೆ ಇನ್ಯಾರದೋ ಮನೆಯಲ್ಲಿ ಇದ್ದ ಹಾಗೆ, ಎದುರಿಗೆ ಇದ್ದವರು ಕೂಡ ಇಲ್ಲದೆ ಇರುವ ಹಾಗೆ.

ನಮ್ಮ ಸ್ಕೂಲಿಗೆ ಹಿಂದಿ ಮೇಡಂ ಸರಸ್ವತಿ, ದಿನವೂ ಮೈಸೂರಿನಿಂದ ರೈಲಿನಲ್ಲಿ ಬರತಿದ್ರಲ್ಲ. ಈಗಲೂ ಅವರಿಗೆ ಮದುವೆಯಿಲ್ಲ. ಅವರಕ್ಕ ಕುರುಡಿ. ಅಕ್ಕನಿಗೆ ಮದುವೆ ಆದಮೇಲೆ ಇವಳಿಗೆ ಅಂತ ಸರ್ವೇಮರದ ಹಾಗೆ ನಿಲ್ಲಿಸಿಬಿಟ್ಟರು. ಕುರುಡಿ ಅಕ್ಕ ಒಳ್ಳೆ ಸಂಗೀತಗಾರ್ತಿ. ದಿನತುಂಬಾ




ಹುಡುಗಿಯರಿಗೆ ಪಾಠ ಹೇಳ್ತಾಳೆ. ಸರಸ್ವತಿ ನಿವೃತ್ತಿಯಾದ ಮೇಲೆ ಮೈಸೂರಿನ ವಿದ್ಯಾರಣ್ಯಪುರದಲ್ಲೆ ಒಂದು ಸಣ್ಣ ಮನೆ ಭೋಗ್ಯಕ್ಕೆ ಹಾಕಿಕೊಂಡು ಕುರುಡಿ ಅಕ್ಕನ ಜೊತೆ ಇರೋರು. ಜೀವನದಲ್ಲಿ ಅವರು ಕೂಡ ತುಂಬಾ ಕಷ್ಟಪಟ್ಟವರು. ಇದರಿಂದಾಗಿ ನನಗೂ ಸರಿ ಹೋಗಬಹುದು ಅಂತ ಪೆನ್‌ಶನ್ ಹಣ ಹಿಡಿದು ಅವರ ಮನೆ ಹತ್ತಿರ ನಾನು ಬಾಡಿಗೆಗೆ ಮನೆ ತೆಗೆದುಕೊಂಡೆ. ಅವರಕ್ಕನ ಸಂಗೀತಪಾಠ ದಿನವುದ್ದಕ್ಕು ಕೇಳತಾ ಎಲ್ಲವೂ ಮೊದಮೊದಲು ಮರೆತುಹೋಗೋದು. ದಿನಕಳದಂತೆ ಅವರ ಸಂಗೀತ, ಅವರ ಸಮಾಧಾನ, ಅವರ ಜೀವನವೇ ಬೇರೆ, ಅದನ್ನೇಕೆ ನನ್ನದು ಮಾಡಕೊಬೇಕು, ಮಾಡಿಕೊಳ್ಳಲು ಹೋದರೂ ನನ್ನದಾಗುವುದಿಲ್ಲವೇನೋ ಅನ್ನಿಸುವ ಭಾವ. ಸರಸ್ವತಿ, ಅವರ ಕಾಂಪೌಂಡ್ ಗಿಡಗಳ ತುಂಬ ಬೆಳೆದ ಹೂವಿನಿಂದ ಮಾಲೆಕಟ್ಟಿ ಪ್ರತಿದಿನವೂ ಚಾಮುಂಡಿ ಬೆಟ್ಟ ಹತ್ತಿ ಅಮ್ಮನವರಿಗೆ ಅರ್ಪಿಸಿ ಬರೋರು. ನಾನೂ ಕೂಡ ಅವರ ಜೊತೆ ನಾಲ್ಕುದಿನ ಹೋದೆ. ಆಮೇಲಾಮೇಲೆ ಹೋಗಲಿ, ಹೋಗದೆ ಹೋಗಲಿ ಏನೂ ಅನ್ನಿಸತನೇ ಇರಲಿಲ್ಲ.

ಅವಾಗಲೇ ತಿರುವಣ್ಣಾಮಲೈಯಿಂದ ಅರುಣಗಿರಿ ಆಶ್ರಮದ ಗೋಪಾಲ್ ಬಂದರು. ಮೈಸೂರು-ಬೆಂಗಳೂರು ಕಡೆಯ ಕುರುಡು ಮಕ್ಕಳ ವಿದ್ಯಾಭ್ಯಾಸ, ಯೋಗಕ್ಷೇಮ ನೋಡಿಕೊಳ್ಳುವ ರಮಣಾಶ್ರಮದ ಮೇಲ್ವಿಚಾರಕರಂತೆ ಅವರು. ಬಹು ಹಿಂದೆ ಅವರು ಓದತಾಯಿದ್ದಾಗ ಇವರ ಮನೆ ಹತ್ತಿರವೇ ಇದ್ದರಂತೆ. ಗೋಪಾಲ್ ಬಂದಾಗ ಅಕ್ಕತಂಗಿಯರಿಬ್ಬರಿಗೂ ಅದೆಷ್ಟು ಸಂಭ್ರಮ. ಹಬ್ಬದಡಿಗೆ ಮಾಡಿ, ರೇಶ್ಮೆಸೀರೆ ಉಟ್ಟುಕೊಂಡು, ಬೆಳಿಗ್ಗೆಯಿಂದ ಸಂಜೆತನಕ ದೇವರನಾಮ ಹಾಡತಾ. ಅದು ಬಿಟ್ಟರೆ ರಮಣ ಮಹರ್ಷಿ ಬಗ್ಗೆ, ಕುರುಡು ಮಕ್ಕಳ ಬಗ್ಗೆ, ಆಶ್ರಮದ ಬಗ್ಗೆಯೇ ಮಾತುಕತೆ. ಕಣ್ಣಿಗೆ ಕಟ್ಟುವ ಹಾಗೆ, ಮನಸ್ಸಿಗೆ ತುಂಬುವ ಹಾಗೆ. ಹೋಗಿ ನೋಡದೆ ಕೂಡ ನನ್ನ ಕಣ್ಣು ಮುಂದೆಬಂದು ಆಶ್ರಮ ಬೆಳೀತಾ ಬೆಳೀತಾ ನಾನೂ ಅಲ್ಲಿಯವಳೇನೋ ಅನಿಸಿ ಸರಸ್ವತಿ ಹತ್ತಿರ ತೋಡಿಕೊಂಡು ಗೋಪಾಲರನ್ನು ಕೇಳಿದ್ದೆ. ನೀನು ಮಾತ್ರವಲ್ಲ, ಎಲ್ಲರೂ ಅಲ್ಲಿ ಸೇರತಾರೆ, ಅಲ್ಲಿ ನಿನ್ನೆಯಿಲ್ಲ, ನಾಳೆಯೂ ಇಲ್ಲ. ಪ್ರತಿಕ್ಷಣವೂ ನಮ್ಮನ್ನು ಬಿಟ್ಟು ಹೋಗುವ ವರ್ತಮಾನ ನಾಳೆಗೆ, ನಾಳಿದ್ದಿಗೆ ಸೇರತಾ ಇರೋದನ್ನು ನೋಡತಾ, ನಮ್ಮನ್ನು ನಾವೇ ತಿಳಕೋತಾ ಇರಬಹುದು ಅಂದವರು ಕರಕೊಂಡು ಹೋಗಿ ಆಶ್ರಮದ ಅಡುಗೆಮನೆ ವಿಚಾರಣೆ ಕೆಲಸಕ್ಕೆ ನೇಮಿಸಿಕೊಂಡರು. ನೂರಾರು ಆಶ್ರಮಗಳಿವೆ ತಿರುವಣ್ಣಾಮಲೆ ಗುಡ್ಡದ ಆಸುಪಾಸಿನಲ್ಲಿ. ನಮ್ಮ ಆಶ್ರಮದ ವಿಶೇಷವೆಂದರೆ ಉಪದೇಶ, ಪೂಜೆ ಪುನಸ್ಕಾರ ತುಂಬ ಕಡಮೆ. ನಮಗೆ ಬೇಕಾದರೆ ಯಾರ ಹತ್ತಿರನಾದ್ರು, ಹೋಗಿ ನಾವೇ ಮಾತಾಡಬಹುದು. ಇಲ್ಲದೇ ಹೋದ್ರೆ, ಬೆಟ್ಟ,

ಗುಡ್ಡ, ಮರ, ಗಿಡ, ನೆರಳು, ಬಿಸಿಲು ನೋಡಕೊಂಡು ಸುಮ್ಮನೆ ಕೂತಿರಬಹುದು. ನನ್ನ ರೂಮಿನ ಕಿಟಕಿಗೇ ಹೊಂದಿಕೊಂಡ ಹಾಗೆ ದೊಡ್ಡ ಬೇವಿನ ಗಿಡ. ಗಿಡದ ತುಂಬಾ ಎಲೆ. ಚಿಕ್ಕ ಚಿಕ್ಕ ಎಲೆಗಳ ಮೇಲೆ ದಿನಪೂರ್ತಿ ಬಿಸಿಲು-ನೆರಳು ಬಿಡಿಸುವ ಚಿತ್ತಾರ ನೋಡುವುದರಲ್ಲೆ ಸಂಜೆಯ ಹಳದಿ ಬಿಸಿಲಿನ ಗೆರೆಗಳು. ಮತ್ತೆ ಮನಸ್ಸು ನಾಳಿನ ನೆರಳು-ಬಿಸಿಲು ಬಿಡಿಸುವ ಚಿತ್ತಾರಕ್ಕೆ ಕಾಯುತ್ತೆ. ಇಲ್ಲಿಗೆ ಬರುವ ಯಾತ್ರಾರ್ಥಿಗಳೆಲ್ಲ ಆಶ್ರಮವಾಸಿಗಳನ್ನು ಕಡ್ಡಾಯವೆಂಬಂತೆ ಒಂದು ಪ್ರಶ್ನೆ ಕೇಳೇ ಕೇಳ್ತಾರೆ, ಜೀವನದ ಉದ್ದೇಶವೇನು, ಜೀವನದ ಉದ್ದೇಶವೇನು? ಅದಕ್ಕೆಲ್ಲ ನಾನೇನು ಉತ್ತರ ಹೇಳಲಿ? ಏನೂ ತಿಳಿಯದೆ ಆಶ್ರಮ ತುಂಬಿ ಕೊಂಡಿರುವ ಅಳಿಲುಗಳ ಹಿಂಡನ್ನು ನೋಡತಾ ಸುಮ್ಮನೆ ಕೂತಿರತೀನಿ ಅಷ್ಟೆ. ಅದೇ ಒಂದು ನಿಧಾನ, ಒಂದು ಸಮಾಧಾನ.

ಆದರೂ ಹುಣ್ಣಿಮೆ ದಿನ ತುಂಬಾ ಕಷ್ಟ. ಎಲ್ಲ ನೆನಪುಗಳು ಮುಂದೆಬಂದು ಕೂತಕೊಂಡು ಬಿಡುತ್ತವೆ. ನಾಮುಂದು, ತಾಮುಂದು ಅಂತ. ಬೇಸಗೆ ತುಂಬಾ ಬರುವ ನೊಣಗಳನ್ನು ಗದರಿಸಿ, ಬೀಸಣಿಗೆಯಿಂದ ಓಡಿಸಿಬಿಡ ಬಹುದು. ಹಿಂದಿನದು, ಮುಂದಿನದೆಲ್ಲ ಒಟ್ಟಿಗೆ ಬಂದು ಎದುರಿಗೆ ಕೂತಕೊಂಡರೆ ಏನು ಮಾಡೋದು ಹೇಳು. ಪ್ರತಿ ಹುಣ್ಣಿಮೆಯೂ ಇಲ್ಲಿ ಜಾತ್ರೆ, ಜನಜಂಗುಳಿ. ತಡಿಯಲ್ಲಿರುವ ಶಿವಸ್ವಾಮಿಯ ದರ್ಶನ ಪಡೆದು ಭಕ್ತರು ಭಜನೆ ಮಾಡುತ್ತಾ, ಸಂಗೀತ ಹೇಳುತ್ತಾ ಗಿರಿ ಪ್ರದಕ್ಷಿಣೆ ಮಾಡುತ್ತಾರೆ. ಆಕಾಶದಲ್ಲಿ ಹುಣ್ಣಿಮೆ ಚಂದ್ರ ನಗುತ್ತಾ ನಗುತ್ತಾ, ಅವರ ಸಮಕ್ಕು ಪ್ರದಕ್ಷಿಣೆ ಹಾಕುತ್ತಾ ಅವರೆಲ್ಲರನ್ನು ಹರಸ್ತಾ ಹರಸ್ತಾನೆ ಹಿಂಬಾಲಿಸ್ತಾನೆ. ಆಶ್ರಮವಾಸಿಗಳು ಕೂಡ ಅವತ್ತು ಭಕ್ತರ ಗುಂಪಿನಲ್ಲಿ, ಭಜನೆ ವೇಷದಲ್ಲಿ ಕರಗಿ ಹೋಗತಾರೆ. ಕಣ್ಣಿದ್ದವರಿಗೆ, ಪುಣ್ಯವಂತ ರಿಗೆ, ರಮಣಬಾಬಾ ಕೂಡ ಮಂದಗತಿಯಲ್ಲಿ ಕೋಲೂರಿಕೊಂಡು ಪ್ರದಕ್ಷಿಣೆ ಹಾಕುವುದು ಕಾಣುತ್ತದಂತೆ.

ನನಗೆ ಮಾತ್ರ ಹುಣ್ಣಿಮೆಯ ದಿನ ಬೆಳಿಗ್ಗೆ ಬೆಳಿಗ್ಗೇಯೆ ಮನಸ್ಸು ಸ್ತಿಮಿತ ಕಳಕೊಂಡು ಬಿಡೋದು. ತಲೆಯೆಲ್ಲ ಸುತ್ತಿದ ಹಾಗೆ, ಕೈಕಾಲೆಲ್ಲ ಹಿಂಡಿಹೋದ ಹಾಗೆ. ಪದೇಪದೇ ನೀರು ಕುಡಿಯಬೇಕು ಅನ್ನಿಸೋದು. ಸಂಜೆಗಾಗಿ, ಜನ ಜಂಗುಳಿಗಾಗಿ ಕಾಯುವೆ. ಅವರೊಡನೆ ಬೆರೆತು, ಗುಂಪಿನಲ್ಲಿ ಕರಗಿ, ನನ್ನ ಜೀವನದ ಕತೆಯನ್ನೆಲ್ಲ ನನಗೆ ನಾನೇ ಗಟ್ಟಿಯಾಗಿ ಹೇಳಕೊತಾ, ಎಲ್ಲ



ನೆನಪುಗಳನ್ನು ಓಡಿಸತಾ ಪ್ರದಕ್ಷಿಣೆ ಹಾಕಿ ಮತ್ತೆ ರೂಮಿಗೆ ಹೋದರೆ ಆಗಲೂ ಮನಸ್ಸು ವ್ಯಗ್ರವೇ.

ಮೊದಮೊದಲು ಹುಣ್ಣಿಮೆದಿನ ಮಾತ್ರ ಹೀಗಾಗುತ್ತಿದ್ದುದು, ಈಗ ಎರಡು ದಿನಕ್ಕೆ-ಮೂರು ದಿನಕ್ಕೆ ಒಂದು ಸಲ ಹೀಗಾಗುತ್ತೆ. ಪುಣ್ಯವಂತರ ಈ ಸ್ಥಳದಲ್ಲಿ ಹೀಗೆಲ್ಲ ಆಗುವುದರಿಂದ ಇಲ್ಲಿಯ ಮಹಿಮೆ, ಪುಣ್ಯ ಕೂಡ ನನ್ನಿಂದ ಕರಗಿಹೋಗಿ ಬಿಡಬಹುದೇನೋ ಎಂಬ ಭಯ. ಇದೊಂದು ಭಯ ಬಿಟ್ಟರೆ, ಈ ಗಿಡ-ಮರ, ನೆರಳು-ಬಿಸಿಲು ಇವುಗಳೊಡನೆ ಗುರುತಿಸಿ

ಕೊಂಡು ಇರಬಲ್ಲೆ. ಹುಣ್ಣಿಮೆ ಕೂಡ ಎಂದಿನ ಸಮಾಧಾನದ ದಿನಗಳಂತಾಗಲಿ ಎಂದು ನಿನಗೆ ಈ ಪತ್ರ.

ಊರಿಗೆ ಹೋಗಿದ್ದಿಯಾ, ಜಯರಾಮನಿಗೆ ಇದನ್ನೆಲ್ಲ ಹೇಳಬೇಡ. ಸುಮ್ಮನೆ ಆಶೀರ್ವಾದ ತಿಳಿಸು. ಅದೊಂದು ರಾತ್ರಿ ಮಗ-ಸೊಸೆ, ಮಕ್ಕಳನ್ನು ಯಾವಾಗ ಮಾಡಕೊಬೇಕು ಅಂತ ಒಬ್ಬರಿಗೊಬ್ಬರು ಪಿಸುಗುಟ್ಟತಾಯಿದ್ದರು. ಮುಂದೇನಾಯಿತೋ.

ಈ ಕಾಗದ ಓದಿದ ಮೇಲೂ ನನ್ನೊಡನೆ ಮಾತಾಡಬೇಕು, ನನ್ನನ್ನು ನೋಡಬೇಕು ಅನ್ನಿಸಿದರೆ ಬಾ. ಆಶ್ರಮದ್ದು ಯಾವಾಗಲೂ ತೆರೆದ ಬಾಗಿಲು ಎಂದು ಗೋಪಾಲ್ ಹೇಳ್ತಾರೆ. ಎಲ್ಲರಿಗೂ, ಎಲ್ಲದಕ್ಕೂ. ನಿನಗೆ ಒಳ್ಳೆಯದಾಗಲಿ.

ಮಮತಾಪೂರ್ವಕ

ನಂದಿನಿ.

5

ಕಾಗದ ಬಂದು ಹಲವು ತಿಂಗಳುಗಳೇ ಆದವು ನೋಡಿ. ಕಾಗದದ ಸಂಗತಿಯನ್ನು ಯಾರೊಡನೆಯೂ ಚರ್ಚಿಸಿಲ್ಲ. ತಾಯಿ, ಹೆಂಡತಿ, ಜಯರಾಂ-ಯಾರ ಕೂಡವೂ. ತಿರುವಣ್ಣಾಮಲೈ ಬೆಂಗಳೂರಿನಿಂದ ನಾಲ್ಕೇ ಘಂಟೆಯ ರಸ್ತೆಯಾದರೂ ಅಲ್ಲಿಗೆ ಹೋಗುವ ಧೈರ್ಯ ಬಂದಿಲ್ಲ. ನಂದಿನಿಯವರ ಬದುಕಿನ ಮುಂದಿನ ಪುಟಗಳನ್ನು ತಿಳಿಯುವ ಹಕ್ಕು ಮತ್ತು ಧೈರ್ಯ ಎರಡರ ಬಗ್ಗೆಯೂ ನನಗೇ ಭರವಸೆಯಿಲ್ಲ, ನನ್ನ ಬಗ್ಗೆ.




[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಶತಮಾನದ ಮೆಲುಕು



ಕನ್ನಡ ಸಣ್ಣಕತೆಗೆ ನೂರು ವರುಷ ತುಂಬಿದ ಈ ನಿರ್ಣಾಯಕ ಘಟ್ಟದಲ್ಲಿ ಹಳೆಯ ಸಂವೇದನಾಶೀಲ ಕತೆಗಳನ್ನು ಮೆಲುಕು ಹಾಕುವುದೊಂದು ಆಪ್ಯಾಯಮಾನವಾದ ಕ್ರಿಯೆ. ಪರಂಪರೆ, ವೈಯಕ್ತಿಕ ಪ್ರತಿಭೆಗಳನ್ನು ಬೆಸೆಯುವ ಕೆಲಸ ಇಂತಲ್ಲಿ ತಾನೇ ತಾನಾಗಿ ಸಾಗುತ್ತದೆ. ತಮ್ಮ ಸಾಮಯಿಕ, ಸಾಹಿತ್ಯಿಕ, ಪರಿಮಿತಿಗಳನ್ನು ದಾಟಿ ಈಗಲೂ ಈ ಕತೆಗಳು ಮಾನವೀಯ ವಾಗಿ ಪ್ರಸ್ತುತವಾಗುವುದೂ ಒಂದು ಮುಖ್ಯವಾದ ಸಂಗತಿ.

ಮೊದಲ ಸಂಚಿಕೆಯಲ್ಲಿ ಪ್ರಕಟಿಸಿದ ದ.ರಾ.ಬೇಂದ್ರೆ ಮತ್ತು ಶ್ರೀನಿವಾಸ ಹಾವನೂರರ ಕತೆಗಳಿಗೆ ಬಂದ ಪ್ರತಿಸ್ಪಂದನ ನಮ್ಮ ಈ ಪ್ರಯತ್ನಕ್ಕೆ ಹೊಸ ಹುರುಪು ನೀಡಿದೆ. ಈ ಬಾರಿ 'ಮೆಲುಕಿ'ನಲ್ಲಿರುವವರು ಕೆ. ಸದಾಶಿವ ಮತ್ತು ಕೊರಡ್ಕಲ್ ಶ್ರೀನಿವಾಸರಾವ್.



ಕೊರಡ್ಕಲ್ ಶ್ರೀನಿವಾಸರಾವ್




ಕೊರಡ್ಕಲ್ ಶ್ರೀನಿವಾಸರಾವ್‌ರ ಹೆಸರು 'ಧನಿಯರ ಸತ್ಯನಾರಾಯಣ' ಕತೆಯೊಂದಿಗೆ ಹೆಣೆದುಕೊಂಡಿದೆ ಯಾದರೂ ಅವರ ವೈಜ್ಞಾನಿಕ ಕುತೂಹಲ, ಪ್ರಗತಿಪರ ಮನೋಧರ್ಮಕ್ಕೆ ಉದಾಹರಣೆಯಾಗಿ ನಮಗೆ ಸಿಗುವ ಕತೆ 'ಮಿಸ್ 1954'. ಕನ್ನಡದ ಮೊದಲ ವೈಜ್ಞಾನಿಕ ಕತೆಗಳಲ್ಲೊಂದು ಎಂದು ಹೆಸರಿಸಬಹುದಾದ ಈ ಕತೆಯಲ್ಲಿ ಸ್ತ್ರೀಯರ ಕೃತಕ ಗರ್ಭಧಾರಣೆಯಿಂದ ಉದ್ಭವಿಸಬಹು ದಾದ ಗೋಜಲುಗಳ ಕುರಿತು ಒಂದು ಇಣುಕು ನೋಟವಿದೆ. ಕೊನೆಯಲ್ಲಿ ನಾಟಕೀಯವಾಗಿ ಬಯ ಲಾಗುವ ಸತ್ಯವೊಂದು ಇಡೀ ಕತೆಯನ್ನು ಹೊಸಬೆಳಕಿನಲ್ಲಿ ನೋಡುವಂತೆ ಮಾಡುವುದು ಇಲ್ಲಿಯ ವಿಶೇಷ.

ಶತಮಾನದ ಮೆಲುಕು - 3

ಕೊರಡ್ಕಲ್ ಶ್ರೀನಿವಾಸರಾವ್


ಮಿಸ್ 1954



ಸಂಗು

1954ನೇ ಇಸವಿಯ ದಶಂಬರ ತಿಂಗಳಲ್ಲೊಂದು ದಿವಸ. ಮಿಸ್ ಮೇರಿಯು ಹವಾನಾ (Havana)ದ ಕಡಲ ದಂಡೆಯಲ್ಲಿ ನಿಂತಿರುವಳು – ಹದಿನೆಂಟು ವರುಷದ ಹುಡುಗಿ. ಮೊದಲೇ ಚಂದದ ಗೊಂಬೆ; ಚೆನ್ನಾಗಿ ಆಡಿ, ಓಡಿ ಕೂಡಿಬಂದ ಮೈ ಅವಳದು. ಅದರ ಮೇಲೆ ನಿಸರ್ಗವು ಹರೆಯಕ್ಕೆ ಕೊಡುವ ಮೋಹಜನಕ ವಾದ ಒಪ್ಪೆ ಬಿದ್ದಿದೆ. ಉದ್ದಕ್ಕೆ ತಕ್ಕ ತೋರ; ತೋರಕ್ಕೆ ತಕ್ಕ ಉದ್ದ. ಮುದ್ದು ಮೋರೆ. ಉಬ್ಬಿದ ಎದೆ, ತಗ್ಗಿದ ಉದರ, ತುಂಬಿದ ಕೈಕಾಲು, ಚಿತ್ರಕನ ನೆನಸಿನ, ಶಿಲ್ಪಿಯ ಮನಸಿನ, ಕವಿಯ ಕನಸಿನ ಆದರ್ಶ ರೂಪವು, ಅಂಗಸೌಷ್ಠವವು ಆ ಮೇರಿಯಲ್ಲಿ.

ಅವಳ ಆ ಜಲವಿಸರಣದ (ಈಜುವ) ತೊಡಿಗೆಯು ಆಕೆಯ ನೈಸರ್ಗಿಕ ಸೌಂದರ್ಯ ವನ್ನು ಮತ್ತಷ್ಟು ಉಜ್ವಲಗೊಳಿಸಿದೆ- ನಡುವಿಗೆ ಜಟ್ಟಿಯ ದಟ್ಟ, ಮೇಲೆ ಉಬ್ಬಿದೆದೆಗಂಟಿದ್ದ ಅರೆ ಯೆದೆಯ ಒದ್ದೆ ಕೊರ್ಸೆಟ್, ಹಣೆಯ ಮೇಲ್ಗಡೆ ತುಂಟ ಮುಂಗುರುಳುಗಳನ್ನು ಸೆರೆಗೈದು ಬಿಗಿದಿದ್ದ ರಿಬ್ಬನ್, ಹೀಗೆ ನಗ್ನತೆಯಲ್ಲೆಂದರೂ ಸಲ್ಲುವ ಆ ಅಡಾಮನ ಈವಿನಂತೆ ನಿಸರ್ಗದ ಬಾಲೆಯಾಗಿ ಮಿಸ್ ಮೇರಿಯು ಕಡಲ ತಡಿಯಲ್ಲಿ ಸಾಂವೇಲನ ಎದುರು ನಿಂತಿರುವಳು. ನಲ್ವತ್ತರ ಆಚೆಯ ವನಾದರೂ ಇಪ್ಪತ್ತೈದರ ಮೈಗಟ್ಟೂ, ಅಂದವೂ ಸಾಂವೇಲನಲ್ಲಿ ಅಚ್ಚಳಿಯದೆ ಉಳಿದಿವೆ. ಮಲ್ಲಕಾಳಗಕ್ಕಿಳಿಯುವ ಜಟ್ಟಿಯಂತೆ ದಟ್ಟಿ ಕಟ್ಟಿ




ಮಳಲಲ್ಲಿ ಒರಗಿರುವನು ಆತ. ಅವನೇ ಮೇರಿಗೆ ಜಲವಿಸರಣ ವಿದ್ಯಾ (ಈಜಿನ) ರಹಸ್ಯವನ್ನು ಕಲಿಸುವ ಗುರುವು.

"ಹೊತ್ತಾಯಿತು, ಇನ್ನೊಮ್ಮೆ ಇಳಿಯೋಣ!" ಎಂದು ವೈಯಾರದಿಂದ ನುಡಿದು ನಸುನಗುವಿಂದಾತನನ್ನು ನೋಡುತ್ತ ನಿಂತಳು ಮೇರಿ. ಸಾಂವೇಲನು ಆ ತೊಯ್ದು ಅರೆಯುಡುಗೆಯ ಹರೆಯದ ಹುಡುಗಿಯ ಬೆಡಗನ್ನು ನೋಡಿದನು. ಅವಳ ಆ ತುಂಟಕಣ್ಣಿನಲ್ಲಿ, ಕೊಂಕಿನತುಟಿಯಲ್ಲಿ, ನಗುಮುಖದಲ್ಲಿ ನೆಟ್ಟ ನೋಟವನ್ನು ಹಿಂತೆಗೆಯಲಾರದೆ, ಒಂದು ವಿಧವಾಗಿ ಅವಳನ್ನೇ ನೋಡುತ್ತಲಿದ್ದ. ಅವನ ದೃಷ್ಟಿಯಲ್ಲಿ ಆ ಹುಡುಗಿಯು ಏನನ್ನು ಕಂಡಳೋ, ತಟ್ಟನೆ ಅವನ ಕೆನ್ನೆಗೆ ಮೃದುವಾಗಿ ಏಟನ್ನಿಟ್ಟು "ಈ ಹುಚ್ಚಾಟ ಬೇಡ, ಇಳಿಯೋಣ ಬಾ" ಎಂದು ಕಿಲಕಿಲನೆ ನಕ್ಕುಬಿಟ್ಟಳು. ಸಾಂವೇಲನು ಹುಚ್ಚರ ಹುಚ್ಚನಾದ. ಆನಂದದಿದೆದ್ದು ಅವಳನ್ನು ಅಡ್ಡಲಾಗಿ ತನ್ನ ಕೈಗಳಲ್ಲೆತ್ತಿಕೊಂಡು "ಹೌದು, ಈ ಸಾಗರದಲ್ಲಿ ಈಜುವ ಹುಚ್ಚಾಟ ಬೇಡ; ಇಳಿಯೋಣ ಬಾ ಸಂಸಾರ ಸಾಗರಕ್ಕೆ!" ಎನ್ನುತ್ತ ಅಪ್ಪುಗೆಗೈಯುತ್ತ, ಮುದ್ದಿಕ್ಕುತ್ತ ಕಡಲಿಗೆ ಇಳಿದ. ಈಜುವ ಪಾಠ ಮಾಡಿಸುವುದನ್ನು ಬಿಟ್ಟು ಅವಳೊಡನೆ ನೀರಾಟವಾಡಿದ. ಬಹಳ ಹೊತ್ತು ಜಲಕೇಳಿಯಾಡಿ ತಿರುಗಿ ತಡಿಯನ್ನು ಸೇರಿದಾಗ ಅವರು ಗುರುಶಿಷ್ಯೆಯರಲ್ಲ – ಪತಿಪತ್ನಿಯರು!

ಈಜುವ ಹುಚ್ಚು ಅಮೆರಿಕದಲ್ಲಿ ಹರಡಿದೆ. ಅದೂ ಹೆಂಗಳಲ್ಲಿ ಹೆಚ್ಚು. ಮಿಸಿಸ್ಸಿಪೀ, ಎಮಝೂನ್ ನದಿಗಳನ್ನು ದಾಟುವ, ಫ್ಲೋರಿಡಾ, ಯುಕಾತನ್ ಜಲಸಂದುಗಳನ್ನು ಪಾರಾಗುವ, ನ್ಯೂಯೋರ್ಲಿನ್ಸಿನಿಂದ ಹವಾನಾಕ್ಕೆ, ಜಮಿಕಾದಿಂದ ಹಯಾಟ್ಟಿಗೆ, ಪೋರ್ಟೋರೀಕೋದಿಂದ ತ್ರಿನಿದಾದಿಗೆ ಈಜಾಡುವ ಸ್ಪರ್ಧೆಗಳನ್ನು ಅಲ್ಲಿಯ ಮಹಿಳಾ ಸಂಘಗಳು ಏರ್ಪಡಿಸಿರುವವು. ಅವುಗಳಲ್ಲೊಂದು ನ್ಯೂಯೋರ್ಕದಿಂದ ಲೇಂಡ್ಸೆಂಡಿಗೆ ಈಜಲಾಪ ಸ್ತ್ರೀಗೆ ಪ್ರಪಂಚವನ್ನು 24 ತಾಸುಗಳಲ್ಲಿ ಸುತ್ತಿ ಬರುವ ವಿಮಾನಯಾನದ ಬಹುಮಾನವನ್ನು ಕೊಡುವುದಾಗಿ ಸಾರಿರುವುದು. ಅದರ ಕಾರಣ ಎಷ್ಟೋ ಸಮುದ್ರ ವಿಸರಣ ಶಾಲೆಗಳು ತಲೆಯೆತ್ತಿವೆ. ಅಂತಹವುಗಳಲ್ಲಿ ಕ್ಯೂಬಾ ದ್ವೀಪದ ಹವಾನಾದಲ್ಲಿಯ ಸಾಂವೇಲನ ಜಲವಿಸರಣ ಮಹಾಶಾಲೆಯೇ ಪ್ರಸಿದ್ಧವಾದುದು. ಖಂಡದಿಂದ ಜಲವಿಸರಣ ವಿದ್ಯಾರ್ಥಿನಿಯರೆಷ್ಟೋ ಮಂದಿ ಅಲ್ಲಿಗೆ ಬಂದು, ತಕ್ಕ ಶಿಕ್ಷಣ ಹೊಂದಿ ಹಿಂತೆರಳಿರುವರು. ಮಿಸ್ ಮೇರಿಯು ವಿಮಾನಯಾನದ ಬಹುಮಾನಕ್ಕೆ ಸ್ಪರ್ಧಿಸಲೋಸುಗ ತಕ್ಕ ಶಿಕ್ಷಣವನ್ನು ಹೊಂದುವುದಕ್ಕಾಗಿ ನ್ಯೂಯೋರ್ಕದಿಂದ ಸಾಂವೇಲನ ಬಳಿಗೆ ಬಂದಿದ್ದಳು. ಆದರೆ ಆ ಮಹಾಶರಧಿಯನ್ನು ಏಕಾಂಗಿಯಾಗಿ ದಾಟಬೇಕೆಂಬ ಅವಳ ಕೆಚ್ಚನ್ನು ಕೆಡಿಸಿ ತನ್ನೊಡನೆ ಸಂಸಾರಶರಧಿಯಲ್ಲಿ ಧುಮುಕುವ ಹುಚ್ಚನ್ನು ಹಿಡಿಸಿ ಅವಳನ್ನು ಅಪ್ಪಿ ಒಪ್ಪಿಸಿಕೊಂಡನು ಸಾಂವೇಲ್. ಕ್ರಮವಾಗಿ ವಿವಾಹವೂ ಆದನು.

ಸಾಂವೇಲನು ಈಗ ಸಂಸಾರಿ. ಒಂದು ಮಗುವಿನ ತಂದೆ..ಹವಾನಾದಲ್ಲಿ ಅವನಿಗೊಂದು ಚಿಕ್ಕ ಚೊಕ್ಕ ಬಂಗಲೆ. ಮಗುವಿಂದೊಪ್ಪುವ ಮೇರಿಯಿಂದ ಅದು ಬೆಳಗುತ್ತಿದೆ. ಅಮೆರಿಕದ ತರುಣಿಯರ ಈಜುವ ಮರುಳಿಂದ ಅವನಿಗೆ ದುಡ್ಡಿನ ಒರತೆಯಲ್ಲದೆ ಕೊರತೆಯಿಲ್ಲ. ಅವನ ಜೀವನವು ಸರಾಗವಾಗಿ, ಸುಖಮಯವಾಗಿ ಸಾಗುತ್ತಿದೆ. ಒಮ್ಮೊಮ್ಮೆ ಆತನಿಗೆ ಇಪ್ಪತ್ತು ವರುಷಗಳ ಹಿಂದಿನ (1934) ತನ್ನ ಆ ಜೀವನ ಚಿತ್ರವು ಕಣ್ಣೆದುರಿಗೆ ಬಂದು ನಿಲ್ಲುವುದು.



ಆ ಕಾಲದಲ್ಲಿ ಅವನು ನ್ಯೂಯೋರ್ಕ್‌ದ ನಿರುದ್ಯೋಗಿಗಳ ತಂಡದಲ್ಲೊಬ್ಬನಾಗಿದ್ದನು. ಬಲದಲ್ಲೇನೋ ಭೀಮ. ಆದರೇನು? ಕೆಲಸ ಕೊಡುವವರಿಲ್ಲ. ಕೈಯಲ್ಲಿ ಕಾಸಿಲ್ಲ. ಹಾಗೆಂದು ಆ ಭೀಮನ ಹೊಟ್ಟೆಯು ಸುಮ್ಮಗಿರುತ್ತಿತ್ತೇ? ಇಲ್ಲ. ಒಂದು ದಿನ ಅದರ ಕೂಗಾಟವನ್ನು ತಡೆಯಲಾರದೆ ಸಾಂವೇಲನು ಡಾಕ್ಟರ್ ಹರ್ಬರ್ಟರನ್ನು ಅಂಗಲಾಚಿ ಬೇಡಿಕೊಂಡ-''ಸ್ವಾಮಿ, ದಯಮಾಡಿ ಈ ಹೊಟ್ಟೆಯ ಚೀರಾಟವನ್ನು ನಿಲ್ಲಿಸಿ!'' ಎಂದ.

ಹರ್ಬರ್ಟರು ಸಾಂವೇಲನನ್ನು ದಿಟ್ಟಿಸಿ ನೋಡಿದರು. ಆ ಅರೆಹೊಟ್ಟೆಯ ಪೆಟ್ಟಿಗೂ ಹಿಮ್ಮೆಟ್ಟದೆ ದಷ್ಟಪುಷ್ಟವಾಗಿ ಬೆಳೆದಿತ್ತು ಸಾಂವೇಲನ ದೇಹ. ತೇಜಸ್ಸು, ಓಜಸ್ಸು, ವೀರ್ಯಸಮೃದ್ಧಿ ಎಲ್ಲವೂ ತುಂಬಿದ್ದ ಆದರ್ಶ ಆರೋಗ್ಯಕಾಯನಾಗಿದ್ದನು ಆತ. ಪುರುಷ ಸಂಪರ್ಕವಿಲ್ಲದೆಯೇ ಗರ್ಭೋತ್ಪಾದನೆ ಮಾಡುವ, ಕ್ಲಿನಿಕನ್ನು (ಚಿಕಿತ್ಸಾಲಯ) ತೆರೆಯುವ ಯೋಚನೆಯು ಆ ಡಾಕ್ಟರರಿಗಿತ್ತು. ಅದಕ್ಕಾಗಿ ಟ್ಯೂಬ್ ಇಂಜಕ್ಷನ್ ಸಫಲವಾಗು

ವಂತಹ ವೀರ್ಯವಂತನನ್ನು ಅವರು ಅರಸುತ್ತಿದ್ದರು. ಸಾಂವೇಲನಂತೂ ಸುಲಭವಾಗಿ ದೊರೆತ. ಕ್ಲಿನಿಕ್ ಸ್ಥಾಪಿತವಾಯಿತು. ಅಲ್ಲಿಗೆ ಗರ್ಭಾಕಾಂಕ್ಷಿಗಳಾಗಿ ಟ್ಯೂಬ್ ಇಂಜಕ್ಷನ್ ಹೊಂದಲು ಬರುವ ಸ್ತ್ರೀಯರಿಗೆ ಅಪ್ರತ್ಯಕ್ಷವಾದ ಗೂಳಿಯಾಗಿ ಬಾಳಿದನು ಸಾಂವೇಲ್. ಅಂತಹ ಹೀನ ವೃತ್ತಿಯಿಂದ ಹೊಟ್ಟೆ ಹೊರುವುದು ಸಾಂವೇಲನಿಗೆ ಸರಿದೋರದಿದ್ದರೂ ನಿರುಪಾಯನಾಗಿ 10-12 ವರುಷಗಳನ್ನು ಕಳೆದ; ಹಲವು ಮಕ್ಕಳಿಗೆ ಪರೋಕ್ಷದ ತಂದೆಯಾದ. ಅಷ್ಟರಲ್ಲಿ ಅಮೆರಿಕದ ಹೆಂಗಳಿಗೆ ಈಜಿನ ಹುಚ್ಚುಗಟ್ಟಿತು. ಸಾಂವೇಲನು ಈ ಸುಸಂದರ್ಭವನ್ನು ಬಿಗಿಹಿಡಿದು ನ್ಯೂಯಾರ್ಕ್‌ನಲ್ಲಿಯೇ ಸ್ವಿಮ್ಮಿಂಗ್ ಮಾಸ್ತರನಾಗಿ ಪ್ರಖ್ಯಾತನಾದ. ಆಮೇಲೆ ಈ ಹವಾನಾಕ್ಕೆ ಬಂದು ಜಲವಿಸರಣ ಮಹಾಶಾಲೆಯನ್ನು ತೆರೆದ. ಇಲ್ಲಿ ಉಷ್ಣೋದಕ ಮಹಾವಾಹಿನಿಯ ದೆಸೆಯಿಂದ ಈಜಲನುಕೂಲ ವಾತಾವರಣವೂ, ದ್ವೀಪಗಳಿಂದ ದ್ವೀಪಗಳಿಗೆ ಈಜಲಿಕ್ಕೆ ಸೌಕರ್ಯವಿರುವ ನಡುಗಡ್ಡೆಗಳ ಸಮೂಹವೂ ಇದ್ದುದರಿಂದ ಆರೋಗ್ಯಕ್ಕೆಂದು, ಸ್ಪರ್ಧೆಗೆಂದು ಬಾಲೆಯರೆಷ್ಟೋ ಮಂದಿ ತಂಡತಂಡವಾಗಿ ಬಂದು ಸಾಂವೇಲನ ಶಿಷ್ಯೆಯರಾಗುತ್ತಿದ್ದರು. ಇಂದಿನ ಗೃಹಸ್ಥಾಶ್ರಮದ ಸುಖಮಯವಾದ ಜೀವನದೆದುರಿಗೆ ಅಂದಿನ ಆ ಜೀವನವು ಗೂಳಿಯ ಬಾಳಿಗಿಂತಲೂ ಕೀಳಾಗಿ ತೋರುತ್ತಿತ್ತು ಸಾಂವೇಲನಿಗೆ.

ಇಂದು ಮೇರಿಗೆ ಸಂತೋಷವೇ ಸಂತೋಷ. ಅವಳ ಮಗು ಹುಟ್ಟಿದ ದಿನವಲ್ಲವೇ? ನೋಡಿ, ಆ ಮುದ್ದು ಮಗುವನ್ನು ತೊಡೆಯ ಮೇಲೆ ನಿಲ್ಲಿಸಿ ಕುಣಿಸುತ್ತಿದ್ದಾಳೆ. ಸಾಗರವನ್ನು ಈಜಲು ಹೊರಟ ತನ್ನ ಮಗಳು ಸಂಸಾರ ಸುಖಸಾಗರದಲ್ಲಿ ತೇಲಾಡುತ್ತಿರುವುದನ್ನು ನೋಡಬೇಕೆಂದು ನ್ಯೂಯೋರ್ಕ್‌ನಿಂದ ಬಂದಿದ್ದ ಅವಳ ತಾಯಿ ಮೇಯೊಳು ಬಳಿಯಲ್ಲಿ ಕುಳಿತು ಮೊಮ್ಮಗುವಿನ ಅಂದಚಂದವನ್ನು ನೋಡಿ ಹಿಗ್ಗುತ್ತಿದ್ದಾಳೆ. ಇವರಿಗೆದುರಾಗಿ ಮೇಜಿನ ಆಚೆಕಡೆಯಲ್ಲಿ ಸಾಂವೇಲನು ಕುಳಿತಿದ್ದಾನೆ. ಮಗುವಿನ ಬಾಲಲೀಲೆಯನ್ನು ನೋಡುತ್ತ, ಸುಖಗೋಷ್ಠಿಯಾಡುತ್ತ, ಚಹಾಪಾನ ಮಾಡುತಲಿರುವರು ಅವರೆಲ್ಲ.

ತನ್ನ ಮೊಮ್ಮಗುವಿನ ಸೊಬಗಿಂದ ಹಿಗ್ಗಿದ ಮೇಯೊಳು ವಿನೋದಕ್ಕಾಗಿ ''ಇಂತಹ ಮುದ್ದಿನ ಮುದ್ದೆಯನ್ನು ಹೆತ್ತ ನನ್ನ ಮಗಳು ಭಾಗ್ಯವಂತೆಯಲ್ಲವೇ?'' ಎಂದು ಅಳಿಯನನ್ನು ಕೆಣಕಿದಳು. ಅಳಿಯನು ಬಿಟ್ಟುಕೊಡುವನೇ? ''ನನ್ನಂತಹ ಮಾರನ ಕೈ ಹಿಡಿದುದರಿಂದಲ್ಲವೆ ಆ ಸೌಭಾಗ್ಯ?'' ಎಂದ. ತೊಡಗಿತು ಸಂವಾದ. ''ಹೊಂದುವ ಸೌಭಾಗ್ಯವೇ ಮುಖ್ಯ. ಇದರಲ್ಲಿ ಗಂಡನಿಗೆ ಪ್ರಾಮುಖ್ಯತೆ ಇಲ್ಲ.''

''ಏನೂ ಇಲ್ಲವೇ?''

''ಏನೂ ಇಲ್ಲ; ನಾನು ಮದುವೆಯಾಗದೆಯೇ ಇಂತಹ ಮುದ್ದು ಮಗಳನ್ನು ಹೆರಲಿಲ್ಲವೇ?''

''ಅಂದರೆ ಈ ನನ್ನ ಮುದ್ದು ಮೇರಿಯು.....''

''ಅಯ್ಯೋ ನನ್ನನ್ನು ಅವಮಾನಿಸುವಿರಾ? ಹಾಗಲ್ಲ, ಇವಳು ಬರೇ ಟ್ಯೂಬ್ ಬೇಬಿ ಎಂದೆನಷ್ಟೆ.''

''ಏನು! ಟ್ಯೂಬ್ ಬೇಬಿ! ಇವಳು ಟ್ಯೂಬ್ ಬೇಬಿ! ನಿಜವೇ?''

''ಸಂಶಯವೇಕೆ? ನ್ಯೂಯಾರ್ಕ್‌ನ ಪ್ರಖ್ಯಾತ ಡಾಕ್ಟರ್ ಹರ್ಬರ್ಟ...''

''ಡಾಕ್ಟರ್ ಹ-ರ್ಬ-ರ್ಟ! ಹ-ರ್ಬ-ರ್ಟ! ಹಾ!''

(1935ರಲ್ಲಿ ಪ್ರಕಟವಾದ 'ಮಧುವನ' ಕಥಾಸಂಗ್ರಹದಿಂದ)

ಭಾಸ್ಕರ ಹೆಗಡೆ

ಸುನೀತಾಗೆ ಮಲ್ಲಿಗೆ ಎಂದರೆ ಇಷ್ಟ



ಬಾಗೂರು

ಎದುರುಬದರಾಗಿ ಕುಳಿತ ಅವರಿಬ್ಬರ ಮಧ್ಯೆ ಮಾಣಿ ತಂದಿಟ್ಟು ಹೋದ ಲಸ್ಸಿಗೆ ತುಟಿ ತಾಗಿಸದೇ ಅವರು ಮಾತಿನಲ್ಲಿ ನಿರತರಾಗಿದ್ದರು. ಮಾತಿನ ಓಘದಲ್ಲಿ ಸುತ್ತಲಿನ ಜಗತ್ತನ್ನೇ ಮರೆತಿದ್ದರು. ಬೇಸಿಗೆಯ ಉರಿಯಲ್ಲಿ ಸುಸ್ತಾಗಿ, ನೀರಡಿಕೆ, ಹಸಿವೆಯಿಂದ ಕಂಗಾಲಾಗಿರುವ ಜನ ಹೋಟೆಲಿನ ಒಳಸೇರುತ್ತಿದ್ದಂತೆ ಗಿರಾಕಿಗಳಾಗಿ ಮಾರ್ಪಡುವ ಭೌತಿಕ ಕ್ರಿಯೆ ಅವರ ಸಂಭಾಷಣೆಗೆ ವಿಘ್ನವನ್ನು ತಂದಿರಲಿಲ್ಲ.

ಇಬ್ಬರಿದ್ದಲ್ಲಿ ಮೂರು, ಮೂರು ಕೂಡ್ರುವಲ್ಲಿ ನಾಲ್ಕು ಜನರನ್ನು ಕೂಡ್ರಿಸುತ್ತಿದ್ದ ಯಜಮಾನ ಗಿರಾಕಿಗಳಿಗೆ ಮುಗುಳ್ನಗೆ ಚೆಲ್ಲಿ ಸ್ವಾಗತಿಸುತ್ತಿದ್ದ. ಕೆಲಸದ ಮಾಣಿಗಳಿಗೆ ಮಾತ್ರ, ''ಹ್ಞೂಂ! ತಡವೇಕೆ? ಬೇಗ'' ಎಂಬ ಬಯ್ಗುಳ ಹೋಟೆಲಿನ ಗೋಡೆಗಳನ್ನು ದಾಟಿ ರಸ್ತೆ ಮುಟ್ಟುತ್ತಿತ್ತು. ಅದಕ್ಕೆ ಸಮನಾದ ಲಯದಲ್ಲಿ ತಟ್ಟೆ ತೆಗೆಯುವವನ ಅಬ್ಬರದ ತಟಪಟ; ಆರ್ಡರ್ ತಗೊಳ್ಳುವ ಮಾಣಿ ಹಾಡುವ ಏಕತಾರೀ ಪದ; ಇವಿಷ್ಟು ಹೋಟೆಲಿನ ಒಳಗೆ ನಡೆಯುತ್ತಿರುವ ಚಟುವಟಿಕೆಗಳಾಗಿದ್ದವು. ಹೊರಗೆ, ರಸ್ತೆಯಲ್ಲಿ ಎದುರಿನ ಏರು ಹತ್ತುವ ಅಬ್ಬರದಲ್ಲಿ ಕರುಳು ಕಿತ್ತುಹೋಗುವಂತೆ ಕೂಗುವ ಲಾರಿ, ಬಸ್ಸುಗಳ ಆವಾಜಿನ ಅಲೆಗೆ ಏಸಿ ರೂಮಿನ ಒಳಗೆ ಯಾರಾದರೂ ಬಸುರಿ ಹೆಂಗಸಿದ್ದರೆ ಅಲ್ಲೇ ಹಡೆದುಬಿಡಬೇಕು; ಹಾಗಿತ್ತು ಪರಿಸ್ಥಿತಿ.

ಆದರೆ ಅವರಿಬ್ಬರ ಸಂಭಾಷಣೆ....

ಮೆಟಲ್ ಇಂಡಸ್ಟ್ರೀಯವನ ಫ್ಯಾಕ್ಟರಿಯ ಅಂಗಳದಲ್ಲಿ ಮಗುವೊಂದು ನಡೆದಂತಿತ್ತು.

ಅವಳಾಡುತ್ತಿದ್ದ ಮಾತಿನ ಲಯ, ಕಿರುಬೆರಳಿನ ಗಾತ್ರದ ನೀರಿನ ಸೆಲೆ ಚಿಲುಮೆಯಿಂದ ಹೊರಜಿದ್ದು ಹೋಗುವಾಗಿನ ಕಿಲಕಿಲದಂತಿತ್ತು.

ಎದುರಿಗೆ ಕುಳಿತವನ ಕಣ್ಣಲ್ಲಿ ಕಣ್ಣಿಟ್ಟು ಹೇಳುತ್ತಲೇ ಇದ್ದಳು. ಆತನೂ ಅಷ್ಟೆ; ಕೆಸುವಿನ ಎಲೆಯಂತೆ ಕುಳಿತಿದ್ದಾನೆ. ಅವಳ ಮಾತು ಅವನ ಮುಖದಲ್ಲಿ ಭಾವನೆಯನ್ನು ಕೆದಕಿದಂತೆ ಕಂಡರೂ, ಆತ ಏನೂ ಕೇಳಿಸಿಲ್ಲವೇನೋ ಎಂಬಂತೆ ಸುಮ್ಮನೆ ಕುಳಿತಿದ್ದಾನೆ. ಅವಳು ಮತ್ತೆ ಕೇಳುತ್ತಾಳೆ. ಆತ ಮಾತನಾಡ ಲೊಲ್ಲ. ತಿರುಗಿ ಅದನ್ನೇ ಕೇಳುತ್ತಾಳೆ. ಆತ ಮುಗುಳ್ನಗುತ್ತಾನೆ. ಇಷ್ಟು ಹೊತ್ತು ಮಾತಾಡಿ ನಿಲ್ಲಿಸಿದ್ದಾಳೆ.

ಆದರೆ ಆತ ಮೌನಿಯಾಗಿ ಕುಳಿತಿದ್ದಾನೆ. ಆತನ ಮೌನವೇ ಹಾಗೆ; ಸೂಲಗಿತ್ತಿಯ ಮಾತಿನಂತಿರುತ್ತಿತ್ತು; ಒಂದೇ ಒಂದು ಕ್ಷಣ, ಹಡೆವ ಹೆಂಗಸಿಗೂ ಹೆರಿಗೆ ನೋವನ್ನು ಮರೆಸು ವಂತಹ ಮಾತಿನ ಪರಿ ಅದು. ಅವನು ಸುಮ್ಮನಿದ್ದರೂ, ಅವಳಿಗೆ ಮಾತ್ರ ಆತ ಸುಮ್ಮನಿದ್ದಂತೆ ಅನ್ನಿಸಲಿಲ್ಲ.

ಬೆವರಲ್ಲಿ ತೊಪ್ಪೆಯಾಗಿದ್ದ ತನ್ನ ಕೈ ಮುಂದೆ ಚಾಚಿದ ನಾಗರಾಜ ಗಲ್ಲಕ್ಕಾನಿಸಿಕೊಂಡಿದ್ದ ಅವಳ ಕೈಯನ್ನು ಹಿಡಿದು ಕೈಯೊಳಗೆ ಮುಚ್ಚಿಟ್ಟುಕೊಂಡು ಹೇಳಿದ,

''ಸುನೀ...''

ಆ ಧ್ವನಿ ಆಪ್ತವಾಗಿತ್ತು.

ಆ ಒಂದು ಕ್ಷಣ ಹೇಗಿತ್ತೆಂದರೆ.... ಪೆದ್ದಲಾಪುರದ ಸರ್ಕಾರಿ ಶಾಲೆಯ ಗ್ಯಾದರಿಂಗಿನಲ್ಲಿ ಪರದೆ ಎತ್ತುತ್ತಿದ್ದಾಗ ಮೈಕಿನಲ್ಲಿ ಬರುತ್ತಿದ್ದ ಹಾರ್ಮೋನಿಯಂನ ಲಯಕ್ಕೆ ಹೇಗೆ ಕಣ್ಮುಚ್ಚಿದ್ದಳೋ ಅಥವಾ ನಿನ್ನೆ ಬಂದಿದ್ದ ಸೀರೆ ಮಾರುವ ಹುಡುಗ, ಇಂದು ತಮ್ಮ ಗಲ್ಲಿಯಲ್ಲಿ (ಬರಲಾರನೆಂಬ ವಾಸ್ತವ ಗೊತ್ತಿದ್ದರೂ) ಬೇಗ ಬರಲೆಂಬ ಆಸೆಯಿಂದ ಗೇಟಿನತ್ತ ನೋಡುತ್ತಿದ್ದಾಗಲೇ ಪ್ರತ್ಯಕ್ಷವಾದ 'ಆತ'ನನ್ನು ನೋಡಿ ಹೇಗೆ ಎದೆಗೆ ಕೈ ಒತ್ತಿ ಕಣ್ಮುಚ್ಚಿದಳೋ.. ಹಾಗೆ...

''ನಾನಿದ್ದೇನೆ.... ಏನೂ ಆಗೋದಕ್ಕೆ ಬಿಡೋದಿಲ್ಲ'' ಎಂದ ನಾಗರಾಜ.

ಅವನ ಆ ಮಾತಿಗೆಷ್ಟು ಕಸುವಿತ್ತೆಂದರೆ, ಸುನೀತಾ ಒಂದೇ ಗುಟುಕಿಗೆ ಲಸ್ಸಿ ಕುಡಿದು ಖಾಲಿ ಗ್ಲಾಸನ್ನು ಎದುರಿಗಿಟ್ಟು ಅವನತ್ತ ನೋಡಿದಳು. ಆಗ ಆತ...



ಎಡಗೈನ ತೋರುಬೆರಳನ್ನು ತುಟಿ ಹತ್ತಿರ.... ಇನ್ನೂ ಹತ್ತಿರ ತಂದು... ನಿಲ್ಲಿಸಿ.... ನಕ್ಕ... ನಿಧಾನಕ್ಕೆ ಅವಳ ತುಟಿ ಮೇಲಿನ ಲಸ್ಸಿಯ ಮೀಸೆಯನ್ನು ಸವರಿದ. ಭೋರ್ಗರೆವ ಜಲಪಾತ ನೋಡಿದ ಮನಸ್ಸು, ದೇಹ ಬಿಟ್ಟು, ಜಲಪಾತದ ಆಕಾರ, ಆವೇಗವನ್ನು ಅಪ್ಪಿಕೊಳ್ಳಲು ಧಾವಿಸಿದಂತೆ, ಆತನ ಆ ಕಿರುಬೆರಳಿನ ಉಷ್ಣತೆಯಲ್ಲಿ ತಾನು ಕರಗಿ ಹೋಗಲಿ ಎನ್ನಿಸಿತು ಅವಳಿಗೆ.

ಈ ಮೊದಲು ಎಂದೂ ಹಾಗನ್ನಿಸಿರಲಿಲ್ಲ ಅವಳಿಗೆ. ಆದರೆ ಇಂದು ಅನ್ನಿಸಿತ್ತು. ಯಾಕೆಂದರೆ ಇಂದು ಮೊದಲ ಬಾರಿಗೆ - ಈ ಮೊದಲು ಯಾರೂ ಕೊಟ್ಟಿರದಿದ್ದ ವಸ್ತುವೊಂದು ತನಗೀಗ ಸಿಕ್ಕಿದೆ. ಅದನ್ನು ಇನ್ನು ಮುಂದೆ ತನ್ನಿಂದ ಯಾರೂ ಕಿತ್ತುಕೊಳ್ಳಲಾರರೆಂಬ ಭಾವನೆ ಅವಳಲ್ಲಿ ಮೂಡಿದೆ.

ಆಂಧ್ರಪ್ರದೇಶದ ಕಾಕಿನಾಡದಿಂದ ನಾಗರಾಜನನ್ನೇ ನಂಬಿಕೊಂಡು ಬೆಂಗಳೂರಿಗೆ ಬಂದಿದ್ದಳು ಅವಳು. ಮೊದಲಬಾರಿಗೆ ಮನೆ ಬಿಟ್ಟುಬರುವಾಗಿನ ಘಟನೆಗಳು ಅವಳಿಗೆ ನೆನಪಾದವು; ಮನೆಯಲ್ಲಿ ಎಲ್ಲರಿಗಿಂತ ಮೊದಲು ರಾಮಚರಿತದ ಹಾಡನ್ನು ಧೇನಿಸುತ್ತ ಎದ್ದಳು. ಹಾಸಿಗೆ ಸುತ್ತಿ ಸ್ವಸ್ಥಾನಕ್ಕೆ ಸೇರಿಸಿದಳು. ಆ ದಿನ ಅವಳ ನಡಿಗೆ, ಬೆಕ್ಕಿನ ಹೆಜ್ಜೆಗೆ ಮೊಲದ ಓಟದ ವೇಗ ಸೇರಿದಂತಿತ್ತು. ಹಿಂತಿರುಗಿ ನೋಡದೆ ಬಸ್ ಸ್ಟಾಪಿಗೆ ಬಂದಳು. ಕಾಯುತ್ತಿದ್ದ ನಾಗರಾಜ ರೆಡ್ಡಿಯ ಜೊತೆಗೆ ಬಸ್ಸು ಹತ್ತಿ ಕುಳಿತವಳಿಗೆ ಬೇರೆ ಯಾವ ನೆನಪೂ ಬರಲಿಲ್ಲ. ಮನೆಯೆದುರಿನ ರಸ್ತೆಯ ತಿರುವಿನಲ್ಲಿದ್ದಾಗ ಅಜ್ಜಿ ಹಾಸಿಗೆಯಿಂದೆದ್ದು ತನಗೆ ಕಲಿಸಿದ ರಾಮ ಚರಿತದ ಹಾಡನ್ನು ಗುನುಗುನಿಸುತ್ತಿರುವುದು ಕೇಳಿಸಿತು. ಈಗ ಹೊಸ್ತಿಲ ಬಾಗಿಲಲ್ಲಿ ಎದ್ದು ಕುಳಿತಿರುವ ಅಜ್ಜಿಯ ಹಾಡು ರಾಮ ವನವಾಸಕ್ಕೆ ಹೋಗುವಲ್ಲಿಯವರೆಗೆ ಬಂದು ಮುಟ್ಟಿರುತ್ತದೆ ಎಂದು ತಿರುವಿನಲ್ಲಿ ನಿಂತಿದ್ದಾಗ ಆತನಿಗೆ ಹೇಳಿದಳು.

ಕಾಕಿನಾಡದ ಪೆದ್ದಲಾಪುರದ ನಾಲ್ಕನೇ ಓಣಿಯಲ್ಲಿರುವ ನಾಡಹಂಚಿನ ಮನೆಯ ಮುಂದೆ ಸೀರೆಯ ಗಂಟನ್ನು ಇಳಿಸಿದಾಗ ನಾಗರಾಜನಿಗೆ 'ದಾರಿ ತಪ್ಪಿ ಬಂದಿಲ್ಲವೇ?' ಎಂಬ ಭಾವನೆ ಕಾಡಿತು. ಆದರೂ ಸೀರೆ ಮಾರಾಟ ಮಾಡುವ ನೆವಯಿತ್ತಲ್ಲ. ನಿಂತುಕೊಂಡ, ಕುಳಿತ, ಕಾಡಿದ, ಬೇಡಿದ.

ಆದರೂ ಮನೆಯಲ್ಲಿದ್ದ ಉಳಿದವರ್‍ಯಾರೂ ಹೊರಗೆ ಬರಲಿಲ್ಲ. ಹೊರಗೆ ಬಂದ ಅಜ್ಜಿ ಮೊಮ್ಮಗಳು ಕೂಡ, ವ್ಯಾಪಾರದ ವಿಚಾರ ಬಿಟ್ಟು ಆತನಿಗೊಂದು ಒಗಟು ಕೇಳಿದರು. ನೀನು ಒಗಟಿಗೆ ಸರಿಯಾದ ಉತ್ತರ ಹೇಳಿದರೆ ಸೀರೆ ಖರೀದಿ ಬಗ್ಗೆ ವಿಚಾರ ಮಾಡೋಣ ಎಂದು ಹೇಳಿದರು:

''ಸೀರೆಯುಡದ ಮನೆಯಲ್ಲಿ ಸೀರೆ ಮಾರಾಟ ಮಾಡೋದು ಹೇಗೆ?'' ಆತನಿಗೆ ಅದು ಅರ್ಥವೇ ಆಗಲಿಲ್ಲ. ಪೆದ್ದುಪೆದ್ದಾಗಿ, ''ಒಳ್ಳೆ ಸೀರೆ, ಹರಿದು ಲಂಗದ ಬಟ್ಟೆ ಮಾಡಲು ಬರುತ್ತೆ, ತಗೊಳ್ಳಿ, ಅಂತೀನಿ'' ಎಂದಾಗ ಅವರಿಬ್ಬರೂ ನಕ್ಕರು.

ಗಂಟನ್ನು ಮುಂದಿಟ್ಟುಕೊಂಡು ಹಸಿದ ಹೊಟ್ಟೆಯಲ್ಲಿಯೇ ಅವಳ ನಗುವನ್ನು ನೋಡಿ ಉಲ್ಲಸಿತನಾದ.

ಗುಳಿಬೀಳುವ ಕೆನ್ನೆಯ ಮೇಲಿನ ಹಣೆಗುಂಟ ಗಾಳಿಯಲ್ಲಿ ಹಾರಾಡುತ್ತಿದ್ದ ಮುಂಗುರುಳು; ಬಟ್ಟಲಿನಂತಹ ಕಣ್ಣಿರೋ ಹುಡುಗಿ ತನ್ನತ್ತ ಬೆರಳು ಮಾಡಿ ''ನೀನು ಹೋಗಬಹುದು. ನಮಗೇನು ಬೇಡ'' ಎಂದಾಗ ಆತ ಏನೂ ಹೇಳದೇ ಮುಗುಳ್ನಕ್ಕು, ಗಂಟುಮೂಟೆ ಕಟ್ಟಿ ಹೊರಟು ಹೋದ.

ಸುನೀತಾ ದಂಗಾಗಿ ಹೋದಳು. ಅಜ್ಜಿಗೆ ಏನೂ ಅನ್ನಿಸಲಿಲ್ಲ. ಅಜ್ಜಿ ಒಳಗೆ ಹೋದಳು. ಇವತ್ತಿನವರೆಗೆ ತಮ್ಮ ಮನೆ ಬಾಗಿಲಿಗೆ ಬಂದು ಜಗಳಕಾಯದೇ ಮುಗುಳ್ನಗುತ್ತ ಹೋದ ಮೊದಲ ವ್ಯಾಪಾರಿ ಕಂಡು ಅವಳು ದಂಗಾಗಿ ಹೋದಳು. ಆಕೆ ಅಲ್ಲೇ ನಿಂತಳು. ಆತನ ಮುಗುಳ್ನಗೆಯ ರೇಖಾಚಿತ್ರ ಮನದಂಗಳದಲ್ಲಿ ಸಿಗಬಹುದೇನೋ ಎಂದು ಕಣ್ಮುಚ್ಚಿದರೆ, ಏನೂ ಸಿಗಲಿಲ್ಲ.

ಹತ್ತನೇ ಕ್ಲಾಸಿನಲ್ಲಿ ತಾನು ಫೇಲಾದ ಸುದ್ದಿ ಮನೆಯಲ್ಲಿ ಹೇಳಿದ ದಿನವನ್ನು ಅವಳು ಮರೆಯೋದಿಲ್ಲ; ಭಾರೀ ಮಳೆ ಶುರುವಾಗುವ ಮೊದಲು ನೆರಳಿಗೆ ಹುಡುಕುವವರಂತೆ. ತಂದೆ ತಾಯಿ, "ನಿನಗೆ ಭವಿಷ್ಯ ಇಲ್ಲ. ಈಗೇನು ಮಾಡೋದಕ್ಕಾಗುತ್ತೆ. ಎಲ್ಲಾ ಮುಗಿದು ಹೋಯ್ತು" ಎಂದು ತಲೆ ಮೇಲೆ ಕೈಹೊತ್ತು ಕುಳಿತಿದ್ದರು. ಮೂರನೇ ಓಣಿಯ ಇವಳ ಓರಗೆಯ ಹುಡುಗಿ ಶಿಕ್ಷಕಿಯಾದಂತೆ, ಈಕೆ ಕೂಡ ಶಿಕ್ಷಕಿಯಾಗುವಳೆಂದು ಇಚ್ಛಿಸಿದ್ದರು, ಆಗಲಿಲ್ಲ.

ಓದು ಮುಂದುವರಿಸದೇ, ತಂದೆತಾಯಿ ಒತ್ತಾಯಿಸಿದರೂ ಎಲ್ಲೂ ಕೆಲಸಕ್ಕೆ ಸೇರದೇ ಮನೆಯಲ್ಲಿದ್ದ ಸುನೀತಾಳ ಬದುಕಲ್ಲಿ ಎರಡು ವರ್ಷ ಅಂಥದ್ದೇನು ಮಹತ್ತರದ್ದು ಘಟಿಸಲಿಲ್ಲ. ಅಜ್ಜಿ ಹೇಳಿಕೊಡುವ ಒಗಟುಗಳಲ್ಲಿ ಆಕೆ ತನ್ನನ್ನೇ ಮುಳುಗಿಸಿಕೊಂಡಳು. ಒಗಟು ಕಟ್ಟುತ್ತಲೇ ಒಗಟು ಬಿಡಿಸುವ ಕಲೆ ಅವಳಿಗೆ ಒಲಿಯಿತು. ಮನೆ, ಮನೆಯಾಚೆ ಭತ್ತದ ಗದ್ದೆ, ಗದ್ದೆಯಾಚೆಗಿನ ಬೆಟ್ಟ, ಅದರಾಚೆಗೆ ರಸ್ತೆ, ಅದಾದ ಮೇಲೆ ಹೊಳೆ ಹೀಗಿದ್ದ ಅವಳ ಜಗತ್ತಿನ ಎಲ್ಲ ವಸ್ತುವಿನ ಮೇಲೂ ಒಗಟು ಕಟ್ಟೋದನ್ನು ಅಜ್ಜಿ ಮೊಮ್ಮಗಳಿಗೆ ಕಲಿಸಿದಳು. ಅಕ್ಕಿಯ ನೆಲ್ಲು ಆರಿಸುವಾಗ, ಹಿಟ್ಟು ಬೀಸುವಾಗ, ಒಗಟುಗಳು ಹುಟ್ಟಿದವು.

ಪೆದ್ದಲಾಪುರದ ಜನರಿಗೆ ಇವೆಲ್ಲ ಅನುಭವಕ್ಕೆ ಬಂದಿರಲಿಕ್ಕಿಲ್ಲ. ಏಕೆಂದರೆ ಅವರಿಗೆ ಒಗಟುಗಳೆಂದರೆ ರೇಜಿಗೆ. ಆದರೆ ಅಜ್ಜಿಯ ಕಲೆಯ ಸಾಮುದ್ರಿಕೆಯಲ್ಲಿ ಮುಳುಗಿದ್ದ ಸುನೀತಾಗೆ ಮಾತ್ರ ಒಂದು ದಿನ ಭತ್ತದ ಗದ್ದೆಗೆ ಬಂದ ನವಿಲಿನ ಮೇಲೆ ಒಗಟು ಕಟ್ಟುವ ಆಸೆ. ತನ್ನ ಒಗಟನ್ನು ಅಜ್ಜಿ ಬಿಡಿಸಲಾಗದೇ ಸೋಲೊಪ್ಪಿಕೊಳ್ಳಲಿ ಎಂಬ ಹಠ: "ಕಾರ್ತೀಕದಲ್ಲಿ ಭತ್ತದ ಗದ್ದೆಯಲ್ಲಿ ಓಡಾಡುವ ಕಣ್ಣು, ಜ್ಯೇಷ್ಠದಲ್ಲಿ ಗುಡ್ಡವೇರಿ ನಿಂತಿರುತ್ತದೆ"

ಅಜ್ಜಿ: "ನವಿಲುಗರಿ"

ಒಂದೊಂದು ದಿನ ಅವರಿಬ್ಬರ ಮುಸ್ಸಂಜೆಯ ಮಾತಿನ ಹರಟೆ ಒಗಟಿನತ್ತ ಸಾಗುತ್ತದೆ, ಆಮೇಲೆ ಸುನೀತಾಳತ್ತ ತಿರುಗುತ್ತದೆ. ತನ್ನ ಬಗ್ಗೆ ಮಾತಾಡುವಾಗಲೂ ತುಂಟತನದ ಪ್ರಶ್ನೆ ಇದ್ದೇ ಇರುತ್ತೆ: ಅಜ್ಜಿ, "ನಮ್ಮ ಸಣ್ಣ ಮನೆಯಿಂದ ಅತೀ ದೊಡ್ಡ ಮನೆಯ ಮಾಳಿಗೆ ಮೇಲೆ ಮಲಗಿದ್ದರೆ ನಿನಗೆ ಏನನ್ನಿಸಬಹುದು?" ಎಂದು ಕೇಳಿದ್ದಕ್ಕೆ ಅವಳು, "ಮತ್ತೇನಾಗುತ್ತದೆ? ರಸ್ತೆ ಪಕ್ಕದ ಬಯಲಿನಲ್ಲಿ ಮಲಗಿಕೊಂಡಂತೆ ಅನ್ನಿಸುತ್ತದೆ" ಎಂದುಬಿಡುತ್ತಾಳೆ.

ಬೆಳಿಗ್ಗೆಯೆ ಸೂರ್ಯ ಬಂದು ಭೂಮಿ ಯೆದುರು ಕುಳಿತುಕೊಳ್ಳುವ ಮೊದಲು ಅಜ್ಜಿ, ಮೊಮ್ಮಗಳು ಎದ್ದು ರಾಮಚರಿತ ಹಾಡುತ್ತಾರೆ. ಪ್ರತಿ ಎರಡು ಸಾಲು ಮುಗಿದಾಗಲೂ ಅಜ್ಜಿ ಹಾಡನ್ನು ಕಥೆಯ ರೂಪದಲ್ಲಿ ಹೇಳುವುದು ಊರಿಗೇ ಗೊತ್ತಿತ್ತು.

ಇಡೀ ಪೆದ್ದಲಾಪುರದಲ್ಲಿ ಹುಟ್ಟಿದ ಎಲ್ಲ ಹುಡುಗಿಯರ ಹಣೇಬರಹವನ್ನು ಕಾಕಿನಾಡದ ಹೊಲಿಗೆ ಅಂಗಡಿಗಳಲ್ಲಿ ಹೊಲಿದುಬಿಟ್ಟಿದ್ದರಿಂದ, ಹಗಲಿನಲ್ಲಿ ಯಾವ ಹುಡುಗಿಯರೂ ಊರಿನ ಗಲ್ಲಿಗಳಲ್ಲಿ ಕಾಣಸುತ್ತಿರಲಿಲ್ಲ. ಆದರೆ ಸುನೀತಾ ಮಾತ್ರ ಅಪ್ಪ, ಅಮ್ಮ ಕೂಗಾಡಿ ಕೀರಾಡಿದರೂ ಜಲಪಾತದ ಕೆಳಗಿರೋ ಬಂಡೆಯಂತೆ

ಇದ್ದುಬಿಡುತ್ತಿದ್ದಳು. ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಓಡಾಡಿಕೊಂಡಿದ್ದಳು. ಅವಳು ಊರಲ್ಲಿ ಓಡಾಡೋದು ಅಂದ್ರೆ ಕಾಡಿನ ಮಧ್ಯೆ, ರಭಸದಲ್ಲಿ ಹರಿವ ಮಳೆನೀರು ಪ್ರತಿವರ್ಷ ಹೊಸ ಹಾದಿ ಮಾಡಿದಂತಿರುತ್ತಿತ್ತು. ಸಂದಿ ಗೊಂದಿ ಎಂಬ ಲಕ್ಷ್ಯವಿಲ್ಲದೆ, ಮರ ಮುಗುಟೆಂಬುದನ್ನು ಗಮನಿಸದೇ ಓಡಾಡುತ್ತಿದ್ದಳು.

ಸದಾ ಸಿಂಬಳ ಸುರಿಸಿಕೊಂಡು ಓಡಾಡುವ ಸುನೀತಾಳ ಮೂಗು ಒಣಗಿದ ನೆನಪು ಊರ ಗಂಡಸರೊಳಗೆ, ಹದಿಹರೆಯದ ಹುಡುಗರೊಳಗೆ ಮಾಸುವುದರೊಳಗೆ ಅವಳು ಮುಟ್ಟಾದ ಸುದ್ದಿ ಊರಿಗೆ ಮುಟ್ಟಿತ್ತು. ಆ ದಿನ ಮುಸ್ಸಂಜೆಯ ಹೊತ್ತಲ್ಲಿ ಪ್ರತಿಗಲ್ಲಿಯ ತಿರುವಿನಲ್ಲೂ ಮೀಸೆ ಚಿಗುರಿದ ಹುಡುಗರು ಸೇರಿ ಅವಳ ಬಗ್ಗೆ ಚರ್ಚಿಸಿದ್ದರು. ಕೆಲವರದ್ದು ದೂರದೃಷ್ಟಿಯ ವಿಚಾರವಾಗಿದ್ದರೆ ಇನ್ನು ಕೆಲವರು ತಾವು ಮಾರುದೂರದಿಂದ ಕಂಡ ಸುನೀತಾ ಹೇಗಿದ್ದಳು ಎಂದು ಹೇಳುತ್ತಿದ್ದರು. ಸುನೀತಾ ಮಾತ್ರ ಇದ್ಯಾವುದನ್ನೂ ಲೆಕ್ಕಿಸದೇ ಆ ದಿನ ಕೂಡ ತುರುಬು ಕಟ್ಟಿ ಅಜ್ಜಿಯೆದುರು ಕುಂಟೇಬಿಲ್ಲೆ ಆಡಿದ್ದಳು.

ಪೆದ್ದಲಾಪುರದಲ್ಲಿ ಕಂಡ ಹಸು, ಎಮ್ಮೆ, ಹಾವು, ಭತ್ತದ ಗದ್ದೆ, ಸುರಗಿ ಹೂವಿನ ಮರ, ಆಮೇಲೆ ಕಾಣುವ ರಸ್ತೆ, ರಸ್ತೆಯಾಚೆ ಹರಿವ ನೀರಿನ ಹೊಳೆಯಲ್ಲಿ ಹುಟ್ಟಿದ ಒಗಟುಗಳು ಸೇರಿ ಕಟ್ಟಿದ ಅವಳ ಜಗತ್ತಿನ ಗೋಡೆಯನ್ನು ಬೆಂಗಳೂರಿನ ಈ ಜನಸಾಗರದ ಧ್ವನಿಯ ಹಿನ್ನೀರಿನ ಒತ್ತಡ ಕೂಡ ಕೆಡವಲು ಸಾಧ್ಯವಿರಲಿಲ್ಲ. ಬಂದ ಎರಡೇ ದಿನದೊಳಗೆ ಆಕೆ ಬೆಂಗಳೂರಿನವಳಾಗುವಷ್ಟು ಬೆಳೆದು ನಿಂತಿದ್ದಳು.


ಊರು ತಿರುಗುತ್ತ ಸೀರೆ ಕೊಳ್ಳುವವರನ್ನೇ ಕೊಳ್ಳುವಷ್ಟು ವ್ಯಾವಹಾರಿಕನಾಗಿ ಬೆಳೆದಿದ್ದ ನಾಗರಾಜನಿಗೆ ಸುನೀತಾಳ ಈ ನಡೆವಳಿಕೆ ಬರೀ ಆಶ್ಚರ್ಯವಷ್ಟೇ ಅಲ್ಲ ಆಕೆ ತನಗಿನ್ನೂ ಅರ್ಥವಾಗದ ತನ್ನ ತಾಯಿಯಂತೆ ಕಂಡಳು. ಶಾಲೆ ಕಲಿಯದವನನ್ನು ಸೀರೆ ಮಾರಲು ದೂಡಿದವಳ ನೆನಪಿನ ಹಿಂದೆ ಸುನೀತಾಳ ಭೇಟಿಯ ನೆನಪು ಕಾಡಿತ್ತು. ಅವಳು ಮೊದಲನೇ ದಿನದಿಂದಲೂ ತಾನಂದುಕೊಂಡಂತೆ ಮಾತಾಡಲಿಲ್ಲ, ಉತ್ತರ ಕೊಡಲಿಲ್ಲ. ಒಂದು ಬಾರಿ ಬಂದ. ಎರಡು ಬಾರಿ ಬಂದ. ಮೂರನೇ ಬಾರಿ ಅಜ್ಜಿ, ಮೊಮ್ಮಗಳು 'ನಿನಗೆ ಬೇರೆಯೇನು ಕೆಲಸವಿಲ್ಲವೇ?' ಎಂದು ಕೇಳಿದ್ದರು.

ನಾಲ್ಕನೇ ಬಾರಿ ಅವಳು ಅವನನ್ನು ಭೇಟಿಯಾದ್ದು ಮಧ್ಯಾಹ್ನದ ಉರಿಬಿಸಿಲಲ್ಲಿ. ಮುಖ್ಯರಸ್ತೆಯಿಂದ ಊರಿಗೆ ಬರುವ ಒಳದಾರಿಯಲ್ಲಿ ಬಿಸಿಲು ಕಿರುಚುತ್ತಿದ್ದ ವೇಳೆಯಲ್ಲಿ ಅಚಾನಕ್ ಆಗಿ ಅವಳು ಎದುರಿನಿಂದ ಬಂದಾಗ, ಆತ ಮಂದ್ರದಲ್ಲಿ, ಭಯಮಿಶ್ರಿತ ನಾಚಿಕೆಯಿಂದ ನೇರವಾಗಿ ಹೇಳಿದ: ''ಗುಳಿ ಬೀಳುವ ಕೆನ್ನೆಯೊಳಗೆ ಏನಿದೆ?'' ಇದು ಒಗಟೋ, ಪ್ರಶ್ನೆಯೋ? ಅಥವಾ ಕಂಡದ್ದನ್ನು ಹೇಳಿದ ವರದಿಯೋ ಗೊತ್ತಾಗಲಿಲ್ಲ ಅವಳಿಗೆ.

ಅದೇ ಸಾಕಾಯಿತು, ಅವಳನ್ನು ಕಾಡಲು. ಇಲ್ಲೀತನಕ ಅವಳಿಗೆ ಕಾಡುತ್ತಿದ್ದುದು ಗದ್ದೆಯಾಚೆಯ ಕಾಡು, ಈಗ ನಾಗರಾಜ ಕೂಡ ಆ ಗುಂಪಿಗೆ ಸೇರಿದ. ಮನೆಯಂಗಳದಲ್ಲಿ ನಿಂತು ನೋಡಿದಾಗ, ಒಮ್ಮೆ ಕತೆ ಹೇಳಲು ಕುಳಿತ ಬಾವಾಜಿಯಂತೆ, ಹತ್ತಿರ ಗದ್ದೆಯೇರಿಯ ಮೇಲೆ ನಿಂತರೆ ತನ್ನ ಅಜ್ಜಿಯ ಶರೀರದ ಆಕಾರದಲ್ಲಿ ಆ ಕಾಡು ಕಾಣುತ್ತಿತ್ತು. ಒಳಹೊಕ್ಕರೆ ತಾನು ಕೇಳಿದ ಮಹಾಭಾರತ ನಡೆದಿರೋ ಜಾಗದಂತೆ ಕಂಡಿತು. ಅವಳಿಗೆ ನಾಗರಾಜ ಕೂಡ ಅರ್ಥವಾಗಿರಲಿಲ್ಲ. ನಿನ್ನ ಎತ್ತರಕ್ಕೆ ಅಡ್ಡಗೆರೆಯಿರೋ ಸೀರೆ ಉಡಬೇಡ. ದೊಡ್ಡ ಹೂವಿರೋ ಸೀರೆ ಉಡಬೇಡ ಎಂದಾಗ ತನ್ನ ಸೌಂದರ್ಯ

ಹೆಚ್ಚಿಸಲು ಅಜ್ಜಿ ಹೇಳುವಂತೆ ಒಬ್ಬ ಹುಡುಗ ಕೂಡ ಹೇಳುತ್ತಾನಲ್ಲ ಎಂದು ಆಶ್ಚರ್ಯಪಟ್ಟಳು. ಮತ್ತೊಂದು ಬಾರಿ ಸೀರೆ ಗಂಟಿನೊಂದಿಗೆ ಬಂದಾಗ ಅವಳ ಒಗಟಿನ ಪ್ರಶ್ನೆಗೆ "ಕಾರಂಜಿಯ ನೀರು ಮರುಳು ಮಾಡೋದು ಒಂದೇ ಕ್ಷಣ. ನೆಲಕ್ಕೆ ಬಿದ್ದು ಹರಿವಾಗ ಅದು ಬರೀ ನೀರು, ಮಾಯೆಯಲ್ಲ. ಹಾಗೆ ನಿನ್ನ ಒಗಟು ಕೂಡ" ಎಂದಿದ್ದ.

ಅದೊಂದೇ ಮಾತು ಸಾಕಾಗಿತ್ತು. ತನ್ನೊಳಗೆ ಏನು ನಡೆಯುತ್ತಿದೆ ಎಂದು ಅವಳು ವಿಚಾರ ಮಾಡುವುದರೊಳಗೆ ಆತನ ತೋಳ ಹತ್ತಿರ ನಿಂತಿದ್ದಳು. ಆತ ಪೆದ್ದಲಾಪುರದತ್ತ ಬೆನ್ನು ಹಾಕಿ ಮುತ್ತು ಕೊಟ್ಟಿದ್ದ. ಏನೂ ಆಗಿಲ್ಲವೆಂಬಂತೆ ಆಮೇಲೆ ಆತ ನಡೆದ. ಅವಳು ನಡೆದಳು.



ಪೆದ್ದಲಾಪುರದಿಂದ ಓಡುತ್ತ ಅವರೀಗ ಬೆಂಗಳೂರಲ್ಲಿ ಕೂಡ ಓಡಾಡುತ್ತಿದ್ದಾರೆ, ಬೂರುಗದ ಹೂವು ಗಾಳಿಯಲ್ಲಿ ಹಾರಾಡುವಂತೆ.

ಬೃಂದಾವನ ಹೋಟೆಲಿಂದ ದೂರ ವಾಗುತ್ತ ರಸ್ತೆ ಪಕ್ಕ ನಡೆವಾಗ ಅವಳು ಮತ್ತೆ ಕೇಳಿದಳು, ಅಥವಾ ತನಗನ್ನಿಸಿದ್ದನ್ನು ಹೇಳುತ್ತಿದ್ದಳು.

"ಅವಳು ನಿನ್ನ ತಾಯಿನಾ? ಹಾಗೆ ಕಾಣ್ಸೋದಿಲ್ಲ?"..... ಮತ್ತೆ ಮೌನ. ಒಂದು ಲಾರಿ ದಾಟಿಹೋಯಿತು. ಐದು ಜನ ಅಕ್ಕ ತಂಗೀರು ಅಂದ್ಯಲ್ಲ... ನೋಡೋಣ, ನಾನು ಹೆಸರು ಹೇಳ್ತೀನಿ. ಶೀಲಾ, ಜಯಂತಿ, ಅರುಣಾ, ಕಲಾ, ಹ್ಞೂಂ... ರಾಣಿ. ಯಾರು ಅಕ್ಕಂದಿರು ಯಾರು ತಂಗಿಯರು ಅಂತ ಹೇಳಲೇ ಇಲ್ಲ."

ಅವರೀಗ ಪಾರ್ಕಿಗೆ ಬಂದಿದ್ದರು. ಉರಿಬಿಸಿಲಿನಲ್ಲಿ ಕಲ್ಲು ಬೆಂಚಿನ ಕಾವು ಹೀರಲು ಸಜ್ಜಾಗಿದ್ದರು. ಆತ ಕುಳಿತ. ಆತನ ತೊಡೆ ಮೇಲೆ ಆಕಾಶದತ್ತ ಮುಖ ಮಾಡಿ ಮಲಗಿಕೊಂಡಳು.

"ಮಲಗಿಕೊಂಡವರ ಮೇಲೆ ಹಕ್ಕಿ ಯೊಂದು ಅಡ್ಡ ಹಾರಿದರೆ ಅವರು ಸಾಯ್ತಾ ರೇಂತ ಹೇಳ್ತಾರೆ. ಹಾಗೊಮ್ಮೆ ಹಕ್ಕಿ ಅಡ್ಡ ಹಾರಿ ನಾನು ಸತ್ತರೆ ಏನು ಮಾಡ್ತೀಯಾ?"

"ಪೆದ್ದಲಾಪುರಕ್ಕೆ ಹೋಗಿ ನಿನ್ನ ಅಜ್ಜಿನ ಕೇಳ್ತೀನಿ, ಯಾವ ಹಕ್ಕಿ ನಿನ್ನ ಜೀವ ಹಿಡಿದು ಕೊಂಡು ಹೋಗಿದೆ ಅಂತ" ಆತ ನಿರುದ್ವಿಗ್ನವಾಗಿ ಉತ್ತರಿಸಿದ. ಅವಳ ಮುಖದಲ್ಲೀಗ ಮುಗುಳ್ನಗೆ ಹರಡಿತು. ನಿನ್ನನ್ನು ಆರಾಧಿಸೋದನ್ನ ಬಿಟ್ಟು ಇನ್ನೇನನ್ನು ನಾನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಭಾವ ಅವಳ ಮುಖದಲ್ಲಿತ್ತು.

ಬೆಂಗಳೂರಿಗೆ ಬಂದು ಎರಡು ದಿನ ವಾಯ್ತು. ಇಡೀ ಬೆಂಗಳೂರಲ್ಲಿ ತಾವಿಬ್ಬರೇ ಇದ್ದ ಹಾಗೆ ಅದೆಷ್ಟೋ ಹೊತ್ತು ಕಳೆದಿದೆ. ಆದರೆ ಆತ ಮಾತ್ರ ತನ್ನನ್ನು ಮುಟ್ಟಲಿಲ್ಲ. ಅವನ ಈ ನಡವಳಿಕೆ ಅವಳಿಗೆ ಗೊತ್ತಿರೋ ಯಾವ ಒಗಟಿಗೂ ಸಿಕ್ಕದೇ ತಪ್ಪಿಸಿಕೊಂಡಿತ್ತು.

ಆ ಮಧ್ಯಾಹ್ನದ ಉರಿಬಿಸಿಲಿನ ಕಿರಣಗಳು ಅವನ ಮುಖವನ್ನು ರಣರಂಗವನ್ನಾಗಿ ಮಾಡಿ ಕೊಂಡಿದ್ದರೂ ಅವನ ಕಣ್ಣಲ್ಲಿ ದೃಷ್ಟಿ ನೆಟ್ಟಾಗ ಅವಳಿಗೆ ವಿಚಿತ್ರ ಅನುಭವವಾಗುತ್ತಿತ್ತು; ಪೆದ್ದಲಾಪುರದ ದೇವಸ್ಥಾನದ ಚಂದ್ರಸಾಲೆಗೆ ಬಂದು ನಿಂತಾಗಿನ ಅನುಭವ; ಒಳಗಿನ ಸೆಳೆತ; ಹೊರಗಿನಿಂದ ಅಜ್ಜಿಯ "ಬೇಗ ಮನೆಗೆ ಹೋಗೋಣ, ಬಾ" ಎಂಬ ಒತ್ತಡ, ಮಧ್ಯೆ ತನಗಾಗಿಯೇ ನಿಂತಿರೋ ಮೌನ.

ಅವನ ದೃಷ್ಟಿಯಲ್ಲಿ ದೃಷ್ಟಿ ನೆಟ್ಟಾಗಲೇ ಅಲ್ಲವೇ ಅವಳಿಗೆ ಎರಡನೇ ಬಾರಿ ಹಾಗೆ ಅನಿಸಿದ್ದು: ನೋಡಿದ ಮೊದಲ ದಿನ ಚಂದಿರ ಅಪರಿಚಿತ ಅಂತ ಯಾರಿಗೂ ಅನ್ನಿಸೋದಿಲ್ಲ, ಹಾಗೆ ಈತ ಕೂಡ.

ಪಾರ್ಕಿನಿಂದ ದಾಟಿ ನಡೆಯುತ್ತ, ನಡೆಯುತ್ತ ಕಿರಿದಾದ ರಸ್ತೆ ದಾಟಿ ಬಸ್‌ಸ್ಟಾಪಿಗೆ ಬಂದು ನಿಂತಾಗ ಅವಳಲ್ಲಿ, ಮೊದಲ ಬಾರಿಗೆ ಹೊಸದೊಂದು ಒಗಟು ಮೂಡಿತ್ತು. ಆತನಿಗೆ ಕೇಳಿದಳು: ಹೋಗಿ ಸೇರುವ ಮನೆ ಪಶ್ಚಿಮಕ್ಕಿದ್ದರೆ, ಪೂರ್ವಕ್ಕೆ ಮುಖ ಮಾಡಿ ನಿಲ್ಲೋದು ಯಾವಾಗ? ಎಲ್ಲಿ?

"ಗೊತ್ತಿಲ್ಲ"

"ಹೇ ಹೇ..... ಬಸ್ ಸ್ಟಾಪಲ್ಲಿ. ಬರುವ ಬಸ್ಸಿನ ದಾರಿ ಕಾಯುವ ವೇಳೆಯಲ್ಲಿ" ಆಕೆ ನಕ್ಕಳು. ಮೊದಲ ಬಾರಿಗೆ ಆತನೂ ಮುಗುಳ್ನಕ್ಕು "ಅರೇ ಹೌದಲ್ಲ, ನಾವು ಹೋಗೋದು ಬಸ್‌ಸ್ಟ್ಯಾಂಡಿಗಾದರೆ, ಆ ಕಡೆ ನಾವು ಮುಖ ಮಾಡಿ ನಿಲ್ಲೋದೇ ಇಲ್ಲ"

ಆಗ ಎದುರಿಂದ.... 'ವಂವ್ವೋ...' ಎನ್ನುತ್ತ ಒಂದು ಬಸ್ಸು ಬಂತು. ಅದು 219. ನಾವೀಗ ಅದನ್ನು ಹಿಡೀಬೇಕು. ಓಡು, ಥತ್ತೆರಿಕೆ.... ನಿಲ್ಲಿಸಲಿಲ್ಲ. ಇಲ್ಲ.... ಇಲ್ಲ..... ಮುಂದೆ ನಿಲ್ಲಿಸುತ್ತಾನೆ. ಓಡು ಅಯ್ಯೋ... ಬ್ರೇಕು ಹಾಕೋ ಲಕ್ಷಣ ಇಲ್ಲ.

'ವಂವ್ವೊ...' ನಡೆದುಬಿಟ್ಟಿತು.

ಜಾತ್ರೆಯಲ್ಲಿ ಸಾಬೂನು ಕರಡಿಗೆಗೆ ಒಗೆದ ರಿಂಗು ಕಿರುಬೆರಳಿನಂತರದಲ್ಲಿ ತಪ್ಪಿದಾಗ ಆಗುವ ಅನುಭವ ಅವನಿಗೆ ಆಯಿತು: ಒಂದು ಕಡೆ ಸುತ್ತ ನೆರೆದ ಜನರ ಕರತಾಡನ. ಏಕೆಂದರೆ ಅಷ್ಟು ಹತ್ತಿರ ರಿಂಗು ಒಗೆದನಲ್ಲ ಅಂತ. ಅದಕ್ಕೆ ಖುಷಿ. ಇನ್ನೊಂದೆಡೆ ತಪ್ಪಿ ಹೋದುದಕ್ಕುಂಟಾದ ನಾಚಿಕೆಯಿಂದ ಕೂಡಿದ ವಿಷಾದ.

ಇಬ್ಬರೂ ನಕ್ಕುಬಿಟ್ಟರು.

ಬಸ್ಸಿನ ಅಬ್ಬರದ ಅಲೆ ಜನರ ನಗುವನ್ನು ನುಂಗುತ್ತಿದ್ದರೂ ಆತ ಮಾತ್ರ ಆ ಅಲೆಯಲ್ಲಿ ಕೊಚ್ಚಿಹೋಗದೇ ಮುಗುಳ್ನಗುತ್ತ ನಿಂತಿದ್ದು ನೋಡಿದ ಅವಳ ಮುಖದಲ್ಲಿ ಕೂಡ ಒಂದು ಕ್ಷಣ ಶೃಂಗಾರ ಲಾಸ್ಯವಾಡಿತು:

...... ಶಾಲೆ ಬಿಟ್ಟು ಎಷ್ಟೋ ದಿನ ಕಳೆದ ಮೇಲೆ ಕೊನೆಗೊಂದು ದಿನ ಹಂಚು ಹಾರುವಂತೆ ಕೂಗಾಡಿ, ತನ್ನನ್ನು ಮೂರು ತಿಂಗಳು ತಮ್ಮ ಜೊತೆ ಹೊಲಿಗೆ ಮೆಶೀನಿನೆದುರು ಕೆಲಸ ಮಾಡಿಸಿ, ಬಂದ ಪಗಾರಿನಲ್ಲಿ ಸೀರೆ ಕೊಡಿಸಿದ್ದರು ಅಪ್ಪ, ಅಮ್ಮ. ಆ ದಿನ ಬೆಳಿಗ್ಗೆ ಅಜ್ಜಿಯ ಒತ್ತಾಯಕ್ಕೆ ಸೀರೆ ಉಟ್ಟುಕೊಂಡು ದೇವರ ಫೋಟೋದ ಮುಂದೆ ಕಗ್ಗತ್ತಲಲ್ಲಿ ಕ್ಷಣಕಾಲ ನಿಂತು ಕಣ್ಮುಚ್ಚಿಕೊಂಡಾಗ ತಾನು ಕನಸು ಕಂಡಿದ್ದೆ. ಆಗ ಅಜ್ಜಿ ಹೇಳಿದ್ದಳು ನಿನ್ನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಹೋಗಲು ಬರುವವನು ಯಾರೆ?.....

ಇವತ್ತು ಆ ಬಸ್‌ಸ್ಟಾಪಲ್ಲಿ ಅವಳಿಗನ್ನಿಸಿದ್ದು ಆತನೇ ಈತ- ನಾಗರಾಜ- ಅಂತ. ಮತ್ತೆ ಅದೇ ಪ್ರಶ್ನೆ ಕೇಳಿದಳು:

"ನೀನು ನನಗೆ ಹೇಳಲೇ ಇಲ್ಲ. ಯಾವ್ಯಾವ ಅಕ್ಕಂದಿರಿಗೆ ಮದುವೆಯಾಗಿದೆ? ಅವರ್‍ಯಾರು? ನಿನ್ನ ಭಾವಂದಿರು ಬರೋ ಹೊತ್ತಲ್ಲಿ ನಿನ್ನೆ ನೀನು ಮನೆಯಲ್ಲಿ ನಿಂತಿರಲಿಲ್ಲ ಯಾಕೆ? ಮಾತಾಡಬೇಕು ಅಂತ ಅನ್ನಿಸಲಿಲ್ಲವೇ...?

ಆತ ಉತ್ತರಿಸಲಿಲ್ಲ.

ಬಸ್ಸಲ್ಲಿ ಕುಳಿತು ಬೇಜಾರು ಬರುವಷ್ಟು ಹೊತ್ತಾದ ಮೇಲೆ ಅವರು ಶಿವಾಜಿನಗರ ಬಸ್‌ಸ್ಟ್ಯಾಂಡ್ ತಲುಪಿದರು. ಮತ್ತೆ ಅದೆಷ್ಟೋ ಬಸ್ಸಿನ ಓಡಾಟ ನೋಡಿ ನೋಡಿ ಹೊತ್ತಾದ ಮೇಲೆ ಮತ್ತೊಂದರಲ್ಲಿ ಕುಳಿತು ಅಲಸೂರಿನಲ್ಲಿ ಬಸ್ಸಿಳಿದಾಗ ಹಗಲಿನ ವ್ಯಾಪಾರ ಮುಗಿಸಿದ್ದ ಸೂರ್ಯ ಪಕ್ಕದಲ್ಲಿ ಕಾಣುತ್ತಿದ್ದ ತರಕಾರಿ ಮಾರುಕಟ್ಟೆಗೆ ಬಂದಿರುವಂತೆ ಕಂಡಿತು. ಹಗಲಿಡೀ ಸೂರ್ಯನ ನೇರ ಕಿರಣಗಳಿಗೆ ಛತ್ರಿ ಹಿಡಿದು ತಲೆ ತಪ್ಪಿಸಿಕೊಂಡಿದ್ದರೂ, ಪಶ್ಚಿಮಕ್ಕಿಳಿದ ಸೂರ್ಯನಿಂದ ತಪ್ಪಿಸಿಕೊಳ್ಳಲಾಗದ ತರಕಾರಿ, ಹೂವಿನ ಮಾರ್ಕೆಟ್ಟು ಈಗ ಬಿಸಿಲಲ್ಲಿ ಮೀಯುತ್ತಿದ್ದವು.

ಈಗ ಆತ ಮಾತನಾಡಲು ತೊಡಗಿದ.

''ಹೆದರಬೇಡ. ಇಂದು ಮಾತ್ರ ನಿನ್ನನ್ನು ಬಿಟ್ಟು ಎಲ್ಲಿಗೂ ಹೋಗೋದಿಲ್ಲ'' ಎಂದ.

ರಸ್ತೆ ಪಕ್ಕದ ಫ್ಯಾನ್ಸಿ ಸ್ಟೋರ್ಸ್‌ಗೆ ಅವಳನ್ನು ಕರೆದುಕೊಂಡು ಹೋದ. ಬೇಡವೆಂದರೂ ಮಂಗಲ ಸೂತ್ರವನ್ನು ಹೋಲುವ ಸರ ಕೊಂಡ: ಅಂಗಡಿಯವ ಪ್ಯಾಕ್ ಮಾಡುವಾಗ ಆತ ಸಣ್ಣಗೆ ಹೇಳಿದ: ''ಯಾರಿಗೂ ಹೇಳಬೇಡ. ಅಮ್ಮನಿಗೂ ಸಹ...''

ಮನೆಯಿರೋ ಗಲ್ಲಿಯತ್ತ ತಿರುಗೋದಕ್ಕಿಂತ ಮುಂಚೆ ಮಲ್ಲಿಗೆ, ಸೇವಂತಿಗೆಯನ್ನು ಅವರು ಕೊಂಡರು. ಭೂಮಿ ಪೂಜೆ ಮಾಡಿ ತಿರುಗಿ ಬರುವಾಗ ತನ್ನಪ್ಪ ಹೇಗೆ ಬೀಗುತ್ತಿದ್ದನೋ ಅಂಥದ್ದೇ ಕಳೆಯನ್ನು ಅವನ ಮುಖದಲ್ಲಿ ಕಂಡಳು.

''ಮದುವೆಯಾದ ಮೇಲೆ ಹುಡುಗಿಗೆ ಗಂಡನ ಮನೆ ಹೇಗನ್ನಿಸುತ್ತೆ?'' ಆತ ಮೊದಲ ಬಾರಿಗೆ ತಿರುಗಿ ಪ್ರಶ್ನೆ ಕೇಳಿದ. ''ಗೊತ್ತಿಲ್ವಾ? ಅಜ್ಜಿಯ ಟ್ರಂಕಿದ್ದಂಗೆ. ಎಲ್ಲೆಲ್ಲಿ ಏನಿದೆ ಅಂತ ಗೊತ್ತಿರೊಲ್ಲ. ಊಹಿಸೋದೂ ಆಗೋದಿಲ್ಲ. ಮುಟ್ಟೋದಂತೂ ದೂರಾನೇ ಉಳೀತು'' ಆತನ ಪ್ರಶ್ನೆ ಮುಗಿಯೋದರೊಳಗೆ ಆಕೆಯ ಉತ್ತರ ಗಾಳಿಯಲ್ಲಿ ತೇಲಿತು.

ಗಲ್ಲಿಯಲ್ಲಿ ಹೋಗೋವಾಗ ಹೆಂಗಸರು ಮನೆಯೆದುರು ಕುಳಿತು ತಮ್ಮ ಸುದ್ದಿಯ ಮಡುವಿನಲ್ಲಿ ಈಜಾಡುತ್ತಿದ್ದುದನ್ನು ಅವಳು ತೆರಗಣ್ಣಿಂದ ನೋಡಿದಳು. ಅದ್ಯಾವುದೂ ತನಗೆ ಹೊಸದಲ್ಲ ಎನ್ನುವಂತಿದ್ದ ನಾಗರಾಜ ಬೆಳಿಗ್ಗೆ ಕೇಳಿದ ಕೆಲವು ಪ್ರಶ್ನೆಗಳಿಗೆ ಈಗ ಉತ್ತರ ಹೇಳತೊಡಗಿದ್ದ: ''ಅತ್ತೆಗೆ ಹೆದರಕೋಬೇಡ. ಅವಳು ಯಾವಾಗಲೂ ಹಾಗೇನೇ. ತುಂಬಾ ಒಳ್ಳೆಯವಳು. ಅವಳು ಯಾವಾಗಲೂ ಸೊಂಟಕ್ಕೆ ಬೀಗದಕೈ ಸಿಕ್ಕಿಸಿಕೊಂಡಿರ್ತಾಳೆ ಯಾಕೆ? ಅಂತ ಕೇಳಿದ್ಯಲ್ಲಾ.. ಅಪ್ಪ ಹೋದಾಗಿನಿಂದ ಅವಳಿಗೆ ಅದೇ ಅಭ್ಯಾಸ ರೂಢಿಯಾಗಿಬಿಟ್ಟಿದೆ. ಸೀರೆ ಕೊಂಡುಕೊಳ್ಳೋರು ಬರ್ತಾರೆ. ವ್ಯಾಪಾರವಾದ ನಂತರ ಕೊಡೋದು, ಕೊಳ್ಳೋದು ಇದ್ದೇ ಇರುತ್ತದಲ್ಲ, ಪ್ರತಿ ಬಾರಿಯೂ, ಒಳಗೆ ಹೊರಗೆ ಅಂತ ಓಡೋದಕ್ಕಾಗುತ್ತಾ? ಅದಕ್ಕೇ ಅವಳು ಜಗುಲಿಯ ಆ ಬಿಳೀ ವಸ್ತ್ರದ ಪಲ್ಲಂಗದ ಮುಂದೆ 'ಗಲ್ಲ' ಇಟ್ಟುಕೊಂಡು ಕೂತಿರ್ತಾಳೆ''

ಅವರೀಗ ಮನೆಯೆದುರಿನ ಗೇಟಿನ ಹತ್ತಿರ ತಲುಪಿದ್ದರು.

ಮನೆ ಬಾಗಿಲಲ್ಲಿ ರಾಣಿ, ಶೀಲಾ ಎಲ್ಲ ಕುಳಿತಿದ್ದರು. ಇವರನ್ನು ಕಂಡಿದ್ದೇ ''ಹೋ'' ಎಂದರು. ಒಂದು ಕ್ಷಣದೊಳಗೆ ತಮ್ಮ ಮಾತಿಂದ, ಸುನೀತಾಳ ಸೌಂದರ್ಯವನ್ನು ಹೊಗಳೋದರ ಮೂಲಕ, ಅಲ್ಲಿ ಹಬ್ಬದ ವಾತಾವರಣ ಬರುವಂತೆ ಮಾಡಿದರು. ಈ ಮನೆ ಜನವರಿ 26, ಆಗಸ್ಟ್ 15ರಂದು ಹಬ್ಬದಂತೆ ಇರುತ್ತಿದ್ದ ಪೆದ್ದಲಾಪುರದ ಶಾಲೆಯಂತೆ ಕಂಡಿತು. ನಿನ್ನೆ ರಾತ್ರಿ ನೋಡಿದರೆ ಇದ್ಯಾವುದೋ ಗಲ್ಲಿ ಎನ್ನಿಸಿದರೆ ಈಗ... ''ನಮ್ಮನೆ'' ಎನ್ನಿಸಿಬಿಟ್ಟಿತು ಅವಳಿಗೆ.

ನಾಗರಾಜನ ಅಕ್ಕ-ತಂಗಿಯರು ಆತ ನಂತಲ್ಲ. ಮಾತು ಜೋರು. ತುಂಬಾ ಸೆಂಟು ಹಾಕಿದ್ದಾರೆ. ತೀರಾ ಹೆಚ್ಚೋ ಎಂಬಂತೆ ಲಿಪ್‌ಸ್ಟಿಕ್, ಪೌಡರ್ ಬಳಿದಿದ್ದಾರೆ. ಹಬ್ಬ ಅಂತಿರಬೇಕು. ಪದೇ ಪದೇ ಸೆರಗು ಬಿದ್ದರೂ ಎತ್ತಿಕೊಳ್ಳುವುದಿಲ್ಲ; ಅದಕ್ಕೂ ಪುರುಸೊತ್ತಿಲ್ಲ. ಅವಳ ಮುಖ, ಕೈ ಅಂತ ನೋಡದೇ ಮುಟ್ಟಿ, ತಟ್ಟಿ ನಗುತ್ತಿದ್ದರು. ತೀರಾ ಖುಷಿಯಲ್ಲಿರಬೇಕು ಎಂದುಕೊಂಡಳು.

ಅತ್ತೆ ಗಲ್ಲದ ಮುಂದೆ ಕುಳಿತೇ ಇದ್ದಾಳೆ. ಅವಳು ನೋಡುತ್ತಿದ್ದಾಳೆ. ಅವಳೆದುರೇ ಇಡೀ ಮನೆ ಸೇವಂತಿಗೆ ಮಾಲೆ, ಮೇಣದ ದೀಪದಲ್ಲಿ ಬೆಳಗಿತು. ಸುನೀತಾಳ ಕೋಣೆಯ ಬಾಗಿಲಿಂದ ಹಿಡಿದು ಹಾಸಿಗೆತನಕ ಮಲ್ಲಿಗೆ ಮಾಲೆ ಒರಗಿ ಮುಲುಗಿದವು.

ಸಂಜೆ ಕಳೆದು ರಾತ್ರಿಯಾಯ್ತು. ಊಟ ಮುಗಿದು ಎಲ್ಲ ಅವರವರ ಕೋಣೆ ಸೇರಿದರು. ನಾಗರಾಜ, ಸುನೀತಾ ಕೂಡ ಬಾಗಿಲು ಮುಚ್ಚಿ ಅದೆಷ್ಟೊ ಹೊತ್ತಿಂದ ಮಾತಾಡುತ್ತಲೇ ಇದ್ದಾರೆ. ಆತ ಮಾತಾಡುವಾಗ ಸುನೀತಾ, ಮಂಚದ ಕೊನೆಯಲ್ಲಿ ಕುಳಿತು ಕೇಳುತ್ತಿದ್ದಳು. ಆ ಮಾತಿನ ಮಧ್ಯೆ ಒಮ್ಮೊಮ್ಮೆ ಆತ ತನ್ನ ಅಜ್ಜಿಯಂತೆ, ಮತ್ತೊಮ್ಮೆ ತನ್ನಪ್ಪನಂತೆ ಕಂಡ, ಸುನೀತಾಗೆ. ಅಥವಾ ತನ್ನ ಭಾವಂದಿರ ಬಗ್ಗೆ ಮಾತಾಡುವಾಗಲಂತೂ, ನಾಗರಾಜ, ಕಾಕಿನಾಡದ ದರ್ಜಿ ತಿಂಗಳ ಕೊನೆಗೆ ಪಗಾರು ಕೊಡುವಾಗ ಮಾತಾಡುವಂತೆ ಮಾತಾಡುತ್ತಿದ್ದ; "ಎರಡು ದಿನದಲ್ಲಿ ಆರು ಜನರ ಮುಖ ಪರಿಚಯ ನಿನಗೆ ಹೇಗಾಗುತ್ತದೆ? ಅವರ ಮಾತು, ಹಾವಭಾವ, ಉದ್ದ ಮೂಗು, ಚಪ್ಪಟೆ ಮೂಗು, ಕಡ್ಡಿ ಮೀಸೆ, ಗಲ್ಲಿ ಮೀಸೆ, ತಮಿಳು ಮಿಶ್ರಿತ ಕನ್ನಡ, ತೆಲುಗು ಮಿಶ್ರಿತ ಕನ್ನಡ, ಕೈ ತುಂಬ ಕೂದಲಿರೋರು ಹೀಗೆ ನಿನ್ನ ಮನಸಲ್ಲಿ ಅವರ ಮುಖ ನೆಲೆ ನಿಲ್ಲೋದು ಅಷ್ಟು ಸುಲಭಾನಾ? ಆದ್ದರಿಂದಲೇ ನಿನಗೆ ಮೊನ್ನೆ ಬಂದವರು ನಿನ್ನೆ ಬೇರೆಯಾಗಿ ಕಂಡರು. ಮೊನ್ನೆ ಬಂದವರಿಗೂ ನಿನ್ನೆ ಬಂದವರಿಗೂ ವ್ಯತ್ಯಾಸವೇ ಇಲ್ಲ. ಅವರೆಲ್ಲ ಒಂದೇ".

ಸುನೀತಾ ತುಂಬಾ ತಡವರಿಸುತ್ತ ಕೇಳಿದಳು: "ಅವರೆಲ್ಲ ಯಾಕೆ ನಮ್ಮನೆಯಲ್ಲಿರಬೇಕು?" ಇಷ್ಟು ದೊಡ್ಡ ನಗರದಲ್ಲಿ ಗಂಡನ ಮನೆ ಮತ್ತು ತವರು ಮನೆ ಮಧ್ಯೆ ಯಾಕೆ ವ್ಯತ್ಯಾಸ ಇರಲ್ಲ ಹೇಳು? ನಿಮ್ಮೂರಲ್ಲಿದ್ದಾಗ ಮಧ್ಯೆ ಗುಡ್ಡ ಇಲ್ಲ, ಹೊಳೆಯಿಲ್ಲ, ಬರ್‍ತಾರೆ, ಹೋಗ್ತಾರೆ. ಅದಕ್ಕಿಂತ ಹೆಚ್ಚಾಗಿ ಅಮ್ಮ ಮದುವೆ ಮಾಡುವಾಗ ಹೇಳಿಬಿಟ್ಟಿದ್ದರು "ಬಹಳ ಪ್ರೀತಿಯಿಂದ ಬೆಳೆಸಿದ್ದೇವೆ. ಅವರು ಎಷ್ಟು ದಿನ ಬೇಕಾದ್ರೂ ಬಂದಿರ್‍ತಾರೆ. ಅದಕ್ಕೆ ಒಪ್ಪಿಗೆ ಇದ್ರೆ ಹ್ಞೂಂ ಎನ್ನಿ. ನಿಮಗೂ ಅಷ್ಟೆ." ಮದುವೆಯಾದ ಮೇಲೂ ಕೂಡ ಹೊರಗಿನವರು ಕೇಳಿದವರಿಗೆಲ್ಲ ಅವಳು ಹೇಳೋದು ನಮ್ಮದು ಅಳಿಯ ಸಂತಾನ ಅಂತ. ಹೆಣ್ಮಕ್ಕಳು, ಅಳಿಯಂದಿರು ತಮ್ಮನೇನಲ್ಲೇ ಇರ್‍ತಾರೆ. ತುಂಬಾ ಹೊತ್ತಿನಿಂದ ಮಾತನಾಡುತ್ತಿದ್ದ ಅವನನ್ನು ನೋಡಿದವಳಲ್ಲಿ ಮನಸ್ಸಿನ ಭಾರ ಇಳಿದಂತಹ ಅನುಭವ. ಆಗಲೇ ಒಂದು ಒಗಟು ಒಡಮೂಡಿತ್ತು; ಮದುವೆಯ ಹೊಸದಿನಗಳಲ್ಲಿ ಗಂಡನ ಮನೆ ಎಂದರೇನು? "...." "ಮಾರುಕಟ್ಟೆ" 'ಆಮೇಲೆ?' ಆತ ಕೇಳಿದ. "ಮೊದಲು ತರಕಾರಿ ಮಾರುಕಟ್ಟೆ, ಆಮೇಲೆ ಮೀನು ಮಾರುಕಟ್ಟೆ"

ಲೈಟು ತನ್ನ ಮೈ ಕಾಂತಿಯನ್ನು ಕಳೆದುಕೊಂಡಿತು. ತಿರುಗುತ್ತಿರೋ ಸೀಲಿಂಗ್ ಫ್ಯಾನ್ ಕಡೆ ಇಬ್ಬರೂ ಮುಖವೆತ್ತೋ ಹೊತ್ತಿಗೆ ಹೊರಗಿಂದ ಗಾಳಿ ಬೀಸಿ, ಕಿಟಕಿ ಸದ್ದಿಲ್ಲದೆ ತೆರೆಯಿತು. ತೆರೆದುಕೊಂಡ ಕಿಟಕಿಯಾಚೆ ಕಂಡ ಆ ವಸ್ತುವಿನತ್ತ ಇಬ್ಬರೂ ತೋರುಬೆರಳನ್ನು ತೋರಿಸುತ್ತ 'ವಾಹ್' ಎಂದು ಒಮ್ಮೆಲೇ ಉದ್ಗರಿಸಿದರು. ಹತ್ತಿರ ಬಂದಿದ್ದ ಕೈ ಬೆಸೆದಿತ್ತು.

ಅವಳಿಗೆ, ಕರ್ಟನ್ನಿಂದ ಹಿಂದೆ ಗೋಡೆಗೆ ನೇತು ಹಾಕಿದ ಕಲಾಕೃತಿಯಂತೆ ಕಂಡ ಕಿಟಕಿಯಾಚೆ ಆಗಸದಲ್ಲಿದ್ದ ಚಂದಿರ.


ಚಂದಿರ ತುಂಬಾ ಹೊತ್ತು ಹಾಗೆ ಕುಳಿತಿದ್ದ. ಮೊದಲು ಎದ್ದು ಹೋದವನು ನಾಗರಾಜ. ಆತನಿಗೆ ಬೆಳಿಗ್ಗೆ ಬೇಗ ಹೊರಡಬೇಕಿತ್ತು.

ಸುನೀತಾಳ ಹತ್ತಿರ ಮಲ್ಲಿಗೆ ಮಾಲೆ ಹಾಗೇ ಕುಳಿತಿತ್ತು.


ಮತ್ತೆ ಸೀರೆ ಮಾರಾಟ ಮಾಡಲು ಧರ್ಮಪುರಿಗೆ ಹೊರಟ ನಾಗರಾಜ ಬೆಂಗಳೂರನ್ನು ಬಿಟ್ಟು ಬಸ್ಸು ತಮಿಳ್ನಾಡನ್ನು ಪ್ರವೇಶಿಸಿದಾಗ ಸಹಪ್ರಯಾಣಿಕನ ಜೊತೆ ಮಾತಿಗಿಳಿದ. ರಾತ್ರಿ ಬಸ್ಸಿಳಿದು ಚಹ ಕುಡಿದಾಗ, ನಾಗರಾಜ ಸ್ವಚ್ಛ ತಮಿಳಿನಲ್ಲಿ ಹೇಳುತ್ತಿದ್ದ: ''ಏನು ಮಾಡೋದು, ನಮ್ಮ ಹಣೇಬರಹ. ಅಪ್ಪ ಇಲ್ಲ. ಅಮ್ಮ ಒಬ್ಬಳೇ. ಬೆಳೆದು ನಿಂತ ಹೆಣ್ಮಕ್ಕಳಿದ್ದಾರೆ. ಎಲ್ಲರ ಹೊಟ್ಟೆಹೊರೆ ನೋಡಬೇಕು. ಅದಕ್ಕೆ ಊರೂರಿಗೆ ಸೀರೆಗಂಟು ಹೊತ್ತುಕೊಂಡು ಹೋಗಿ ಬಿಸಿಲು, ಬೆಂಕಿ ಅಂತ ಇಲ್ಲದೇ ಗುದ್ದಾಡಬೇಕು.''

ಈಗ ಸುನೀತಾಳಿಗೆ ಮಲ್ಲಿಗೆಯೆಂದರೆ ತುಂಬಾ ಇಷ್ಟ. ಸಂಜೆ ಅವಳು ತನ್ನ ಕೋಣೆ ಸೇರುವ ಮೊದಲು ಹೊಸ ಮಲ್ಲಿಗೆ ಇರಲೇಬೇಕು. ಅವಳ ಕೋಣೆಯೆಂದರೆ ಮಲ್ಲಿಗೆ ಮಾರುವವರ ಸಂತೆ!

ಒಮ್ಮೊಮ್ಮೆ ಕಥೆಯೆಂದರೆ— ಕಾಲಿನ ಅಂಚಿನ ಸೀಟಿಗೆ ತಾಗಿಕೋ ನಾಗಂದಿಗೆ ಮೇಲೆ ಕುಳಿತಿರೋ ಬಿಂಬ ಎನ್ನಿಸುತ್ತದೆ. ಅದು ಅಲಂಕಾರಕ್ಕಲ್ಲ, ಸಿರಿವಂತಿಕೆಯ ಪ್ರದರ್ಶನಕ್ಕಲ್ಲ. ಕಾಲಿನ ಒಳ್ಳೆಯದಕ್ಕೆ ಬೇಕಾಗುವಾಗ ಕತ್ತರಿಗೆಂಟಿನಿಂದ ಬಂದು ಬಿಡುತ್ತದೆ. ಅದು ಬಂದಾಗಲೇ ಅಲ್ಲವೇ— ಕುಳಿತವರು ಒಂದು ಕ್ಷಣ ಕಣ್ಮುಚ್ಚಿ ಎಲ್ಲ ಮರೆಯೋದು...



ಜಪಾನಿ ಪ್ರೇಮಕಾವ್ಯದ ಅರಸಿಯರು



ವಿವೇಕ ಶಾನಭಾಗ

ಕಥನ ಕುತೂಹಲ

ಒನೊ ನೊ ಕೊಮಾಚಿ

ಜಪಾನಿನ ಸಾಹಿತ್ಯ ತನ್ನ ಅತ್ಯುತ್ತಮ ದಿನಗಳನ್ನು ಕಂಡಿದ್ದು ಹೆಯನ್ ಶಕೆಯಲ್ಲಿ. ಆಗ ಜಪಾನಿ ಸಾಹಿತ್ಯದ ಕೇಂದ್ರದಲ್ಲಿದ್ದವರು ಮಹಿಳೆಯರು. ಇದರಲ್ಲಿ ಮುಖ್ಯವಾದವರು ಕೊಮಾಚಿ. ತೀರಾ ವೈಯಕ್ತಿಕವಾದ ಅನುಭವಗಳನ್ನು ಮೊಟ್ಟ ಮೊದಲ ಬಾರಿಗೆ ಕಾವ್ಯಕ್ಕೆ ತಂದ ಕೊಮಾಚಿಯ ಕವನಗಳು ಸಮಾಗಮ, ಕಾಯುವಿಕೆ, ಅಗಲಿಕೆಗಳ ಕುರಿತಾದವು. ಭಾವತೀವ್ರತೆ, ಗಹನವಾದ ಧಾರ್ಮಿಕತೆ, ಬದುಕಿನ ಮಹತ್ವದ ಪ್ರಶ್ನೆ ಗಳನ್ನು ಎತ್ತಿಕೊಂಡು ನಡೆಸಿದ ಹುಡುಕಾಟ, ಅನುಭವದ ನಿಜವನ್ನು ಮುಟ್ಟುವ ಹವಣಿಕೆ - ಇವುಗಳಿಂದಾಗಿ ಆಕೆಯ ಕಾವ್ಯ ನಮ್ಮನ್ನು ಸಾವಿರ ವರ್ಷಗಳ ನಂತರವೂ ಕಲಕುತ್ತದೆ.

1

ಇದು ಕನಸೇ ಆಗಿದ್ದರೆ ಖಂಡಿತ ನಿನ್ನನ್ನು
ಮತ್ತೆ ನೋಡುತ್ತೇನೆ
ಎಚ್ಚರದ ಪ್ರೀತಿಯನ್ನೇಕೆ
ಅಪೂರ್ಣವಾಗಿ ಉಳಿಸುವುದು?

2

ಓಗೊಟ್ಟು ಕರೆಯುವ ಜಿಂಕೆಯ ಕರೆಯಿಂದ
ಗಾಢವಾಗುವ ರಾತ್ರಿಯಲ್ಲಿ ನನಗೆ ಕೇಳಿಸುವುದು
ನನ್ನದೇ ಒಮ್ಮುಖ ಪ್ರೀತಿಯ ಸದ್ದು.

3

ಈ ಮಾಗಿಯ ರಾತ್ರಿ
ದೀರ್ಘವೆನ್ನುವುದು ಸುಮ್ಮನೇ
ಪರಸ್ಪರ ನೋಡಿದ್ದು ಬಿಟ್ಟರೆ
ಏನೂ ಮಾಡಿಲ್ಲ ಆಗಲೇ ಬೆಳಕಾಗಿದೆ.

4

ಚಂದ್ರನಿಲ್ಲದ ಈ ರಾತ್ರಿಯಲ್ಲಿ
ಅವನನ್ನು ಕಾಣಲು ಯಾವ ದಾರಿಯೂ ಇಲ್ಲ
ಹಂಬಲಿಸುತ್ತ ಜ್ವಲಿಸುತ್ತ ಎದೆಬಿಚ್ಚಿ ಮಲಗಿದ್ದೇನೆ
ಮೊಲೆಗಳಿಂದ ಉಕ್ಕುತ್ತಿದೆ ಬೆಂಕಿ
ಹೃದಯದಿಂದ ಜ್ವಾಲೆ

5

ಈ ಪ್ರೀತಿ ಕನಸೋ
ನನಸೋ?
ಅರ್ಥವಾಗುತ್ತಿಲ್ಲ
ಕನಸು ಮತ್ತು ನನಸುಗಳೆರಡೂ
ನಿಜದಲ್ಲಿ ಇಲ್ಲದೇ ಇರುವಾಗ

6

(ಪ್ರಿಯಕರನ ಗುಪ್ತ ಭೇಟಿಯ ನಂತರ)
ನನಗೆ ಗೊತ್ತು
ಎತ್ತರದ ಈ ಜಗತ್ತಲ್ಲಿ ಇದು ಹೀಗೇ
ಆದರೂ ಇದೆಂಥ ಕ್ರೌರ್ಯ
ಕನಸುಗಳಲ್ಲೂ ನಾವು
ಎಲ್ಲರ ಕಣ್ಣುಗಳಿಂದ ಬಚ್ಚಿಟ್ಟುಕೊಳ್ಳುತ್ತೇವಲ್ಲ.

7

ಅವನನ್ನೇ ಯೋಚಿಸುತ್ತ
ನಿದ್ದೆ ಹೋಗಿದ್ದರಿಂದ ಆತ ಕಂಡನೇ?
ಅದು ಕನಸೆಂದು ಗೊತ್ತಿದ್ದರೆ
ನಾನು ಎಚ್ಚರಾಗುತ್ತಲೇ ಇರಲಿಲ್ಲ.

ಇರುಮಿ ಶಿಕಿಬು

ಸಾಮಂತನ ಮಗಳಾಗಿದ್ದ ಈಕೆ ಮದುವೆಯಾಗಿ ಒಬ್ಬ ಮಗಳ ಜನನದ ನಂತರ ಆ ಕಾಲದ ಕಟ್ಟಳೆಗಳನ್ನು ಮೀರಿ ರಾಣಿಯ ಮಲಮಗನ ಜೊತೆ ಪ್ರೇಮಸಂಬಂಧ ಬೆಳೆಸಿದಳು. ಇದರಿಂದಾಗಿ ಅವಳ ಮದುವೆ ಮುರಿದುಬಿತ್ತು. ಕುಟುಂಬದಿಂದ ದೂರಮಾಡಲ್ಪಟ್ಟಳು. ಆಕೆಯ ಪ್ರಿಯತಮನ ಮರಣದ ನಂತರ ಅವನ ಸೋದರನ ಜೊತೆ ಅವಳ ಸಂಬಂಧ ಬೆಳೆಯಿತು. ತನ್ನ ಮೂವತ್ತಾರನೆಯ ವಯಸ್ಸಿನಲ್ಲಿ ಮೂರನೆಯ ಮದುವೆಯಾದ ನಂತರ ಆಸ್ಥಾನವನ್ನು ಬಿಟ್ಟ ಅವಳ ಕಾವ್ಯ ಸಾವಿನ ನಂತರ ಹೆಚ್ಚು ಮನ್ನಣೆಗೆ ಪಾತ್ರವಾಯ್ತು.

1

(ಗುಟ್ಟಾಗಿ ಸಂಧಿಸುತ್ತಿದ್ದವನೊಬ್ಬ ಬಹಿರಂಗವಾಗಿ
ಹಗಲಿನಲ್ಲಿ ಕರೆದಾಗ)
ಮಧ್ಯರಾತ್ರಿಯ ಅಲೆಗಳಲ್ಲಿ
ಅನೇಕ ವಿಚಿತ್ರ ಸುಂದರ ಸಂಗತಿಗಳು ಈಜುತ್ತವೆ
ಅವುಗಳನ್ನೆಲ್ಲ ಉಳಿದ ಈಜುಗಾರರ ಕಣ್ಣುಗಳಲ್ಲಿ
ಹಾಡೇ ಹಗಲು ಹಂಚಿಕೊಳ್ಳಲಾರೆ

2

(ಒಬ್ಬಾತ ಗುಟ್ಟಾಗಿ ಬಂದು ಮಳೆಯಲ್ಲಿ ಹಿಂತಿರುಗಿ
ಹೋದ. ಆತ ಮರುದಿನ ಕಳಿಸಿದ ಕವಿತೆಯಲ್ಲಿ ನಾನು
ಒದ್ದೆಯಾಗಿದ್ದರ ಬಗ್ಗೆ ಬರೆದ. ನಾನಂದೆ)
ಅದ್ದಿದ್ದು ಪ್ರೀತಿಯಲ್ಲೋ ಮಳೆಯಲ್ಲೋ?
ನಿನ್ನ ತೋಳುಗಳನ್ನು ತೊಯ್ದದ್ದು
ಯಾವುದೆಂದು ಜನರು ಕೇಳಿದರೆ
ಏನೆಂದು ಹೇಳುತ್ತೀ?

3

(ಒಂದು ಬೇಸಿಗೆಯ ರಾತ್ರಿ ಗುಂಪೊಂದು
ಚಂದ್ರನನ್ನು ನೋಡುತ್ತ ನಿಂತಿರುವಾಗ ಒಬ್ಬ
ಅವಸರದಲ್ಲಿ ಹೊರಟ)
ಇಂಥ ಅವಸರದಲ್ಲಿ ನೀನು
ಹೊರಟಿದ್ದೆಲ್ಲಿಗೆ? ಎಲ್ಲಿ ಹೋದರೂ ಈ ರಾತ್ರಿ,
ನಿನಗೆ ಕಾಣಸುವುದು ಅದೇ ಚಂದ್ರ

4

ಒಂಟಿಯಾಗಿ ಬಿದ್ದುಕೊಂಡಿರುವಾಗ
ಬಾಚದೇ ಬಿಟ್ಟ ನನ್ನ ಕಪ್ಪು ಕೂದಲು
ಸಿಕ್ಕಾಯಿತು
ಅದನ್ನು ಮೊದಲು ಮುಟ್ಟಿದವನಿಗಾಗಿ
ಪರಿತಪಿಸುತ್ತಿದ್ದೇನೆ

5

ಈ ಜಗತ್ತಲ್ಲಿ ಪ್ರೀತಿಗೆ ಬಣ್ಣವಿಲ್ಲ
ಆದರೂ ನನ್ನ ದೇಹ ಕಲೆಯಾಗಿದ್ದು
ನಿನ್ನ ಪ್ರೀತಿಯಿಂದ


6

ನಾಚಿ ರಂಗೇರಬೇಡ!
ನೇರಳೆ ಬೇರುಗಳಿಂದ ಉಜ್ಜಿರುವ
ಈ ಬಟ್ಟೆಯ ನಿರಿಗೆಗಳ ಅಡಿಯಲ್ಲಿ
ನಾವು ಮಲಗಿದ್ದನ್ನು ಜನರು ಊಹಿಸಿಯಾರು!

7


(ಮಾಗಿಯ ದಿನಗಳಲ್ಲಿ ಆತ ಬಂದ. ಹೋದ)
ನನ್ನ ಮನೆಯಿಂದ
ಹೋಗುತ್ತಿದ್ದಂತೆ
ಎಷ್ಟು ಸುಲಭವಾಗಿ ಆತ
ಮಾಗಿಯ ಎಲೆಗಳ ಕಸೂತಿಯ ತೆರೆಯಲ್ಲಿ
ಒಂದಾಗಿಹೋಗುತ್ತಾನೆ

(ಪ್ರವೃತ್ತಿಯಿಂದ ಕತೆಗಾರ ಮತ್ತು ವೃತ್ತಿಯಿಂದ ಐ ಟಿ ವರಿಷ್ಠರಾಗಿ ಸದ್ಯ ಲಂಡನ್‌ನಲ್ಲಿರುವ ವಿವೇಕ ಶಾನಭಾಗ ಪ್ರತಿ ತಿಂಗಳು ಬರೆಯುತ್ತಾರೆ.)



ಶಾಂತಾದೇವಿ ಕಣವಿ

ನನಗೂ ಒಂದು ಸೀಟು



ಕೇಳಲು ಇಂಪಾಗಿದ್ದರೂ ತಂತಿಗಳ ಮೃದುವಾದ ಝೇಂಕಾರ ಮನೆ ತುಂಬಿದ್ದ ಶಾಂತಿಯನ್ನು ಭಂಗಗೊಳಿಸಿದಾಗ ಸರಸ್ವತಿಯ ಕಿವಿಗೆ ಕರ್ಕಶವೆನಿಸಿ, ಬೆಚ್ಚಿ, ತಲೆಯೆತ್ತಿ, ಮೋನಿಕಾ ಗಂಡನಿಗೆ ಕಾಣಿಕೆಯಾಗಿ ಕೊಟ್ಟ ಗೋಡೆ ಗಡಿಯಾರವನ್ನು ನೋಡಿದಳು. ಸಿತಾರಿನ ರಿಯಾಜಿಗೆ ಅರ್ಧ ತಾಸು ತಡವಾಗಿತ್ತು. ಬೆರಳಿನ ಮೀಟುವಿಕೆಯಲ್ಲಿ ಕೋಪ ತುಂಬಿತ್ತು.

ಎರಡು-ಮೂರು ವರ್ಷ ಸಿತಾರ ಕಲಿತರೂ ಒಂದು ರಾಗವನ್ನೂ ಸರಿಯಾಗಿ ಬಾರಿಸಲು ಬರದ ಮೋನಿಕಾ-ಒನಪು... ವಯ್ಯಾರ.. ಚಂಚಲಕಣ್ಣಿನ ಹುಡುಗಿ. ದಿವಾಕರನನ್ನು ಕಂಡೊಡನೆ ತಾವರೆಯಂತೆ ಮುಖ ಅರಳಿ, ಬೆರಳು ಸಿತಾರಿನ ಮೇಲೆ ಓಡುತ್ತಿರಲಿಲ್ಲ. ಕಲಿತದ್ದು ಸಾಕು ಎಂದು ದಿವಾಕರನೇ ಅವಳನ್ನು ನಯವಾಗಿ ತಿರುಗಿ ಕಳಿಸಿದ್ದ...

ಗಡಿಯಾರದ ಪೆಂಡುಲಂನಂತೆ ಸರಸ್ವತಿ ಒಳಹೊರಗೆ ಚಲಿಸುತ್ತಿದ್ದಳು. ರಭಸದಿಂದ ತಂತಿಯ ಮೇಲಿನ ಬೆರಳುಗಳು ಓಲಾಡುತ್ತಿದ್ದಾಗ ಡೈನಿಂಗ್ ಟೇಬಲ್ ಒರೆಸಿ, ಹಾಲು

ಹೆಪ್ಪಿಟ್ಟು, ಕಾಲು ಎಳೆಯುತ್ತ ಬಂದು ಬರಿದಾದ ದೊಡ್ಡ ಹಾಸಿಗೆಗೆ ಒರಗಿದಳು.

ತಡವಾದದ್ದು ತನ್ನ ತಪ್ಪಲ್ಲ. ಕಾಲೇಜಿನಿಂದ ಬಂದು ತಿನಿಸು - ಚಹಾ ಮಾಡಿ ಗಂಡನೊಡನೆ ತಿಂದು, ಅಡಿಗೆಗೆ ಇನ್ನೂ ವೇಳೆ ಇದೆ, ಮರು ದಿನದ ಲೆಕ್ಚರ್ ಪ್ರಿಪೇರ್ ಮಾಡಿಕೊಳ್ಳಲೇ.... ಉಹುಂ ಮುಂಚೆ ಕೂದಲಿಗೆ ಮೆಹಂದಿ ಹಚ್ಚಲೇ, ತಡ ವಾದರೆ ಬಿಳಿಕೂದಲು ಅಲ್ಲಲ್ಲಿ ಇಣುಕಿ.... ಅಸಹ್ಯ....

ಸಿತಾರ ಪಂಡಿತ ದಿವಾಕರನನ್ನು ಮುತ್ತುವ, ಮಾತಿಗೆಳೆಯುವ, ಸ್ನೇಹ ಬಯಸುವ, ಸಲಿಗೆ ಮಾಡುವ ಹೆಣ್ಣುಗಳಿಗೇನು ಕಡಿಮೆ... ಮಲಗಿದ್ದಲ್ಲಿಯೇ ಹೊರಳಿದಳು. ಡ್ರೆಸ್ಸಿಂಗ್ ಟೇಬಲ್ ಕನ್ನಡಿ ಹೇಳುತ್ತಿದೆ, ದುಂಡು ಮುಖ, ದೊಡ್ಡ ಕಣ್ಣು, ನೀಳರೆಪ್ಪೆಯ, ಆಕರ್ಷಕ ಮೈ ಕಟ್ಟಿನ ತಾನು ಒಂದು ಕಾಲಕ್ಕೆ ಸುಂದರಿಯೇ ಇದ್ದೆ ಎಂದು. ಇದ್ದೆ ಆದರೆ ಈಗ...?

ತುಟಿ ಕೊಂಕಿತು. ಅಮೆರಿಕದಲಿ ಇಂಜಿನಿಯರ್ ಆಗಿರುವ ಕಿರಣನ ತಾಯಿ ತಾನು. ನೋಡಿದವರೆಷ್ಟೋ ಜನ ಹೇಳಿದ್ದಾರೆ 'ನಿಮಗೆ ಅಷ್ಟು ದೊಡ್ಡ ಮಗ ಇದ್ದಾನೆಂದರೆ ನಂಬಲಿಕ್ಕೇ ಆಗೂದಿಲ್ಲ ಸರಸಕ್ಕಾ, ಚಿಕ್ಕವರಾಂಗ ಕಾಣ್ತೀರಿ.'

ಕುಲು ಕುಲು ನಗು. ಮನಸ್ಸು ತುಂಬಿ ಉಕ್ಕುತ್ತಿತ್ತು. ಮುಖ ರಂಗೇರುತ್ತಿತ್ತು. ಎಲ್ಲರೂ ತನ್ನ ಕಡೆಗೇ ನೋಡುತ್ತಿದ್ದಾರೆಯೆ? ಕಾಲು ನೆಲದ ಮೇಲೆ ಇರುತ್ತಿರಲಿಲ್ಲ. ಹಗುರಾಗಿ ಗಾಳಿಯಲ್ಲೇ ಹಾರಾಡುತ್ತಿದ್ದೆ. ಬೇರೆಯವರ ದೃಷ್ಟಿಯಲ್ಲಿ ಎಷ್ಟು ಸುಖಿ ತಾನು. ಸ್ವರ್ಗಸುಖ ಸೂರೆಗೊಂಡಿದೆ ತನ್ನ ಮನೆಯಲ್ಲಿ. ತನ್ನ ಪ್ರೊಫೆಸರ್ ಹುದ್ದೆ, ಸಂಗೀತ ಕ್ಷೇತ್ರದಲ್ಲಿ ಹೆಸರಾದ ದಿವಾಕರ, ಚಿಕ್ಕ ವಯಸ್ಸಿನಲ್ಲಿಯೇ ಅಮೆರಿಕಕ್ಕೆ ಹಾರಿಹೋದ ಕಿರಣ. ಏನಿದೆ ಕೊರತೆ? ಜೀವನದಲ್ಲಿ ಇನ್ನೇನು ಬೇಕು? ಉಹುಂ, ಏನೂ ಇಲ್ಲ. ಹೌದಾ? ಮನದ ಮೂಲೆಯಲ್ಲಿ ನೋವಿನ ಎಳೆಯ ಸಣ್ಣ ಝೇಂಕಾರ. ದಿವಾಕರನ ಸಿತಾರಿನ ಪ್ರತಿಧ್ವನಿಯಲ್ಲಿ ಮುಚ್ಚಿಹೋಗುವಂತಿದೆ ತನ್ನ ಒಳಗಿನ ದನಿ.

'ಪುಣ್ಯಾ ಮಾಡಿ ಬಂದೀರಿ ಸರಸ್ವತಿ. ಒಬ್ಬನs ಮಗಾ ಆದರೂ ಶಾಣ್ಯಾ ಅದಾನ.' ಕಿರಣ ವಿದೇಶಕ್ಕೆ ಹೊರಟಾಗ ತನ್ನ ಕಲೀಗ್ಸ್ ಅಭಿನಂದಿಸಿದ್ದರು.

ಕಷ್ಟಪಟ್ಟು, ತನ್ನ ಸುಖ ಸಂತೋಷ ಎಲ್ಲ ತ್ಯಾಗಮಾಡಿ ಬೆಳೆಸಿದ್ದು ಇವರಿಗೆಷ್ಟು ಅರ್ಥವಾದೀತು. ಪುಣ್ಯ ಅಂತೆ ಪುಣ್ಯ. ತನ್ನ ಒಳಗೇನೂ ಸಂತೋಷವಿರಲಿಲ್ಲ. ಬದಲು 'ಮಗಾ ಸ್ವಲ್ಪ ಢಡ್ಡ ಆಗಿದ್ದರ ಛೊಲೋ ಆಗ್ತಿತ್ತೋ ಏನೋ'. ವಿಚಿತ್ರ ಆದರೆ ಅನಿಸಿದ್ದು ಸತ್ಯ. ಅದರ ಪರಿಣಾಮ ಈಗ ಕಾಣ್ತಿದೆ. ತನ್ನ ಭಯ ನಿಜವಾಗಿದೆ. ಎರಡು ವರ್ಷದ ಹಿಂದೆ ಭಾರತಕ್ಕೆ ಬಂದು ಹೋದ ಕಿರಣ, ಅಮೆರಿಕದಲ್ಲಿಯೇ ಸೆಟಲ್ ಆಗುವ ತಯಾರಿಯಲ್ಲಿದ್ದಾನೆ. ತಾನು ಮದುವೆ ಆಗಲಿರುವ ಹುಡುಗಿಯ ಬಗ್ಗೆ ವಿವರವಾಗಿ ಹೇಳುತ್ತೇನೆಂದು ನಿನ್ನೆ ಫೋನ್ ಮಾಡಿದ್ದ. ನಾಳೆ ಅವನ ಫೋನ್ ಬರಬಹುದು... ಉಸ್...

ನೋವಿನ ಇನ್ನೊಂದು ಎಳೆ ಸದಾಕಾಲ ತಾನು ಇದ್ದೇನೆಂದು ಸಾರುತ್ತಲೇ ಇದೆ. ಕಿರಣ ಹುಟ್ಟಿ ನಾಲ್ಕು ವರ್ಷಗಳ ಮೇಲೆ ಕೈಗೆ ಬಂದ ಕರ್ಪುರದ ಗೊಂಬೆ ಯಾಮಿನಿ. ನಾಲ್ಕಾರು ವರ್ಷ ಆಟವಾಡಿ ಇದ್ದಕ್ಕಿದ್ದಂತೆ ಕರಗಿಹೋಯಿತು. ದಿವಾಕರ ನೌಕರಿಗೆ ರಾಜೀನಾಮೆ ಕೊಟ್ಟು ಮೂರು ತಿಂಗಳಾಗಿತ್ತು. ಸಂಗೀತ ಕಾರ್ಯಕ್ರಮಕ್ಕೆ ಊರೂರು ತಿರುಗುತ್ತಿದ್ದ. ಮಗಳ ಕೊನೆಯ ಗಳಿಗೆಯಲ್ಲಿ ಇರಲಾರದ್ದಕ್ಕೆ ತುಂಬ ಸಂಕಟಪಟ್ಟಿದ್ದ. ತಪ್ಪು ಮಾಡಿದಂತೆ ಮನದಲ್ಲೇ ಕೊರಗುತ್ತಿದ್ದ. ಮಾಡಲು ಕೆಲಸವಿಲ್ಲದೆ ಕಾಲ ಕಳೆಯಲು ಒದ್ದಾಡುತ್ತಿದ್ದ. ದಿನ ನೂಕುತ್ತಿದ್ದರು

ಅಷ್ಟೆ. ಮರೆವು ಮನುಷ್ಯನಿಗೊಂದು ವರ. ಕ್ರಮೇಣ ಮನಸ್ಸು ಸ್ಥಿಮಿತಕ್ಕೆ ಬಂದು ಸುಧಾರಿಸಿಕೊಂಡಿದ್ದರು. ಸಿತಾರಿನ ಧೂಳು ಝಾಡಿಸಿ ಕೈಗೆತ್ತಿಕೊಂಡಿದ್ದ ದಿವಾಕರ.


..... ಸಂಜೆ ತಲೆಗೆ ಮೆಹಂದಿ ಹಚ್ಚಿಕೊಳ್ಳುತ್ತಿದ್ದಾಗ ಜಾನಕಿ, ತನ್ನ ಅಕ್ಕನ ನಾದಿನಿ ಬಂದಿದ್ದಳು. ಅವಳು ಇರುವುದು ವಿನಾಯಕ ನಗರ, ತುಂಬಾ ದೂರ. ಅಪರೂಪಕ್ಕೊಮ್ಮೆ ಬರುವವಳು. 'ಸಂಜೆ ಕಾಲೇಜಿನಿಂದ ಬಂದಿರ್ತೀರಿ, ಕೂತು ಮಾತಾಡಬಹುದು ಅಂತ ತಡವಾಗಿ ಬಂದೆ' ಅಂತ ಮಾತು ಸುರುಮಾಡಿದವಳು ಏಳೂವರೆ ಆದರೂ ಏಳಲಿಲ್ಲ. ತಿನಿಸು-ಚಹಾ ಆಯಿತು. ಯಾರ್‍ಯಾರದೋ ಸುದ್ದಿ, ಮದುವೆ-ಮುಂಜಿ, ಓಡಿ ಹೋದದ್ದು, ಕಳವು ಆದದ್ದು ಎಲ್ಲಾ. ಬೇರೆಯವರ ಮನೆ ಕಳುವಾದಾಗ ಮಾತು ರಂಜನೀಯ. ಕೊನೆಗೆ ತಮ್ಮ ಮಹಿಳಾ ಮಂಡಳದವರೆಲ್ಲ ಕೂಡಿ ಮೌಂಟ್ ಅಬು ಪ್ರವಾಸಕ್ಕೆ ಹೋದದ್ದು, ಇನ್ನೂ ಎಲ್ಲೆಲ್ಲೋ ಹೋಗುವ ಪ್ಲಾನ್‌ಹಾಕಿದ್ದು ಎಲ್ಲಾ ಹೇಳಿದಳು.

'ಹಾಂಗೆಲ್ಲಾ ಟೂರಿಗೆ ಹೋದಾಗ ಮಕ್ಕಳನ್ನು ಎಲ್ಲಿ ಬಿಡ್ತೀ'? ಮನೆ, ಗಂಡ, ಮಗ, ನಾಯಿ... ಸರಸ್ವತಿಯ ಸಮಸ್ಯೆ.

'ಇಬ್ಬರನ್ನೂ ಅವ್ವನಲ್ಲಿ ಕಳಿಸಿದ್ದೆ. ಇವರಿಗೆ, ಕುಕ್ಕರ್ ಇಟಕೊಳ್ರಿ; ಇಲ್ಲಾಂದರ ಹೋಟೆಲ್ ಊಟಾ ಮಾಡ್ರಿ ಅಂತ ಹೇಳಿದ್ದೆ. ಅಲ್ಲ ಸರಸಕ್ಕಾ, ಬರೇ ಮನೀ, ಮನೀ ಕೆಲಸಾ ಅಂತ ಕೂತರ ನಮಗ ಬಿಡುಗಡಿ ಯಾವಾಗ? ನಾವು ಎಂದ ನೋಡೂದು ಹೊರಗಿನ ಜಗತ್ತು.? ಅವರೇನ ತಾವಾಗೇ ಕಳಿಸಿಕೊಡ್ತಾರ. ಜಗಳಾ ಮಾಡಿಯೇ ಹೋಗಿದ್ದೆ. ಸುಮ್ಮನ ಇದ್ದರ ನಿಮಗ ಏನ ಬೇಕು ಅಂತ ಕೇಳುವವರು ಯಾರು? ಆದರ ಒಮ್ಮೆ ಮನಿಯಿಂದ ಹೊರಗ ಹೋದಮ್ಯಾಲೆ ಭಾರಿ ಗಮ್ಮತ್ ಇರ್ತದ ಹಾಂ. ಸಣ್ಣ ಹುಡುಗರ ಹಾಂಗ ಕುಣೀತಿವಿ, ಹಾಡ್ತೀವಿ, ಬೇಕಾದ್ದು ಕೊಂಡು ತಿಂತೀವಿ. ಲೈಫ್‌ನಾಗ ಒಂದ ನಮೂನೆ ಹುರುಪು ಬರ್ತದ. ಎಂಜಾಯ್ ಮಾಡಿ ತಿರುಗಿ ಬಂದ ಮ್ಯಾಲೆ ಒಂದಕ್ಕೆರಡರಷ್ಟು ಕೆಲಸಾ ಮಾಡ್ತೀವಿ.'

ಜಾನಕಿಯ ಮಾತು ಕೇಳುತ್ತ ಮೈ ಮರೆತಿರಲಿಲ್ಲ ಸರಸ್ವತಿ. 'ಪ್ರವಾಸಕ್ಕೆಲ್ಲಾ ರೊಕ್ಕ ಬೇಕಲ್ಲ ಜಾನಕೀ, ನೀವೆಲ್ಲಾ ಗೃಹಿಣಿಯರು ಕಾಣ್ತದ. ವರ್ಕಿಂಗ್ ವಿಮೆನ್ ಅಲ್ಲ.?

'ಹೌದಕ್ಕಾ, ಇಬ್ಬರು, ಮೂವರು ಅಷ್ಟ ವರ್ಕಿಂಗ್ ಆದಾರ. ನಾವೆಲ್ಲಾ ತಿಂಗಳಾ ತಿಂಗಳಾ ಚೀಟಿ ತುಂಬಿದ ರೊಕ್ಕ ಉಳಿಸಿಕೊಂಡಿರತೀವಿ. ಅದನ್ನ ಬಂಗಾರಾ ಕೊಂಡೆ. ಸೀರಿಕೊಂಡೆ. ಪಾತ್ರಿ ಕೊಂಡೆ ಅಂತ ಉಳದ ಹೆಂಗಸರ ಹಾಂಗ ಖರ್ಚು ಮಾಡೂದಿಲ್ಲ. ನಮ್ಮ ಪ್ರವಾಸಕ್ಕ ಅದ s ರೊಕ್ಕ.'



ಕೊನೆಯ ಮಾತಿಗೆ ಇಬ್ಬರೂ ಜೋರಾಗಿಯೆ ನಕ್ಕಿದ್ದರು. ತಾವು ಉಳಿದ ಹೆಂಗಸರ ಹಾಗಲ್ಲ - ಮಾತು ಖುಷಿ ತಂದಿತ್ತು. ಇವರ ಮಾತಿನ ನಡುವೆ ಎರಡೆರಡು ಸಲ ದಿವಾಕರ ಹಾದು ಹೋಗಿದ್ದ. ಅವನ ಅಸಹನೆಯ ಕಾರಣ ತಿಳಿದಿತ್ತು ಸರಸ್ವತಿಗೆ. ಅವಸರದಲ್ಲಿ ಒಳಗೆ ಹೋಗಿ ಕುಕ್ಕರ್ ಇಟ್ಟು ಬಂದಿದ್ದಳು. ಎಂಟೂವರೆಗೆ ತಪ್ಪದೇ ದಿವಾಕರನ ರಾತ್ರಿ ಊಟವಾಗಲೇ ಬೇಕು. ನಂತರ ವಿಶ್ರಾಂತಿ. ಹತ್ತಕ್ಕೆ ಸಿತಾರ ಎತ್ತಿಕೊಂಡರೆ ರಾತ್ರಿ ಹನ್ನೆರಡರವರೆಗೆ ಎರಡು ತಾಸು ಭರಪೂರ ಪ್ರ್ಯಾಕ್ಟೀಸ...

ಮದುವೆಯಾದ ಹೊಸದರಲ್ಲಿ ಬೆಡ್ ರೂಮಿನಲ್ಲಿಯೇ ಸಿತಾರ ಬಾರಿಸುತ್ತಿದ್ದ ದಿವಾಕರ. ಝೇಂಕಾರ ಕಿವಿ ತುಂಬಿಕೊಂಡು, ಕಣ್ಣುಮುಚ್ಚಿ ಆಲಿಸುತ್ತ ತಾನು ಹಾಸಿಗೆಯಲ್ಲಿ ಒರಗುತ್ತಿದ್ದಳು.



ಬೆಳಿಗ್ಗೆ ಐದಕ್ಕೆ ಎಚ್ಚರಗೊಂಡ ಕಣ್ಣುಗಳು ಯಾವ ಮಾಯದಲ್ಲೋ ಮುಚ್ಚಿರುತ್ತಿದ್ದವು.

ಬಿಸಿ ಉಸಿರು, ಬೆಚ್ಚನೆಯ ದೇಹ, ಕಣ್ಣುಗಳ ಮೇಲೆ ಒರಟು ತುಟಿಗಳು, ಸಿಗರೇಟಿನ ವಾಸನೆ.... ಕಣ್ಣು ತೆರೆಯದೆ,

'ರಿಯಾಜ ಮುಗೀತೇನ. ಸಾರಿ ದಿವೂ, ನನಗೆ ನಿದ್ದಿ ಹತ್ತಿತ್ತು.'

ದಿವಾಕರನ ಮುಖ ಸಮೀಪದಲ್ಲಿತ್ತು. ಮತ್ತೆ ಮತ್ತೆ ಕಣ್ಣು, ಕೆನ್ನೆ, ತುಟಿ ಮುದ್ದಿಸುತ್ತಿದ್ದ.


'ಇಷ್ಟ ಛಂದನ್ನ ಹುಡುಗಿ, ಕೈಗೆ ಸಿಗೂ ಹಾಂಗ ಮಲಗಿ, ನಿರೀಕ್ಷಾ ಮಾಡ್ತಾ ಇದ್ದರ ಸಿತಾರ ಕಡೆ ಲಕ್ಷ್ಯ ಹ್ಯಾಂಗ ಉಳೀತದ. ನಿನ್ನ ಕಣ್ಣು, ತೆರೆದರೂ ಛಂದ, ಮುಚ್ಚಿದರೂ. ಕಣ್ಣಿನ ಉಬ್ಬು, ತಗ್ಗು, ನೀಳ ರೆಪ್ಪಿ, ಇದಕ ಒಂದು ಅಂಚು ಕೊಟ್ಟಾಂಗ ಎಸಳು ಹುಬ್ಬು, ಈ ಮೊಂಡ ಮೂಗು.....' ಮೂಗು ಹಿಂಡುತ್ತಿದ್ದ ದಿವಾಕರ ನೊಡನೆ ಕೊಸರಾಡಿ ಬೆನ್ನ ಮೇಲೆ ಗುದ್ದುತ್ತಿದ್ದಳು, ಹತ್ತಿರ ಎಳೆದುಕೊಳ್ಳುತ್ತ....

ಸುಖದ ಸಂವೇದನೆಯ ಮಧ್ಯೆ ಕಣ್ಣು ತೆರೆದಳು ಸರಸ್ವತಿ. ಅಲ್ಲೇನಿತ್ತು? ಬರಿದಾದ ಹಾಸಿಗೆ. ಬೇರೊಂದು ಕೋಣೆಯಿಂದ ತಂತಿಗಳ ಝುಣತ್ಕಾರ ಕೇಳುತ್ತಿತ್ತು. ಸಂಗೀತ ತೀವ್ರಗತಿಯಲ್ಲಿತ್ತು. ಇನ್ನೇನು ಮುಗೀತು. ರಿಯಾಜ ಮುಗಿದರೂ ದಿವಾಕರ ಈ ಕೋಣೆಗೆ ಈಗಲೇ ಬರುವುದಿಲ್ಲ. ಡ್ರಿಂಕ್ಸ್ ಹಾಕಿಕೊಂಡು, ಸಿಗರೇಟು ಹಚ್ಚಿ ಓದುತ್ತಾ ಕೂಡ್ರುತ್ತಾನೆ. ಯಾವಾಗ ಬಂದು ಮಲಗುತ್ತಾನೋ ತನಗೆ ಗೊತ್ತೇ ಆಗುವದಿಲ್ಲ. ಮರುದಿನ ಅವನು ಏಳುವುದೇ ಒಂಬತ್ತರ ಮೇಲೆ; ತಾನು ಕಾಲೇಜಿಗೆ ಹೋಗುವ ಗಡಿಬಿಡಿಯಲ್ಲಿದ್ದಾಗ. ಸ್ನಾನ, ಊಟ, ತಿಂಡಿ, ನಾಲ್ಕಾರು ಮಾತು. ಟೇಬಲ್ ಮೇಲೆ ಎಲ್ಲ ಜೋಡಿಸಿ ಇಟ್ಟರೆ ಹಸಿವಾದಾಗ ಎದ್ದು ಊಟ ಮಾಡುತ್ತಾನೆ

ಅಷ್ಟೇ. ಹತ್ತಿರವಿದ್ದೂ ಎಷ್ಟೋ ದೂರ.... ಕೈಗೆ ನಿಲುಕಲಾರದಷ್ಟು.

ಮುಷ್ಠಿಯಿಂದ ಉಸುಕು ಜಾರಿಹೋಗುವಂತೆ ಕ್ಷಣ, ತಾಸು, ದಿನಗಳು ಕೆಳಗೆ ಸುರಿದು ಹೋಗುತ್ತಿವೆ, ಮತ್ತೆ ಎತ್ತಿಕೊಳ್ಳಲು ಬಾರದಂತೆ. ಮಗನ ನೆನಪು ತೀವ್ರವಾದಾಗ, ದಿವಾಕರನ ಸಾಮೀಪ್ಯ ಸಿಗದೆ ಒಂಟಿಯಾದಾಗ, ಖಾಲಿಯಾದ ಮನಸ್ಸು ಖಿನ್ನವಾದಾಗ, ಕೊಡ ತುಂಬಿ ಹರಿಯುವಂತೆ ಕಣ್ಣೀರು ಸೋರುತ್ತದೆ. ಮನದ ಅಳಲನ್ನು ಹೇಳಿಕೊಳ್ಳಲು ಯಾರಿದ್ದಾರೆ? ಕಲೀಗ್ಸ್ ಶಾಂತಾ, ಜಲಜ ಅವರೊಡನೆ ಹೇಳಿಕೊಂಡರೆ ಹುಚ್ಚಿ ಎಂದು ನಗುವವರೇ. ಹತ್ತಿರದ ಸ್ನೇಹಿತರಂತೂ ಇಲ್ಲವೇ ಇಲ್ಲ. ಎಲ್ಲರೂ 'ಹಾಯ್' 'ಹಲೋ'ಗಳೇ. ಯುವಜನೋತ್ಸವದ ಕಾರ್ಯಕ್ರಮಗಳಿಗೆ ಕೂಡಿ, ಚರ್ಚೆ ಮಾಡಿ, ಓಡಾಡಿದ್ದಕ್ಕೆ ಪ್ರೊ॥ ಸುದರ್ಶನಗೂ ತನಗೂ ಜೋಡಿಸಿ ಕತೆ ಕಟ್ಟಿದ್ದರಲ್ಲ. ಅಬ್ಬಾ! ನೆನಪಾದರೆ ಈಗಲೂ ಜಿಗುಪ್ಸೆಯಾಗ್ತದೆ. ಕಟ್ಟುಕತೆಗೆ ಕೈಕಾಲು ಹುಟ್ಟಿ ದಿವಾಕರನವರೆಗೂ ಬಂದೀತೆಂದು ಹೆದರಿ ತಾನೇ ಒಂದು ದಿನ ಎಲ್ಲ ಅವನ ಮುಂದೆ ಹೇಳಿ ಅತ್ತುಬಿಟ್ಟಿದ್ದೆ. 'ಶಿಟ್, ಅದನ್ನೆಲ್ಲಾ ಮರ್‍ತ್ಬಿಡು' ಅಂದಿದ್ದ. ಅಂದಿನಿಂದ ತನ್ನ ಬದುಕು ಮತ್ತೂ ಯಾಂತ್ರಿಕವಾಗಿದೆ. ಕಾಲೇಜು, ಮನೆ, ಕೆಲಸ, ಲೆಕ್ಚರ್, ಪೇಪರ್ ಅಷ್ಟೇ.

ಛೀ, ಇವತ್ತೇನಾಗೇದ ತನಗ. ಏನೇನೋ ನೆನೆಸಿಕೊಳ್ತೀನಿ. ಮನಸ್ಸಿಗೆ ಎಷ್ಟು ಸಮಾಧಾನ ಹೇಳಿಕೊಂಡರೂ ಅಳು ಬರಲಿಕ್ಕೆ ಹತ್ತೇದ. ಊಟಕ್ಕೆ ಕೂತಾಗ ದಿವಾಕರ ಸಿಟ್ಟಿಲೆ ಒಂದೆರಡು ಮಾತು ಅಂದರ ಇಷ್ಟ್ಯಾಕ ಹಚಿಕೋಬೇಕು? ಸಿತಾರ ರಿಯಾಜಕ ತಡಾ ಆತಂತ ಅವನಿಗೆ ಸಿಟ್ಟು ಬಂತು. ಆದರ ನಾ ಏನ ಬೇಕೂಂತ ತಡಾ



ಮಾಡ್ಲಿಲ್ಲ. ಮನೀ ಅಂದಮ್ಯಾಲೆ ನಾಕ ಜನಾ ಬರೋವರು ಹೋಗೋವರು ಇದ್ದು ಇರತಾರ. ಮಂದಿ, ಬಳಗ, ಸಮಾಜ ಬಿಟ್ಟು ಬದಕಲಿಕ್ಕೆ ಆಗ್ತದೇನು? ದಿವಾಕರ ಮೊದಲ ಹಿಂಗ ಇದ್ದಿದ್ದಿಲ್ಲ. ಸಿತಾರ, ಸಂಗೀತ ಪ್ರೋಗ್ರಾಂ, ಪತ್ರಿಕೆ, ಫೋಟೋ, ಪ್ರಚಾರ ಬಿಟ್ಟರ ಅವನ ಮಟ್ಟಿಗೆ ಬೇರೆ ಜಗತ್ತಿನ ಬಾಗಿಲು ಮುಚ್ಚಿ ಬಿಟ್ಟಾವ. ಜನರ ಆದರ, ಸ್ವಾಗತ, ಸತ್ಕಾರದಿಂದ ಪೂರ್ಣ ತೃಪ್ತಿ ಅದ ಅವನಿಗೆ. ಆದರ ನನಗ... ಏನದ?

ದಿವಾಕರನ ಜೊತೆ ಹೋದಾಗಲೆಲ್ಲ ತಾನೊಂದು ಬೇರೆ ಲೋಕದ ಪ್ರಾಣಿ ಏನೋ ಎಂಬಂತೆ ವಿನಯ, ಗೌರವದಿಂದ ದೂರ ನಿಂತು ಕೆಲವರು ನೋಡಿದರೆ, ಇನ್ನು ಕೆಲವರು ಇವಳಿಗೆ ಇಂಥ ಗಂಡ ಸಿಕ್ಕಿದ್ದಾನಲ್ಲ ಅಂತ ಹೊಟ್ಟೆಕಿಚ್ಚಿನಿಂದ ದುರುಗುಟ್ಟಿ ನೋಡ್ತಾರೆ.

'ಏನ್ರೀ ನೀವು ಸಿತಾರ ಬಾರಿಸಲಿಕ್ಕೆ ಕಲೀಲಿಲ್ಲೇನು?' ಮಾತಿನಲ್ಲೆ ಚುಚ್ಚುತ್ತಾರೆ ಇನ್ನು ಕೆಲವರು. ಇಬ್ಬರೂ ಸಿತಾರ ಬಾರಿಸ್ತಾ ಕೂತರೆ ಮನೆ ನಡಸೋರು ಯಾರು ಅಂತ ಯೋಚಿಸೋದೆ ಇಲ್ಲ ಈ ಜನ. ತಾನಾದರೂ ಏನು ಕಡಿಮೆ? ಗಂಡನನ್ನು ಅವರೆಲ್ಲ ಹೊಗಳುತ್ತಿರುವಾಗ ಮುಗುಳ್ನಗುತ್ತ, ಎಲ್ಲಾ ನಿಮ್ನಿಮ್ಮ ಪ್ರೀತಿ, ಅಭಿಮಾನ ಅಂತ ಕೈ ಮುಗಿದು, ನಾಟಕೀಯವಾಗಿ ಮಾತಾಡುತ್ತ, ಒಳಗೊಳಗೆ ಬೇಗ ಈ ಗದ್ದಲದಿಂದ ಪಾರಾಗಿ ಮನೆಗೆ ಹೋದರೆ ಸಾಕು ಅಂತ ಚಡಪಡಿಸ್ತಿರ್ತೇನೆ.

'ಓ ಸರಸ್ವತಿ ಬರ್ರಿ. ಇಲ್ಲಿ ಬರ್ರಿ. ಮುಂದಿನ ಸಾಲಿನ್ಯಾಗ. ಇವರು ದಿವಾಕರರ ಹೆಂಡತಿ'

'ಹೆ ಹ್ಹೆ ತುಂಬಾ ಸಂತೋಷವಾಯ್ತು ನಿಮ್ಮ ಭೆಟ್ಟಿಯಾಗಿ. ದಿವಾಕರರ ಹೆಂಡತಿಯಾಗಿ ಪುಣ್ಯಾ ಮಾಡೀರಿ. ದಿನಾ ಮನಿಯೊಳಗ ಇಂಥಾ ದಿವ್ಯ ಸಂಗೀತ ಕೇಳ್ತೀರಿ. ಹೆ ಹ್ಹೆ ನಮಸ್ಕಾರ.'

'ಇಲ್ನೋಡ್ರಿ ದೇಸಾಯರ, ಇವರs ಸಿತಾರ ಪಟು ಪಂಡಿತ ದಿವಾಕರರ ಪತ್ನಿ.'

ದಿವಾಕರರ ಪತ್ನಿ, ಹೆಂಡತಿ, ಅರ್ಧಾಂಗಿನಿ, ಎಲ್ಲಿ ಹೋದರೂ ಇದೇ ತನ್ನ ಐಡೆಂಟಿಟಿ. ತಲೆ ಚಿಟ್ಟು ಹಿಡಿದು ಹೋಗಿದೆ. ಯಾಕೆ? ತಾನೂ ಪ್ರೊಫೆಸರ್. ನೂರಾರು ಜನ ಸ್ಟೂಡೆಂಟ್ಸಿಗೆ ಕಲಿಸಿದ್ದೇನೆ. ಅವರೆಲ್ಲರ ಪ್ರೀತಿ, ಗೌರವ ತನಗಿದೆ. ಅರ್ಥಶಾಸ್ತ್ರದಲ್ಲಿ ಲೇಖನಗಳು ಪ್ರಕಟವಾಗಿವೆ. ಪುಸ್ತಕ ರೂಪದಲ್ಲೂ ಬಂದಿದೆ. ತನಗೊಂದು ವ್ಯಕ್ತಿತ್ವವಿದೆ. ಅಭಿರುಚಿ, ಆಲೋಚನೆಗಳಿವೆ. ಮನೆ ಜವಾಬ್ದಾರಿಯೂ ಇದೆ. ಇದೆಲ್ಲಾ ಜನರಿಗೆ ಕಾಣೋದೇ ಇಲ್ಲವೇ? ಸಿಟ್ಟಿನಿಂದ ಮನಸ್ಸು ಬಂಡೇಳುತ್ತಿತ್ತು. ಮತ್ತೆ ಮತ್ತೆ ಇದರ ಪುನರಾವರ್ತನೆಯಾಗುತ್ತ ಬಂದಂತೆ ತನ್ನ ಆಸಕ್ತಿ ಕಡಿಮೆಯಾಗಿ ಈಗೀಗ ಗಂಡನೊಡನೆ ಪ್ರೋಗ್ರಾಂಗಳಿಗೆ ಹೋಗುವದನ್ನೇ ಬಿಟ್ಟಿದ್ದಾಳೆ.

ಈ ಬದಲಾವಣೆ ಗುರುತಿಸಿದ ಜನ ತಮ್ಮ ಕುಹಕ ಬುದ್ಧಿಗೆ ತಕ್ಕಂತೆ ದಿವಾಕರನೊಡನೆ ಯಾರ್‍ಯಾರೋ ಹುಡುಗಿಯರನ್ನು ಜೋಡಿಸಿ ಆಡಿಕೊಳ್ತಾರ. ಗಂಡಸಿನ ಬುದ್ಧಿ ಹೀಗೇ ಅಂತ ಹೇಳಲಿಕ್ಕೆ ಆಗೂದಿಲ್ಲ. 'ಹಾವು ಸಣ್ಣದು ಅನಬಾರದು, ಗಂಡಸು ನನ್ನವ ಅನಬಾರದು' ಅಂತ ಅಜ್ಜಿ ಹೇಳತಿದ್ದ ಮಾತು ಈಗೂ ನೆನಪದ ನನಗ. ಆದರೂ... ದಿವಾಕರನ ಬಗ್ಗೆ ಇಂಥಾ ಮಾತು ನಂಬಲಿಕ್ಕೆ ಯಾಕೋ ಮನಸ್ಸು ಒಪ್ಪೂದಿಲ್ಲ... ದಿವಾಕರ, ದಿವೂ ಇನ್ನೂ ಬರಲಿಲ್ಲ ಮಲಗಲಿಕ್ಕೆ. ಹೋಗಿ ಕರೀಲೇನು? ಹುಂ.... ಉಹುಂ.... ಅಭಿಮಾನ ಅಡ್ಡ ಬರ್ತದ. ಬಂದಾಗ ಬರಲಿ....

..... ದಿನದಂತೆ ಬೆಳಿಗ್ಗೆ ಬೇಗ ಎಚ್ಚರಗೊಂಡಿದ್ದ ಸರಸ್ವತಿ ಗಾಢ ನಿದ್ದೆಯಲ್ಲಿದ್ದ ಗಂಡನ ಮುಖ ನೋಡಿದಳು. ಕಾಲನ ದಾಳಿಗೆ

ಸಿಕ್ಕ ಮುಖ, ಉಬ್ಬಿದ ಕಣ್ಣುಗಳ ಕೆಳಗಿನ ಕಪ್ಪು. ವರ್ತುಲ, ಬಿಳಿ ತಲೆ, ಪೆಚ್ಚು ಗಲ್ಲ, ದಿಟ್ಟಿಸಿದಳು. ಜೊತೆಗೇ ಇದ್ದರೂ ದಿವಾಕರನನ್ನು ಸರಿಯಾಗಿ ನೋಡಿಲ್ಲವೇ? ಎಷ್ಟು ಸೊರಗಿದ್ದಾನಲ್ಲ! ಬತ್ತಿ ಹೋದ ಹಣ್ಣಾಗಿದ್ದಾನೆ. ಪಾಪ! ವಿಶ್ರಾಂತಿ ಇಲ್ಲದ ದುಡಿತ. ಯಾತಕ್ಕಾಗಿ...? ಹಣಕ್ಕಾಗಿ ಅಂತೂ ಅಲ್ಲ. ಆರಾಮವಾಗಿ ಮನೆಯಲ್ಲಿದ್ದರೆ ಸಾಕು. ಇಬ್ಬರೂ ಜೊತೆಗಿದ್ದರೆ ಒಂಟಿತನ ಕಾಡುವುದಿಲ್ಲ. ಮನದ ತಳಮಳದಿಂದ ತಲೆ ಬಿಸಿಯಾಗುವುದಿಲ್ಲ. ತನ್ನದೇ ಹುಚ್ಚುತನ. ದಿವಾಕರನಿಗೆ ಒಂಟಿತನ ಕಾಡೋದಿಲ್ಲ. ಸಿತಾರ ಜೊತೆಗೆ ಇದೆಯಲ್ಲ. ತಾನು.... ಸರಸ್ವತಿ.... ಈಗ ಅವನಿಗೆ ಬೇಕಾಗಿಲ್ಲ.. ಹುಂ ಅವನ ಪಾಲಿಗೆ ತಾನು ಇಲ್ಲ.

ಕೈ ಜಾರಿ ಹೋಗುತ್ತಿರುವವರನ್ನು ಹಿಡಿದುಕೊಳ್ಳುವಂತೆ ಗಂಡನನ್ನು ಗಟ್ಟಿಯಾಗಿ ಅಪ್ಪಿಕೊಂಡು, ದೀರ್ಘವಾಗಿ ಮುತ್ತಿಟ್ಟಳು, ಸರಸ್ವತಿ. ಅರೆನಿದ್ದೆಯಲ್ಲಿ ಕೆಂಪು ಕಣ್ಣು ತೆರೆದು ನೋಡಿದ ದಿವಾಕರ ಮುಖ ಕಿವುಚಿ, ಅವಳನ್ನು ಕೊಸರಿ, ದೂರ ತಳ್ಳಿ 'ಥೂ ಎದ್ದ ಹೋಗ ಅತ್ಲಾಗ' ಎಂದು ಕಿರುಚಿ ಹೊರಳಿ ಮಲಗಿದ.

ಅಳು ಉಕ್ಕಿಬಂದು ಮುಖ ಮುಚ್ಚಿಕೊಂಡು ಬಿಕ್ಕಿದಳು. ಬೆರಳ ಸಂದಿಯಿಂದ ನೀರು ಜಾರುತ್ತಿತ್ತು. ಬೆನ್ನ ಮೇಲಾಡಲು, ತಲೆ ನೇವರಿಸಲು ಹತ್ತಿರ ಯಾವ ಕೈಯೂ ಇಲ್ಲ. ಗಂಡ, ಮಕ್ಕಳು ತನ್ನೊಬ್ಬಳನ್ನೆ ಬಿಟ್ಟು ಎಲ್ಲಾ ದೂರ ಹೋಗಿದ್ದಾರ. ತನಗೆ ಯಾರೂ ಇಲ್ಲ. ಈ ಮನೆಯೂ ತನ್ನದಲ್ಲ. ತಾನೂ ಎಲ್ಲಾದರು ಹೋಗಿ ಬಿಡಬೇಕು....

ಗೊರಕೆ ಹೊಡೆಯುತ್ತಿದ್ದ ದಿವಾಕರನನ್ನು ನೋಡುತ್ತ, ಹಾಸಿಗೆ ಬಿಟ್ಟೆದ್ದು ಚಹಾ ಕುಡಿದ ಸರಸ್ವತಿ ಡೈರೆಕ್ಟರಿ ತೆಗೆದು ನಂಬರ್ ಹುಡುಕಿದಳು.

'ಹಲೋ, ಜಾನಕೀ, ಗುಡ್ ಮಾರ್ನಿಂಗ್, ಅಪರೂಪಕ್ಕ ಮಾತಾಡ್ತೀನಿ ಅಂದ್ಯಾ? 'ಹೌದ ಸ್ವಲ್ಪ ಕೆಲಸ ಅದ. ನಿಮ್ಮ ಮಂಡಳದ ಮುಂದಿನ ಟೂರು ಎಲ್ಲಿಗೆ? ಕೊಡೈಕೆನಾಲ್? ಗುಡ್. ಎಂದು ಹೋಗ್ತೀರಿ? ಮುಂದಿನ ತಿಂಗಳ? ಸರಿ, ನಿಮ್ಮ ಜೋಡಿ ನನಗೂ ಒಂದು ಸೀಟು ಬುಕ್ ಮಾಡ್ತೀಯಾ? ಪ್ಲೀಜ. ಆಯ್ತು ಥ್ಯಾಂಕ್ ಯು.'

ಸುತ್ತ ಹಸಿರು ಗುಡ್ಡಗಳು, ವಿಸ್ತಾರವಾದ ನೀಲಿ ಸರೋವರ, ಬೊಟಾನಿಕಲ್ ಗಾರ್ಡನ್‌ನಲ್ಲಿ ಬಣ್ಣ ಬಣ್ಣದ ಬಯಲಾಟ. ಆಳವಾದ ಕೊಳದಿಂದ ಕೈಗೆ ಎಟುಕುವಂತೆ ಮೇಲೆ ಏರಿ ಬರುತ್ತಿರುವ ಬಿಳಿ ಮಂಜಿನ ಮಾಯಾಜಾಲ.

'ಎಲ್ಲಿಂದ ಎಲ್ಲಿಗೆ ಬಂದೆ. ಇದೇ ಬೇರೆ ಲೋಕ. ಮಧುರೈಯಿಂದ ಕೊಡೈಕೆನಾಲ್. ಉರಿಯುವ ಅಗ್ಗಿಷ್ಟಿಕೆಯಿಂದ ಹಸಿರು ಫ್ರಿಜ್ಜಿಗೆ. ಪ್ರಕೃತಿಯ ಸೋಜಿಗ. ಬಿಸಿ ಹೆಚ್ಚಾದರೆ ಮೈ ಕಮರುತ್ತದೆ. ತಂಪು ಅತಿಯಾದರೆ ಈ ದೇಹ ಮಂಜಿನ ಗಡ್ಡೆ. ಯಾವುದೂ ಅತಿಯಾದರೆ ಒಳ್ಳೆಯದಲ್ಲ. ಮಿತಿಯಲ್ಲೇ ಇರಬೇಕು. ಈ ಬದುಕೂ ಹಾಗೆಯೇ.....'

ಎತ್ತರವಾದ ಸ್ಥಳದಲ್ಲಿ ಕಟಾಂಜನಕ್ಕೆ ಆತು ಒಬ್ಬಳೇ ನಿಂತಿದ್ದಳು ಸರಸ್ವತಿ. ಅವಳು ತನ್ನ ಯೋಚನೆಗಳ ಗುಂಗಿನಲ್ಲಿ ಏಕಾಂಗಿ.

'ಆಹಾ! ನನ್ನ ಮದುವೆಯಂತೆ, ಓಹೋ! ನನ್ನ ಮದುವೆಯಂತೆ, ಟಾಂ ಟಾಂ ಟಾಂ' ಗೊಗ್ಗರದನಿಯಲ್ಲಿ ಎರಡು ಮಕ್ಕಳ ತಾಯಿ ಪದ್ಮಾ ಹಾಡಿದಾಗ ಗುಂಪು ಗೊಳ್ಳೆಂದು ನಕ್ಕಿತು. ಹಿಂದೆಯೆ ಚಪ್ಪಾಳೆ, ಕೇಕೆ, ಅತ್ತಿತ್ತ ತಿರುಗಾಡುತ್ತಿದ್ದ ಪ್ರವಾಸಿಗರು ಹೊರಳಿ ನೋಡಿ ನಕ್ಕರೂ ಈ ಹೆಂಗಸರಿಗೆ ಎಚ್ಚರವಿಲ್ಲ. ಎಲ್ಲರೂ ಚಪ್ಪಾಳೆ ತಟ್ಟಿ, ಹಾಡಿ, ನಗುತ್ತಿದ್ದಾರೆ.


ಎಷ್ಟು ಸ್ವಚ್ಛಂದವಾದ ನಡತೆ. ಮುಕ್ತ

ಮನಸ್ಸಿನ ನಗು. ಮಕ್ಕಳಿಗಿಂತಲೂ ಸಣ್ಣ ಮಕ್ಕಳು. 'ಚಿಂತೆಯನ್ನು ಮನೆಯಲ್ಲೆ ಕಟ್ಟಿಟ್ಟು ಪ್ರವಾಸಕ್ಕೆ ಹೋಗುತ್ತೇವೆ' ಅಂದಿದ್ದಳಲ್ಲ ಜಾನಕಿ, ಇಲ್ಲಿಯೂ ಅದನ್ನೇ ತಂದರೆ ಉತ್ಸಾಹ, ಉಲ್ಲಾಸ ಹೇಗೆ ಬಂದೀತು? ಹೌದು, ಅವಳು ಅನ್ನುವುದೂ ನಿಜ. ಆದರೆ ತಾನು ಹಿಂದೆ ಬಿಟ್ಟುಬಂದದ್ದನ್ನೆಲ್ಲ ತನಗೇಕೆ ಮರೆಯಲು ಸಾಧ್ಯವಾಗುತ್ತಿಲ್ಲ?

'ನಾನು ಸ್ವಲ್ಪ ದಿನಾ ಊರಿಗೆ ಹೋಗಿ ಬರ್ತೇನಿ,' ಪ್ರವಾಸದ ತಯಾರಿ ಎಲ್ಲ ಮುಗಿದ ಮೇಲೆ ದಿವಾಕರನಿಗೆ ಹೇಳಿದ್ದಳು.

'ಎಲ್ಲಿಗೆ ಹೋಗ್ತಿ? ನೀ ಒಬ್ಬಾಕೀನ' ನಂಬದಂತೆ ಸಂಶಯದಿಂದ ಕೇಳಿದ್ದ. ತನ್ನನ್ನ ಬಿಟ್ಟು ಇವಳೆಲ್ಲಿ ಹೋಗ್ತಾಳೆ ಎನ್ನುವ ಭಾವವಿತ್ತು ಪ್ರಶ್ನೆಯಲ್ಲಿ.

'ನಾ ಒಬ್ಬಾಕಿನ ಹೋಗೂದಿಲ್ಲ. ಜಾನಕಿಯ ಮಹಿಳಾ ಮಂಡಳದವರ ಜೊತಿಗೆ ಮಧುರೈ, ಕೊಡೈಕೆನಾಲ್, ಪಳನಿ ಪ್ರವಾಸಕ್ಕೆ ಹೋಗಿಬರ್ತೀನಿ.'



'ನಾನೂ ಭೊಪಾಳಕ್ಕ ಸಂಗೀತ ಸಮ್ಮೇಳನಕ್ಕ ಹೋಗಬೇಕು. ನೀನು ಈಗ ಯಾಕ ಹೋಗ್ತೀ?', ಅಸಮಾಧಾನವಿತ್ತು ದನಿಯಲ್ಲಿ.

'ನಿಮ್ಮ ಸಂಗೀತ ಕಚೇರಿ, ಟೂರು, ಸಮ್ಮೇಳನ ಯಾವಾಗಲೂ ಇದ್ದs ಇರತಾವಲ್ಲ. ನಿಮಗ ಬಿಡುವು ಇರೂದಿಲ್ಲ. ನನ್ನ ಎಲ್ಲಿಗೂ ಕರಕೊಂಡು ಹೋಗೂದಿಲ್ಲ. ನಾ ಇನ್ನ ಯಾವಾಗ ನೋಡಬೇಕು? ಯಾರ ಜೊತೀಗೆ' ದೃಢವಾಗಿ ಕೇಳಿದ್ದಳು ತಾನು.


ತೊಡೆಯ ಮೇಲಿನ ಸಿತಾರಿನ ತಂತಿಗಳ ಮೇಲೆ ಬೆರಳು ಆಡಿಸುತ್ತ, ಸುಮ್ಮನೆ ಕುಳಿತ ಗಂಡನನ್ನು ನೋಡಿ ಸಿಟ್ಟು ಉಕ್ಕಿ ಬರುತ್ತಿತ್ತು.

'ಏನರೆ ಹೇಳ್ರಲಾ, ಹಿಂಗ ಸುಮ್ಮನ ಕೂತರ ಹ್ಯಾಂಗ.'

'ನನಗ ತ್ರಾಸ ಆದರೂ ಚಿಂತಿಲ್ಲ. ಟೂರಿಗೆ ಹೋಗಬೇಕು ಅಂತ ನಿರ್ಧಾರ ಮಾಡೀ ಅಂದ ಮ್ಯಾಲೆ ಅದಕ್ಕ ನಾ ಏನ ಹೇಳಲಿ? ನಿನ್ನ ಮರ್ಜಿ ಬಂದಾಂಗ ಮಾಡು.' ಉದಾಸೀನವಾಗಿ ಹೇಳಿದ್ದ.

'ನಿಮಗ ಊಟದ್ದ ತ್ರಾಸ, ಹೌದಲ್ಲೊ, ಗೆಳೆಯರ ಮನ್ಯಾಗ ಮಾಡ್ರಿ. ಇಲ್ಲಾ ಹೋಟೆಲ್‌ನ್ಯಾಗ ಊಟಾ ಮಾಡ್ರಿ. ಮನೀಗೆ ಬಂದು ಖೋಲಿ ಬಾಗಿಲಾ ಹಾಕಿ ಸಿತಾರ ಬಾರಿಸಿಕೋತ ಕೂಡ್ರಿ. ಯಾರೂ ನಿಮ್ಮನ್ನ ಡಿಸ್ಟರ್ಬ್ ಮಾಡೂದಿಲ್ಲ. ನಿಮಗೂ ಅಷ್ಟs ಬೇಕಲ್ಲ' ಅಕ್ಕಸದಿಂದ ಹೇಳಿ ಎದ್ದುಹೋಗಿದ್ದಳು. ಅದು ಅವಳಿಗೆ ದೊರೆತ ಮೊದಲ ವಿಜಯ. ಆದರೂ ದಿವಾಕರನ ಮೌನ ಅವಳ ಸಿಟ್ಟನ್ನು ಹೆಚ್ಚು ಮಾಡಿತ್ತು.

ಮನೆ, ಗಂಡ, ಮಗ ಇಷ್ಟೇ ತನ್ನ ಸರ್ವಸ್ವ, ಅವರೂ ತನ್ನನ್ನ ಅಷ್ಟೇ ಪ್ರೀತಿ ಮಾಡ್ತಾರೆ,



ಬಯಸ್ತಾರೆ ಅಂತ ತಿಳಿದದ್ದೇ ತನ್ನ ತಪ್ಪು. ಒಬ್ಬೊಬ್ಬರು ಒಂದೊಂದು ದ್ವೀಪ. ಅವರಿಗೆ ಅವರವರದೇ ಜಗತ್ತು. ತನ್ನದೂ ಅತಿಯಾಯಿತು. ಯಾಕೆ ಇನ್ನೊಬ್ಬರ ಮೇಲೆ ಅವಲಂಬಿಸಿ ಬದುಕು ನಡೆಸಬೇಕು? ತಮ್ಮಿಬ್ಬರಿಗೂ ವಯಸ್ಸು ಆಗ್ತಾ ಇದೆ. ಹಿಂದೆ ಇದ್ದಷ್ಟು ದಿನ ಮುಂದೆ ಇರೋದಿಲ್ಲ. ಅದರಲ್ಲೂ ಇನ್ನೂ ಎಷ್ಟು ವರ್ಷ ಕೂಡಿ ಇರ್ತೀವಿ? ಸಾವು ಯಾರನ್ನ, ಯಾವಾಗ ಒಯ್ತದ ಅನ್ನೂದು ಯಾರಿಗೂ ಹೇಳಲಿಕ್ಕೆ ಆಗೋದಿಲ್ಲ. ಆಮೇಲೆ ಆದರೂ ಒಬ್ಬರೇ ಬದುಕಬೇಕಲ್ಲ. ಅದನ್ನ ಇಬ್ಬರೂ ರೂಢಿ ಮಾಡಿಕೊಳ್ಳೋದು ಒಳ್ಳೇದು. ಅದಕ್ಕಾದರೂ ದಿವಾಕರನ್ನ, ಮನೀನ, ಬಿಟ್ಟು ಅಡ್ಡಾಡಬೇಕು. ಈ ರೀತಿ ವಿಚಾರ ಮಾಡಿದರ ನಾನು ಮಾಡ್ತಾ ಇದ್ದದ್ದು ತಪ್ಪು ಅಂತ ಅನಿಸೂದಿಲ್ಲ. ಹಂ, ಹೌದು. ಈ ಸಲ ತಿರುಗಿ ಹೋದ ಮೇಲೆ ಇದ ಮಾತ ದಿವಾಕರಗೂ ತಿಳಿಸಿ ಹೇಳಬೇಕು. ಇಬ್ಬರೂ ಸಿಟ್ಟು, ಸೆಡವು ಮಾಡಿಕೊಂಡು ಮನಸು ಕೆಡಿಸಿಕೊಳ್ಳೊ ಕಾರಣಾನ ಇಲ್ಲ. ಒಬ್ಬರನ್ನ ಒಬ್ಬರು ಅರ್ಥ ಮಾಡಿಕೊಂಡರ ಮನಸ್ಸೂ ಹಗುರ ಆಗ್ತದ....

''ಹುಂ ಸಾಕು. ಸಾಕು ರಜನೀ, ಬಹಳ ಬಗ್ಗಬ್ಯಾಡಾ. ಈ ಮಂಜು ನಿನ್ನ ಕೈಗೆ ಸಿಗೂದಿಲ್ಲ. ಕೆಳಗ ಬಿದ್ದರ ನೀನs ನನ್ನ ಕೈ ಬಿಟ್ಟು ಹೋಗ್ತೀ.' ಹೊಸ ಮದುಮಗ ಹೆಂಡತಿಯ ಸುತ್ತ ಕೈ ಹಾಕಿ ಎಳೆದುಕೊಳ್ಳುತ್ತಿದ್ದ. ಸರಸ್ವತಿಯಲ್ಲಿ ಅಸೂಯೆ ನೆರಳಾಡಿತು, ಆ ಜೋಡಿ ನೋಡಿ. ಮನಸ್ಸು ಚೀರುತ್ತಿತ್ತು.

''ದಿವೂ, ನನ್ನ ದಿವೂ. ಈ ಬಿಳಿ ಮಂಜಿನೊಳಗ ಅಡಗ್ಯಾನೇನು ನನ್ನ ದಿವೂ? ಕೈಗೆ ಸಿಕ್ಕಾನೇನು?', ಬಗ್ಗಿ ಕೈ ಚಾಚಿದಳು ಸರಸ್ವತಿ.

ಬಲಿಷ್ಠ ತೋಳುಗಳೆರಡು ಅವಳನ್ನು ಹಿಡಿದುಕೊಂಡವು.

''ಆಹಾ! ಸಿಕ್ಕ, ನನ್ನ ದಿವೂ ಸಿಕ್ಕ'' ತೋಳು ಚಾಚಿ ಅಪ್ಪಿಕೊಂಡಳು. ರಕ್ತ ಚಲನೆಯ ಜೋರು, ಹಿತವಾದ ಬೆಚ್ಚನೆಯ ಸ್ಪರ್ಶ, ಹರವಾದ ಎದೆ, ಮೈ ಮನಸ್ಸಿನಲ್ಲಿ ವಿದ್ಯುತ್ ಹರಿತ. 'ದಿವೂ, ದಿವೂ'

'ಮೇಡಂ, ಏನಾಯ್ತು ಮೇಡಂ, ಮೈ ಚೆನ್ನಾಗಿಲ್ಲವೇ?'

ತೆರೆದ ಕಣ್ಣಿನೊಡನೆ ಕನಸೂ ಹರಿಯಿತು. ಅಪರಿಚಿತ ಗಂಡಸು. 'ನೀವು ಜೋಲಿ ಹೋಗಿ ಕೊಳ್ಳಕ್ಕ ಬಿದ್ದೀರಿ ಅಂತ ಹಿಡಿದುಕೊಂಡೆ. ಏನಾಯ್ತು? ತಲೆ ಸುತ್ತು ಬಂತಾ?' ಗಂಟಲು ಒಣಗಿ ಮಾತು ಬರಲಿಲ್ಲ. 'ಒಬ್ಬರೇ ಇದ್ದೀರಾ? ಕೆಳಗೆ ಇಳೀತೀರಾ? ಹಾಗೇ ನನ್ನ ತೋಳು ಹಿಡಿದುಕೊಳ್ಳಿ.'

ಅವನ ಆಸರೆಯಲ್ಲೇ ನಾಲ್ಕಾರು ಪಾವಟಿಗೆ ಇಳಿದಳು. ಒಂದು ಕಡೆ ನಿಂತು ಕಣ್ಣು ಮುಚ್ಚಿ, ಮುಖ ಮೇಲೆತ್ತಿ, ಉಸಿರು ಎಳೆದುಕೊಂಡಳು. ಮೈ ನಡುಕ ನಿಂತಿತ್ತು. ಕಾಲು ದೃಢವಾಗಿದ್ದವು. ಸರಿದು ನಿಂತು ಅವನನ್ನು ದಿಟ್ಟಿಸಿ ನೋಡಿ,

'ಬಹಳ ಥ್ಯಾಂಕ್ಸ್, ಏನಾತೋ ಗೊತ್ತಾಗಲಿಲ್ಲ. ಈಗ ಆರಾಮ ಅದೀನಿ. ಜೊತೀಗೆ ಗೆಳತೇರು ಅದಾರ. ಬರ್ತೀನಿ, ನಮಸ್ಕಾರ, ಥ್ಯಾಂಕ್ಸ್'. 'ಸರಸಕ್ಕಾ ಬರ್ರಿ. ಊಟಕ್ಕ ಹೋಗೋಣು' ಜಾನಕಿ ಕೆಳಗಿನಿಂದ ಕೂಗಿದಳು.

ಅಬ್ಬಾ! ಎಷ್ಟು ಶಕ್ತಿ ಆ ತೋಳಿನಲ್ಲಿ. ಅಲ್ಲೇ ಕರಗಿ ಹೋಗ್ತೀನೇನೋ ಅನಿಸಿತ್ತು. ಎಂಥಾ ಅದ್ಭುತ ಅನುಭವ. ಜಿಂಕೆಯಂತೆ ಕೆಳಗೆ ಜಿಗಿಯುತ್ತ ಹೋಗುವ ಆಸೆ. 'ಮನೀಗೆ ಹೋದ ಮ್ಯಾಲೆ ದಿವಾಕರನ ಮುಂದ ಮನಸು ಬಿಚ್ಚಿ ಇಡೂ ಮುಂದ ಈ ಅನುಭವಾನೂ ಹೇಳಲೇನು... ಹೇಳಿದರ ಏನರೆ ತಿಳಕೊಂಡಾನೇನು? ಅಲ್ಲಾ, ನಮ್ಮ ಮದುವಿ ಆಗಿ ಇಷ್ಟ ವರ್ಷ ಆದವು. ನಾ ಎಂಥವಳೂ ಅನ್ನೂದು ಅವನಿಗೆ ಗೊತ್ತಿಲ್ಲೇನು? ಅಂ.... ಇರಲಿ. ಹೇಳೂದು ಬಿಟ್ಟರಾತು. ಸುಮ್ಮನ ಇಲ್ಲದ ಹೊಸಾ ಸಮಸ್ಯಾ ಯಾಕ ಹುಟ್ಟಿಸಿಕೋಬೇಕು? ಇದು ನನ್ನಲ್ಲೇ ಇರಲಿ. ಬಿಚ್ಚಿ ಇಟ್ಟರ ಸ್ವಾರಸ್ಯ ಉಳಿಯೂದಿಲ್ಲ.' ನಿಂತು, ಹೊರಳಿ ನೋಡಿದಳು ಸರಸ್ವತಿ. ಅಪರಿಚಿತ ಕಣ್ಮರೆಯಾಗಿದ್ದ.

ನಿಧಾನವಾಗಿ ಇಳಿದು ಬಂದಳು, ತನ್ನ ಸೀಟಿಗೆ.

ನನ್ನ ಪಾಲಿಗೆ ಒಳ್ಳೆಯ ಕಥೆ ಓದುವದು ಎಂದರೆ ಆಗ ಹುಟ್ಟಿದ, ಬಿಳಿ ಬಟ್ಟೆಯಲ್ಲಿ ಸುತ್ತಿದ ಪುಟ್ಟ ಮಗುವನ್ನು ನೋಡಿದಷ್ಟು ಖುಷಿ. ಸ್ವತಃ ನಾನೇ ಕಥೆ ಬರೆಯುವದು ಎಂದರೆ ಅದೊಂದು ಪ್ರಸವವೇದನೆ.

—ಶಾಂತಾದೇವಿ ಕಣವಿ.





ವಿಶ್ವ ಭಾರತಿ - 4



ಶಣೈ ಗೋಂಯಬಾಬ

ನನ್ನಮ್ಮ ಎಲ್ಲಿ ಹೋದಳು?

ಮಾಘ ಮಾಸದ ಪಂಚಮಿಗೆ ಬಾಬುಲ್ಯಾ ಐದು ವರ್ಷ ತುಂಬಿ ಆರನೆಯ ವರ್ಷದಲ್ಲಿ ಕಾಲಿಟ್ಟಿದ್ದ. ಅವನು ಚಿಕ್ಕ ಬಾಲಕನೇನೋ ನಿಜ. ಆದರೆ ತುಂಬ ತುಂಟ, ಉಡಾಳ, ವಾಚಾಳಿ ಯಾಗಿದ್ದ. ತನ್ನ ಬಾಲ್ಯ ಚಟುವಟಿಕೆಗಳಿಂದ ಮನೆಯನ್ನೆಲ್ಲ ತಲೆಯ ಮೇಲಿಟ್ಟುಕೊಳ್ಳುತ್ತಿದ್ದ. ಶಾಪಶಣೈಯವರ ಮನೆಯಲ್ಲಿ ತುಂಬ ದಿನಗಳ ನಂತರ, ಪೂಜೆ ಪುನಸ್ಕಾರ, ದೇವರು-ದೆವ್ವಗಳಿಗೆ ತೃಪ್ತಿ ಮಾಡಿ, ಹೇಳಿಕೆ-ಬೇಡಿಕೆ ಮಾಡಿದ ಎಷ್ಟೋ ವರ್ಷಗಳ ನಂತರ ಒಂದು ಗಂಡು ಸಂತಾನ ವಾಗಿತ್ತು. ಮೊಮ್ಮಗ ಹುಟ್ಟಿದ್ದಾನೆಂಬ ಖುಷಿಯ ಸುದ್ದಿಯನ್ನು ಸೂಲಗಿತ್ತಿ ಭಕ್ಷೀಸು ಬೇಡಿ ಶಣೈಯ ಕಿವಿಯ ಮೇಲೆ ಹಾಕಿದಾಗ ಒಂದು ಕ್ಷಣ ಶಣೈಗೆ ಏನು ಮಾಡಬೇಕೆಂದು ತೋಚಲಿಲ್ಲವಂತೆ. ಅವನು ಹುಚ್ಚನಂತೆ ಕುಣಿದಾಡಿದನಂತೆ. ಸೂಲಗಿತ್ತಿ ಭಕ್ಷೀಸು ಕೇಳಿದ್ದಕ್ಕೆ ತನ್ನ ಹೆಗಲ ಮೇಲಿದ್ದ ಜರಿಯ ಶಾಲನ್ನು ಅವಳ ಮೈಮೇಲೆ ಒಗೆದು ತನ್ನ ಕೈಯಲ್ಲಿದ್ದ ತೆಂಗಿನಕಾಯಿಯ ತುರಿಯನ್ನು ಅವಳ

ಕೈಮೇಲಿಟ್ಟು ಓಡಿದ ಶಣೈ, ಗರ್ನಾಲು ಪಟಾಕಿ ಊರಿಗೆಲ್ಲ ಕೇಳಿಸುವಂತೆ ಸಿಡಿಸಿ ಊರಲ್ಲೆಲ್ಲ ಸಿಹಿ ಹಂಚಿದನಂತೆ. ತೊಟ್ಟಿಲಲ್ಲಿ ಹಾಕುವ ದಿನವಂತೂ ಮನೆಯಲ್ಲಿ ಹಬ್ಬದ ವಾತಾವರಣ. ಮಧ್ಯಾಹ್ನ ಅನ್ನಸಂತರ್ಪಣೆ ಮಾಡಿ ರಾತ್ರಿ ಘಂಟೆ, ಮೃದಂಗ, ಸಮೇಳಗಳ ಹಿನ್ನೆಲೆಯಲ್ಲಿ ಭಜನೆ ಮಾಡಿಸಿ ಮನೆ ಗಡಚಿಕ್ಕುವಂತೆ ಮಾಡಿದನಂತೆ. ಮೊಮ್ಮಗ ಹುಟ್ಟಿದ್ದಾನೆಂಬ ಖುಷಿಯಲ್ಲಿ ಶಾಪಶಣೈ ಮತ್ತು ಉಮಾಬಾಯಿ ಈ ಜಗತ್ತನ್ನು ಮರೆತು ಬಿಟ್ಟಿದ್ದರು. ಮೊಮ್ಮಗನ ಮುಂದೆ ಅವರಿಗೆ ಊಟ ನೀರಡಿಕೆಯೂ ಬೇಕಾಗಿರಲಿಲ್ಲ. ಮಾತು ಮಾತಿಗೆ ಬಾಬುಲೊ, ಬಾಬುಲೊ ಬಿಟ್ಟು ಅವರಿಗೆ ಬೇರೇನೂ ಕಾಣುತ್ತಿರಲಿಲ್ಲ. ವೈನಿಯು ತನ್ನ ಮಗ ನನ್ನು ಕರೆದುಕೊಂಡು ತೌರುಮನೆಗೇನಾದರೂ ಹೋದರೆ ಏನಾದರೂ ನೆಪಮಾಡಿ ಅವರನ್ನು ಕರೆಸಿಕೊಂಡುಬಿಡುತ್ತಿದ್ದರು.

ಬಾಬುಲ್ಯಾ ಆರನೆಯ ವರ್ಷದಲ್ಲಿ ಕಾಲಿಡು ವಷ್ಟರಲ್ಲಿ ಅವನ ತಾಯಿ ಈ ಲೋಕವನ್ನೇ ಬಿಟ್ಟು ಹೊರಟುಹೋದಳು. ವೈದ್ಯರ ಹೇಳಿಕೆಯಂತೆ ಅವಳಿಗೆ ಗರ ಬಡಿಯಿತಂತೆ. ಅದರಿಂದ ಅವಳು ಹೊರಟು ಹೋದಳು ಎನ್ನುತ್ತಾರೆ. ಅಮಾಯಕ ಮಗುವನ್ನು ಬಿಟ್ಟು ತಾಯಿ ಅಗಲುವುದೆಂದರೆ ಎಷ್ಟೊಂದು ಅಪಾಯಕಾರಿ. ಪ್ರೀತಿ, ಮಮತೆ ಯಲ್ಲಿ ಕಣ್ಣನ ಹೂವಿನಂತೆ ಬೆಳೆದ ಬಾಬುಲ್ಯಾನಿಗೆ ತಾಯಿಯಿಲ್ಲವೆಂದು ಮೊದಮೊದಲು ಏನೂ ಅನಿಸಲಿಲ್ಲ. ಕ್ರಮೇಣ ಅವನ ತುಂಟತನ, ಉಡಾಳವೃತ್ತಿ ನಿಂತಿತು. ಆ ಕೂಗು, ಕುಣಿತ, ಜಗಿತ, ಮೊಂಡುತನಗಳೆಲ್ಲ ಮಾಯವಾದವು. ಅವನು ಇಳಿವಯಸ್ಸಿನ ಮುದುಕರಂತೆ ಚಿಂತೆಯಲ್ಲಿ ಮುಳುಗಿದ.

ಬಾಬುಲ್ಯಾನ ತಾಯಿ ,ಕಾಯಿಲೆಯಿಂದ ಹಾಸಿಗೆ ಹಿಡಿದಾಗ ಮಗು ಅಂಜಿ ಮೈತೆಗೆದಾನು ಎಂದು ಅಜ್ಜ ಅಜ್ಜಿಯರು ಅವನನ್ನು ತಾಯಿ ಮಲಗಿದ್ದ ಕೋಣೆಗೆ ಒಯ್ಯುತ್ತಿರಲಿಲ್ಲ. ಆದರೆ ಈ ಚೋಟಿ ಹುಡುಗ ಹಿರಿಯರ ಕಣ್ಣು ತಪ್ಪಿಸಿ ತಾಯಿ ಮಲಗಿದ ಕೋಣೆಯ ಬಾಗಿಲ ಬಳಿ ಹೋಗಿ, ಬಾಗಿಲು ಮೆಲ್ಲಗೆ ತಳ್ಳಿ 'ಅಮ್ಮಾ ಅಮ್ಮಾ' ಎಂದು ಕರೆಯುತ್ತಿದ್ದ. ಒಂದು ಮಧ್ಯರಾತ್ರಿಯಲ್ಲಿ ತಾಯಿ ಬಿಟ್ಟು ಹೋದಳು. ಆಗ ಈ ಹುಡುಗ ನಿಶ್ಚಿಂತನಾಗಿ ಅಜ್ಜಿಯ ಮಡಿಲಲ್ಲಿ ಮಲಗಿದ್ದ. ತಾಯಿ ಅಗಲಿದ ಸುಳಿವು ಅವನಿಗಾಗಬಾರ ದೆಂದು ಬಂದು ಹೋಗುವ ಜನರ ಸದ್ದಿನಿಂದ ಅವನಿಗೆ ತಾಯಿ ಅಗಲಿದ್ದು ತಿಳಿಯಬಹುದೆಂದು ಭಾವಿಸಿದ ಅಜ್ಜಿ ಅವನನ್ನು ಎತ್ತಿಕೊಂಡು ಬೇರೆ ಕೋಣೆಗೊಯ್ದು ಮಲಗಿಸಿ ಶವ ತೆಗೆದುಕೊಂಡು ಹೋಗುವವರೆಗೂ ಮಗು ಅತ್ತ ಸುಳಿಯದಂತೆ ನೋಡಿಕೊಂಡಳು. ತಮ್ಮ ಗುಣಾಢ್ಯ ಸೊಸೆ ಬಿಟ್ಟಗಲಿದಳು ಎಂಬ ನೋವಿನಿಂದ ಮಾವ-ಅತ್ತೆ ಯರು ಬಾಬುಲ್ಯಾನ ಕಣ್ಣಿಗೆ ಬೀಳದಂತೆ ಮುಸಿ ಮುಸಿ ಅಳುತ್ತಿದ್ದರು. ಸೊಸೆಯ ನೆನಪಾದಾಗಲೆಲ್ಲ ದುಃಖದ ಕಟ್ಟೆಯೊಡೆದು ಕಣ್ಣೀರಿನ ಧಾರೆ ಹರಿಯುತ್ತಿದ್ದರೂ ಬಾಬುಲ್ಯಾನ ಎಳೆಯ ಮನಸ್ಸಿಗೆ ಒಂದಿಷ್ಟೂ ಗೊತ್ತಾಗಬಾರದೆಂದು ಮರೆಯಲ್ಲಿ ನಿಂತು ಕಣ್ಣೊರೆಸಿಕೊಳ್ಳುತ್ತಿದ್ದರು. ಮೊಮ್ಮಗ ತನ್ನ ಸೊಸೆಯ ಕೋಣೆಗೆ ಹೋದರೆ ತಾಯಿಯಿಲ್ಲದ್ದನ್ನು ನೋಡಿ ಗಾಬರಿಯಾಗಬಹು ದೆಂದು ಅವನು ಆ ಕೋಣೆಯತ್ತ ಸುಳಿಯದಂತೆ ಅಜ್ಜಿ ಸರ್ಪಕಾವಲು ಹಾಕಿಕೊಂಡು ಕುಳಿತರೂ ಹೇಗಾದರೂ ಮಾಡಿ ಕಣ್ಣುತಪ್ಪಿಸಿ ತಾಯಿಯ ಕೋಣೆಗೆ ನುಗ್ಗಿಬಿಟ್ಟ. ನೋಡುತ್ತಾನೆ, ಅಲ್ಲಿ ತಾಯಿ ಇಲ್ಲ, ಅವಳ ಹಾಸಿಗೆಯಿಲ್ಲ, ಹೊದಿಕೆ ಯಿಲ್ಲ, ಏನೂ ಇಲ್ಲ, ಏನೇನೂ ಇಲ್ಲ. ಕೋಣೆ ಅವನನ್ನು ನುಂಗಲು ಬರುವಂತೆ ಭಾಸವಾಯಿತು. ಅವನು ಹೆದರಿದ, ಗಾಬರಿಯಾದ, ಏನು ಮಾಡ ಬೇಕೆಂದು ತಿಳಿಯದೆ ಅಜ್ಜ-ಅಜ್ಜಿಯನ್ನು ಕೂಗಿ ಕರೆದು ''ನನ್ನಮ್ಮ ಎಲ್ಲಿ?'' ಎಂದು ಕೇಳಿದ. ಅವನ ಪ್ರಶ್ನೆಗೆ ಉತ್ತರಿಸಲಾಗದೆ ತಡೆದು ನಿಲ್ಲಿಸಿದ ಕಣ್ಣೀರಿನ ಹೊಳೆ ಕಟ್ಟೆಯೊಡೆದು ಹರಿಯಿತು.

ಅಳುವ ಮೊಮ್ಮಗನನ್ನು ಮಡಿಲಲ್ಲಿಟ್ಟುಕೊಂಡು ತಬ್ಬಿಕೊಂಡು "ನನ್ನ ಮಗಾ.... ನಿನ್ನಮ್ಮ ರಾತ್ರಿ ದೇವರ ಮನೆಗೆ ಹೋಗಿದ್ದಾಳೆ ಮುದ್ದು ಮಗಾ" ಅಜ್ಜಿ ತಲೆ ಸವರುತ್ತ ಹೇಳಿದಳು. ಅವನಿಗೆ ಅಜ್ಜಿಯ ಮಾತು ಅರ್ಥವಾಗಲಿಲ್ಲ. ಅವನು "ಮಾಮಾನ ಮನೆಯಿಂದ ತಾಯಿಯನ್ನು ಕರೆದು ಕೊಂಡು ಹೋಗಲು ಚಕ್ಕಡಿ ಬರುವಂತೆ ದೇವರ ಮನೆಯಿಂದ ಚಕ್ಕಡಿ ಬಂದುದು ನಾ ನೋಡಲಿಲ್ಲ ವಲ್ಲ, ಅವಳು ಯಾರ ಗಾಡಿಯಲ್ಲಿ ಹೋದಳು? ಹೇಗೆ ಹೋದಳು, ಒಬ್ಬಳೇ ಹೇಗೆ ಹೋದಳು, ನನ್ನನ್ನೇಕೆ ಕರೆದುಕೊಂಡು ಹೋಗಲಿಲ್ಲ?" ಎಂದ. ಈ ಪ್ರಶ್ನೆಗಳಿಂದ ಅಜ್ಜ-ಅಜ್ಜಿಯಷ್ಟೆ ಅಲ್ಲ ಅಲ್ಲಿದ್ದ ಎಲ್ಲರ ಹೃದಯಕ್ಕೆ ಕಿಚ್ಚು ಹಚ್ಚಿದಂತಾ ಯಿತು. ಅಷ್ಟೊತ್ತಿನವರೆಗೆ ತಡೆ ಹಿಡಿದ ಕಣ್ಣೀರ ಕಟ್ಟೆಯೊಡೆದು ಮನೆಯಲ್ಲಿ ದುಃಖದ ವಾತಾ ವರಣ ಉಂಟಾಯಿತು. ಅವರೆಲ್ಲರೂ ಅಳುವು ದನ್ನು ನೋಡಿದ ಬಾಬುಲ್ಯಾ ತಾನೂ ಜೋರಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದ. ಅಜ್ಜಿ ಅವನನ್ನು ತನ್ನ ಮಡಿಲಲ್ಲಿ ಕೂಡಿಸಿಕೊಂಡು ಮುದ್ದಿನಿಂದ ತನ್ನೆ ದೆಗೆ ಒತ್ತಿ ಹಿಡಿದುಕೊಳ್ಳುತ್ತ "ಹಾಗೆಲ್ಲ ಅಳ ಬಾರದು ಮಗಾ, ನೀ ನಮ್ಮ ಮನೆತನದ ದೀಪ... ನೀನು ಬೆಳೆದು ದೊಡ್ಡವನಾಗಿ ಮನೆತನ ಹೆಮ್ಮರವಾಗಿ ಬೆಳೆಯಲಿ" ಎಂದಳು. ಬಾಬು ಲ್ಯಾನಿಗೆ ಇವರೆಲ್ಲ ಯಾಕೆ ಅಳುತ್ತಾರೆಂದು ಗೊತ್ತಾ ಗಲಿಲ್ಲ. ಮನೆತುಂಬ ಓಡಾಡಿದರೂ ಮತ್ತೆ ಮತ್ತೆ ತಾಯಿಯ ಕೋಣೆಯ ಸುತ್ತ ಸುಳಿಯುತ್ತಿದ್ದ. ಮತ್ತೆ ಮತ್ತೆ ಅಲ್ಲಿಯೇ ಗಿರಕಿ ಹೊಡೆಯುತ್ತಿದ್ದ.

ತಾಯಿ ಸತ್ತ ಹನ್ನೆರಡನೆಯ ದಿನದ ಶಾಸ್ತ್ರ ಮಾಡುವಾಗ ತಾಯಿಯ ಹೆಸರಿನಲ್ಲಿ ಮುತ್ತೈದೆಗೆ ಕೊಡಲು ಸೀರೆ, ರವಿಕೆಯ ಖಣ, ತಂಬಿಗೆ ಹೊರಗೆ ತಂದಾಗ ಅವನು ದೊಡ್ಡದಾಗಿ ಕೂಗಿ ಕಾಲಪ್ಪಳಿಸಿ ಅಳತೊಡಗಿದ. "ಅಜ್ಜಿ...ನನ್ನಮ್ಮ ದೇವರ ಮನೆಯಿಂದ ತಿರುಗಿ ಬಂದಾಗ ಅವಳಿಗೆ ಉಡೋಕ್ಕೆ ಸೀರೆ ಬೇಡವೇ? ನೀರು ಕುಡಿಯಲು ತಂಬಿಗೆ ಬೇಡವೇ?" ಎಂದು ಕೇಳಿದಾಗ ಅಜ್ಜಿಯ, ಆ ಮುತ್ತೈದೆಯ, ಅಲ್ಲಿ ಹತ್ತಿರ ಕುಳಿತಿದ್ದವರ ಕಣ್ಣಲ್ಲಿ ನೀರಾಡಿತು. ಬಾಬುಲ್ಯಾ ಗೊಂದಲದಲ್ಲಿ ಬಿದ್ದ. ತಾಯಿಯ ಹೆಸರು ತೆಗೆದ ಕೂಡಲೇ ಇವರೆಲ್ಲ ಯಾಕೆ ಅಳುತ್ತಾರೆಂಬುದೇ ಅವನಿಗೆ ಅರ್ಥವಾಗಲಿಲ್ಲ. ತಾಯಿಯ ಜೊತೆಗೆ ತಾಯಿಯ ತಂದೆಯ ಮನೆಗೆ ಹೋಗುವಾಗ ಯಾರೂ ಅಳುತ್ತಿರಲಿಲ್ಲ. ಈಗ ತಾಯಿ ದೇವರ ಮನೆಗೆ ಹೋದರೆ ಇವರೆಲ್ಲ ಅಳುವುದೇಕೆ ಎಂಬುದೇ ಅವನಿಗೆ ಗೊತ್ತಾಗುತ್ತಿರಲಿಲ್ಲ.

ಹನ್ನೆರಡನೆಯ ದಿನದ ಶಾಸ್ತ್ರ ಮುಗಿದ ಮೇಲೆ ತನ್ನ ತಾಯಿ ಬರಬಹುದೆಂದು ಬಾಬುಲ್ಯಾ ದಾರಿ ನೋಡುತ್ತಿದ್ದ. ದಾರಿಯಲ್ಲಿ ಯಾವುದಾದರೂ ಡೋಲಿ ಬಂದರೆ ಅವನು ಓಡೋಡಿ ಹೋಗಿ ತನ್ನ ತಾಯಿ ಬಂದಿದ್ದಾಳೆಯೇ ಎಂದು ಚವಕಾಶಿ ಮಾಡಿ, ಬರಲಿಲ್ಲವೆಂದು ಖಾತ್ರಿಯಾದಾಗ ನಿರುತ್ಸಾಹದಿಂದ ಜೋಲು ಮುಖಮಾಡಿ ಮರಳಿ ಬರುತ್ತಿದ್ದ. ಸುಮಾರು ಮೂರು ತಿಂಗಳು ಕಳೆದ ಮೇಲೆ ಒಂದು ದಿನ ಅವನು ಅಜ್ಜಿಗೆ ಕೇಳಿದ "ಅಜ್ಜೀ ಅಮ್ಮನನ್ನು ಕರೆದುಕೊಂಡು ಬರಲು ಡೋಲಿ ಯಾಕೆ ಕಳಿಸುವುದಿಲ್ಲ? ಅವಳು ಹೋಗಿ ಎಷ್ಟೋ ದಿನಗಳಾದವು." ಅಜ್ಜಿ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ ಹೇಳಿದಳು "ಇರಲಿ ಬಿಡು ಮಗಾ.... ನೀನು ಪಕ್ಕದ ಮನೆಯ ಮಾಣಕೂ ಜೊತೆಗೆ ಕಣ್ಣು ಮುಚ್ಚಾಲೆ ಆಟ ಆಡಿಕೊಂಡು ಬಾ." ತಾಯಿ ಗತಿಸಿದ ಮೇಲೆ ಅವನು ಆಟ ಆಡುವುದನ್ನೆ ಬಿಟ್ಟಿದ್ದ. ಅವನಿಗೆ ತಾಯಿಯ ಚಿಂತೆ ಅಂಟಿಕೊಂಡಿತ್ತು. ಅವನು "ನನಗೆ ಆಟ ಆಡ ಬೇಕೆಂದು ಅನಿಸುವುದಿಲ್ಲ ಅಜ್ಜಿ. ನನಗೆ ಅಮ್ಮ ನನ್ನು ನೋಡುವ ಆಶೆಯಾಗಿದೆ" ಅಂದ ಮಾತಿಗೆ ಉಮಾಬಾಯಿ ಬೇಸರದಿಂದ ಹೇಳಿದಳು.

"ಒಂದು ದಿನಾ ನಾನೇ ಡೋಲಿಯಲ್ಲಿ ಕೂತ್ಕೊಂಡು ಹೋಗಿ ಬಿಡ್ತೀನಿ. ನನಗೂ ಬದುಕಿ ನಲ್ಲಿ ಜಿಗುಪ್ಸೆ ಬಂದ್‌ಬಿಟ್ಟದೆ." "ನೀನು ಹೋದರೆ


ನನ್ನ ಹತ್ರ ಯಾರಿರ್ತಾರೆ? ನೀನು ಹೋಗ ಬೇಡಜ್ಜಿ. ರಾಗಲ್ಯಾನಿಗೆ, ಸಕಲ್ಯಾನಿಗೆ ಡೋಲಿ ಕೊಟ್ಟು ಕಳಿಸು. ಅವರು ಅಮ್ಮನನ್ನು ಕರಕೊಂಡು ಬರ್ತಾರೆ.'' ಈ ಹುಡುಗನ ಮಾತುಗಳಿಗೆ ಏನು ಉತ್ತರಿಸುವುದೆಂದು ತಿಳಿಯದೆ ಉಮಾಬಾಯಿ ನಿರುತ್ತರಳಾದಳು. ಅವಳು ಬಾಬುಲ್ಯಾನ ಮನಸ್ಸನ್ನು ಮರೆವಿನತ್ತ ಕೊಂಡೊಯ್ಯಲು ಯತ್ನಿಸಿದಳು. ಆದರೆ ಏನೂ ಪ್ರಯೋಜನವಾಗಲಿಲ್ಲ. ಅವನು ಡೋಲಿ ಕಳಿಸು ಕಳಿಸು ಎಂದು ಕಾಡ ತೊಡಗಿದ. ಎಷ್ಟು ಹೇಳಿದರೂ ಕೇಳದಂತಾದಾಗ ಅವಳು ಗೊಗ್ಗರು ದನಿಯಲ್ಲಿ ಹೇಳಿದಳು. ''ಮಗಾ ದೇವರ ಮನೆಗೆ ಹೋದವರು ಹಿಂತಿರುಗಿ ಬರೋದಿಲ್ಲಪ್ಪ.'' ಬಾಬುಲ್ಯಾ ಕೇಳಿದ ''ಹಾಗಾದರೆ ನೀನು ನನ್ನಮ್ಮನಿಗೆ ಅಲ್ಲಿಗೆ ಹೋಗಲು ಯಾಕೆ ಬಿಟ್ಟೆ? ದೇವರ ಮನೆಯಿಂದ ಬಂಧ ಡೋಲಿ ನೀನೇಕೆ ಹಿಂದಕ್ಕೆ ಕಳಿಸಲಿಲ್ಲ? ನೀನು ನನಗೆ ಮೊದಲೇ ಹೇಳಿದ್ದರೆ ನಾನು ಅವಳ ಕೋಣೆಯ ಬಾಗಿಲು ಮುಚ್ಚಿ ಅವಳು ಹೊರಗೆ ಹೋಗಲು ಬಿಡ್ತಿರಲಿಲ್ಲ. ನಾನು ಅವಳ ಕಾಲನ್ನು ಗಟ್ಟಿಯಾಗಿ ಹಿಡಿದ್‌ಕೊಂಡು ಬಿಡ್ತಿದ್ದೆ.'' ಆ ಮುಗ್ಧ ಬಾಲಕನ ತೊದಲು ಮಾತುಗಳನ್ನು ಕೇಳಿ ಉಮಾಬಾಯಿ ಚಿಕ್ಕಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆಗ ಬಾಬುಲ್ಯಾ ಹೇಳಿದ ''ಏನಜ್ಜಿ ನಾನು ಮಾತಾಡಿದಾಗೆಲ್ಲ ನೀನೇಕೆ ಬಿಕ್ಕಿ ಬಿಕ್ಕಿ ಅಳ್ತೀಯಜ್ಜಿ? ನನಗೆ ಖಾತ್ರಿಯಾಗಿ ಹೇಳಿಬಿಡು. ನನ್ನಮ್ಮ ಎಂದೆಂದೂ ಬರೋಲ್ಲವೆ? ನನಗಿನ್ನು ಅಮ್ಮ ಇಲ್ಲವೆ? ಅದಾವ ಕೆಲಸಕ್ಕೆ ಅಮ್ಮ ದೇವರಲ್ಲಿಗೆ ಹೋಗಿದ್ದಾಳೆ?'' ಉಮಾಬಾಯಿಗೆ ಏನು ಹೇಳಬೇಕೆಂಬುದೇ ತೋಚಲಿಲ್ಲ. ಅವಳು ಕಣ್ಣಾಲಿಗಳಲ್ಲಿದ್ದ ನೀರು ಒರೆಸುತ್ತ ಹೇಳಿದಳು. ''ಇರಲಿ ಬಿಡು ಮಗಾ ಆ ವಿಷಯ.'' ಬಾಬುಲ್ಯಾ ಹಠದಿಂದ, ಮೊಂಡುತನದಿಂದ ಕುಣದಾಡ ತೊಡಗಿದ. ''ಇಲ್ಲ ಇಲ್ಲ ನಾನು ದೇವರ ಕೋಣೆಗೆ ಹೋಗಿ ದೇವರಿಗೆ ಕೇಳಿಬಿಡ್ತೇನಿ.



ಶಣ್ಯೈ ಗೋಂಯಬಾಬ

ಕೊಂಕಣಿ ಭಾಷೆಯ ಪ್ರತಿಷ್ಠೆ ಬೆಳೆಸಿದ ವಾಮನ ವರ್ದೆ ವಾಲಾವಲೀಕರು 'ಶಣ್ಯೈ ಗೋಂಯಬಾಬ' ಎಂಬ ಹೆಸರಿನಿಂದ ಪ್ರಸಿದ್ಧರು. 23 ಜೂನ್ 1877ರಲ್ಲಿ ಗೋವೆಯ ಚೋಲಿ ಎಂಬಲ್ಲಿ ಹುಟ್ಟಿದರು. ಪೋರ್ಚುಗೀಸ್ ಭಾಷೆಯಲ್ಲಿ 'ಸೆಗುಂದಗ್ರಾವ್' ಪರೀಕ್ಷೆ ಪಾಸಾಗಿ 1898ರಲ್ಲಿ ಮ್ಯೆಟ್ರಿಕ್ ಮುಗಿಸಿದರು. ಕರಾಚಿಯ ಮುನಿಸಿಪಾಲಿಟಿಯಲ್ಲಿ ಕೆಲಕಾಲ ಬೇರೆ ಬೇರೆ ನೌಕರಿಗಳಲ್ಲಿದ್ದು ಒಂದು ಜರ್ಮನ್ ಕಂಪೆನಿಯ ಅತ್ಯುಚ್ಚ ನೌಕರಿಯಲ್ಲಿದ್ದ ಗೋಂಯಬಾಬ ಚಿಕ್ಕದೊಂದು ಕಾರಣಕ್ಕೆ ಸಾವಿರಾರು ರೂಪಾಯಿ ಸಂಬಳದ (ಆ ಕಾಲಕ್ಕೇ) ಆ ನೌಕರಿಗೆ ರಾಜಿನಾಮೆ ನೀಡಿ ಪೂರ್ಣವೇಳೆ ಕೊಂಕಣಿ ಭಾಷೆಯ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡರು.

ಅವರು ಸುಮಾರು ಎಂಬತ್ತು ವರ್ಷಗಳ ಹಿಂದೆ ಬರೆದ 'ಮ್ಹಜಿ ಬಾ ಖಂಯ ಗೆಲಿ' (ನನ್ನಮ್ಮ ಎಲ್ಲಿ ಹೋದಳು?) ಎಂಬ ಅಂತಃಕರಣ ಮಿಡಿಯುವ ಈ ಕತೆಯನ್ನು ಶಾ.ಮಂ. ಕೃಷ್ಣರಾಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಹುಕಾಲ ಗೋವಾದಲ್ಲಿ ನೇಪಥ್ಯದಲ್ಲಿದ್ದುಕೊಂಡೇ ಸಾಹಿತ್ಯ ಕೃಷಿಯನ್ನು, ಕನ್ನಡದ ಪರಿಚಾರಿಕೆಯನ್ನು ಮಾಡಿದ ಶಾ.ಮಂ. ಕೃಷ್ಣರಾಯರು ಈಗ ನಮ್ಮ ಬಳಗದ 'ನೂತನ' ವಾರಪತ್ರಿಕೆಯ ಸಂಪಾದಕರಾಗಿದ್ದಾರೆ.



ನನ್ನಮ್ಮನನ್ನು ಅವ್ನು ಯಾಕೆ ಕರಕೊಂಡು ಹೋಗಿದ್ದಾನೆ, ಎಲ್ಲಿಟ್ಟಿದ್ದಾನೆ ಅಂತ. ದೇವರ ಕೋಣೆಯಲ್ಲಿದ್ದಾನಲ್ಲ ಅವನೇ ದೇವರಲ್ಲವೇ ಅಜ್ಜ?''

ಬಾಬುಲ್ಯಾ ಅಲ್ಲಿಂದ ನೇರವಾಗಿ ದೇವರ ಕೋಣೆಗೆ ಹೋದ. ದೇವರ ಮುಂದೆ ನಿಂತು ಹಿರಿಯರು ಗಲ್ಲಬಡಿದುಕೊಳ್ಳುವಂತೆ ಗಲ್ಲಕ್ಕೆ ಕೈ ಹಚ್ಚಿ ಉದ್ದಂಡ ನಮಸ್ಕಾರ ಮಾಡುವಷ್ಟರಲ್ಲಿ ಅವನ ಅಜ್ಜ ಅವನ ಹಿಂದೆ ಬಂದು ಅವನು ಏನು ಮಾಡುತ್ತಾನೆಂದು ನೋಡುತ್ತ, ದೇವರ ಕೋಣೆಯ ಆಚೆಗೆ ನಿಂತುಕೊಂಡಳು. ಬಾಬುಲ್ಯಾ ನೆಲದಿಂದ ಎದ್ದು ಕಣ್ಣು ಕೆಕ್ಕರಿಸಿ ದೇವರನ್ನು ನೋಡುತ್ತ ಹಲ್ಲುಕಡಿಯುತ್ತ, ತುಟಿಕಚ್ಚಿ 'ದೇವರೆ ನೀನು ನನ್ನಮ್ಮನನ್ನು ಕರಕೊಂಡು ಹೋಗಿ ತುಂಬ ದಿನಾ ಆಯ್ತು. ನೀನು ಅವಳನ್ನು ಯಾಕೆ ಕರ್‌ಕೊಂಡು ಹೋದೆ? ಅದೂ ನನಗೆ ಹೇಳದೆ ಹೇಗೆ ಕರ್‌ಕೊಂಡು ಹೋದೆ? ನನಗೆ ಅವಳು ಬೇಕೂಂತ ನಿನಗೆ ಗೊತ್ತಿರಲಿಲ್ಲವೆ? ನಿನಗೆ ಬೇರಾರೂ ಸಿಗಲಿಲ್ಲವೆ? ನೀನು ಅವಳನ್ನು ಇಂದು ಸಂಜೆಯಾಗುವುದರೊಳಗೆ ತಂದು ಅವಳ ಕೋಣೆಯಲ್ಲಿಡು; ಇಲ್ಲದಿದ್ದರೆ ನಿನಗೆ ತೋರಿಸ್ತೀನಿ ನಾನು ಯಾರೂಂತ. ನಾನು ಅಜ್ಜನಿಗೆ ಹೇಳಿಬಿಡ್ತೀನಿ; ನಾಳೆಯಿಂದ ನಿನ್ನ ಪೂಜೆ ಮಾಡಬೇಡಾಂತ. ಆಮೇಲೆ ನೋಡು ನಿನಗೆ ಸ್ನಾನವಿಲ್ಲ, ದೀಪವಿಲ್ಲ, ಬತ್ತಿಯಿಲ್ಲ, ತೆಂಗಿನಕಾಯಿಯ ಚೂರೂ ಇಲ್ಲ, ಬೆಲ್ಲದ ತುಣುಕು ಇಲ್ಲ, ಸಕ್ಕರೆಯ ಕಣ ಇಲ್ಲ... ಏನಿಲ್ಲ. ಏನೇನೂ ಇಲ್ಲ. ನೀನು ಉಪವಾಸ ಒದ್ದಾಡುವಂತೆ ಮಾಡ್ತೀನಿ.''


ಮೊಮ್ಮಗ ದೇವರೊಂದಿಗೆ ಜಗಳಾಡುತ್ತಿರುವುದನ್ನು ನೋಡಿ ಅಜ್ಜಗೆ ಒಂದು ಕ್ಷಣ ಕೌತುಕವೆನಿಸಿದರೂ ಕಣ್ಣುಗಳಲ್ಲಿ ಬಳಬಳ ಹರಿಯುವ ನೀರು ತಡೆಯುವುದಾಗಲಿಲ್ಲ. ತಾನು ದೇವರಿಗೆ ದಬಾಯಿಸಿ ಹೇಳಿ ಅಂಜಿಕೆ ಹಾಕಿದ್ದರಿಂದ ದೇವರು ಗಾಬರಿಗೊಂಡು ತನ್ನ ತಾಯಿಯನ್ನು ಸಾಯಂಕಾಲದೊಳಗೆ ತಂದಿಡದೆ ಬಿಡುವುದಿಲ್ಲ

ವೆಂಬ ನೆಮ್ಮದಿಯಿಂದ ಬಾಬುಲ್ಯಾ ಅಂದು ನಿರಮ್ಮಳವಾಗಿ ಆಟ ಆಡಿಕೊಂಡಿದ್ದ. ರಾತ್ರಿಯಾಯಿತು. ಆತ ನಿಶ್ಚಿಂತೆಯಿಂದ ಮಲಗಿ ನಿದ್ದೆ ಹೋದ. ಮರುದಿನ ಎದ್ದವನೇ ಹರಿಬಿರಿಯಿಂದ ಹೋಗಿ ತಾಯಿಯ ಕೋಣೆ ನೋಡಿದರೆ ಅಲ್ಲೇನಿದೆ? ಒಂದು ನೊಣವೂ ಇಲ್ಲ. ಅವನಿಗೆ ನಿರಾಶೆಯಾಯಿತು. ಅವನ ಸಿಟ್ಟು ನೆತ್ತಿಗೇರಿತು. ಅವನು ತಕ್ಷಣ ಅಜ್ಜಿಯ ಹತ್ತಿರ ಹೋಗಿ ಹೇಳತೊಡಗಿದ. 'ಅಜ್ಜೀ ಅವನೆಂಥ ದೇವರಮ್ಮ? ನಾನು ನಿನ್ನೆ ಅವನಿಗೆ ಎಷ್ಟು ಅಂಜಿಕೆ ಹಾಕಿದ್ದೆ ಗೊತ್ತಾ? ಆದರೂ ಅವನು ಹೆದರಲಿಲ್ಲ. ಅವನಿಗೆ ಸ್ವಲ್ಪ ನಾಚಿಕೆ-ಮರ್ಯಾದೆ ಇದ್ದಿದ್ದರೆ ನನ್ನಮ್ಮನನ್ನು ತಂದು ಕೊಟ್ಟು ನನ್ನ ಕೈಯಿಂದ ಪಾರಾಗಬಹುದಿತ್ತಲ್ಲ. ಈಗೇನು ಮಾಡುವುದು ಅಜ್ಜೀ. ಆ ದೇವರಂತೂ ನನ್‌ಮಾತು ಕೇಳೋಲ್ಲ. ನನಗಂತೂ ನನ್ನಮ್ಮ ಬೇಕೇಬೇಕು'' ಎಂದು ನಿರಾಶೆ, ಮೊಂಡುತನದಿಂದ ಕೈಕಾಲು ಬಡಿದು ರಾದ್ಧಾಂತ ಮಾಡತೊಡಗಿದ. ಆಗ ಅಜ್ಜಿ ಅವನನ್ನು ಬರಸೆಳೆದು ಮುದ್ದಿಸುತ್ತ ಹೇಳಿದಳು ''ಹಾಗೆಲ್ಲ ಹುಚ್ಚಾಟ ಮಾಡಬಾರದು ಮಗಾ, ದೇವರ ಮನೆಗೆ ಹೋದವರು ಮರಳಿ ಬರುತ್ತಾರೇನಪ್ಪ?'' ಬಾಬುಲ್ಯಾ ಅಂದ ''ಹಾಗೆ ನನಗೆ ದೇವರು ಹೇಳಬಾರದಿತ್ತೆ? ನಾನು ಅವನನ್ನು ನಿನ್ನೆ ತರಾಟೆಗೆ ತಗೊಂಡೆ. ಬಾಯಿಗೆ ಬಂದದ್ದೆಲ್ಲ ಹೇಳಿದೆ. ನಿನ್ನಮ್ಮ ನಿನಗೆ ಸಿಗೋದಿಲ್ಲ ಎಂದು ಹೇಳಲು ಅವನಿಗೇನಾಗಿತ್ತು? ಅವನ್ಯಾಕೆ ಮಾತಾಡಲಿಲ್ಲ?'' ''ಮನುಷ್ಯರೊಡನೆ ದೇವರು ಮಾತಾಡುವುದಿಲ್ಲಪ್ಪ ಮಗಾ'' ಎಂದಳು ಅಜ್ಜಿ. ತಕ್ಷಣ ಬಾಬುಲ್ಯಾ ''ಮನುಷ್ಯರ ಜತೆ ಮಾತಾಡೋದಿಲ್ಲವಾದ್ರೆ, ಅವನು ಅವರನ್ನು ಕರಕೊಂಡು ಯಾಕೆ ಹೋಗ್ತಾನೆ? ನನ್ನಮ್ಮನ ಹತ್ರಾನೂ ಅವನು ಮಾತಾಡೋಲ್ಲವೆ?'' ಅವನ ಪ್ರಶ್ನೆಗಳಿಗೆ ಹೇಗೆ ಉತ್ತರಿಸುವುದೆಂದು ಗೊತ್ತಾಗದೆ ಅಜ್ಜಿ ಒದ್ದಾಡಿದಳು. ಅವನೇ ಮುಂದುವರಿಸಿ ನುಡಿದ ''ದೇವರು ಮಾತನಾಡದಿದ್ದರೆ ಮಾತಾಡದೆ ಹೋಗಲಿ, ನನ್ನಮ್ಮ ನನಗೆ ಬೇಕೇ ಬೇಕು. ಅವಳು ದೇವರಿಗೆ ದಕ್ಕುವುದಿಲ್ಲ. ಅವಳು ನನ್ನ ಹತ್ರ ಬರ್‌ದಿದ್ರೆ ನಾನೇ ಅವಳ ಹತ್ತಿರ ಹೋಗ್ತೀನಿ.'' ಹೀಗೆ ಒಂದೇ ಸಮನೆ ತಾಯಿಯ ನೆನಪು ಮಾಡುತ್ತ ತಾಯಿಯನ್ನು ಕಾಣುವ ಕನಸು ಕಾಣತೊಡಗಿದ. ಅವನು ಊಟ-ತಿಂಡಿ ತ್ಯಜಿಸಿದ. ಹಾಲು ಬಿಟ್ಟ, ಹಣ್ಣು-ಹಂಪಲು ಬಿಟ್ಟ. ಕ್ಷಣ ಕ್ಷಣವೂ ತಾಯಿಯ ನೆನಪು ಮಾಡಿ ಮೂಲೆಯಲ್ಲಿ ಕುಳಿತು ರೋದಿಸುತ್ತಿದ್ದ. ಒಣಒಣಗಿ ಕಡ್ಡಿಯಂತಾದ. ಒಂದು ದಿನ ಹಾಸಿಗೆ ಹಿಡಿದ. ನರಳಿದ, ಬಡಬಡಿಸಿದ... ಕೊರಗಿದ, ಮರುಗಿದ... 'ನನ್ನಮ್ಮ ನನ್ನಮ್ಮ' ಎಂದು ಹಗಲಿರುಳು ಕನವರಿಸಿದ. ಒಂದು ದಿನ ಪ್ರಾಣಬಿಟ್ಟ.

ಬಾಬುಲ್ಯಾನ ಈ ಸುದ್ದಿ ಕೇಳಿ ಯಾರ ಮನಸ್ಸು ಕದಡುವುದಿಲ್ಲ? ಯಾರ ಕಣ್ಣಲ್ಲಿ ನೀರು ಬರುವುದಿಲ್ಲ? 'ಅವಳು ನನ್ನ ಹತ್ತಿರ ಬರದಿದ್ದರೆ ನಾನೇ ಅವಳ ಕಡೆ ಹೋಗುತ್ತೇನೆ' ಎಂಥ ಹೃದಯವಿದ್ರಾವಕ ಮಾತುಗಳು. ಬಾಬುಲ್ಯಾ ಕೊನೆಗೂ ತನ್ನ ಹಠ ಬಿಡಲಿಲ್ಲ.

''ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೆ ಕಲೇವರಂ ತ್ವಂ ತ್ವಮೇವೈತಿ ಕೌಂತೇಯ ಸದಾ ತದ್‌ಭಾವ ಭವತಿ'' ಎಂಬ ಈ ಶ್ಲೋಕದಲ್ಲಿ ಸದಾ ಸರ್ವದಾ ಅದೇ ಭಾವನೆಯಲ್ಲಿ ತೊಡಗಿಸಿಕೊಂಡು ಕೊನೆಗೆ ಅದೇ ನೆನಪಿನಲ್ಲಿ ತನ್ನ ಕಲೇವರ ಬಿಡುತ್ತಾನೆ. ಅವನು ಅದನ್ನೇ ಹೋಗಿ ಸೇರುತ್ತಾನೆ. ಹೀಗೆ ಭಗವಂತನು ಅರ್ಜುನನಿಗೆ ಹೇಳಲಿಲ್ಲವೆ? ಈ ಆಧಾರದಲ್ಲಿ ನಮ್ಮ ಮುದ್ದು ಹುಡುಗ ತನ್ನ ತಾಯಿಯ ಚಿಂತೆಯಿಂದ ಹಗಲಿರುಳು ಅವಳನ್ನು ಸ್ಮರಿಸುತ್ತ, ಅವಳ ಬಳಿ ಹೋಗಿ, ಅವಳ ಮಡಿಲಲ್ಲಿ ಸೇರಿ ಕುಳಿತಿರಬಹುದಲ್ಲವೇ?

ಕನ್ನಡಕ್ಕೆ: ಶಾ.ಮಂ. ಕೃಷ್ಣರಾಯ




ಅಪಾರ

ಸಾರಿ, ಪದ್ಮಿನಿ

ಏನೇ ಆಗಲಿ, ಇವತ್ತು ಪದ್ಮಿನಿಯನ್ನು ಮಾತನಾಡಿಸಿ ಎಲ್ಲ ಹೇಳಿಬಿಡಬೇಕು ಎಂದು ನೆನ್ನೆ ರಾತ್ರಿಯೆಲ್ಲಾ ಕುಳಿತು ತಾನು ಮಾಡಿದ ಉಕ್ಕಿನಂಥ ನಿರ್ಧಾರ ಐದು ನಿಮಿಷ ಹಿಂದಿನವರೆಗೂ ಅಷ್ಟೇ ಗಟ್ಟಿಯಾಗಿದ್ದುದು ಈಗ 'ಕೃಷ್ಣ ಅಪಾರ್ಟ್‌ಮೆಂಟ'ನ ಮೂರನೇ ಮಹಡಿಯ ಕೊನೇ ಮೆಟ್ಟಿಲುಗಳನ್ನು ಏರುತ್ತಿರುವಾಗ ಏಕೋ ಐಸ್ ಕ್ರೀಮಿನಂತೆ ಕರಗುತ್ತಿರುವ ಸುಳಿವು ಹತ್ತಿ ದತ್ತಾತ್ರೇಯ ಕಂಗಾಲಾಗಿ ಆಸರೆಗೆ ಪಕ್ಕದ ಗೋಡೆಯನ್ನು ಹಿಡಿದುಕೊಂಡ. 'ವರ್ಚುಯಲ್ ಸಿಸ್ಟಮ್ಸ್' ಕಂಪ್ಯೂಟರ್ ಸೆಂಟರಿನ ಬಾಗಿಲಿನಲ್ಲಿದ್ದ ಒಂದೇ ಜೊತೆ ಪರಿಚಿತ ಚಪ್ಪಲಿಗಳು ಒಳಗೆ ಪದ್ಮಿನಿ ಇದ್ದಾಳೆಂದೂ ಮತ್ತು ಪದ್ಮಿನಿ ಒಬ್ಬಳೇ ಇದ್ದಾಳೆಂದೂ ಸೂಚಿಸಿ ಅವನ ಎದೆಬಡಿತವನ್ನು ಮತ್ತಷ್ಟು ಹೆಚ್ಚಿಸಿದವು. ಕಾರಿಡಾರಿನಲ್ಲಿ ನಿಂತ ದತ್ತಾತ್ರೇಯ ಕೈಯಿಂದ ತಲೆಗೂದಲನ್ನು ಸರಿ ಮಾಡಿಕೊಂಡು ಬಾಗಿಲ ಕಡೆಗೆ ನಡೆದ. ಹೆಜ್ಜೆಗಳು ಭಾರ ಎನಿಸಿದವು. ಸದ್ದು ಮಾಡದಂತೆ ಬಾಗಿಲ ಬಳಿಗೆ ಹೋದವನಿಗೆ ಕಂಪ್ಯೂಟರಿನ ಮುಂದೆ ಕುಳಿತಿದ್ದ ಪದ್ಮಿನಿಯ ಬೆನ್ನಿನ ಭಾಗ ಮಾತ್ರ ಕಾಣುತ್ತಿತ್ತು. ನೀಲಿಬಣ್ಣದ ಕಮೀಜಿನಲ್ಲಿ ಗೋಡೆಯ ಕಡೆಗೆ ಮುಖ ಮಾಡಿ ತನ್ನ ಕೆಲಸದಲ್ಲಿ ಮಗ್ನಳಾಗಿದ್ದ ಪದ್ಮಿನಿ ದತ್ತಾತ್ರೇಯನಿಗೆ ಹಿಂದೆಂದಿಗಿಂತಲೂ ಕಠಿಣವಾಗಿ ಕಂಡು ಅವನು ಸದ್ದಿಲ್ಲದೆ ವಾಪಾಸು ಬಂದು ಕೆಳಗೆ ರಸ್ತೆಯಲ್ಲಿ ಹರಿಯುತ್ತಿದ್ದ ಜನಸಂದಣಿಯನ್ನು ಗಮನಿಸುತ್ತಾ, ಇವರಿಗೆಲ್ಲಾ ತನ್ನ ಸಮಸ್ಯೆಯ ಪರಿವೆಯೇ ಇಲ್ಲವಲ್ಲ ಎಂದು ಗಲಿಬಿಲಿಗೊಂಡ. ಪದ್ಮಿನಿಯನ್ನು ಮಾತಾಡಿಸಲು ನನಗೇಕೆ ಇಂಥ ಭಯವಾಗಬೇಕು? ಎಂಬ ಯಕ್ಷಪ್ರಶ್ನೆಯನ್ನು ಪ್ರಸ್ತುತ ವಾರದಲ್ಲಿ ನೂರಾ ಎಂಟನೇ ಸಲ ಹಾಕಿಕೊಂಡು ಖಿನ್ನನಾದ.


ಇದೆಲ್ಲ ಶುರುವಾಗಿದ್ದು ಸರಿಸುಮಾರು ಎರಡು ತಿಂಗಳಿನ ಹಿಂದೆ. ಕಂಪ್ಯೂಟರಿನ ಯಾವುದೋ ಡಿಪ್ಲೊಮಾ ಮುಗಿಸಿಕೊಂಡಿದ್ದ ಕುಮಾರ್ ತೀರ ಚಿಕ್ಕದಾದ ಆ ಸಣ್ಣ ರೂಮಿನಲ್ಲಿ ಎರಡು ಕಪ್ಪು-ಬಿಳುಪು ಕಂಪ್ಯೂಟರುಗಳನ್ನಿಟ್ಟುಕೊಂಡು, 'ವರ್ಚುಯಲ್ ಸಿಸ್ಟಮ್ಸ್' ಎಂಬ ದೊಡ್ಡ ಬೋರ್ಡು ಬರೆಸಿ, ಅದಕ್ಕೆ ಎರಡು ಮಾರು ಸೇವಂತಿಗೆ ಹೂವಿನ ಹಾರ ಹಾಕಿ, ಊದಿನ ಕಡ್ಡಿ ಬೆಳಗಿ, ಓಪನಿಂಗ್ ಶಾಸ್ತ್ರ ಮುಗಿಸಿದ ಮಾರನೇ ದಿನವೇ. ಆಗಷ್ಟೇ ಡಿಗ್ರಿ ಮುಗಿಸಿದ್ದ ದತ್ತಾತ್ರೇಯ ಫೀಜು ಕಡಿಮೆಯೆಂಬ ಒಂದೇ ಕಾರಣದಿಂದ ಸೇರಿಕೊಂಡ. ಕುಮಾರನ ಸಣ್ಣಕೋಣೆಯ ದೆಸೆಯಿಂದಲೋ ಅಥವಾ ಕಪ್ಪುಬಿಳುಪು ಮಾನಿಟರುಗಳ ದೆಸೆಯಿಂದಲೋ ಅಥವಾ ಕುಮಾರ ನೋಡಲು ಸ್ವಲ್ಪ ಪೆಕರನಂತೆ ಕಾಣುತ್ತಿದ್ದುದರಿಂದಲೋ ಅಂತೂ ದತ್ತಾತ್ರೇಯನ ನಂತರ ಆ ಕಂಪ್ಯೂಟರ್ ಸೆಂಟರಿಗೆ ಬಹಳ ಜನವೇನೂ ಸೇರಿಕೊಳ್ಳಲಿಲ್ಲ. ಹೀಗಾಗಿ ಸೇರಿದ ಕೆಲವರಿಗೆ ನಿಗದಿತ ಸಮಯಕ್ಕಿಂತ ಹೆಚ್ಚು ಹೊತ್ತು ಅಭ್ಯಾಸ ಮಾಡುವ ಅನುಕೂಲವಾಗುತ್ತಿತ್ತು. ದತ್ತಾತ್ರೇಯ ಅಭ್ಯಾಸಮಾಡುತ್ತಿದ್ದ ಸಂಜೆ ಆರೂವರೆಯಿಂದ ಏಳೂವರೆವರೆಗಿನ ಅವಧಿಯಲ್ಲಿ ಮತ್ಯಾರೂ ಬರುತ್ತಿರಲಿಲ್ಲವಾದ್ದರಿಂದ ಅವನ ಪಕ್ಕದಲ್ಲಿದ್ದ ಎರಡನೇ ಕಂಪ್ಯೂಟರ್ ಮುಸುಕು ಹೊದ್ದು ಕುಳಿತಿರುತ್ತಿತ್ತು. ಆ ಸಮಯ ಕುಮಾರನ ಚಾ, ಸಿಗರೇಟಿನ ಸಮಯವಾದ್ದರಿಂದ ಹತ್ತು ನಿಮಿಷ ದತ್ತಾತ್ರೇಯನಿಗೆ ಒಂದಷ್ಟು ಪಾಠ ಹೇಳಿದಂತೆ ಮಾಡಿ 'ಇದನ್ನ ಪ್ರಾಕ್ಟೀಸು ಮಾಡ್ತಿರು, ಈಗ ಬಂದೆ' ಎಂದು ಮೂರನೇ ಕ್ರಾಸಿನಲ್ಲಿದ್ದ ಸಲೀಮ್ ಟೀ ಶಾಪಿಗೆ ಹೋಗುತ್ತಿದ್ದವನು ಬರುತ್ತಿದ್ದುದು ಏಳೂವರೆಗೆ. ಹೀಗಾಗಿ ಪ್ರತಿದಿನವೂ ತೀರಾ ಸಣ್ಣದಾದ ಆ ರೂಮಿನಲ್ಲಿ ದತ್ತಾತ್ರೇಯ ಒಬ್ಬನೇ ಒಂದು ಗಂಟೆಯ ಅವಧಿಯನ್ನು ಕಂಪ್ಯೂಟರಿನೊಡನೆ ಕಳೆಯಬೇಕಾಗುತ್ತಿತ್ತು. ಆಗೆಲ್ಲಾ ಅವನು ಆ ಏಕಾಂತವನ್ನು ಅನುಭವಿಸುವವನಂತೆ ಕಾಲುಗಳನ್ನು ಉದ್ದಕ್ಕೆ ಗೋಡೆಗೆ ತಗಲುವಂತೆ ಚಾಚಿ, ಫ್ಯಾನಿಲ್ಲದ



ಕೋಣೆಯ ಸೆಖೆಯನ್ನು ನಿವಾರಿಸಲೆಂದು ಷರಟಿನ ಮೂರು ಗುಂಡಿಗಳನ್ನು ಬಿಚ್ಚಿ ಸಣ್ಣ ದನಿಯಲ್ಲಿ 'ಚಾಂದ್‌ನೇ ಕುಛ್ ಕಹಾ, ರಾತ್‌ನೇ ಕುಛ್ ಸುನಾ...' ಅಂತ ಯಾವುದೋ ಹಾಡನ್ನು ಗುನುಗಿಕೊಳ್ಳುತ್ತಾ ಕಂಪ್ಯೂಟರಿನೊಡನೆ ಗುದ್ದಾಡುತ್ತಿದ್ದವನು ಅಪರೂಪಕ್ಕೊಮ್ಮೆ ಯಾರಾದರೂ ಕುಮಾರನನ್ನು ಕೇಳಿಕೊಂಡು ತಕ್ಷಣ ಒಳಗೆ ಬಂದಾಗ ಸರಕ್ಕನೆ ಖುರ್ಚಿಯಿಂದೆದ್ದು ಷರಟಿನ ಗುಂಡಿಗಳನ್ನು ಹಾಕಿಕೊಳ್ಳುತ್ತಾ ''ಏಳೂವರೆಗೆ ಬನ್ನಿ ಸಿಗ್ತಾರೆ'' ಎಂದು ತಡವರಿಸುತ್ತಿದ್ದ.


ಒಂದು ತಿಂಗಳಿನವರೆಗೂ ಹೀಗೇ ದಿನಕಳೆಯುತ್ತಿದ್ದ ದತ್ತಾತ್ರೇಯನಿಗೆ ಅವತ್ತು ಕಂಪ್ಯೂಟರಿಗೆ ಬಂದಾಗ ಬಿಳಿಯ ಬಣ್ಣದ ವಸ್ತ್ರಗಳಲ್ಲಿ ಹಂಸದಂತೆ ಕಾಣುತ್ತಿದ್ದ ಹುಡುಗಿಯೊಬ್ಬಳು ಕುಮಾರನ ಹತ್ತಿರ 'ಹೌ ಟು ಕ್ರಿಯೇಟ್ ಎ ಡೈರೆಕ್ಟರಿ' ಎಂಬುದನ್ನು ಹೇಳಿಸಿಕೊಳ್ಳುತ್ತಿದ್ದುದು ಕಂಡು ತನ್ನ ಒಂಟಿತನದ ಸಮಸ್ಯೆ ಹೀಗೆ ಅನಿರೀಕ್ಷಿತ ರೋಮಾಂಚಕಾರಿ ರೀತಿಯಲ್ಲಿ ಪರಿಹಾರವಾದದ್ದು ಪರಮಾನಂದವುಂಟು ಮಾಡಿತು. ಅದರ ನಂತರ ದತ್ತಾತ್ರೇಯನಿಗೆ ಕಂಪ್ಯೂಟರಿಗೆ ಬರಲು ಎಂಥದೋ ಹೊಸ ಹುರುಪು ತುಂಬಿಕೊಂಡಿತು. ಮಾಮೂಲಿಯಂತೆ ಸೂಚನೆಗಳನ್ನು ಕೊಟ್ಟು ಕುಮಾರ್ ಸಲೀಮ್ ಟೀ ಶಾಪಿಗೆ ಹೋಗಿಬಿಡುತ್ತಿದ್ದ. ಇವನು ಇನ್‌ಷರ್ಟ್ ಮಾಡಿಕೊಂಡು ನೇರವಾಗಿ ಕೂತುಕೊಂಡು ಸೀರಿಯಸ್ಸಾಗಿ ಅಭ್ಯಾಸ ಮಾಡಲಾರಂಭಿಸಿದ. ಪಕ್ಕದಲ್ಲಿ ಕುಳಿತ ಪದ್ಮಿನಿಯ ಮೈಯಿಂದ ಎಂಥದೋ ಸುವಾಸನೆ ಬರುತ್ತಿತ್ತು. ಅದನ್ನು ಹೀರಿಕೊಳ್ಳುತ್ತಾ, ಅವಳ ಬೆಳ್ಳನೆ ಪಾದಗಳನ್ನು ಗಮನಿಸುತ್ತಾ ಸ್ವಲ್ಪ ಹೊತ್ತು ಮೈ ಮರೆಯುತ್ತಿದ್ದ ದತ್ತಾತ್ರೇಯ ಮರುಕ್ಷಣವೇ ಅವಳ ಇರುವಿಕೆಯಿಂದ ತನಗೇನೂ ಆಗಿಲ್ಲವೆನ್ನುವುದನ್ನ ಯಾರಿಗೋ ತೋರಿಸುವವನಂತೆ ಒಮ್ಮೆ ಪುಸ್ತಕದೆಡೆಗೂ ಮತ್ತೊಮ್ಮೆ ಕಂಪ್ಯೂಟರ್ ತೆರೆಯೆಡೆಗೂ ನೋಡುತ್ತಾ ಬ್ಯುಸಿಯಾಗಿ ಅಭ್ಯಾಸಮಾಡುತ್ತಿದ್ದ. ಮತ್ತೆರಡು ನಿಮಿಷದಲ್ಲಿ ಟೈಪು ಮಾಡುತ್ತಿದ್ದ ಅವಳ ಬೆರಳುಗಳೋ, ಮುಡಿದ ಜಾಜಿ ಹೂವಿನ ವಾಸನೆಯೋ ಅಥವಾ ಅವಳು ಕುಳಿತ ಭಂಗಿಯೋ ಅವನ ಗಮನವನ್ನು ಸೆಳೆಯುತ್ತಿದ್ದವು. ಇಲ್ಲಿಯವರೆಗೂ ಯಾವ ಹುಡುಗಿಯನ್ನೂ ಗೆಳತಿಯನ್ನಾಗಿ ಮಾಡಿಕೊಂಡ ಅನುಭವವಿಲ್ಲದ ದತ್ತಾತ್ರೇಯನಿಗೆ ಈಗ ತನ್ನ ಪಕ್ಕದಲ್ಲಿ ಕೂತುಕೊಳ್ಳುವ ಪದ್ಮಿನಿ ಎಂಬ ಹುಡುಗಿಯನ್ನು ತಾನು ಮಾತಾಡಿಸಿ ಗೆಳೆತನ ಆರಂಭಿಸುವ ಬಗ್ಗೆ ಯಾವ ನಂಬಿಕೆಯೂ ಇರಲಿಲ್ಲವಾದುದರಿಂದ ಈ ವಾಸನೆ ಹೀರುವ, ಪಾದಗಳನ್ನು ಗಮನಿಸುವ, ಅವಳು ಕುಳಿತ ಭಂಗಿಯನ್ನು ಗುಟ್ಟಾಗಿ ನೋಡುವ ಆಟಗಳೆಲ್ಲಾ ಬಲು ಬೇಗ ಬೇಸರವಾಗಿಹೋಗಿ 'ಇವಳು ಬರದಿದ್ದರೇ ಚೆನ್ನಾಗಿತ್ತು, ಕಾಲು ಚಾಚಿ, ಗುಂಡಿ ಬಿಚ್ಚಿಕೊಂಡು, ಹಾಡಿಕೊಳ್ಳುವ ಸ್ವಾತಂತ್ರ್ಯವಾದರೂ ಉಳಿಯುತ್ತಿತ್ತು' ಎಂದುಕೊಳ್ಳಲಾರಂಭಿಸಿದ. ಆದರೂ ಒಮ್ಮೊಮ್ಮೆ ಈ ಪದ್ಮಿನಿ ಎಂಬ ಹುಡುಗಿ ತನ್ನ ಯೋಚನೆಗಳನ್ನು ನಿಯಂತ್ರಿಸುತ್ತಾಳೆ ಎಂಬ ಅರಿವು ದತ್ತಾತ್ರೇಯನಿಗೂ ಇತ್ತು.

ಹೀಗಿರುವಾಗ ತಮ್ಮಿಬ್ಬರ ಮೊದಲ ಮಾತು ಕತೆ ಇಷ್ಟು ಅನಿರೀಕ್ಷಿತವಾಗಿ ಆಗಿಬಿಡಬಹುದೆಂಬ ಕಲ್ಪನೆಯೂ ದತ್ತಾತ್ರೇಯನಿಗಿರಲಿಲ್ಲ. ಅವತ್ತು ಪದ್ಮಿನಿ ಏನನ್ನೋ ಟೈಪು ಮಾಡುತ್ತಿದ್ದಳು. ನೋಡಲು ಮುದ್ದಾಗಿದ್ದರೂ ಪದ್ಮಿನಿ ಸ್ಪೆಲಿಂಗ್ ವಿಷಯದಲ್ಲಿ ಮಹಾದಡ್ಡಿಯಾಗಿದ್ದಳು. ಅವಳು ಮಾಡಿದ ಮಿಸ್ಟೇಕುಗಳನ್ನು ಗಮನಿಸಿ ಮನಸ್ಸಿನಲ್ಲೇ ನಗುತ್ತಾ ಮುಂದೆ ಓದುತ್ತಿದ್ದ ದತ್ತಾತ್ರೇಯನಿಗೆ ಅವಳು ಒಂದು ಕಡೆ No Smoking ಎಂಬುದಕ್ಕೆ Know Smoking ಎಂದು ಟೈಪು ಮಾಡಿದ್ದನ್ನು ನೋಡಿದಾಗ ಆಘಾತವಾಗಿ ತಡೆಯಲಾಗದೆ ಮಾಯೆಯಲ್ಲೆಂಬಂತೆ ಅದನ್ನು ಅವಳಿಗೆ ಹೇಳಿ ಬಿಟ್ಟ. ತನ್ನ ಅನರ್ಥಕಾರಿ ತಪ್ಪನ್ನು ನೋಡಿ ಪದ್ಮಿನಿ 'ಅಯ್ಯಯ್ಯೋ' ಎಂದು ತನ್ನ ಕೈ ಬೆರಳುಗಳನ್ನು ಕೊಡವಿಕೊಳ್ಳುತ್ತಾ 'ಥ್ಯಾಂಕ್ಸ್ ರೀ' ಎನ್ನುವಾಗ ಅವಳ ತುಟಿಯಂಚಿನಲ್ಲಿ ಸುಂದರ ನಗುವಿತ್ತು. ಆ ನಗು ದತ್ತಾತ್ರೇಯನನ್ನು ಕನಸಿನಲ್ಲೂ ಕಾಡ ತೊಡಗಿತು. ಈಗ ಪದ್ಮಿನಿ ಎಲ್ಲ ಸಣ್ಣ ಪುಟ್ಟ ಡೌಟುಗಳನ್ನೂ ದತ್ತಾತ್ರೇಯನ ಹತ್ತಿರವೇ ಕೇಳು ತ್ತಿದ್ದಳು. 'ಅಯ್ಯೋ, ಈ ಟೂಲ್‌ಬಾರ್ ಕೆಳಗೆ ಹೋಯ್ತಲ್ಲ? 'ಇದನ್ನ ಮೂಲೆಯಿಂದ ಸೆಂಟರಿಗೆ ತರಬೋದಾ?', 'ಇದನ್ನು ಚಿಕ್ಕದು ಮಾಡೋದು ಹೇಗೆ?' ಅಂತೆಲ್ಲಾ ವಿಧವಿಧವಾದ ಪ್ರಶ್ನೆಗಳಿ ಗೆಲ್ಲಾ ಪರಿಹಾರ ನೀಡುತ್ತಿದ್ದ ದತ್ತಾತ್ರೇಯ ಒಂದು ತಿಂಗಳು ಮೊದಲೇ ಅದನ್ನೆಲ್ಲಾ ಕಲಿತಿದ್ದು ಸಾರ್ಥಕವಾಯಿತು ಎಂದುಕೊಳ್ಳುತ್ತಿದ್ದ. ಅವುಗಳ ಜೊತೆಗೆ ಇಂಗ್ಲೀಷ್ ಸ್ಪೆಲಿಂಗ್‌ನಲ್ಲಿ ಮಹಾಪೆದ್ದಿ ಯಾದ್ದರಿಂದ ಮತ್ತೆ ಮತ್ತೆ ತನ್ನ ತಪ್ಪುಗಳನ್ನು ಸರಿಮಾಡುತ್ತಿದ್ದ ದತ್ತಾತ್ರೇಯನಿಗೆ ಥ್ಯಾಂಕ್ಸ್ ಹೇಳುತ್ತಾ ಮೋಹಕವಾಗಿ ನಗುತ್ತಿದ್ದಳು ಪದ್ಮಿನಿ. ಹೀಗೆ ಸ್ವಲ್ಪ ಪೆದ್ದಾದರೂ ಮುದ್ದಾದ ಪದ್ಮಿನಿ ಯೆಂಬ ಹುಡುಗಿಯ ಥ್ಯಾಂಕ್ಸ್‌ಗಳಲ್ಲಿ ಮೀಯುತ್ತಾ ಮೈಮರೆತಿದ್ದ ದತ್ತಾತ್ರೇಯನೂ ಲಕ್ಷಣವಂತ ನಾಗಿಯೂ, ವಿನಯವಂತನಾಗಿಯೂ ಇದ್ದುದ ರಿಂದ ಪದ್ಮಿನಿಯ ಎದೆಯಲ್ಲೂ ಪ್ರೀತಿ ಹಕ್ಕಿ ರೆಕ್ಕೆ ಬಡಿಯಲಾರಂಭಿಸಿತು. ಎಂದೋ ಒಂದು ದಿನ ಬಗ್ಗಿದರೆ ಕಾಣುವ ಪೇಟೆಯಲ್ಲಿ ಹೆಂಗಸರು




ಕೊತ್ತಂಬರಿಸೊಪ್ಪಿಗೆ ಚೌಕಾಶಿ ಮಾಡುತ್ತಿರುವಾಗಲೋ, ಎರಡನೇ ಫ್ಲೋರಿನ ಟೈಲರ್ ಷರ್ಟಿನ ಅಳತೆ ಬರೆದುಕೊಂಡು ಪ್ಯಾಂಟಿನ ಅಳತೆ ನಡೆಸಿರುವಾಗಲೋ, ಸಲೀಮ್ ಟೀ ಶಾಪಿನಲ್ಲಿ ಪೆದ್ದನಂತೆ ಕುಳಿತ ಕುಮಾರ ಎರಡನೇ ರೌಂಡು ಚಾ ಕುಡಿದು ಮೂರನೇ ಸಿಗರೇಟು ಸುಡುತ್ತಿರುವಾಗಲೋ ಅಂತೂ ಸದ್ದಿಲ್ಲದೆ ಇವರಿಬ್ಬರೂ ತಮ್ಮ ಹೃದಯಗಳನ್ನು ಬಿಚ್ಚಿಟ್ಟುಕೊಂಡರು. ಮುಂದಿನ ದಿನಗಳಲ್ಲಿ ಸಂಜೆಯ ಹೊತ್ತು ಅವರಿಬ್ಬರೂ ಪಕ್ಕದಲ್ಲೇ ಇದ್ದ ವಿವೇಕಾನಂದ ಪಾರ್ಕಿನ ಹಸಿರಿನಲ್ಲಿ ಕೂತು ಕೈ ಕೈ ಹಿಡಿದು 'ಏನಾದ್ರೂ, ಹೇಳು' 'ಏನು ಹೇಳಲಿ, ನೀನೇ ಹೇಳು' ಎಂದು ಗಂಟೆಗಟ್ಟಲೇ ಮಾತಾಡಲಾರಂಭಿಸಿದರು.

ಹೀಗಿರಲು ಒಂದು ದಿನ ಯಾಕೋ ಪದ್ಮಿನಿ ಕಂಪ್ಯೂಟರ್ ಸೆಂಟರಿಗೆ ಬರದಿರಲು ಅದೇ ಬೇಸರದಿಂದ ಸುಮ್ಮನೆ ಕಂಪ್ಯೂಟರಿನ ಮುಂದೆ ಕೂತಿದ್ದ ದತ್ತಾತ್ರೇಯ ಕುತೂಹಲಕ್ಕೆಂದು ಪದ್ಮಿನಿಯ ಫೈಲು ತೆರೆದು ನೋಡತೊಡಗಿದ. ಅದರಲ್ಲಿ ಅವಳ ಬಯೋಡೇಟಾವಿತ್ತು. ಅವಳ ಜನ್ಮದಿನಾಂಕಕ್ಕಾಗಿ ಹುಡುಕಿದ. ಅದು ನಾಳೆ ಬಿಟ್ಟು ನಾಡಿದ್ದೇ ಇರುವುದನ್ನು ಗಮನಿಸಿದ ದತ್ತಾತ್ರೇಯ ತಾನೇನಾದರೂ ಇವತ್ತು ಇದನ್ನು ನೋಡದಿದ್ದರೆ ತನ್ನ ಪ್ರೀತಿಯ ಹುಡುಗಿಯ ಬರ್ತ್‌ಡೇ ತನಗೆ ಗೊತ್ತಿಲ್ಲದಂತೆ ಕಳೆದು ಹೋಗಿಬಿಡುತ್ತಿತ್ತಲ್ಲ ಎಂದು ಸಂತೋಷ ಮಿಶ್ರಿತ ಗಾಬರಿಯಲ್ಲಿ ಕಳೆದುಹೋದ. ಅವಳಿಗೆ ಸುಳಿವೇ ನೀಡದೆ ಒಂದು ವಿಶೇಷವಾದ ಉಡುಗೊರೆಯನ್ನು ಕೊಡಬೇಕೆಂದು ನಿರ್ಧರಿಸಿದ. ರಾತ್ರಿಯೆಲ್ಲ ಕುಳಿತು ಯೋಚಿಸಿದ ದತ್ತಾತ್ರೇಯ ಗ್ರೀಟಿಂಗ್‌ಕಾರ್ಡು, ಪೆನ್ನು, ಕೆಸೆಟ್ಟುಗಳಂತಹ ಮಾಮೂಲಿ ಉಡುಗೊರೆ ಕೊಡಬಾರದು, ಏನಾದರೂ ವಿಶೇಷವಾದದ್ದನ್ನು ಕೊಡಬೇಕೆಂದು ಅಂದುಕೊಂಡನೇ ಹೊರತು ಆ ವಿಶೇಷವಾದದ್ದು ಏನು ಎಂಬುದು ಮಾತ್ರ ಅವನಿಗೆ ಹೊಳೆಯಲಿಲ್ಲ. ಮಧ್ಯಾಹ್ನ ಊಟ ಮಾಡುವಾಗಲೂ ಯಾರೂ ಎಂದೂ ಕೊಟ್ಟಿರಬಾರದು, ವಿಶೇಷವಾಗಿರಬೇಕು, ಅವಳ ಹೃದಯಕ್ಕೆ ಹತ್ತಿರ ಇರುವಂಥದ್ದಾಗಿರಬೇಕು ಎಂಬ ಮೂರು ಅಂಶಗಳನ್ನು ಇಟ್ಟುಕೊಂಡು ಯೋಚಿಸುತ್ತಿರುವಾಗ ಹೃದಯಕ್ಕೆ ಹತ್ತಿರ ಇರುವಂಥದು ಎಂಬ ಅಂಶದಿಂದಾಗಿ ಒಂದು ಕಿಡಿಗೇಡಿ ಆಲೋಚನೆ ಅವನಿಗೆ ಹೊಳೆದು ನಗು ಬಂತು. ಮತ್ತೆರಡು ಕ್ಷಣಗಳಲ್ಲಿ ಅದನ್ನೇ ಯಾಕೆ ಕೊಡಬಾರದು ಅಂತ ಚಿಂತಿಸತೊಡಗಿ ಮತ್ತೊಂದು ಕ್ಷಣದಲ್ಲಿ ಅದನ್ನೇ ಕೊಡುವುದು ಎಂದು ದೃಢವಾಗಿ ನಿರ್ಧರಿಸಿದ. ಅದು ಒಂದು 'ಬ್ರಾ,' ಆಗಿತ್ತು. ಆಗಿನಿಂದಲೂ ದತ್ತಾತ್ರೇಯ ಅದನ್ನು ಪದ್ಮಿನಿಗೆ ವಿವೇಕಾನಂದ ಪಾರ್ಕಿನ ಮಾಮೂಲಿ ಜಾಗದಲ್ಲಿ ಕೊಟ್ಟಾಗ ಅವಳು ನಾಚಿ ನೀರಾಗಿ ತಲೆತಗ್ಗಿಸುವಳೋ, ಹುಸಿಕೋಪದಿಂದ ಮುನಿಸಿಕೊಳ್ಳುವಳೋ, ಅಥವಾ ಅಟ್ಟಿಸಿಕೊಂಡು ಬಂದು ಬೆನ್ನಿಗೊಂದು ಹುಸಿಪೆಟ್ಟುಕೊಟ್ಟು ತಬ್ಬಿ



ಕೊಳ್ಳುವಳೋ ಎಂದೆಲ್ಲಾ ಕಲ್ಪಿಸಿಕೊಂಡು ರೋಮಾಂಚಿತನಾಗತೊಡಗಿದ. ನೆಹರೂ ಸರ್ಕಲ್ಲಿನ ಹತ್ತಿರ ಹೊಸದಾಗಿ ತೆರೆದಿರುವ ಹೆಂಗಸರ ಒಳಉಡುಪುಗಳ ಅಂಗಡಿ 'ಪೆಟಲ್ಸ್'ನ ಮೆಟ್ಟಿಲುಗಳನ್ನೇರುತ್ತಿರುವಾಗ ದತ್ತಾತ್ರೇಯನಿಗೆ ಅಸಲೀ ಸಮಸ್ಯೆಯೊಂದು ಹೊಳೆದು ವಾಪಾಸು ಬಂದುಬಿಟ್ಟ. ಅದು ಬ್ರಾನ ಸೈಜಿನದು. ನಿಜ ಹೇಳಬೇಕೆಂದರೆ ಬ್ರಾಗಳು ಯಾವ ರೇಂಜಿನ ಸೈಜುಗಳಲ್ಲಿರುತ್ತವೆ ಎಂಬ ಮೂಲಭೂತ ಕಲ್ಪನೆಯೂ ಇರದಿದ್ದ ದತ್ತಾತ್ರೇಯನಿಗೆ ಇದು ಯಾಕೋ ಸುಲಭದ ಸಮಸ್ಯೆಯಲ್ಲ ಎನಿಸತೊಡಗಿತು. ಸಂಜೆ ಪದ್ಮಿನಿ ಕಂಪ್ಯೂಟರಿನ ಮುಂದೆ ಕುಳಿತಿರುವಾಗ ಕಳ್ಳನಂತೆ ಅವಳಿಗೆ ಗೊತ್ತಾಗದಂತೆ ಅವಳ ಎದೆಯನ್ನು ಗಮನಿಸಿದ. ಹೊರಗೆ ಬಂದು ಸೈಜು ಎಷ್ಟಿರಬಹುದು ಎಂದು ಕಣ್ಮುಚ್ಚಿಕೊಂಡು ಎಷ್ಟು ಹೊತ್ತು ಯೋಚಿಸಿದರೂ ಬರಿಯ ಗೋಲಾಕೃತಿಗಳು ಕಣ್ಮುಂದೆ ತಿರುಗಿದವೇ ಹೊರತು ಯಾವ ನಂಬರೂ ಕಾಣದೆ ವಿಚಲಿತನಾದ. 'ಪೆಟಲ್ಸ್' ಅಂಗಡಿಯ ಸೇಲ್ಸ್‌ಗರ್ಲ್‌ನ್ನು 'ನಿಮ್ಮ ಸೈಜಿನದೇ ಕೊಡಿ' ಅಂದರೆ ಚಪ್ಪಲಿಯಿಂದ ಹೊಡೆಯುವಳೋ ಎಂದು ಯೋಚಿಸಿ ಕಂಗೆಟ್ಟ. ಬಹಳ ಹೊತ್ತು ರಸ್ತೆಯಲ್ಲಿ ಹೋಗಿ ಬರುವ ಹೆಂಗಸರನ್ನೆಲ್ಲ ಗಮನಿಸಿದ. ಇನ್ನೇನು ಈ ಸಮಸ್ಯೆಗೆ ಪರಿಹಾರವೇ ಇಲ್ಲ ಎಂದು ದುಃಖತಪ್ತನಾಗಿರುವಾಗ ತಟ್ಟನೆ ಸ್ವಲ್ಪ ಮುಜುಗರವಾದರೂ ಅಷ್ಟೊಂದು ಅಪಾಯಕಾರಿಯಲ್ಲದ ಪರಿಹಾರವೊಂದು ಹೊಳೆದು ಉತ್ಸಾಹಿತನಾದ. ಮಿಂಚುತ್ತಿದ್ದ ಗಾಜಿನ ಶೋಕೇಸಿನಲ್ಲಿದ್ದ ಬೊಂಬೆಗೆ ಹಾಕಿದ್ದನ್ನು ತೋರಿಸಿ 'ಅದೇ ಬೇಕು, ಅದೇ ಸೈಜು, ಅದೇ ಕೊಡಿ' ಎಂದು ಸೇಲ್ಸ್‌ಗರ್ಲ್‌ನ ಮುಖ ನೋಡದೆ ತೊದಲಿದ ದತ್ತಾತ್ರೇಯನನ್ನು ವಿಚಿತ್ರಪ್ರಾಣಿಯಂತೆ ನೋಡಿದಳು ಅವಳು. ಸೇಲ್ಸ್‌ಗರ್ಲ್ ಕೈಯಿಂದ ಅದನ್ನು ಹೆಚ್ಚುಕಡಿಮೆ ಕಸಿದುಕೊಂಡವನು ಚಿಲ್ಲರೆಗೂ ಕಾಯದೆ ಹೊರಬಿದ್ದು ಎದುರಿನ ಹೋಟೆಲ್‌ನಲ್ಲಿ ಒಂದೇ ಬಾರಿಗೆ ಎರಡು ಟೀ ಕುಡಿದು ಸುಧಾರಿಸಿಕೊಂಡ. ಸಾಯಂಕಾಲ ಪಾರ್ಕಿನಲ್ಲಿ ಪದ್ಮಿನಿಗೆ ಅದನ್ನು ಕೊಡುವ ದೃಶ್ಯವನ್ನು ನೆನೆದು ಉತ್ಸಾಹದಿಂದ ಕೈಲಿದ್ದ ಉಡುಗೊರೆಯನ್ನೊಮ್ಮೆ ಸವರಿದ.



ಸಂಜೆ ಅವರಿಬ್ಬರೂ ವಿವೇಕಾನಂದ ಪಾರ್ಕಿನಲ್ಲಿ ಎದಿರುಬದಿರಾಗಿ ಕುಳಿತಾಗ ಕತ್ತಲಾಗುತ್ತಾ ಬಂದಿತ್ತು. ದತ್ತಾತ್ರೇಯ 'ಹುಟ್ಟು ಹಬ್ಬದ ಶುಭಾಶಯಗಳು' ಎನ್ನುತ್ತಾ ಉಡುಗೊರೆಯ ಪೊಟ್ಟಣವನ್ನು ಪದ್ಮಿನಿಯ ಕೈಗಿತ್ತಾಗ ಅವಳು ಅಚ್ಚರಿಯಿಂದ 'ನಾನೇ ಮರೆತುಬಿಟ್ಟಿದ್ದೆ ಡಿಸೆಂಬರ್ 14 ಅಲ್ವಾ? ನಿಂಗೆ ಹೆಂಗೊತ್ತಾಯ್ತು?' ಅಂತ ವಿಚಾರಿಸುತ್ತಾ ಉಡುಗೊರೆಯ ಪೊಟ್ಟಣವನ್ನು ಬಿಚ್ಚತೊಡಗಿದಳು. ಇವನಿಗೂ ಎಂಥದೋ ಕುತೂಹಲ ಮಿಶ್ರಿತ ಆತಂಕ. ಕಾಗದ ಹರಿಯುವ ಪರ ಪರ ಸದ್ದಿನ ಜೊತೆಗೆ ಕಾಯುತ್ತಾ ಕುಳಿತ. ಪಿಂಕ್ ಬಣ್ಣದ ಬ್ರಾ ನೋಡುತ್ತಲೇ ಪದ್ಮಿನಿ ಹೌಹಾರಿದಳು. ಹೇಗೆ ಪ್ರತಿಕ್ರಿಯಿಸುವುದು ಎಂದು ತಿಳಿಯದೆ ವಿಚಲಿತಳಾದಳು. ತಕ್ಷಣ ಸಾವರಿಸಿಕೊಂಡು ತಲೆ ಎತ್ತಿದಳು. ಅವಳ ಮುಖ ಕೋಪದಿಂದ ಕೆಂಪಾಗಿತ್ತು. ಕಣ್ಣುಗಳು ಅಗಲವಾಗಿ ಮೂಗು ಕಂಪಿಸುತ್ತಿತ್ತು. ಅವಳದೇ, ಅಲ್ಲವೇನೋ ಎಂಬಂತಹ ವಿಚಿತ್ರ ದನಿಯಲ್ಲಿ ಚೀರಿದಂತೆ ಮಾತಾಡತೊಡಗಿದಳು. ''ನೀನು ನನ್ನ ಏನು ಅಂತ ತಿಳ್ಕಂಡಿದೀಯ? ಇಂಥದನ್ನ

ತಂದುಕೊಡೋಕೆ ನಿಂಗೆಷ್ಟು ಧೈರ್ಯ ಇರಬೇಕು? ನನ್ನೇನು ಥರ್ಡ್‌ಕ್ಲಾಸ್ ಹುಡುಗಿ ಅಂತ ಅಂದ್ಕಂಡೆಯಾ? ಹೇಳು... ನಿನ್ನ ಉದ್ದೇಶ ಏನಿದೆ ಹೇಳು ನೇರವಾಗಿ? ನನಗ್ಯಾರೂ ಹೇಳೋರು ಕೇಳೋರು ಇಲ್ಲಾ ಅಂದುಕೊಂಡಿದೀಯಾ? ನಿಂದು ಇಂಥ ಕಚಡಾಬುದ್ಧಿ ಅಂತ ನಾನು ಕನಸು ಮನಸಲ್ಲೂ ಎಣಿಸಿರಲಿಲ್ಲ'' ಎನ್ನುವಾಗ ಪದ್ಮಿನಿ ಮಿತಿಮೀರಿದ ಕೋಪದಿಂದ ತೊದಲುತ್ತಿದ್ದಳು. ದತ್ತಾತ್ರೇಯ ಈ ಅನಿರೀಕ್ಷಿತದಿಂದ ಪೆಚ್ಚಾಗಿ ಏನೋ ಹೇಳಲು ಬಾಯಿತೆರೆದ. ಅಷ್ಟರಲ್ಲಿ 'ನೀನೇನೂ ಹೇಳೂದು ಬೇಡ. ಒಂದ್ ನಿಮಿಷನೂ ಇಲ್ಲಿ ಕೂತುಕೋ ಬೇಡ. ಎದ್ದೋಗು' ಎಂದು ಚೀರಿದಳು. ಅವನಿಗೂ ಕೋಪ ಬಂದು 'ಆಯ್ತು ಇನ್ನೆಂದೂ ನಿನ್ನ ಮುಖ ಕೂಡ ನೋಡಲ್ಲ' ಎಂದು ಹೇಳಿ ದಡದಡನೇ ಹೊರಟು ಹೋದ. ಅವನು ಹೊರಟು ಹೋದ ಎರಡು ನಿಮಿಷದ ನಂತರ ವಾಸ್ತವಕ್ಕೆ ಬಂದ ಪದ್ಮಿನಿ ಅವನು ಹೋದರೂ ನಾನೇಕೆ ಹೀಗೆ ಕತ್ತಲಲ್ಲಿ ಕೂತುಕೊಂಡಿರುವೆ ಎಂದು ಎದ್ದು ಹೊರಟವಳು ಅವನು ಕೊಟ್ಟ ಆ ಉಡುಗೊರೆಯನ್ನು ತೆಗೆದುಕೊಂಡು ಹೋಗುವುದೋ ಬೇಡವೋ ಎಂಬ ಸಂದಿಗ್ಧದಲ್ಲಿ ಬಿದ್ದಳು.

ಇದಾದ ಮರುದಿನ ದತ್ತಾತ್ರೇಯ ಪದ್ಮಿನಿ ಎದುರಿಗೇ ಬಂದಾಗಲೂ ಮುಖತಿರುಗಿಸಿಕೊಂಡು ಹೋದ. ಪದ್ಮಿನಿಗೆ ಬಹು ಅಗತ್ಯವಾದ ಸಮಸ್ಯೆ ಬಂದರೂ ಕಾದಿದ್ದು ಕುಮಾರನ ಬಳಿಯೇ ಪರಿಹರಿಸಿಕೊಂಡಳು. 'ನನ್ನದು ಕಚಡಾ ಬುದ್ಧಿ ಅಂತಾಳೆ, ಹೌದು ಇಷ್ಟು ದಿನವಾದರೂ ಒಂದು ಮುತ್ತು ಸಹ ಕೇಳಲಿಲ್ಲವಲ್ಲ, ನನ್ನದು ಕಚಡಾ ಬುದ್ಧಿಯೇ. ಹೋಗೆಲೇ ನಿನ್ನಂಥ ಹುಡುಗಿಯರು ನೂರು ಜನ' ಎಂದುಕೊಳ್ಳುತ್ತಾ ದತ್ತಾತ್ರೇಯ ಅವಳ ಮೇಲಿನ ಕೋಪವನ್ನು ಕಂಪ್ಯೂಟರ್ ಕೀಗಳ ಮೇಲೆ ತೋರಿಸತೊಡಗಿದ. 'ಎಲ್ಲ ಬಿಟ್ಟು ಅದೇ ಕೊಡಬೇಕಾದರೆ ಕೆಟ್ಟ ಒಳ ಉದ್ದೇಶವಿರಲೇಬೇಕು. ಸಧ್ಯ ಗಂಡಸರ ಬುದ್ಧೀನ ಆರಂಭದಲ್ಲೇ ತೋರಿಸಿದ' ಎಂದುಕೊಂಡ ಪದ್ಮಿನಿ ಅವನತ್ತ ತಪ್ಪಿಯೂ ತಿರುಗಿ ನೋಡದಂತೆ ಅಭ್ಯಾಸ ನಡೆಸಿದಳು. ಅವಳು ತನ್ನ ಹೊಟ್ಟೆ ಉರಿಸಲೆಂದೇ ಕುಮಾರನ ಹತ್ತಿರ ನಗುನಗುತ್ತಾ ಮಾತಾಡುತ್ತಿರುವಳು ಎಂದು ದತ್ತಾತ್ರೇಯನಿಗೆ ಅನಿಸತೊಡಗಿತು. ಈಗಾಗಲೇ ಕಂಪ್ಯೂಟರ್ ಸಹಾಯದಿಂದಲೇ Spell check ಮಾಡಲು ಕಲಿತಿದ್ದ ಪದ್ಮಿನಿ ಬೇಕೆಂತಲೇ ಅವನಿಗೆ ಕಾಣುವಂತೆ ಎರಡೆರಡು ಸಲ Spell check ಮಾಡಿದಳು. ಇವನಿಗೆ ಕೋಪಹೆಚ್ಚಿ ಕಂಪ್ಯೂಟರ್ ಕೀಗಳನ್ನು ಮತ್ತಷ್ಟು ಒರಟಾಗಿ ಬಾರಿಸುತ್ತಿದ್ದ. ಹೀಗೆ ಯಾರದೋ ವೈಯಕ್ತಿಕ ಜಗಳದಲ್ಲಿ ತನ್ನ ಕಂಪ್ಯೂಟರು ಹಾಳಾಗುವುದನ್ನು ನೋಡಿ ಹೌಹಾರಲು ಕುಮಾರನು ಅಲ್ಲಿರದೆ ಒಂದು ಫರ್ಲಾಂಗು ದೂರದ 'ಸಲೀಮ್ ಟೀ ಶಾಪಿನಲ್ಲಿ ಮೂರನೇ ಸಿಗರೇಟು ಎಳೆಯುತ್ತಿದ್ದನು. ಆದರೆ ದತ್ತಾತ್ರೇಯನಿಗೆ ಈ ಆವೇಶವೆಲ್ಲಾ ಎರಡು ದಿನಕ್ಕೆ ಇಳಿದು ಪದ್ಮಿನಿಯ ಬಗ್ಗೆ ಪ್ರಸನ್ನತೆ ಮೂಡತೊಡಗಿತು. ಆದರೂ ಸುಮ್ಮನೇ ಒಂದೇ ಉಸಿರಿನಲ್ಲಿ ಪ್ರೀತಿಸುವುದರಲ್ಲಿ ಏನು ಮಜಾ ಇದೆ. ಹೀಗೆ ಆಗಾಗ ಜಗಳ, ಮುನಿಸುಗಳಿದ್ದರೇನೇ ಚೆನ್ನ ಎಂದೆನಿಸಿತು. ಮತ್ತೆ ಎರಡು ದಿನ ಕಳೆದ ಬಳಿಕ ಅವನಿಗೆ ದುಃಖವಾಗತೊಡಗಿತು. ಈ ಜಗಳ ಆಗದೇ ಇದ್ದಿದ್ದರೆ ದಿನಾ ಪಾರ್ಕಿನಲ್ಲಿ ಕುಳಿತು ಮಾತಾಡುತ್ತಿದ್ದೆವು ಎಂದು ನೆನಸಿಕೊಂಡಾಗ ಅವನ ದುಃಖ ಮತ್ತೂ ಹೆಚ್ಚಾಯಿತು. ಇದೆಲ್ಲಾ ಆದದ್ದು ತನ್ನಿಂದಲೇ, ಎಲ್ಲಾ ಬಿಟ್ಟು ಅಂಥ ಪೋಲಿ ಆಲೋಚನೆ ಯಾಕೆ ಬರಬೇಕಿತ್ತು ನಂಗೆ ಅಂತ ತನ್ನನ್ನೇ ಹಳಿದುಕೊಂಡ. ಯಾವತ್ತೋ ಒಂದು ದಿನ ಪದ್ಮಿನಿ ಅವನ ಕೈ ಹಿಡಿದುಕೊಂಡು 'ಜಗತ್ತಿನಲ್ಲಿ ಪ್ರೇಮಕ್ಕಿಂತ ನಿರ್ಮಲವಾದದ್ದು ಯಾವುದೂ ಇಲ್ಲ ಅಲ್ಲವೇ' ಅಂತ ಕೇಳಿದ್ದು ನೆನಪಾಗಿ 'ಛೆ! ಅಂಥಾ ಮುಗ್ಧ

ಹುಡುಗಿಗೆ ಇಂಥಾ ಉಡುಗೊರೆ ಕೊಟ್ಟರೆ ನನ್ನ ಒಳ ಉದ್ದೇಶದ ಮೇಲೆ ಅನುಮಾನ ಬರುವುದು ಸಹಜವೇ ಆಗಿದೆ' ಎಂದುಕೊಂಡು ಆಗಷ್ಟೇ ಜ್ಞಾನೋದಯವಾದಂತೆ ಯಾರಿಗೂ ಕಾಣದಂತೆ ಅತ್ತ. ತಪ್ಪು ಒಪ್ಪುಗಳಲ್ಲಿ ಪ್ರೀತಿ ಕಳೆದುಹೋಗಲು ಬಿಡಬಾರದು, ಕಾಲು ಹಿಡಿದಾದರೂ ಅವಳ ಕ್ಷಮೆ ಕೇಳಿ ಎಲ್ಲಾ ಮೊದಲಿನಂತಾಗುವಂತೆ ಮಾಡಬೇಕು ಎಂದು ನಿರ್ಧರಿಸಿದ ಮೇಲೇ ಅವನಿಗೆ ನಿದ್ದೆ ಬಂದದ್ದು.

ಮರುದಿನ ಸಾಯಂಕಾಲ ಅವನು ಕಾಲು ಗಂಟೆ ಮೊದಲೇ ಹೋಗಿ ಕಂಪ್ಯೂಟರ್ ಸೆಂಟರಿನಲ್ಲಿ ಪದ್ಮಿನಿಗಾಗಿ ಕಾಯತೊಡಗಿದ. ಅವಳು ಯಾವುದೋ ಹೊಸ ಚೂಡಿದಾರದಲ್ಲಿ ಸುಂದರವಾಗಿ ಸಿಂಗರಿಸಿಕೊಂಡಿದ್ದಳು. ಪಾಠ ಹೇಳಿಕೊಡುತ್ತಿದ್ದ ಕುಮಾರನೊಡನೆ ಉತ್ಸಾಹ ದಿಂದ ಮಾತಾಡುತ್ತಿದ್ದಳು. ಇವನಿಗೆ ತನ್ನಲ್ಲಿ ಉತ್ಸಾಹವೇ ಉಳಿದಿಲ್ಲ ಅನಿಸಿತು. ಶೇವ್ ಮಾಡದ ಕೆನ್ನೆಯನ್ನು ಸವರಿಕೊಳ್ಳುತ್ತಾ ಕುಮಾರ ಹೊರಗೆ ಹೋಗುವುದನ್ನೇ ಕಾಯುತ್ತಾ ನೆಪಕ್ಕೆ ಕಂಪ್ಯೂಟರಿನ ಮುಂದೆ ಕುಳಿತಿದ್ದ. ಹತ್ತು ನಿಮಿಷದ ಬಳಿಕ ಕುಮಾರ್ ಹೊರಟುಹೋದ ಮೇಲೆ ಪದ್ಮಿನಿ ಗಂಭೀರವಾಗಿ ಅಭ್ಯಾಸ ಮಾಡ ತೊಡಗಿದಳು. ಈಗ ದತ್ತಾತ್ರೇಯನಿಗೆ ಹೇಗೆ ಶುರುಮಾಡುವುದು ಅಂತ ಯೋಚನೆಯಾಯಿತು. ಅವಳೆಡೆಗೆ ನೋಡಿದ. ಬಹಳ ಗಂಭೀರವಾಗಿದ್ದ ಪದ್ಮಿನಿಯ ಮುಖದಲ್ಲಿ ಅವನಿಗೆ ಹಿಂದೆಂದೂ ಕಾಣದ ಕಠಿಣತೆ ಕಂಡುಬಂತು. ಕ್ಷಮಿಸುವುದಿಲ್ಲ ಎಂದುಬಿಡಬಹುದು ಅಂತ ಭಯಗೊಂಡ. ಮರುಕ್ಷಣವೇ 'ನನ್ನ ಪದ್ಮಿನಿಯನ್ನು ಮಾತಾಡಿಸಲು ನನಗೆಂಥ ಭಯ' ಎಂದು ಗಂಟಲು ಸರಿಮಾಡಿ ಕೊಳ್ಳಲು ಯತ್ನಿಸಿದರೆ ಸದ್ದೇ ಬರಲಿಲ್ಲ. ಯಾಕೋ ಎದೆಬಡಿತ ಹೆಚ್ಚುತ್ತಿದೆ ಅನಿಸಿತು. ಇದೆಲ್ಲಾ ವಿಚಿತ್ರವೆನಿಸಿ ಹೇಳಿಯೇಬಿಡಬೇಕು ಎಂದುಕೊಂಡ ವನಿಗೆ ನಾನು ಹೇಳುತ್ತಿರುವಾಗ ಯಾರಾದರೂ ಬಂದುಬಿಟ್ಟರೆ ಎಂದು ಹೊರಗೆಹೋಗಿ ನೋಡಿದ. ಕಾರಿಡಾರು ನಿರ್ಜನವಾಗಿತ್ತು. ಪದ್ಮಿನಿ ಪಟಪಟನೆ ಟೈಪು ಮಾಡುವುದರಲ್ಲಿ ಮೈ ಮರೆತಿದ್ದಳು. ಅವನಿಗೆ ಯಾಕೋ ಪದ್ಮಿನಿ ತನ್ನನ್ನು ಪೂರ್ಣವಾಗಿ ಮರೆತುಬಿಟ್ಟಿರಬಹುದು ಅನಿಸ ತೊಡಗಿತು. ಮರುಕ್ಷಣವೇ ಏನನ್ನಿಸಿತೋ 'ನಾಳೆ ಹೇಳಿದರಾಯಿತು' ಎಂದುಕೊಂಡು ಅಲ್ಲಿ ಉಸಿರು



ಗಟ್ಟುತ್ತಿದೆಯೆಂಬಂತೆ ಇನ್ನೂ ಸಮಯ ಉಳಿದಿದ್ದರೂ ಎದ್ದು ಮನೆಗೆ ಹೋಗಿಬಿಟ್ಟ. ರಾತ್ರಿ ಹಾಸಿಗೆಯ ಮೇಲೆ ಉರುಳಿಕೊಂಡು ಯೋಚಿಸುತ್ತಿರುವಾಗ, ಹೀಗೇಕಾಯಿತು? ನನ್ನ ಪದ್ಮಿನಿಯನ್ನ, ನಾನು ಪ್ರೀತಿಸುತ್ತಿದ್ದ ಹುಡುಗಿ ಪದ್ಮಿನಿಯನ್ನ ಮಾತಾಡಿಸಲು ನನಗ್ಯಾಕೆ ಭಯವಾಯಿತು' ಎಂಬುದು ಒಗಟಾಗಿಯೇ ಉಳಿಯಿತು. ಪದ್ಮಿನಿ ಒಮ್ಮೆ ಭಾವುಕಳಾಗಿ 'ನನಗ್ಯಾಕೋ ಹೋದ ಜನ್ಮದಲ್ಲೂ ನಾವು ಪ್ರೇಮಿಗಳಾಗಿದ್ವಿ ಅನಿಸುತ್ತೆ'

ಅಂದದ್ದು ನೆನಪಾಗಿ ಅಳು ಬಂದುಬಿಡುತ್ತದೆ. ಇಲ್ಲ ಪದ್ಮಿನಿ ನನ್ನನ್ನ ತಿರಸ್ಕರಿಸಲಾರಳು, ನಾಳೆ ಪದ್ಮಿನಿಗೆ ಎಲ್ಲ ಹೇಳಿ ಅವಳ ತೊಡೆಯ ಮೇಲೆ ತಲೆಯಿಟ್ಟು ಅತ್ತುಬಿಡಬೇಕು ಎಂದುಕೊಳ್ಳುವನು.

ಇದಾಗಿ ಈಗ ಏಳುದಿನ ಕಳೆದಿವೆ. ಪ್ರತಿದಿನವೂ ದತ್ತಾತ್ರೇಯ ನಾಳೆ ಪದ್ಮಿನಿಯ ಕ್ಷಮಾಪಣೆ ಕೇಳುತ್ತೇನೆ ಅಂತ ನಿರ್ಧರಿಸುತ್ತಾನೆ. ಪದ್ಮಿನಿ ಎದುರಿಗೆ ಬರುವ ತನಕವೂ ಗಟ್ಟಿಯಾಗಿರುವ ಅವನ ನಿರ್ಧಾರ ಅವಳ ನಿರ್ಲಿಪ್ತ ಮುಖದೆದುರು ಮಂಜುಗಡ್ಡೆಯಂತೆ ಕರಗುತ್ತದೆ. ಯಾವುದೋ ಅವ್ಯಕ್ತ ಭಯ, ಅನುಮಾನ. ಅವಳ ಮುಖದಲ್ಲಿರುವ ಕಾಠಿಣ್ಯ ದಿನೇ ದಿನೇ ಹೆಚ್ಚುತ್ತಿರುವಂತೆ ಭಾಸವಾಗುತ್ತದೆ. ಅವಳ ಪಕ್ಕದಲ್ಲಿ ಕಂಪ್ಯೂಟರಿನ ಮುಂದೆ ಕುಳಿತಾಗಲೂ ಮಾತಾಡಿಸಬೇಕು ಎಂಬ ಭಾವನೆಯ ಜೊತೆಗೇ ಕಾಲುಗಳು ನಡುಗುವಂತಾಗುತ್ತವೆ. ಅವಳು ಎದುರಿಗಿಲ್ಲದಾಗ ಜನ್ಮಜನ್ಮಾಂತರದ ಗೆಳತಿಯಂತೆ ಕಾಣುವ ಪದ್ಮಿನಿ ಕಂಪ್ಯೂಟರಿನ ಮುಂದೆ ಕೂತು ಟೈಪು ಮಾಡುವಾಗ ಅಪರಿಚಿತೆಯಂತೆ ತೋರುತ್ತಿದ್ದಳು. ಒಮ್ಮೊಮ್ಮೆ ದತ್ತಾತ್ರೇಯನಿಗೆ ತಾವಿಬ್ಬರೂ ಮಾತಾಡುವುದನ್ನು ಬಿಟ್ಟು ತಿಂಗಳುಗಳೇ ಕಳೆದಿವೆ ಎನಿಸುತ್ತದೆ. ಬಹಳಷ್ಟು ದಿನ ಅವಳಿಗಿಂತ ಮುಂಚೆ ಎದ್ದು ಆ ಉಸಿರುಗಟ್ಟಿಸುವ ರೂಮಿನಿಂದ ಹೊರಗೆ ಬಂದುಬಿಡುತ್ತಾನೆ ನಾಳೆ ಹೇಳಿದರಾಯಿತು ಎಂಬ ಭಾವದೊಂದಿಗೆ. ರಾತ್ರಿ ತಾರಸಿಯ ಮೇಲೆ ಕೂತು ಯೋಚಿಸುವಾಗ ಮಾತ್ರ ಪದ್ಮಿನಿ ವಾತ್ಸಲ್ಯಮಯಿಯಂತೆ ಬಂದು ಅವನನ್ನು ಸಮಾಧಾನಗೊಳಿಸಿ ತಲೆಗೂದಲು ಸವರುತ್ತಾ 'ನೀನಲ್ಲದೆ ನನಗಿನ್ನಾರಿದ್ದಾರೆ ಹೇಳು' ಎಂದಂತಾಗಿ ಕಣ್ಣು ತುಂಬಾ ನೀರು ತುಂಬಿಕೊಳ್ಳುತ್ತಾನೆ. ಆಗೆಲ್ಲಾ ನಾಳೆ ಖಂಡಿತವಾಗಿಯೂ ಹೇಳಬಲ್ಲೆ ಅನಿಸಿ ಉತ್ಸಾಹಗೊಳ್ಳುತ್ತಾ ಕಣ್ಣೊರೆಸಿಕೊಳ್ಳುವನು. ಬೆಳಿಗ್ಗೆ ಮತ್ತದೇ ಕಥೆ! ಒಮ್ಮೊಮ್ಮೆ ಮಾತಾಡಿಸಲೂ ಆಗದೆ, ಎದ್ದು ಬರಲೂ ಮನಸ್ಸೊಪ್ಪದೆ ಕಂಪ್ಯೂಟರ್ ರೂಮಿನಲ್ಲಿ ಹಿಂಸೆ ಪಡುತ್ತಿರುವಾಗ ಕುಮಾರ್ ಬಂದುಬಿಟ್ಟರೆ ನಿರಾಳವೆನಿಸುತ್ತಿತ್ತು ದತ್ತಾತ್ರೇಯನಿಗೆ.

ಇಂದೂ ಕೂಡ ಪದ್ಮಿನಿಯನ್ನು ಕ್ಷಮಿಸೆಂದು ಕೇಳುವ ಭಾವಶಕ್ತಿ ತನ್ನೊಳಗೆ ಒಡಮೂಡುತ್ತಿಲ್ಲದ್ದರಿಂದ ವ್ಯಾಕುಲಗೊಂಡು ನಿಯಾನ್ ದೀಪದಲ್ಲಿ ಬೆಳಗುತ್ತಿದ್ದ ವಿವಿಧ ಅಂಗಡಿಗಳ ಹೆಸರುಗಳನ್ನು ಗಮನಿಸುತ್ತಾ ದತ್ತಾತ್ರೇಯ ವರ್ಚುಯಲ್ ಸಿಸ್ಟಮ್ಸಿನ ಕಾರಿಡಾರಿನಲ್ಲಿ ನಿಂತಿರುವಾಗಲೇ ಇವನ ಕಷ್ಟವನ್ನು ನೋಡಲಾರೆನೆಂಬಂತೆ ಥಟ್ಟನೇ ಕರೆಂಟು ಹೋಗಿ ಕತ್ತಲೆ ಆವರಿಸಿಕೊಂಡಿತು. ಮನೆಗೆ ಹೋಗಲು ನಿರ್ಧರಿಸಿದ ದತ್ತಾತ್ರೇಯ ರೂಮಿನೊಳಗಿದ್ದ ತನ್ನ ನೋಟ್‌ಪುಸ್ತಕವನ್ನು ತರಲೆಂದು ಕಂಪ್ಯೂಟರ್ ರೂಮಿನೆಡೆಗೆ ನಡೆದನು. ಬಾಗಿಲ ಬಳಿಯಲ್ಲಿ ನಿಂತ ದತ್ತಾತ್ರೇಯನಿಗೆ ಪದ್ಮಿನಿ ಕ್ಯಾಂಡಲ್‌ಗಾಗಿ ಯಾವುದೋ ಡ್ರಾದಲ್ಲಿ ಹುಡುಕುತ್ತಿರುವುದು ಮಸುಕಾಗಿ ಕಂಡಿತು. ಯಾವುದೋ ಅಂತಃಪ್ರೇರಣೆಯಿಂದ ದತ್ತಾತ್ರೇಯ 'ಕ್ಯಾಂಡಲ್ ಆ ಕಪಾಟಿನಲ್ಲಿದೆ' ಎಂದುಬಿಟ್ಟ ಮತ್ತು ತಾನು ಮಾತಾಡಿದ್ದು ಪದ್ಮಿನಿಯೊಂದಿಗೆ



ಎಂದು ತಾನೇ ಅಚ್ಚರಿಗೊಂಡ. ಪದ್ಮಿನಿ ಮೆಲುದನಿಯಲ್ಲಿ 'ಹೌದಾ, ನಾನು ಈ ಡ್ರಾದಲ್ಲಿರಬೋದು ಅಂದುಕೊಂಡೆ' ಅಂದಳು. ಒಬ್ಬರ ಮುಖ ಮತ್ತೊಬ್ಬರಿಗೆ ಕಾಣುವಂತಿರಲಿಲ್ಲ. ಪದ್ಮಿನಿ 'ಮ್ಯಾಚ್‌ಬಾಕ್ಸ್ ಎಲ್ಲಿದೆ ಗೊತ್ತಾ' ಎಂದಳು. ಒಂದು ಕ್ಷಣ ಮೌನವಾಗಿದ್ದ ದತ್ತಾತ್ರೇಯ ಮೆಲ್ಲಗೆ 'ಪದ್ಮಿನಿ' ಎಂದ. ಅವಳು ಏನು ಎಂದು ಕೇಳದೆ ನಿಧಾನವಾಗಿ ಅವನೆಡೆಗೆ ನಡೆದುಬಂದಳು. 'ಪದ್ಮಿನಿ, ನನ್ನ ಕ್ಷಮಿಸಿಬಿಡು' ಎನ್ನುವಾಗ ಅವನ ಧ್ವನಿ ಕಂಪಿಸುತ್ತಿತ್ತು. ಅವಳು ಇದ್ದಕ್ಕಿದ್ದಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಇವನು 'ಪದ್ಮಿನಿ... ಪದ್ಮಿನಿ...ಏ ಪದ್ಮಿನಿ' ಅಂತ ಅವಳ ಮುಖವನ್ನು ತನ್ನ ಬೊಗಸೆಯಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸಿ ಕತ್ತಲಿನಿಂದಾಗಿ ಮೂಗು, ತುಟಿಗಳನ್ನು ನೇವರಿಸಿದ. ಅವಳ ಕೆನ್ನೆಗಳ ಮೇಲೆ ಹರಿಯುತ್ತಿದ್ದ ನೀರನ್ನು ಅವನು ಬೆರಳಿನಿಂದ ಒರೆಸುವಾಗ ಅವಳಿಗೆ ತಡೆಯಲಾಗದೆ ಅವನ ಎದೆಗೆ ತಲೆಯೊತ್ತಿ ಮತ್ತಷ್ಟು ಜೋರಾಗಿ ಅಳತೊಡಗುವಳು ಯಾರಾದರೂ ಬರಬಹುದು ಎಂಬ ಪರಿವೆಯಿಲ್ಲದೆ. ಅವನು ಅವಳನ್ನು ಸಮಾಧಾನಪಡಿಸುವಂತೆ ಅವಳ ತಲೆಗೂದಲಲ್ಲಿ ಒಂದು ಮುತ್ತಿಡುತ್ತಾನೆ. ಅವಳು ಅವನ ಷರಟಿನ ಮೇಲಿನಿಂದ ಎದೆಗೊಂದು ಮುತ್ತಿಟ್ಟಳು. ಸ್ವಲ್ಪಹೊತ್ತಿನ ನಿಶ್ಯಬ್ದದ ನಂತರ ಅವಳು 'ನಾನು ಅವತ್ತು ಅಷ್ಟೊಂದು ಕೋಪಗೊಂಡು ಏನೇನೋ ಅಂದದ್ದು ನನ್ನ ತಪ್ಪು' ಎಂದಾಗ ಅವನು 'ಅಂಥ ಉಡುಗೊರೆ ಕೊಟ್ಟದ್ದು ನಂದೇ ತಪ್ಪು. ನೀನು ನನ್ನ ಕ್ಷಮಿಸ್ತೀಯಾ' ಎನ್ನುವನು. ಈಗ ಇಬ್ಬರೂ ಸಾಧಾರಣವಾಗಿ ಮಾತಾಡುವ ಹಂತ ತಲುಪಿದ್ದರು. ಅವನು ಕೇಳಿದ 'ಅದನ್ನು ಅಲ್ಲೇ ಪಾರ್ಕಿನಲ್ಲೇ ಎಸೆದು ಬಿಟ್ಟೆಯಾ?' ಅವಳು 'ಇಲ್ಲಾ' ಎಂದಳು. ಅವನಿಗೆ ಅದನ್ನು ಕೊಂಡುಕೊಳ್ಳುವ ದಿನ ತಾನು ಪಟ್ಟ ಪಾಡೆಲ್ಲ ನೆನಪಾಗಿ ಥಟ್ಟನೇ ಏನೋ ಹೊಳೆದು 'ಸೈಜು ಸರಿಯಾಗುತ್ತಾ?' ಎಂದುಬಿಟ್ಟ. 'ಸ್ವಲ್ಪ ಟೈಟು' ಎಂದ ಪದ್ಮಿನಿ ತಕ್ಷಣ ನಾಲಿಗೆ ಕಚ್ಚಿಕೊಂಡಳು. ಅವನಿಗೆ ನಗುಬಂದು ನಾಚಿ ಕೆಂಪಗಾಗಿರಬಹುದಾದ ಅವಳ ಮುಖವನ್ನು ಕಲ್ಪಿಸಿಕೊಳ್ಳುತ್ತಾ ಜೋರಾಗಿ ನಕ್ಕುಬಿಟ್ಟ. ಪದ್ಮಿನಿಯೂ ನಕ್ಕಳು. ಕತ್ತಲೆಯಿನ್ನೂ ಮುಂದುವರೆದಿತ್ತು.



ಕಥೆಯೆಂದರೆ...

ರಾತ್ರಿ ಕಂಡ ಕನಸನ್ನು ಅದರ ಎಲ್ಲಾ
ಬಣ್ಣಗಳೊಂದಿಗೆ ಮರುದಿನ ಮುಂಜಾನೆ
ಪ್ರಿಯರೊಬ್ಬರ ಕಣ್ಣಿಗೆ ಕಟ್ಟುವ ಕಲೆ

ಶಬ್ದ ತೀರ



ಅಘನಾಶಿನಿಯ ತಡಿಯಲ್ಲಿ

ನನ್ನ ಸೋದರತ್ತೆ ಸಣ್ಣ ವಯಸ್ಸಿಗೆ ತೀರಿಕೊಂಡಳು. ಅವಳ ಮಗನಿಗೆ ಆಗ ಏಳೋ ಎಂಟೋ ವರುಷ. ಅಂತ್ಯಯಾತ್ರೆಗೆ ಮುನ್ನ ಆಕೆಯ ದೇಹಕ್ಕೆ ಸ್ನಾನ ಮಾಡಿಸುವಾಗ ''ಆಯಿಗೆ ಚಳಿ ಆದೀತು ಬೇಡಾ ಬೇಡಾ...'' ಎಂದು ಆ ಪೋರ ಚೀರಿದ. ರುದ್ರಭೂಮಿಯಿಂದ ಜನ ಮರಳುವಾಗ ಅಂಗಳದಲ್ಲಿ ತುಳಸಿಕಟ್ಟೆಯ ಬಳಿ ಮಂಕಾಗಿ ಕೂತುಕೊಂಡಿದ್ದ.

ಇದಾದ ಕೆಲವೇ ದಿನಗಳಲ್ಲಿ ಊರಿನಲ್ಲಿ ಸೀಯಾಳದ ಕಳ್ಳನೊಬ್ಬ ರಾತ್ರಿ ಭಯದಿಂದ ಜನ ಸಂಚಾರ ಕಡಿಮೆ ಆಗಿ ತನ್ನ ಕಳುವಿಗೆ ಅನುವಾಗಲಿ ಎಂದು ವದಂತಿಯೊಂದನ್ನು ಹಬ್ಬಿಸತೊಡಗಿದ. ತೀರಿಕೊಂಡ ಸೋದರತ್ತೆ, ರಾತ್ರಿ ಹಿತ್ತಲಲ್ಲಿ ಬರುತ್ತಾಳೆ, ತುಳಸಿಕಟ್ಟೆಗೆ ಮೂರು ಸುತ್ತುಹಾಕಿ ಮರಳಿ ಹೋಗುತ್ತಾಳೆ ಎಂಬುದೇ ಈ ವದಂತಿ. ಇದನ್ನು ಕೇಳಿಸಿಕೊಂಡ ನಮ್ಮ ಸಂಬಂಧಿಯೊಬ್ಬ ಬಂದು ''ಪ್ರತೀ ರಾತ್ರಿ, ವೈನಿ ಹಿತ್ತಲಲ್ಲಿ ಬರುತ್ತಾಳಂತೆ'' ಎಂದು ನಮ್ಮ ಬಳಿ ಅಳುಕು ತುಂಬಿದ ಕೌತುಕದಿಂದ ಹೇಳುವಾಗ–ಅದೇ ತಾನೆ ಶಾಲೆಯಿಂದ ಮರಳಿದ ಪೋರ ಅದನ್ನು ಕೇಳಿಸಿಕೊಂಡ. ಅವನ ಕಣ್ಣುಗಳು ವಿಚಿತ್ರವಾದ ಹೊಳಪಿನಿಂದ ಒಂದು ಕ್ಷಣ ಬೆಳಗಿದವು. ತಾಯನ್ನ ಕಾಣ ಬಯಸುವ ತುಡಿತದಲ್ಲಿ ಆರ್ತವಾಗಿ ಬೆಳಗಿದ ಎಳೆ ಕಂಗಳು ಮೆಲ್ಲಗೆ ಮಂಕಾದವು.

ಇದಾಗಿ ಈಗ ಮೂವತ್ತೈದು ವರುಷಗಳು. ಅಘನಾಶಿನಿ ತಡಿಯ ತದಡಿಯಲ್ಲಿರುವ ನನ್ನ ಹಿರೀಕರ ಆ ಮನೆ ಈಗಲೂ ಹಾಗೇ ಇದೆ. ಎದುರು ಜುಳು ಜುಳು ಎಂದು ಹಿಂಜರಿಕೆಯಿಂದಲೇ ಸಮುದ್ರ ಸೇರುತ್ತಿರುವ ಅಘನಾಶಿನಿ, ಕೆಂಪು ಹಳದಿ ಗೇರುಹಣ್ಣುಗಳು ತೂಗುವ ಬೆಟ್ಟದ ಕಾನನದಿಂದ ಮೌನವನ್ನು ಹೊತ್ತು ತರುವ ಗಾಳಿ, ಮೆಲ್ಲಗೆ ಅಂಬೆಗಾಲಿಕ್ಕಿ ಬರುವ ಒಣಮೀನಿನ ವಾಸನೆಯ ಸಂಜೆಗತ್ತಲು. ಎಂಬತ್ತು ತುಂಬಿರುವ ಸೋದರಮಾವನೊಬ್ಬನೇ ಈಗ ಅಲ್ಲಿದ್ದಾನೆ. ದೊಡ್ಡವನಾಗಿ ಪಟ್ಟಣದಲ್ಲಿರುವ ಮಗ ಆಗಾಗ ಬಂದು ಆತನನ್ನು ನೋಡಿಕೊಂಡು ಹೋಗುತ್ತಾನೆ. ಈ ಮಾಮಾ ರುಚಿಯಿಂದ ಕಲೆಹಾಕಿದ್ದ ಹಳೆಯ ಪುಸ್ತಕಗಳು, ಪಂಚಾಮೃತ, ಕಸ್ತೂರಿ, 'ಗೋಕುಲ'ದ ಸಂಚಿಕೆಗಳನ್ನು ಒತ್ತಿಗೆ ಹೊಲಿದಿಟ್ಟ ಕಡ್ತಗಳು, ಕಂದು ಲಕೋಟೆಯಲ್ಲಿ ಗುಟ್ಟಾಗಿಟ್ಟ 'ಕಲಿಯುಗ' ಕ್ಯಾಲೆಂಡರುಗಳ ಸಂಗ್ರಹಗಳು ಎಲ್ಲವೂ ಈ ಮನೆಯ ಮಾಳಿಗೆಯ ಮೇಲಿವೆ. ಅವುಗಳನ್ನೆಲ್ಲ ನಿಯಮಿತವಾಗಿ ಧೂಳು ಜಾಡಿಸಿ ಒಳಗಿನ ಬೆಳ್ಳಿಮೀನುಗಳನ್ನು ಓಡಿಸಿ ಓರಣವಾಗಿರಿಸುತ್ತಿದ್ದ ಆತ ಈಗ ಮೊಣಕಾಲು ಸಂದು ನೋವಿನಿಂದಾಗಿ ಮಾಳಿಗೆಯನ್ನು ಇನ್ನೆಂದೂ ಏರಲಾರದವನಾಗಿದ್ದಾನೆ. ಕಳೆದ ಹತ್ತು ವರುಷಗಳಿಂದ ಅವನ ಸ್ಪರ್ಶವಿಲ್ಲದೆ ಅವನ ಸಂಗ್ರಹ

ಗಳೆಲ್ಲ ಮೂಕವಾಗಿವೆ. ನಲ್ವತ್ತು ವರುಷಗಳ ಹಿಂದೆ ಎಲ್ಲೋ ಜಾಹೀರಾತು ಓದಿ, ಮೂವತ್ತು ರೂ. ಮನಿ ಆರ್ಡರ್ ಮಾಡಿ ಆತ ತರಿಸಿಕೊಂಡಿದ್ದ ಸಣ್ಣ ತಗಡಿನ ಪ್ರಾಜೆಕ್ಟರ್ ಕೂಡ ಅಲ್ಲೇ ಇದೆ. ಗಿಲಾಯಿ ಗೋಡೆಯ ಮೇಲೆ ಹತ್ತು ಸೆಕೆಂಡಿನ ಚಲನಚಿತ್ರ ಮೂಡಿಸಲು ಮಾಮಾ ನಮ್ಮನ್ನು ಕೂರಿಸಿಕೊಂಡು ಹೆಣಗುತ್ತಿದ್ದ.

ಈಗ, ರಜೆಗೆ ಬಂದ ಮೊಮ್ಮಕ್ಕಳು ಎದುರಿನ ಅಘನಾಶಿನಿಗೆ ಕಲ್ಲು ಚಿಮ್ಮಿಸಿ 'ಕಪ್ಪೆ ಹಾರಿಸುವುದನ್ನು' ನೋಡುತ್ತ ಕೂರುತ್ತಾನೆ (ಒಮ್ಮೆ ನೀರಿನ ಮೇಲ್ಮೈಗೆ ತಾಕಿ ಮತ್ತೆ ಮೇಲೆ ಚಿಮ್ಮಿ ನೀರಲ್ಲಿ ಮುಳುಗುವಂತೆ ಎಸೆಯುವುದು). ಮಗನಿಗೆ ''ಸ್ವಲ್ಪ ಮಾಳಿಗೆಗೆ ಹೋಗಿ ನೋಡೋ, ಪುಸ್ತಕ ಎಲ್ಲಾ ಸರಿಯಾಗಿದೆಯಾ ನೋಡೋ...'' ಎಂದು ಗೋಗರೆದಾಗ ಮಗ ರೇಡಿಯೋದ ಮೇಲೆ ಹಾಸಿದ್ದ ಹಳದಿ ಬಣ್ಣದ ಬಟ್ಟೆಯೊಂದನ್ನು ಹಿಡಿದು ಮಾಳಿಗೆ ಹತ್ತಿ ಹೋಗುತ್ತಾನೆ. ಹಿತವಾದ ವಾಸನೆಯಲ್ಲಿ ಹಳೆಯ ಋತುಗಳೆಲ್ಲ ಮರುಕಳಿಸುವಂತೆ ಪುಸ್ತಕಗಳನ್ನು ಸೋಕುತ್ತಾನೆ. ಕೆಳಗಿನಿಂದಲೇ ಕೂಗುತ್ತಾನೆ ಮಾಮಾ ''ಪುಸ್ತಕ ಹರಡಬೇಡವೋ... ಸರಿಯಾಗಿ ಇಡೋ. ''

ನರಸ್ಪರ್ಶ ಸುಳಿಯದ ಆ ಮಾಳಿಗೆಯಲ್ಲಿ ದಶಕಗಳ ಹಿಂದಿನ ಗಾಳಿ ಹಾಗೇ ನಿಂತಿದೆಯೆ? ಪುಸ್ತಕಗಳೆಲ್ಲ ಕಾಲದ ನಿಶ್ಶಬ್ದದೊಂದಿಗೆ ಎಂಥ ಸಂವಾದದಲ್ಲಿವೆ? ಇಳಿದು ಬಂದ ಮಗನನ್ನು ಮಾಮ ಕೇಳುತ್ತಾನೆ. ''ಎಲ್ಲಾ ಸರೀ ಇದೆ ತಾನೆ? ನನ್ನ ಕಾಲುನೋವು ಸರಿ ಆದರೆ ಒಂದು ದಿನ ಮಾಳಿಗೆ ಹತ್ತಿಹೋಗಿ ಎಲ್ಲದಕ್ಕೂ ಹೊಸದಾಗಿ ಬೈಂಡ್ ಹಾಕುತ್ತೇನೆ''. ಎದುರಿನ ಅಘನಾಶಿನಿ ಹೊಳೆಯಲ್ಲಿ ಹೊಸ ಪಾತಿದೋಣಿಗಳು ತೇಲುತ್ತಿರುವಾಗ ಕೂತಲ್ಲಿಂದಲೇ ಮಾಮಾ ಕೂಗುತ್ತಾನೆ. ''ಮೀನು ಏನುಂಟೋ...'' ಹೊಸ ತಲೆಮಾರಿನ ದೋಣಿ ಅದು, ಬರೆ ಕಿಸಿಪಿಸಿ ನಕ್ಕು ಹುಟ್ಟು ಹಾಕುತ್ತ ಮುಂದೆ ಹೋಗುತ್ತಿದೆ. ನದಿಯ ಮೇಲಿನ ಗಾಳಿಗೊಂದು ರುಮು ರುಮು ಗುಂಜನವಿದೆ.

ಮಧ್ಯಾಹ್ನ ಮೊಮ್ಮಕ್ಕಳೆಲ್ಲ ಬೆವೆತುಕೊಂಡು ಕೆಂಪುನೆಲದ ಮೇಲೆ ನಿದ್ದೆಹೋಗಿದ್ದಾರೆ. ಮಾಮಾ ಮಗನನ್ನು ಕೂರಿಸಿಕೊಂಡು ಹೇಳುತ್ತಾನೆ. ''ತುಂಬಾ ದಿನಗಳಾದವು, ಕನಸುಗಳೇ ಬೀಳ್ತಿಲ್ಲ. ನಿದ್ದೆ ಬರ್ತದೆ. ಕನಸೇ ಇಲ್ಲ. ನಿನ್ನ ಹುಬ್ಬಳ್ಳಿಯ ಡಾಕ್ಟರಿಗೊಮ್ಮೆ ಹೇಳಿನೋಡು. ಕನಸು ಬೀಳಲು ಏನಾದರೂ ಮದ್ದು ಕೊಡಿ ಅಂತ.''

''ನಿನಗೆಂಥ ಕನಸು ಬೀಳಬೇಕು?''


''ಹಿಂದಿನ ಬೆಟ್ಟ ಹತ್ತಿ ಅಲ್ಲಿಯ ಗೇರುಮರದ ತರಗನ್ನೆಲ್ಲ ಗುಡಿಸಿಹಾಕುತ್ತಿದ್ದೇನೆ... ಮುರುಗಲ ಮರಹತ್ತಿ ಒಬ್ಬನೇ ಕೊಕ್ಕೆಯ ಸಹಾಯವಿಲ್ಲದೆ ಹಣ್ಣು ತೆಗೆಯುತ್ತೇನೆ... ಇಡೀ ಅಘನಾಶಿನಿ ಈಜಿಕೊಂಡು ಓಡುತ್ತೇನೆ... ತದಡಿಯ ಶಾಲೆಗೊಂದು ದೊಡ್ಡ ಆಕಾಶಬುಟ್ಟಿ ಮಾಡಿಕೊಡುತ್ತೇನೆ...''

''ಮತ್ತೆ?''

''ಕಾರವಾರಕ್ಕೆ ಹೋಗಿ ಮುಕ್ತಾಳನ್ನು ಮದುವೆ ಮಾಡಿಕೊಂಡು ಬರುತ್ತೇನೆ. ಅವಳನ್ನು ಕಾಳಜಿಯಿಂದ ನೋಡಿಕೊಳ್ತೇನೆ. ಅವಳನ್ನು ನಾನು ಅಷ್ಟು ಚೆನ್ನಾಗಿ ನೋಡಿಕೊಳ್ಳಲಿಲ್ಲ. ಆದಕ್ಕೇ ಅವಳು ಅಷ್ಟು ಬೇಗ ಹೋಗಿಬಿಟ್ಟಳು. ನೀವು ತಾಯಿಯಿಲ್ಲದೆ ಬೆಳೆಯುವಂತಾಯ್ತು. ಈ ಸಲ ಖಂಡಿತ ಹಾಗೆ ಮಾಡುವುದಿಲ್ಲ. ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ಮಾಳಿಗೆಯ ಮೇಲೆ ಅವಳದೊಂದು ಹಳೇ ಫೋಟೋ ಇದೆಯಲ್ಲ, ಬೇಕಿದ್ದರೆ ಅದನ್ನು ನೀನು ನಿನ್ನ ಹುಬ್ಬಳ್ಳಿಯ ಹೊಸ ಮನೆಗೆ ತಕೊಂಡು ಹೋಗು... ಪ್ಯಾಕ್ ಮಾಡುವ ಮೊದಲು ಒಂದು ಸಲ ತೋರಿಸು.''

ಮೊಮ್ಮಕ್ಕಳು ಎಸೆದ ಕಲ್ಲಿಗೆ ಮೌನಮುರಿದ ಅಘನಾಶಿನಿ, ಮಾವನ ಕಣ್ಣಲ್ಲಿ ಹೊಳೆಯುತ್ತಿದೆ.

ಜಯಂತ ಕಾಯ್ಕಿಣಿ



ಕವಿ ಸಮಯ



ಸುಜಾತ ಕುಮಟಾ



ಆಲೆಮನೆ

ಜನಪದದ ಬಾಡಿನಲಿ
ಹಾಡು ಹುಟ್ಟುತ್ತಾ
ಒದಗುತಿದೆ ಕಬ್ಬುಗಾಣಕ್ಕೆ
ಚೆಲ್ಲುತ್ತಾ ಹೊತ್ತಷ್ಟು ರಸ.
ಅರೆಕೊಯ್ದ ಗದ್ದೆಗಳಲಿ
ಬೆಳದಿಂಗಳ ರಾತ್ರಿ
ನೆನಪಿನಂಗಳ ಬಯಲಾಗಿ
ಆಲೆಮನೆ ಬೆಂಕಿ.

ಕುದಿವ ಬಾಣಲೆಯಲಿ
ಎಳೆಪಾಕ ನವಿರು
ಮೈ ತುಂಬ ಧಗೆ
ಬೆವರ ಹನಿ ಚಿತ್ತಾರ.



ಒಡಲ ತುಂಬಾ ಹಾಡು
ಮತ್ತರಗಳಿಗೆ ನಿಟ್ಟುಸಿರು.

ನೆಟ್ಟ ಕಣ್ಣಲಿ ನೋವು ಚೆಲ್ಲುತಿದೆ
ಗಾಣ ಎಳೆವ ಕೋಣ
ಕುಡಿದ ಕಬ್ಬಿನ ಹಾಲು
ವಿಷವಾಗುವ ಭಯ.
ಕಪ್ಪು ಬಿಳಿ ಮೋಡದ
ಮಧ್ಯೆ ಕಿರುನಗುವ ಚಂದ್ರ

ಮಿರುಗುತ್ತಾ ಮಂದ ಬೆಳಕಲ್ಲಿ
ಕಾಲು ಹಾದಿಯಲ್ಲಿ
ಹಾವು ಕಳಚಿದೆ ಪೊರೆ
ಹಾಡುತ್ತಾನೆ ಹುಡುಗ
ಗಾಣ ಹೊಡೆಯುತ್ತ
ಬೇಸರವೆ ರಾಗದಂತೆ.

ಎದೆಗಪ್ಪಳಿಸುತ್ತದೆ
ನೂರು ಗುಂಡಿನ ಶಬ್ದ
ಯುದ್ಧ ನಾಡಿನ ಕಂದಮ್ಮಗಳ
ರಾಗ ಮರೆತ ಜೋಗುಳ.

ಉಕ್ಕುವುದು ಕಣ್ಣಹನಿ
ಮತ್ತೆಲ್ಲೋ ಮರಗಟ್ಟಿ
ಮಡುವಾಗಿ ಮಂಜುಮಳೆಯಲ್ಲಿ

ವಿಕ್ಷಿಪ್ತ ಕ್ಷಣ

ಆ ವಿಕ್ಷಿಪ್ತ ಕ್ಷಣ
ನನ್ನೊಳಗೆ ಇದ್ದಹಾಗೆ
ಇರಬಹುದು ನಿಮ್ಮೊಳಗೆ
ಯಾವುದೋ ದಿನದ ಸಂಜೆ
ಕಾರ್ಮೋಡದ ಹಿಂದೆ
ಚಂದ್ರ ಮಿನುಗಿ
ಮಾಯವಾದ ಆ ಅವ್ಯಕ್ತ
ಉನ್ಮಾದ?



ದಿನ ನೋಡುವ ಅದೇ ಮುಖ
ನೋಡದ ಇನ್ಯಾವುದೋ
ಮುಖ ನಿಮ್ಮೆದುರಾಗಿ ಘಟಿಸಿ
ಕ್ಷಣವಲ್ಲದ ಆ ಕ್ಷಣ?
ಕಾದ ನೂರು ದಿನಗಳ ಕ್ರಾಂತಿಯ
ಪ್ರತೀಕ್ಷೆಯ ಕೊನೆಯ ಘಟ್ಟದಂತೆ?

ಸುಟ್ಟ ಬಯಕೆಗಳೆಲ್ಲ
ಕೊನರಿ ಅರಳಿ ತುಳುಕುವ
ಅಪೂರ್ಣತೆ ಪೂರ್ಣವಾಗಿ
ವಿದಾಯಗಳ ನೆನಪು
ಧ್ವನಿಸಿ ಕಣ್ಣೀರಾಗದೆ
ಎದೆ ಹಗುರಾಗುವ ಹಾಗೆ?

ಕಣ್ಣಾಮುಚ್ಚಾಲೆ ಆಡಿ
ಕಾಡಿದ ಪ್ರೀತಿ ದ್ವೇಷದ ನೆನಪು
ಸಾವಲ್ಲಿ ಕೊನೆಯಾದ
ಗಳಿಗೆಯ ಹಾಗೆ
ಕಾಡಿರಬಹುದು ನಿಮ್ಮ ಹಾಗೆ ನನ್ನ


ಒಂದೊಂದು ಬಗೆ


ಭವದ ಬಿಡುಗಡೆ ಬಯಸಿ
ಅಂಟುವ ನಂಟು.
ಬಿಕ್ಕುಗಳ ಗುಹೆಯೊಳಗೆ
ನೋವಿನ ವ್ರಣದ
ನೊಚ್ಚನೆ ತುರಿಕೆ
ಅರಸುವ ಕಣ್ಣಿಗೆ
ಕತ್ತಲೆ-ಬೆಳಕು

ಒಂಟಿ ಮನೆಯೊಳಗೆ
ತುಂಬು ಜವ್ವನೆಕನ್ಯೆ
ಮೊಲೆ ತೊಟ್ಟಿನ ಮೇಲೆ
ನುಚ್ಚು ನೂರಾಗುವ ಕಂಬನಿ


ಘಟಿಸಿದ ಕ್ಷಣಗಳು
ಕಳೆದ ವಿಫಲ ವ್ಯರ್ಥಾಲಾಪ
ಹಿಂದುಕಾಣದೆ ನಮ್ಮ ನಾವರಿಯದೆ
ಬಯಲು ಆಲಯಗಳ ಮಧ್ಯೆ
ಶಬ್ದ ಸಂಭ್ರಮ

ಬಿನ್ನಾಣದ ಹಾದಿ ಸವೆಯುತ್ತಿದೆ
ನಂಬಿಕೆ ಮೀರಿ
"ಬದುಕ ಮನ್ನಿಸು ಪ್ರಭೆಯೆ"
ಅಂತರಂಗದಲ್ಲೊಂದು ಪುಟ್ಟ ಹಣತೆ ಹಚ್ಚಿ





ಎಸ್. ಮಂಜುನಾಥ್



ಮರಳಿ ಪಡೆಯುವ ಕ್ಷಣ

ಎಲ್ಲವನ್ನೂ ನಾನು ಮರಳಿ ಪಡೆಯುತ್ತೇನೆ ಎಲ್ಲವನ್ನೂ
ಮೊದಲು ನಾನೇ ಆಗಿದ್ದ ನನ್ನ ತಂದೆಯನ್ನು
ನನ್ನ ಹರವಾದ ಬಲಿಷ್ಠ ಮೂಲ ಕೊಂಬೆಯನ್ನು
ಅದು ಉರುಳಿದ ಮೇಲೂ ಈ ಟಿಸಿಲು ಮರದಲ್ಲಿ ಉಳಿದದ್ದು ಹೇಗೆ?

ಮತ್ತು ಬಾಲ್ಯವನ್ನು, ಬುವಿಗಿಳಿದ ನವ ಸಂಭ್ರಮವನ್ನು
ಪರಿಮಿತ ಮಿದುಳೊಳಗೆ ಪುಟಿದಿದ್ದ ಬೆಳಕು ಬುಗ್ಗೆಯನ್ನು
ಅದು ಬಲಿತು ಆಗಿದ್ದ ಬೆಂಕಿಯನ್ನು
ಅದು ಸುಟ್ಟ ಚೆಲುವು ಕೆನ್ನೆಗಳನ್ನು

ಮರಳಿ ಪಡೆಯುವ ಕ್ಷಣ ಇದು
ಮಣ್ಣುಗೂಡಿದ ಹಣ್ಣೆಲೆ ಹೂವಿನ ಪಕಳೆ ಎಲ್ಲವನ್ನೂ
ಮತ್ತೆ ಚಿಗುರಿಸಿ ಅರಳಿಸಿ ನಿಂತಿದೆ ಮರ
ಆಕಾಶದ ಕವಾಟ ತೆರೆದು ಏನೆಲ್ಲ ಇಳಿಯುತ್ತಿವೆ
ಹಿಂಡು ಚಿಟ್ಟೆಯ ಹಾಗೆ


ಹೋದದ್ದೆಲ್ಲ ಬರುತ್ತಿದೆ ಎದೆಗೆ
ಅಂಗಳದಲ್ಲಿ ಗಲಗಲ ಸದ್ದು ಸಂಜೆ ವೇಳೆ
ಅತಿಥಿಗಳಾಗಿ ಬಂದ ನಮ್ಮವರದೇ

ಎಲ್ಲರೂ ಬಂದು ಇನ್ನು ಉಳಿಯುವಿರಿ ಸದಾ
ಈ ನನ್ನ ಮನೆಯಲ್ಲಿ
ಒಬ್ಬರೊಬ್ಬರ ನೋಡಿ ಮೆಲ್ಲಗೆ ನಗುತ್ತ
ಒಮ್ಮೊಮ್ಮೆಯಷ್ಟೇ ಸಣ್ಣಗೆ ತಲೆಯಾಡಿಸುತ್ತ

ಕಲ್ಲಲ್ಲಿ ಕೊರೆದಿರುವ ಚಿಟ್ಟೆಯನ್ನು ನೋಡಿ

ಕಲ್ಲ ಕಂಬದೊಳಗೆ ಸಿಕ್ಕಿಬಿದ್ದಿರೋ ಚಿಟ್ಟೆ
ಕಾಯುತ್ತಿರುವೆ ನೀನು ಶಾಶ್ವತದಲ್ಲಿ
ಆಕಾಶ ಎರಗಿ ಆಲಯವ ಪುಡಿಪುಡಿ ಮಾಡಿ
ಹೊತ್ತುಕೊಂಡೊಯ್ವ ಗಳಿಗೆಗಾಗಿ





ಬೆಟ್ಟಸಾಲು

ಕಣ್ಣ ಸ್ನೇಹಕ್ಕಿರುವ ಬೆಟ್ಟಸಾಲು
ಕಿಟಕಿಯಿಂದ ತೋರುವುದು
ದೂರವೂ ಅಲ್ಲ ಹತ್ತಿರವೂ ಅಲ್ಲ
ಸದಾ ಜೊತೆಯಂತಿರುವುದು

ಸಂಜೆ ಕರಗಿದ ಮೇಲೆ
ಕತ್ತಲಲ್ಲಿ ಕರಗುವುದು
ಮಂಜು ಮುತ್ತಿದ ಮುಂಜಾನೆ
ಬೇಗ ಮುಖ ತೋರದು

ಆದರೂ ಇದ್ದೇ ಇರುವುದು
ಹಗಲೂ ಇರುಳೂ
ದಿನ ದಿನ ನಿಲ್ಲದೆ ಉರುಳಿದರೂ
ಅಚ್ಚರಿ ಹೆಚ್ಚಿ ಉಳಿಯುವುದು

ಕಣ್ಣು ಜಗವ ಕಿರಿದಾಗಿಸಿದಂದು
ಬೆಟ್ಟ ಜಾರಿ ಹೋಗುವುದು
ರೂಢಿ ನೋಟವನು ಬರಿದಾಗಿಸಿದಂದು
ಸಾಲು ಸವೆದಂತಾಗುವುದು

ಬೆಳಕ್ಹೆಂಚು

ಹೆಂಚಿನ ಮಣ್ಣು ರೀಪಿನ ಕಾಡುಗಳ ಚೌಕಟ್ಟನೊಳಕ್ಕೆ
ಆ ಬೆಳಕ ಇಳಿಸುವುದು ಹೇಗೆ
ಬೆಳಕು ಹೆಂಚು ಅದಕ್ಕೆ

ಮನೆಯೆಂಬುದಿದು ಆಲಯವೋ ಪಂಜರವೋ
ಬಯಲಲ್ಲಿ ಇರಲಾರೆವು ನಾವು ವೃಕ್ಷದ ಹಾಗೆ
ಆದರೂ ಬೇಡವೇ ನಮ್ಮ ಪಾಲಿನ ಬಾನು ನಮನಮಗೆ

ಇಷ್ಟೇ ಸಿಕ್ಕಿದ್ದು ದಕ್ಕಿದ್ದು ಅಥವಾ
ಇಷ್ಟೂ ಹೆಚ್ಚಾಯಿತು ಯಾಕೆಂದರೆ - ಖಾಲಿ ಚೌಕುಳಿಯೇ
ಬಾಲ್ಯದಿಂದಲೂ ನಿನ್ನನ್ನು ನೋಡಿ ನೋಡಿ ಕಂಡದ್ದು ಇಂದೇ!

ನಗುಮುಖದ ಮೂರು ಹಲ್ಲಿನ ಹಾಗೆ ಬೆಳ್ಳಕ್ಕಿ ಬಿಚ್ಚಿದ ರೆಕ್ಕೆ ಹಾಗೆ
ಅಲ್ಲೆಲ್ಲ ಇರುವುದು ಎಲ್ಲೆಲ್ಲು ಇರುವುದು ಆಕಾಶವೇ
ನಾವು ನಿನ್ನ ತೆಕ್ಕೆಯೊಳಗೆ ಆಡುತ್ತಿರೋ ಹೂಮರಿಗಳ ಹಾಗೆ





ವಸುಧೇಂದ್ರ ಎಸ್.

ಪರಾಧೀನ

ಭಾವನಾ ಮೇ, 2000

ನಾಳೆ ಗುರುವಾರ. ಅಂದರೆ ಗುರುಗಳ ವಾರ. ರಾಯರ ಮಠಕ್ಕೆ ವಿಶೇಷ ದಿನ. ಬೆಳಗ್ಗೆ ಅಷ್ಟೋತ್ತರ, ಪಂಚಾಮೃತಾಭಿಷೇಕದಿಂದ ಹಿಡಿದು ರಾತ್ರಿ ಪಲ್ಲಕ್ಕಿ ಉತ್ಸವ, 'ತೂಗಿರೆ ರಾಯರ, ತೂಗಿರೆ ಯತಿಗಳ...'ವರೆಗೆ ಸಡಗರದಿಂದ ಕಾರ್ಯಕ್ರಮಗಳು ನಡೆಯುವ ದಿನ. ಜನಕ್ಕಂತೂ ಕೊರತೆಯಿಲ್ಲ. ಉಳಿದ ದಿನಗಳಲ್ಲಿ ಒಂದಿಷ್ಟು ಕಟ್ಟಾ ಭಕ್ತಾದಿಗಳು ಮಾತ್ರ ರಾಯರಿಗೆ ಮುಖ ತೋರಿಸಿ ಹೋದರೆ, ನಾಳೆ ಸರ್ವ ಜನರೂ ಬರುತ್ತಾರೆ. ಮಕ್ಕಳಿಂದ ಹಿಡಿದು, ಮುದುಕರವರೆಗೆ ಎಲ್ಲರೂ ಗುಡಿಗೆ ಬಂದು ತೀರ್ಥ, ಫಲ-ಮಂತ್ರಾಕ್ಷತೆ ತೆಗೆದುಕೊಳ್ಳುವುದಲ್ಲದೆ ಮಂಗಳಾರತಿ ತಟ್ಟೆಯಲ್ಲಿ ತಮ್ಮ ಕೋರಿಕೆಗಳ ಗಾತ್ರಕ್ಕೆ ತಕ್ಕಂತೆ ದಕ್ಷಿಣೆ ಹಾಕಿ ಹೋಗುತ್ತಾರೆ. ಸಂಡೂರು ಎಷ್ಟೇ ಚಿಕ್ಕದಾದರೂ ಭಕ್ತಾದಿಗಳಿಗೆ ಕಡಿಮೆಯಿಲ್ಲದ ಕಾರಣ ಏನಿಲ್ಲವೆಂದರೂ ಸುಮಾರು 200-300 ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ದಕ್ಷಿಣೆ ಸಿಗುತ್ತದೆ. ಮಠದ ಅರ್ಚಕರಿಗೆ ತಿಂಗಳ ಸಂಬಳ ಅಂತ ಬೇರೆ ಏನೂ ಇಲ್ಲವಾದ ಕಾರಣ, ಈ ಹಣವೇ ಅವರ ಜೀವನೋಪಾಯ. ಆದರೆ ಇಂತಹ ದಿನವನ್ನೇ ಕೇರ್ ಮಾಡದೆ, ಯಾವುದೋ ಸುಳ್ಳು ನೆಪ ತೆಗೆದು 'ತಿರುಕೊಯಲೂರಿ'ಗೆ ರಘೋತ್ತಮ ತೀರ್ಥರ ದರ್ಶನಕ್ಕೆ ಹೋಗುತ್ತೇನೆ ಅಂತ ಈಗ ಗಿಜಿಗುಟ್ಟುತ್ತಿರುವ ಬೆಂಗಳೂರಿನ ಬಸ್ಸಿನಲ್ಲಿ ಕೂಡಲು ಸೀಟ್ ಕೂಡಾ ಇಲ್ಲದೆ ಜನ ಜಂಗುಳಿಯ ಮಧ್ಯೆ ಉಸಿರಾಡಲೂ ಸಾಧ್ಯವಿಲ್ಲದಂತೆ ನಿಂತಿರುವ ರಾಯರ ಮಠದ ಅರ್ಚಕರಾದ ವೆಂಕಣ್ಣಾಚಾರ್ಯರನ್ನು ನೋಡಿದರೆ, ಜನರು ಅವರಿಗೆ 'ಎಡವಟ್ಟು ಎಂಕಣ್ಣ' ಅನ್ನೋದರಲ್ಲಿ ಏನೂ ತಪ್ಪಿಲ್ಲ ಅಂತ ಅನ್ನಿಸಿ ಬಿಡುತ್ತದೆ.

ರಾಯರ ಮಠದ ಆಚಾರ್ಯರು ರಾಯರ ಸೇವೆ ಮಾಡಿಕೊಂಡು ಕಾಲ ಕಳೆಯಬೇಕಾದದ್ದು ಧರ್ಮ. ಆದರೆ ವೆಂಕಣ್ಣಾಚಾರ್ಯರು ಅದನ್ನು ಬಿಟ್ಟು, ಉಳಿದ್ಯಾವುದೊ ತಮಗೆ ಸಂಬಂಧವಿಲ್ಲದ ಕೆಲಸಕ್ಕೆ ಕೈಹಾಕಿ ಫಜೀತಿಗೊಳಗಾಗುವುದರಿಂದಲೇ ಜನರು ಅವರಿಗೆ 'ಎಡವಟ್ಟು ಎಂಕಣ್ಣ' ಅಂತ ಕರೆಯೋದು. ಜನರು ಆ ರೀತಿ ಕರೆಯೋದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಒಮ್ಮೆ ಪೀರ್ಲು ಹಬ್ಬಕ್ಕೆ ಪಿಂಜಾರ ಓಣಿ ಮಸೀದಿಯಲ್ಲಿ ಕೂಡುವ ಪೀರ್ಲಿನ ಕಿರೀಟದ ಹಿಂದೆ ಬಂಗಾರದ ಕಾಗದವನ್ನು ಹಚ್ಚಿದ ಚಕ್ರವೊಂದು ವಿದ್ಯುತ್ತಿನಿಂದ ಗರಗರನೆ ತಿರುಗುವಂತೆ ಮಾಡುತ್ತೇನೆಂದು ಪಿಂಜಾರರ ಶಾಭೇಷಿಯ ಮನವೊಲಿಸಿದ ವೆಂಕಣ್ಣ, ಆ ಕಾರ್ಯಕ್ಕಿಳಿದಾಗ ಜನ 'ನಮಾಜ್ ಮಾಡ್ಲಿಕ್ಕೆ ಹೋದ ಬ್ರಾಹ್ಮಣ ಮಸೀದಿ ಮೈಮೇಲೆ ಕೆಡವಿಕೊಂಡ... ಅಂತ ಶಾಸ್ತ್ರ ನಿಸ್ನಂತೋರನ್ನ ನೋಡಿಯೇ ಮಾಡಿದ್ನೋಡು' ಅಂತ ಹಂಗಿಸಿದ್ದರು. ಆದರೆ, ವೆಂಕಣ್ಣಾಚಾರ್ಯರು ಅಂತಹ ಏಟುಪೋಟು ಮಾತುಗಳಿಗೆ ಕೇರ್ ಮಾಡದೆ, ಅಂಥ ಶಾಸ್ತ್ರ ಮಾಡಿದವರ ತಲೆ ಬೋಳಿಸ್ತು ಅಂತಂದುಬಿಟ್ಟು ಏನೇನೋ ಒದ್ದಾಡಿ ಆ ತಿರುಗುವ ಚಕ್ರವನ್ನು ಪೀರ್ಲು ದೇವರ ಕಿರೀಟದ ಹಿಂದೆ ಸ್ಥಾಪಿಸಿಯೇ ಬಿಟ್ಟಿದ್ದರು. ಅವರನ್ನು ಮುಂಚೆ ಹಂಗಿಸಿದ ಜನರೇ ಈಗ 'ಪರವಾಗಿಲ್ಲ ನಮ್ಮ ಆಚಾರ್ಯರು, ಏನೇನೋ ಮಾಡ್ತಾರೆ' ಅಂತ ಶಹಭಾಷ್‌ಗಿರಿ ಕೊಟ್ಟಿದ್ದರು. ಬರೀ ಅಷ್ಟೇ ಆಗಿದ್ದರೆ ಜನರ ದೃಷ್ಟಿಯಲ್ಲಿ ವೆಂಕಣ್ಣಾಚಾರ್ಯರ ಮಹತ್ವ ಹೆಚ್ಚಾಗಿಯೇ ಹೋಗುತ್ತಿತ್ತು. ಆದರೆ ಕತ್ತಲ ರಾತ್ರಿಯ ದಿನ ಪೀರ್ಲು ದೇವರನ್ನು ತನ್ನ ಹೆಗಲ ಮೇಲೆ ಹೊತ್ತುಕೊಳ್ಳುವ ಶಾಭೇಷಿ ಅಲಾಯಿಕುಣಿಯ ಬೆಂಕಿಯ ಮುಂದೆ ಥೈ ಥೈ ಅಂತ ಕುಣಿದು, ಜನರೆಲ್ಲಾ 'ಮೈಮೇಲೆ ದೇವರು ಬಂದೈತೆ' ಅಂತ ಭಕ್ತಿ ಪರವಶರಾಗಿ ನಿಂತಿರುವಾಗ ಮಸೀದಿಯೊಳಗೆ ನುಗ್ಗಿ ಪೀರ್ಲು ದೇವರನ್ನು ತನ್ನ ಹೆಗಲ ಮೇಲೆ ತೆಗೆದುಕೊಳ್ಳಲು ಅದನ್ನು ಎತ್ತಿಕೊಳ್ಳಲು ಹೋದವನೇ 'ಅಯ್ಯಯ್ಯಪ್ಪೋ, ಪೀರ್ಲು ದೇವರು

ಶಾಕ್ ಹೊಡಿತೈತಲ್ಲಪ್ಪೋ...' ಅಂತ ಚಂಗನೆ ನೆಗೆದು ಹಿಂದಕ್ಕೋಡಿಬಿಟ್ಟಿದ್ದ. ಭಕ್ತಿ ಪರವಶರಾಗಿ ನಿಂತಿದ್ದ ಜನರಿಗೆ ಶಾಭೇಷಿ ಹೆದರಿಕೆಯಿಂದ ಗಡಗಡನೆ ನಡುಗುವುದನ್ನು ಕಂಡು ಗೊಳ್ಳನೆ ನಗು ಬಂದು ಪರಿಸ್ಥಿತಿಯ ಗಂಭೀರತೆಯೇ ಹೋಗಿ ಬಿಟ್ಟು 'ಎಡವಟ್ಟು ಎಂಕಣ್ಣಾಚಾರ್ಯರ ಸಹವಾಸ' ಅಂತ ಆಡಿಕೊಳ್ಳಲು ಶುರು ಮಾಡಿ ಬಿಟ್ಟರು. ಅಲ್ಲಿಯವರೆಗೆ ತಿರುಗುವ ಚಕ್ರವನ್ನು ನೋಡಿ ವೆಂಕಣ್ಣಾಚಾರ್ಯರ ಬುದ್ಧಿವಂತಿಕೆ ಯನ್ನು ಮೆಚ್ಚಿದ್ದ ಜನ ಈಗ ಅದನ್ನು ಮರೆತೇ ಬಿಟ್ಟು ಅದರಿಂದಾದ ಎಡವಟ್ಟನ್ನೇ ಗಟ್ಟಿಯಾಗಿ ಹಿಡಿದುಕೊಂಡುಬಿಟ್ಟರು.

ಇಂತಹ ಘಟನೆಗಳು ಬೇಕಾದಷ್ಟಿವೆ. ಊರಿನ ಕೊನೆಯಲ್ಲಿ ಕಾಸಿಂಸಾಬರ ಸ್ಕೂಟರ್ ರಿಪೇರಿ ಮಾಡುವ ಒಂದು ಮೆಕ್ಯಾನಿಕ್ ಅಂಗಡಿಯಿದೆ. ಈ ಕಾಸಿಂಸಾಬರಿಗೆ ಮತ್ತು ವೆಂಕಣ್ಣಾಚಾರ್ಯರಿಗೆ ಚಿಕ್ಕಂದಿನಿಂದಲೂ ಸ್ನೇಹ. ಬರೀ ಏಳನೇ ತರಗತಿಗೆ ಶಾಲೆಗೆ ಸಲ್ಯೂಟ್ ಹೊಡೆದ ಕಾಸಿಂಸಾಬರು ಅವರಪ್ಪನ ಮೆಕ್ಯಾನಿಕ್ ಅಂಗಡಿಯಲ್ಲಿ ಕೆಲಸಕ್ಕೆ ನಿಂತುಬಿಟ್ಟು ಚೆನ್ನಾಗಿ ಸಂಪಾದಿಸಲು ತೊಡಗಿದರೆ, ಏಳನೆಯ ತರಗತಿಯವರೆಗೆ ಚೆನ್ನಾಗಿಯೇ ಓದಿದ ವೆಂಕಣ್ಣಾ ಚಾರ್ಯರು ಮುಂದೆ ಏನೂ ಮಾಡಲು ತೋಚದೆ ತಮ್ಮಪ್ಪನ ಮಠದ ಪೌರೋಹಿತ್ಯವನ್ನು ತೆಗೆದು ಕೊಂಡಿದ್ದರು. ಆದರೆ ಸ್ನೇಹ ಮಾತ್ರ ಹಾಗೇ ಮುಂದುವರೆದುಕೊಂಡು ಬಂದಿತ್ತು. ಮಧ್ಯಾಹ್ನದ ಹೊತ್ತು ಶಾಪ್ ಕಡೆಗೆ ವೆಂಕಣ್ಣಾಚಾರ್ಯರು ತಪ್ಪದೆ ಹೋಗುತ್ತಿದ್ದರು. ಅವರಿಗಾಗಿಯೇ ಕಾಸಿಂಸಾಬ್ ಒಂದು ಸ್ಟೂಲನ್ನು ಹಾಕಿಟ್ಟಿರುತ್ತಿದ್ದ. ವೆಂಕಣ್ಣಾಚಾರ್ಯ ರಿಗೆ ಕಾಸಿಂಸಾಬರು ಸ್ಕೂಟರ್ ರಿಪೇರಿ ಮಾಡುವು ದನ್ನು ನೋಡುವುದೆಂದರೆ ಇನ್ನಿಲ್ಲದ ಆಸಕ್ತಿ. 'ನಿಂಗ್ಯಾಕೋ ಎಂಕಣ್ಣ ಇವೆಲ್ಲಾ' ಅಂತ ಕಾಸಿಂಸಾಬರು ಅಂದರೂ ಕೇಳದೆ ಅದೇನು? ಇದೇನು? ಅಂತ ಪ್ರಶ್ನೆ ಮಾಡಿ ಅವನ ಕೆಲಸವನ್ನೆಲ್ಲ ಅರ್ಥಮಾಡಿಕೊಳ್ಳುತ್ತಿದ್ದರು. ''ನಂಗೂ ನಿನ್ನ ಥರಾ ಮೆಕ್ಯಾನಿಕ್ ಶಾಪ್ ಇಡಬೇಕು ಅಂತ ಆಸೆ ಆಗ್ತದೋ'' ಅಂತ ಒಮ್ಮೆ ಹೇಳಿದ್ದರು.

ಒಂದು ದಿನ ಶಾಪಿಗೆ ಕಣವಳ್ಳಿಯ ರಂಗಣ್ಣನ ಸ್ಕೂಟರ್ ಪಂಕ್ಚರ್ ಆಗಿ ಬಂದಿತ್ತು. ಶಾಪಲ್ಲಿ ಬೇರೆ ಯಾರೂ ಸಹಾಯಕ ಹುಡುಗರು ಇಲ್ಲದ್ದರಿಂದ ಧೈರ್ಯದಿಂದ ವೆಂಕಣ್ಣಾಚಾರ್ಯರು ಕಾಸಿಂ ಸಾಬರನ್ನು ಒಪ್ಪಿಸಿ, ತಾವೇ ಕೈಹಾಕಿ ಟೈಯರ್‌ಗೆ ಪಂಕ್ಚರ್ ಹಾಕಿ ಸ್ಕೂಟರಿಗೆ ಜೋಡಿಸಿ ಸರಿ ಮಾಡಿಬಿಟ್ಟಿದ್ದರು. ಕಾಸಿಂಸಾಬರೂ ಖುಷಿಯಿಂದ 'ಪರವಾಗಿಲ್ಲಲ್ಲೋ ಎಂಕಣ್ಣ' ಅಂತಂದು, ಐದು ರೂಪಾಯಿ ಅವರಿಗೆ ಕೊಟ್ಟು 'ನಿಂಗೆ ಕೂಲಿ ಕೊಟ್ಟೇನಿ ಅಂದ್ಕೋಬೇಡ, ನಿಮ್ಮ ದೇವರಿಗೆ ದಕ್ಷಿಣೆ ಅಂತ ತಿಳ್ಕೋ' ಅಂತ ಹೇಳಿದ್ದರು. ಆದರೆ ಆ ರಾತ್ರಿ ಸ್ಕೂಟರ್ ತೆಗೆದುಕೊಂಡು ಕಣವಳ್ಳಿಯ ಕಡೆ ಹೊರಟಿದ್ದ ರಂಗಣ್ಣ, ಗಂಡಿ ನರಸಿಂಹ ಸ್ವಾಮಿಯ ಗುಡ್ಡದ ಮೇಲೆ ಓಡಿಸುವಾಗ ಗಾಲಿ ಕಳಚಿ ಕೆಳಕ್ಕೆ ಬಿದ್ದುಬಿಟ್ಟಿದ್ದ. ಅಂತಹ ಜಾಗದಲ್ಲಿ ಬಿದ್ದರೂ ಅವನ ಜೀವ ಉಳಿದದ್ದು ಅವನ ಹೆಂಡತಿಯ ಪುಣ್ಯವೆಂದೇ ಹೇಳಬೇಕು. ಯಾರೋ ಪುಣ್ಯಾತ್ಮರು ಕೊಯ್ದು ಹಾಕಿದ ಹುಲ್ಲಿನ ರಾಶಿಯ ಮೇಲೆ ಬಿದ್ದಿದ್ದರಿಂದ ಬಚಾವಾಗಿದ್ದ. ಮರುದಿನ ಶಾಪಿಗೆ ಬಂದವನೆ ''ನನ್ನ ಹೆಂಡ್ತೀನ ರಂಡೆ ಮಾಡ್ತಿದ್ಯಲ್ಲ ಕಾಸಿಮಣ್ಣ...''. ಎಂದು ಅರ್ಧ ಹೆದರಿಕೆ ಅರ್ಧ ಸಿಟ್ಟಿನಲ್ಲಿ ಕೂಗಾಡಿದಾಗ ಕಂಗೆಟ್ಟ ಕಾಸಿಂಸಾಬರು ಅದನ್ನು ತಾವು ಮಾಡಿದ್ದಲ್ಲ ವೆಂದೂ, ಎಂಕಣ್ಣನ ಕೆಲಸವೆಂದೂ ನಿಜವನ್ನು ಉಸುರಿಬಿಟ್ಟಿದ್ದರು. ಸುದ್ದಿ ಊರಲ್ಲೆಲ್ಲಾ ಹರಡಿ ಬಿಟ್ಟು, ವೆಂಕಣ್ಣಾಚಾರ್ಯರು ಮತ್ತಷ್ಟು ಲೇವಡಿಗೆ ಗುರಿಯಾಗಿದ್ದರು. ಗುಡೇಕೋಟೆ ಗೋವಿಂದಾ ಚಾರ್ಯರು ''ರಾಯರ ಬೃಂದಾವನಕ್ಕೆ ಅಭಿಷೇಕ ಮಾಡು ಅಂತಂದ್ರೆ, ಸ್ಕೂಟರ್‌ಗೆ ಪಂಕ್ಚರ್ ಹಾಕ್ಲಿಕ್ಕೆ ಹೋಗೀಯಲ್ಲೋ...'' ಅಂತ ರೇಗಾಡಿ

ಇನ್ನೊಮ್ಮೆ ಇಂತಹುದೇನಾದರೂ ಆದರೆ ಮಠದ ಪೌರೋಹಿತ್ಯದಿಂದಲೇ ತೆಗೆದು ಹಾಕುವುದಾಗಿ ಹೇಳಿ ಹೋಗಿದ್ದರು. ಮತ್ತೆರಡು ದಿನಗಳಲ್ಲಿ ಸುದ್ದಿ ತಣ್ಣಗಾದ ಮೇಲೆ ಕಾಸಿಂಸಾಬರು ಭೇಟಿಯಾಗಿ ''ಅದನ್ನ ಮನಸ್ಸಿಗೆ ಹಚ್ಕೋಬೇಡ ಎಂಕಣ್ಣ. ನಿಂಗೆ ಕೆಲಸ ಏನೇನು ಮಾಡಬೇಕು ಅಂತ ಭಲೋ ಗೊತ್ತಿದ್ರೂ, ನಟ್ಟು ಬೋಲ್ಟು ಗಟ್ಟಿಯಾಗಿ ತಿರಗಿಸುವಷ್ಟು ರೆಟ್ಟ್ಯಾಗ ಶಕ್ತಿ ಇಲ್ಲ. ಬರೀ ಅನ್ನ ಹುಳಿ ತಿಂದ್ರೆ, ಈ ಕೆಲಸ ಎಲ್ಲ ಅದು ಹೆಂಗೆ ಬಗಿಹರೀತದೆ ಹೇಳು...'' ಅಂತ ಸಮಾಧಾನ ಮಾಡಿದ್ದರು.

ಆದರೆ ಎಲ್ಲಾ ಬಾರಿ ಈ ರೀತಿಯಾಗಿ ಎಡವಟ್ಟಾಗುವುದಿಲ್ಲ. ಬೇಸಿಗೆ ಕಾಲದಲ್ಲಿ ಊರಿನ ಹೆಂಗಸರಿಗೆ ಮಾವಿನಕಾಯಿಯನ್ನು ಉಪ್ಪಿನ ಕಾಯಿ ಹೋಳುಗಳಾಗಿ ಕತ್ತರಿಸಲು ಸಹಾಯ ವಾಗುವಂತೆ ಒಂದು ವಿಚಿತ್ರ ಸಾಧನ ಮಾಡಿದ್ದರು. ಮೇಲೆ ಕೆಳಗೆ ಡಬ್ಬಿಯ ಮುಚ್ಚಳಗಳಂತಿದ್ದ ಅದರ ಮಧ್ಯದಲ್ಲಿ ನಾಲ್ಕಾರು ಕಾಯಿಗಳನ್ನು ಒಂದೇ ಸಲಕ್ಕೆ ಇಟ್ಟು ಗಟ್ಟಿಯಾಗಿ ಒತ್ತಿದರಾಯ್ತು, ಎಲ್ಲಾ ಕಾಯಿಗಳು ಹೋಳುಗಳಾಗಿ ಬಿಡುತ್ತಿದ್ದವು. ಹಳೆಯ ಕಾಲದ ಗಡಿಯಾರಗಳಲ್ಲಿ ಏನಾದರೂ ತೊಂದರೆ ಬಂದರೆ ಅದನ್ನು ಪೂರ್ತಿಯಾಗಿ ಬಿಚ್ಚಿ, ಏನೇನೋ ಮಾಡಿ ಮತ್ತದು 'ಢಣ್' ಎಂದು ಸರಿಯಾಗಿ ಹೊಡೆಯುವಂತೆ ಮಾಡಿ ಬಿಡುತ್ತಿದ್ದರು. ನಾಗರಪಂಚಮಿಯ ಹೊತ್ತಿಗೆ ಮಕ್ಕಳಿಗಾಗಿ ಒಣಕೊಬ್ಬರಿ ಬಟ್ಟಲಿನಲ್ಲಿ ಹಕ್ಕಿಯೊಂದನ್ನು ಮಾಡಿ, ಮಕ್ಕಳು ಅದನ್ನು ದಾರಕ್ಕೆ ಕಟ್ಟಿ ಗರ್ ಎಂದು ತಿರುಗಿಸಿದಾಗ ಆ ಹಕ್ಕಿ ರೆಕ್ಕೆಯನ್ನು ಮೇಲೆ ಕೆಳಗೆ ಅಲ್ಲಾಡಿಸುವಂತೆ ಮಾಡಿ ಮಕ್ಕಳ ಮನಸ್ಸನ್ನು ಗೆದ್ದುಬಿಟ್ಟಿದ್ದರು. ಹೀಗೆ ವೆಂಕಣ್ಣಾಚಾರ್ಯರಿಗೆ ಒಂದಲ್ಲಾ ಒಂದು ಹೊಸ ವಿದ್ಯೆಗೆ ಕೈಹಾಕುವುದರಲ್ಲಿ ತುಂಬಾ ಆಸಕ್ತಿ. ಮಠದಲ್ಲಿ ಅಷ್ಟೋತ್ತರ ಹೇಳುವುದಕ್ಕಿಂತಲೂ ಹೆಚ್ಚು ಶ್ರದ್ಧೆ ಇಂತಹ ಕೆಲಸಗಳಲ್ಲಿರುತ್ತಿತ್ತು. ಮೊನ್ನೆ ಇಂತಹ ಒಂದು ಹೊಸ ವಿಚಾರ ತಲೆಯಲ್ಲಿ ಮೂಡಿ, ಅದನ್ನು ಮಾಡಿಯೇ ಬಿಡಬೇಕೆಂಬ ಛಲ ಬಂದಿದ್ದೇ ಕಾರಣವಾಗಿ ಅವರು ದಿಢೀರನೆ ಇಂದು 'ತಿರುಕೊಯಿಲೂರಿಗೆ' ರಘೋತ್ತಮ ತೀರ್ಥರನ್ನು ಕಾಣಲು ಹೋಗುತ್ತೇನೆಂದು ನೆಪ ವೊಡ್ಡಿ ಬೆಂಗಳೂರಿನ ಬಸ್ಸನ್ನು ಏರಿರುವುದು.

ವೆಂಕಣ್ಣಾಚಾರ್ಯರಿಗೆ ಮಠದಲ್ಲಿ ಮಹಾ ಮಂಗಳಾರತಿ ಮಾಡುವಾಗ ಒಂದು ಸಮಸ್ಯೆ ಯಾಗುತ್ತಿತ್ತು. ಗುರುವಾರದ ದಿನ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದು ಯಾರಾದರೊಬ್ಬರು ಜಾಗಂಟೆ ಹೊಡೆಯುತ್ತಾರಾದರೂ, ಉಳಿದ ದಿನಗಳಲ್ಲಿ ಭಕ್ತಾದಿಗಳ್ಯಾರೂ ಜಾಗಂಟೆ ಹೊಡೆಯಲು ಸಿಗುತ್ತಿರಲಿಲ್ಲ. ಯಾರಾದರೂ ಸಿಕ್ಕರೂ, ಅವರು ಜಾಗಂಟೆ ಹೊಡೆಯುವ ರೀತಿಯಿಂದ 'ಬೇಡಪ್ಪಾ... ಬೇಡ...' ಅಂತ ಅನ್ನಿಸುತ್ತಿತ್ತು. ಜಾಗಂಟೆಯನ್ನು ಸರಿಯಾಗಿ ಬಾರಿಸುವ ರೀತಿಯಲ್ಲಿ ಬಾರಿಸಿದರೆ ನಾದ ಮೂಡುತ್ತದೆ, ಇಲ್ಲವಾದರೆ ಕರ್ಕಶವಾಗುತ್ತದೆ. ಅದರ ಅಭ್ಯಾಸ ವಿಲ್ಲದ ಜನ ಅದನ್ನು ಕೈಯಲ್ಲಿ ಹಿಡಿದುಕೊಂಡು ಯಾವುದೋ ಸಿನಿಮಾ ಹಾಡಿನ ಬೀಟ್ಸ್‌ನಂತೆ ಜಾಗಂಟೆ ಬಾರಿಸಿದರೆ ಮಂಗಳಾರತಿ ಮಾಡುವುದಾದರೂ ಹೇಗೆ? ಅಥವಾ ಕತ್ತೆ ಉಚ್ಚೆ ಹೊಯ್ದಂತೆ ಯಾವುದೇ ಏರುಪೇರಿಲ್ಲದೆ ಢಣ್... ಢಣ್... ಢಣ್... ಅಂತ ಬಾರಿಸಿದರೂ ನಾದ ಮೂಡುವುದಿಲ್ಲ. ಇದರಿಂದಾಗಿ ದಿನನಿತ್ಯ ರಾಯರಿಗೆ ಮಂಗಳಾರತಿ ಮಾಡುವಾಗ ವೆಂಕಣ್ಣಾಚಾರ್ಯರಿಗೆ ಕಿರಿಕಿರಿಯಾಗುತ್ತಿತ್ತು. ಆ ಕೆಲಸಕ್ಕಾಗಿಯೇ ಒಬ್ಬ ವ್ಯಕ್ತಿಯನ್ನು ನಿಯಮಿಸುವುದೂ ಸಾಧ್ಯವಿಲ್ಲದ ಮಾತು. ಗುಡಿಯ ಉಸ್ತುವಾರಿ ನೋಡಿಕೊಳ್ಳುವ ಕೆಲವು ಹಿರಿಯರ ಮುಂದೆಯೂ ಈ ಸಮಸ್ಯೆಯನ್ನು ಹೇಳಿಕೊಂಡರೂ ಅವರಿಗ್ಯಾರಿಗೂ ಇದು ಮಹತ್ವದ್ದಾಗಿ ಕಾಣಲಿಲ್ಲ. ''ನಿನ್ನಷ್ಟಕ್ಕೆ ನೀನು ಮಂಗಳಾರತಿ ಮಾಡು ಎಂಕಣ್ಣ. ಜಾಗಂಟೆ ಢಣ್ ಢಣ್ ಅಂದರೂ ಒಂದೆ, ಢಣಾ

ಥಣಾ ಥಣ್' ಅಂದರೂ ಒಂದೆ. ನಾದ ಕೇಳ್ಕೊಂಡು ದಕ್ಷಿಣೆ ಹಾಕ್ತಾರೇನು?'' ಅಂತಂದು ವೆಂಕಣ್ಣಾಚಾರ್ಯರ ಸಮಸ್ಯೆಯನ್ನು ಕಿವಿಗೇ ಹಾಕಿಕೊಳ್ಳಲಿಲ್ಲ.

ಆದರೆ ವೆಂಕಣ್ಣಾಚಾರ್ಯರು ಉಳಿದವರು ತಮ್ಮ ಸಮಸ್ಯೆಯನ್ನು ಕಿವಿಗೆ ಹಾಕಿಕೊಳ್ಳದಿದ್ದರೆ, ಆ ಸಮಸ್ಯೆಯೊಂದಿಗೆ ಹೊಂದಿಕೊಂಡು ಒದ್ದಾಡುವ ಜಾಯಮಾನದವರಲ್ಲ. ನಮ್ಮ ಸಮಸ್ಯೆಗಳು ನಮ್ಮವೇ! ಅದಕ್ಕೆ ಪರಿಹಾರ ಹುಡುಕಿಕೊಳ್ಳುವುದಾಗಲಿ ಅಥವಾ ಹೊಂದಿಕೊಂಡು ಹೋಗುವುದಾಗಲಿ ನಮಗೇ ಬಿಟ್ಟಿದ್ದು. ಇಂತಹ ಗುಣವಿದ್ದದ್ದರಿಂದಲೇ ವೆಂಕಣ್ಣಾಚಾರ್ಯರು ಸದಾ ಈ ಜಾಗಂಟೆಯ ಕುರಿತೇ ಯೋಚಿಸುತ್ತಿದ್ದರು. ಹೀಗಿರುವಾಗ ಒಂದು ದಿನ ರಾಯರಿಗೆ ಅಭಿಷೇಕ ಮಾಡುವಾಗ 'ತನ್ನಷ್ಟಕ್ಕೆ ತಾನೇ ಜಾಗಂಟೆ ಹೊಡೆದುಕೊಳ್ಳೋ ಒಂದು ಯಂತ್ರ ನಾನ್ಯಾಕೆ ಮಾಡಬಾರದು?' ಅಂತ ಅನ್ನಿಸಿಬಿಟ್ಟು, ಆ ಅನಿಸಿಕೆಯೇ ಗಟ್ಟಿಯಾಗಿ ಹೋಯ್ತು. ಆ ಮಧ್ಯಾಹ್ನದಿಂದಲೇ ಕಾರ್ಯ ಪ್ರವೃತ್ತರಾದರು.

ಕಾಸಿಂಸಾಬರ ಜೊತೆ ಈ ವಿಷಯವಾಗಿ ಮಾತನಾಡಿದಾಗ 'ಸ್ವಲ್ಪ ಕಷ್ಟಪಟ್ಟರೆ ಮಾಡಬಹುದು' ಅಂತ ಆಶ್ವಾಸನೆಯನ್ನು ಕೊಟ್ಟ. ಅದಕ್ಕೆ ಅನುಕೂಲವಾಗುವಂತೆ ತನ್ನಲ್ಲಿರುವ ಒಂದು ಹಳೆಯ ಮೋಟಾರನ್ನೂ ಕೊಡುವುದಾಗಿ ಹೇಳಿದ. ಮೋಟಾರಿನ ವೃತ್ತಾಕಾರದ ಚಲನೆಯನ್ನು ಉಪಯೋಗಿಸಿಕೊಂಡು, ಅದನ್ನು ಎರಡು ಕಬ್ಬಿಣದ ಸರಳುಗಳ ಮೂಲಕ ಲೋಲಕದ ರೀತಿಯಲ್ಲಿ ಹಿಂದಕ್ಕೆ-ಮುಂದಕ್ಕೆ ತಿರುಗುವ ಚಲನೆಯಾಗಿ ಪರಿವರ್ತಿಸಿ, ಆ ಚಲನೆಯನ್ನು ಜಾಗಂಟೆಯನ್ನು ಬಾರಿಸುವ ಕಡಗೋಲಿಗೆ ಕೊಟ್ಟರಾಯ್ತು. ಜಾಗಂಟೆ ಯಂತ್ರ ಸಿದ್ಧ! ಇದು ಸರಿಯಾಗಿ ಕೆಲಸ ಮಾಡೇ ಮಾಡುತ್ತದೆ ಅಂತ ಮನಸ್ಸಿಗೆ ಅನ್ನಿಸಿಬಿಟ್ಟಿದ್ದೇ ವೆಂಕಣ್ಣಾಚಾರ್ಯರ ಉತ್ಸಾಹ ಇಮ್ಮಡಿ ಆಯ್ತು.


ಎರಡು ಸರಳುಗಳನ್ನು ಕಮ್ಮಾರರ ಅಂಗಡಿಯಲ್ಲಿ ಕಾಸಿ, ಬಡಿಸಿ, ತಮಗೆ ಸರಿಯೆನಿಸಿದ ಅಳತೆಗಳಿಗೆ ಕತ್ತರಿಸಿ, ಅವುಗಳಿಗೆ ಮೋಟಾರಿಗೆ ಜೋಡಿಸಲು ಬೇಕಾದ ಕೀಲುಗಳನ್ನು ಮಾಡಿಸಿದರು. ಕೊನೆಯ ಸರಳಿನಲ್ಲಿ ಸಣ್ಣ ಕಡಗೋಲು (ಉಡುಪಿಯಲ್ಲಿ ಕೊಂಡದ್ದು) ಗಟ್ಟಿಯಾಗಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ತೂತನ್ನು ಕೊರೆಸಿದರು. ಅವುಗಳನ್ನೆಲ್ಲಾ ಜೋಡಿಸಿ, ಮೋಟಾರಿಗೆ ವಿದ್ಯುತ್ ಕೊಟ್ಟಾಗ ಥಣ್, ಥಣ್ ಎಂದು ಕಡಗೋಲು ಜಾಗಂಟೆಯನ್ನು ಬಾರಿಸಲಾರಂಭಿಸಿತು. ಆ ಸದ್ದನ್ನು ಕೇಳಿದ್ದೇ ಮೈಯಲ್ಲಿ ಖುಷಿಯುಂಟಾಗಿ ''ಕಾಸಿಮ್ಮಾ ಜಾಗಂಟೆ ಥಣ್ ಥಣ್ ಅನ್ನಿಕ್ಕೆ ಹತ್ತದಲ್ಲೋ...'' ಅಂತ ಹರ್ಷದಿಂದ ಕೂಗಿದ್ದರು. ಕಾಸಿಂಸಾಬರೂ ಖುಷಿಯಿಂದ ಎಂಕಣ್ಣನ ಕೈ ಹಿಡಿದುಕೊಂಡು 'ನಿಂದು ಇಂಜನಿಯರ್ ತಲಿ ಎಂಕಣ್ಣ ...' ಅಂತ ಹೇಳಿದ್ದನಾದರೂ, ಒಳಗೊಳಗೆ ಇದೂ ಎಂಕಣ್ಣನ ಇತರ ಸಾಹಸಗಳಂತೆ ಏನಾದರೂ ಎಡವಟ್ಟಾಗುತ್ತದೆಯೋ ಎಂಬ ಅನುಮಾನವಿತ್ತು.

ಬರೀ ಸರಳು, ಮೋಟಾರುಗಳಿಂದ ಕೂಡಿದ ಯಂತ್ರದಿಂದ ಜಾಗಂಟೆ ಬಾರಿಸಿಸಿದರೆ ಅದು ಗುಡಿಯಲ್ಲಿ ಅಲಂಕಾರಿಕವಾಗಿ ಕಾಣಲಾರದು. ಯಂತ್ರದ ಒಳಗಡೆ ಏನೇ ಸಂಕೀರ್ಣತೆಗಳಿರಲಿ, ಅದನ್ನೆಲ್ಲಾ ಬಣ್ಣಗಳ ನಾಜೂಕಿನ ಸಾಮಾನಿನಲ್ಲಿ ಮುಚ್ಚಿ ಹೊರನೋಟಕ್ಕೆ ಕಲಾತ್ಮಕವಾಗಿ ಕಾಣುವಂತಿದ್ದರೆ ಮಾತ್ರ ಸಾಮಾನ್ಯಜನ ಮೆಚ್ಚುವುದು. ಈ ವಿಚಾರ ಚೆನ್ನಾಗಿ ಗೊತ್ತಿದ್ದ ವೆಂಕಣ್ಣಾಚಾರ್ಯರು ಅದಕ್ಕಾಗಿ ಒಂದು ಸುಂದರ ಪ್ರಾಣದೇವರ ಮೂರ್ತಿಯನ್ನು ಮಣ್ಣಲ್ಲಿ ಮಾಡಿದರು. ಪ್ರಾಣದೇವರ ಮೂರ್ತಿಯನ್ನು ಈ ಯಂತ್ರದ ಮುಂದೆ ನಿಲ್ಲಿಸಿ, ಜಾಗಂಟೆ ಬಡಿಯುವ ಕಡಗೋಲನ್ನು ಪ್ರಾಣದೇವರ ಬಾಲವಾಗಿ ಕಾಣುವಂತೆ ಮಾಡಿದರು. ಮೋಟಾರು ಮತ್ತು ಸರಳುಗಳನ್ನೆಲ್ಲಾ ಒಂದು ಡಬ್ಬದಲ್ಲಿ ಮುಚ್ಚಿ, ಆ ಡಬ್ಬಕ್ಕೆ

ಮತ್ತೇನನ್ನೋ ಜೋಡಿಸಿ, ಬಣ್ಣ ಬಳಿದು ಅದೊಂದು ಪರ್ವತದ ಆಕಾರದಲ್ಲಿ ಕಾಣುವಂತೆ ಮಾಡಿದರು. ಈ ಪರ್ವತದ ಪಕ್ಕಕ್ಕೆ ಒಂದು ಮರವನ್ನು ನಿಲ್ಲಿಸಿ, ಈ ಮರದ ಒಂದು ಕೊಂಬೆಗೆ ಜಾಗಂಟೆಯನ್ನು ಜೋತು ಹಾಕಿದರು. ಆ ಜಾಗಂಟೆಯನ್ನು ಕಡಗೋಲಿನಿಂದ ಹೊಡೆದಾಗ ಸಿಕ್ಕಾಪಟ್ಟೆ ಅಲ್ಲಾಡದಂತೆ ಅದನ್ನು ಮರದ ಬುಡಕ್ಕೆ ಹುರಕೊನಿಯಿಂದ ಕಟ್ಟಿದರು. ಒಟ್ಟಾರೆ ಎಲ್ಲಾ ಸೇರಿ ಗುಡ್ಡದ ಮಧ್ಯದ ಅರಣ್ಯದಲ್ಲಿ ಕೈ ಮುಗಿದು ನಿಂತ ಪ್ರಾಣದೇವರು ತಮ್ಮ ಬಾಲದಿಂದ ಜಾಗಂಟೆಯನ್ನು ಬಾರಿಸುವಂತೆ ಕಾಣುತ್ತಿತ್ತು.

ನೋಡಿದ ಕೆಲವರು 'ಭಾಳ ಭೇಷದೆ....' ಅಂತ ತಮ್ಮ ಸಂತೋಷವನ್ನು ಸೂಚಿಸಿದರೆ, ಮತ್ತೆ ಕೆಲವರು ''ಇನ್ನೇನ್ ಎಂಕಣ್ಣ, ಜಾಗಂಟೆ ಯಂತ್ರ ಮಾಡ್ದಿ. ಹಂಗೇ ಪೂಜೆ ಮಾಡೋ ಯಂತ್ರ ಮಾಡಿಬಿಟ್ಟು ನೀನು ಮನ್ಯಾಗೆ ಥಣ್ಣಗೆ ಕೂತ್ಗೊಂಡು ಬಿಡ್ಬಂತಿ. ದಕ್ಷಿಣೇನೂ ಯಂತ್ರಕ್ಕೇ ಹಾಕ್ತೀವಿ'' ಎಂದರು. ಮಕ್ಕಳಿಗಂತೂ ಅದೊಂದು ಅಪೂರ್ವ ವಸ್ತುವಾಗಿ ಹೋಯ್ತು.

ಆದರೆ ಆ ಜಾಗಂಟೆ ಯಂತ್ರದಲ್ಲೂ ವೆಂಕಣ್ಣಾಚಾರ್ಯರಿಗೆ ದೋಷ ಕಾಣಿಸಲಾರಂಭಿಸಿತು. ಕಾಸಿಂಸಾಬರು ಕೊಟ್ಟ ಮೋಟಾರು ಯಾವಾಗಲೂ ಒಂದೇ ವೇಗದಲ್ಲಿ ಸುತ್ತುತ್ತೆ. ಆದಕಾರಣ ಜಾಗಂಟೆಯ ಸದ್ದೂ ಏಕಪ್ರಕಾರವಾಗಿ ಯಾವುದೇ ಏರಿಳಿತಗಳಿಲ್ಲದೆ ಥಣ್ ಥಣ್ ಎನ್ನುವುದರಿಂದ ಅದರ ನಾದವೇ ಕರ್ಕಶವಾಗಿ ಹೋಯಿತು. ಯಾವ ಸಮಸ್ಯೆಯಿಂದ ರೋಸಿ ಕೆಲಸ ಪ್ರಾರಂಭಿಸಿದ್ದರೋ ಅಲ್ಲಿಗೇ ಬಂದು ನಿಂತಂತಾಯಿತು! ಆಚಾರ್ಯರು ಮತ್ತಷ್ಟು ಯೋಚನೆ ಮಾಡಿ, ಮೋಟಾರಿನ ವೇಗ ಪ್ರತಿಯೊಂದು ವರ್ತುಲಕ್ಕೂ ಬೇರೆ ಬೇರೆಯಾಗಿ ಮಾಡಲು ಸಾಧ್ಯವಾದರೆ ಆಗ ಜಾಗಂಟೆಯಿಂದ ಸರಿಯಾದ ನಾದವನ್ನು ಮೂಡಿಸಬಹುದು ಎಂದು ಅರ್ಥ ಮಾಡಿಕೊಂಡರು. ಆದರೆ ಆ ರೀತಿಯಾಗಿ ಮೋಟಾರಿನ ವೇಗವನ್ನು ಹೇಗೆ ಬದಲಾಯಿಸಬೇಕೆಂದು ತಿಳಿಯಲಿಲ್ಲ. ಕಾಸಿಂ ಸಾಬರಿಗೂ ಇದು ಗೊತ್ತಿರಲಿಲ್ಲ. ಮೋಟಾರು ಸುತ್ತುವುದನ್ನೇ ನಿಲ್ಲಿಸಿಬಿಟ್ಟರೆ ಏನಾದರೂ ರಿಪೇರಿ ಮಾಡಬಹುದೇ ಹೊರತು, ಹೀಗೆ ಒಂದೊಂದು



ಸುತ್ತಿಗೆ ಒಂದೊಂದು ವೇಗ ಇರುವಂತೆ ಮೋಟಾರನ್ನು ಬದಲಾಯಿಸುವುದು ಹೇಗೆ?

ಆಚಾರ್ಯರಿಗಂತೂ ಇದೇ ಯೋಚನೆ ಗಿಟ್ಟುಕೊಂಡಿತು. ಮಂದಿ ಮನೆಗೆ ಶ್ರಾದ್ಧ, ತಿಥಿ, ಸತ್ಯನಾರಾಯಣ ಪೂಜೆ ಮಾಡಿಸಲು ಹೋದಾಗ ಪೂಜೆಯ ಮಧ್ಯದಲ್ಲಿಯೇ ಮಂತ್ರಗಳು ಮರೆತು ಹೋಗಲಾರಂಭಿಸಿದವು. ಶೌಚಕ್ಕೆ ಹೋದವರು ಗಂಟೆಗಟ್ಟಲೆ ಹೊರಬರುತ್ತಲೇ ಇರಲಿಲ್ಲ. ರಸ್ತೆಯಲ್ಲಿ ಓಡಾಡುವಾಗ ಕೈಗಳನ್ನು ಅಲ್ಲಾಡಿಸುತ್ತಾ, ತಮ್ಮಷ್ಟಕ್ಕೆ ತಾವೇ ಮಾತನಾಡಲಾರಂಭಿಸಿದರು.

ಇದೇ ಸಮಯಕ್ಕೆ ಗೋಪಣ್ಣನ ಮಗ ಪುಟ್ಟ ಊರಿಗೆ ಬಂದ. ಒಳ್ಳೆ ಬುದ್ಧಿವಂತ ಹುಡುಗ ನೆಂದು ಊರಲ್ಲೆಲ್ಲಾ ಹೆಸರು ಸಂಪಾದಿಸಿದ್ದಾನೆ. ಈಗ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಕಡೆಯ ವರ್ಷದಲ್ಲಿದ್ದಾನೆ. ವೆಂಕಣ್ಣಾಚಾರ್ಯರು ಸುದ್ದಿ ಗೊತ್ತಾದದ್ದೇ ಅವನನ್ನು ಕಾಣಲು ಹೋದರು.

ಪುಟ್ಟನಿಗೆ ತಮ್ಮ ಸಮಸ್ಯೆಯನ್ನು ಸರಿಯಾಗಿ ವಿವರಿಸಿ "ಈಗೇನು ಮಾಡಬೇಕು ಅಂತೀ ಪುಟ್ಟಾ?" ಎಂದು ಕೇಳಿದರು. ಪುಟ್ಟ "ಓ, ಹಂಗಾ..." ಎಂದು ಶುರು ಮಾಡಿದವನೇ ಅರ್ಧ ಗಂಟೆ ಏಕಪ್ರಕಾರವಾಗಿ ಮಾತನಾಡಿದ. ಎಲೆಕ್ಟ್ರಾನಿಕ್ಸ್ ಅಂದ, ಸರ್ಕ್ಯೂಟ್ ಅಂದ, ಎ.ಸಿ. ಅಂದ, ಡಿ.ಸಿ. ಅಂದ, ಕೈಪಾಸಿಟರ್ ಅಂದ... ಮತ್ತೇನೇನೋ ಅರ್ಧ ಗಂಟೆ ಬಡಬಡಿಸಿದ. ವೆಂಕಣ್ಣಾಚಾರ್ಯರಿಗಂತೂ ಏನೂ ತಿಳಿಯಲಿಲ್ಲ. ಬಾಯಿ ಒಣಗಿದಂತಾಗಿ ಪುಟ್ಟ ನೀರು ಕುಡಿಯ ಲಾರಂಭಿಸಿದಾಗ, "ಹಂಗಾದ್ರೆ ಈಗ ನನ್ನೇನು ಮಾಡಂತಿ ಪುಟ್ಟ?" ಎಂದು ಕೇಳಿದರು. ತಂಬಿಗೆ ಯನ್ನು ಕೆಳಗಿಟ್ಟ ಪುಟ್ಟ "ಏನಾದರೂ ಮಾಡ ಬಹುದು..." ಅಂತ ಪ್ರಾರಂಭಿಸಿ ಮತ್ತೆ ಅರ್ಧ ಗಂಟೆ ವೆಂಕಣ್ಣಾಚಾರ್ಯರಿಗೆ ಗೊತ್ತಾಗದ ಹೊಸ ಹೊಸ ಪದಗಳನ್ನು ಉಪಯೋಗಿಸಿ ಮಾತ ನಾಡಿದ. ಕಡೆಗೆ ಬೇಸರ ಬಂದ ವೆಂಕಣ್ಣಾ ಚಾರ್ಯರು "ಪುಟ್ಟ, ಈಗ ನೀನು ಹೇಳೋ ಹಾಗೆ ಮಾಡೋದಕ್ಕೆ ಏನೇನು ಕೊಂಡ್ಕೋ ಬೇಕಾಗ್ತದೆ? ಎಷ್ಟು ರೊಕ್ಕ ಖರ್ಚು ಆಗ್ತದೆ?" ಎಂದು ಕೇಳಿದರು. ಅದಕ್ಕೆ ಪುಟ್ಟ "ಒಂದು ಕಂಪ್ಯೂಟರ್ ಬೇಕೇ ಬೇಕು. ಅದಕ್ಕೆ ಜಾಗಂಟೆ ನಾದ ಹೇಳಿಕೊಟ್ಟು, ಅದಕ್ಕೆ ತಕ್ಕಂತೆ ಮೋಟಾರಿನ ವೇಗ ಬದಲಾಯಿಸು ಅಂತ ಹೇಳಿದ್ರೆ ಅದು ಮಾಡುತ್ತೆ. ಒಟ್ಟು ಒಂದು ನಲವತ್ತು -ಐವತ್ತು ಸಾವಿರ ಖರ್ಚಾಗ್ತದೆ" ಅಂತಂದ. ವೆಂಕಣ್ಣಾ ಚಾರ್ಯರು ಮತ್ತೇನೂ ಹೆಚ್ಚಿಗೆ ಮಾತನಾಡದೆ "ಬರ್ತೀನಪ್ಪ" ಎಂದು ಹೊರಟುಬಿಟ್ಟರು. ಪುಟ್ಟ ತಲಬಾಗಿಲ ತನಕ ಅವರ ಜತೆ ಹೋಗಿ "ಬೇಜಾರು ಮಾಡ್ಕೋಬ್ಯಾಡ್ರಿ, ಆಚಾರ್ಯರೆ, ಒಂದು ಮಾತು ಹೇಳ್ತೀನಿ. ಈ ವಯಸ್ನಾಗೆ ನೀವು ಸುಮ್ನೆ ರಾಯರಮಠದ ಕೆಲಸ ನೋಡಿಕೊಂಡು ಸುಖವಾಗಿ ಇರೋದು ಬಿಟ್ಟು, ಇದೆಲ್ಲಾ ಉಸಾಬರಿ ಯಾಕೆ ತಲೆಗೆ ಹಚ್ಚಿಕೊಳ್ತೀರೋ ನಂಗೆ ಅರ್ಥ ಆಗಲ್ಲ" ಅಂತ ಬುದ್ಧಿಮಾತನ್ನೂ ಹೇಳಿದ. ಅನಂತರ ಗೋಪಣ್ಣ ವೆಂಕಣ್ಣಾ ಚಾರ್ಯರೊಬ್ಬರನ್ನೇ ಹೊರಗೆ ಕರೆದುಕೊಂಡು ಹೋಗಿ, "ಹೆಂಗಿದಾನೆ ನನ್ನ ಮಗ?" ಅಂತ ಹುಬ್ಬು ಹಾರಿಸಿ, ಮೀಸೆ ತಿರುವಿ ಕೇಳಿದರು. ವೆಂಕಣ್ಣಾಚಾರ್ಯರು ಹೇಳಲೇನೂ ತೋಚದೆ "ಭಾಳ ಬುದ್ಧಿವಂತ, ಭಾಳ ಬುದ್ಧಿವಂತ" ಅಂದರು. "ನನ್ನ ಮಗನ ಬಗ್ಗೆ ಕೊಚ್ಚಿಕೊಳ್ತೀನಿ ಅಂತ ತಿಳ್ಕೋಬೇಡ. ಖರೆ ಹೇಳ್ತೀನಿ, ಅವನ ತಲಿ ಪಾದರಸದಂಗೆ ಚುರುಕು. ಕಾಲೇಜ್‌ನಾಗೆ ಪ್ರೊಫೆಸರುಗಳು ಅವನೆದುರು ಪಾಠ ಮಾಡ್ಲಿಕ್ಕೇ ಹೆದರ್ಕೊಳ್ತಾರಂತೆ. ನಮ್ಮ ಕ್ಲಾಸಿನಾಗೆ ಕಷ್ಟದ ಪ್ರಶ್ನೆ ಕೇಳಿ ನಮಗೆ ಅವಮಾನ ಮಾಡಬೇಡ ಅಂತ ಇವನ ಹತ್ತಿರ ಬಂದು ಗುಟ್ಟಾಗಿ ಕೇಳ್ಕೊಂತಾ ರಂತೆ. ಎಲ್ಲಾ ರಾಯರ ಅನುಗ್ರಹ" ಅಂತಂದು ಕಣ್ಣಲ್ಲಿ ಮೂಡಿದ ನೀರನ್ನು ಧೋತ್ರದ ತುದಿ ಯಿಂದ ಒರೆಸಿಕೊಂಡರು.


ಇದೇ ಸಮಯದಲ್ಲಿ ಕಾಸಿಂಸಾಬರು ಒಂದು ಸಲಹೆಯನ್ನು ಕೊಟ್ಟರು. "ಅಲ್ಲ ಎಂಕಣ್ಣ, ಹೆಂಗೂ ಏಳನೇ ಕ್ಲಾಸ್‌ತನಕ ಓದಿ ಬುದ್ಧಿವಂತ ಅಂತ ಅನ್ನಿಸಿಕೊಂಡವನು ನೀನು. ಛಲೋ ಕನ್ನಡ ಓದ್ಲಿಕ್ಕೆ, ಬರೀಲಿಕ್ಕೆ ಬರ್ತದೆ. ದೊಡ್ಡ ಊರಿಗೆ ಹೋಗಿಬರೋವರ ಜೋಡಿ ನಿನ್ನ ಕೆಲಸಕ್ಕೆ ಸಹಾಯ ಆಗೋ ಒಂದು ಪುಸ್ತಕ ತರಿಸ್ಕೋ ಬಾರದ್ಯಾಕೆ?" ಎಂದು ಸಲಹೆ ಕೊಟ್ಟರು. "ಅರೆ, ಹೌದಲ್ಲ... ನಂಗ್ಯಾಕಿದು ಹೊಳೀಲಿಲ್ಲ?" ಅಂತ ವೆಂಕಣ್ಣಾಚಾರ್ಯರಿಗೆ ಅನ್ನಿಸಿತು. ಆದರೆ ಹಿಂದೆಯೇ, ತಾನು ಬೇರೆಯವರ ಮುಂದೆ ತನ್ನ ಜಾಗಂಟೆ

ಪುರಾಣ ಬಿಚ್ಚಿದರೆ ಲೇವಡಿ ಮಾಡುತ್ತಾರೆಂದೆನಿಸಿ, ''ನಾನೇ ಬಳ್ಳಾರಿಗೆ ಹೋಗಿ ಬರ್ತೀನಿ'' ಅಂತ ಹೇಳಿದರು. ಕಾಸಿಂಸಾಬರು ''ಬಳ್ಳಾರಿಯೇನೂ ಅಂಥಾ ದೊಡ್ಡ ಊರಲ್ಲ. ಏನು ಸಿಗ್ತದೋ, ಏನು ಬಿಡ್ತದೋ, ಸುಮ್ನೆ ಬೆಂಗಳೂರಿಗೆ ಹೋಗಿಬಿಡು. ರಾಶಿ ರಾಶಿ ಪುಸ್ತಕ ಮಾರ್ತಾರೆ ಅಲ್ಲಿ'' ಅಂತಂದರು. ವೆಂಕಣ್ಣಾಚಾರ್ಯರಿಗೂ ಅದೇ ಸರಿಯೆನ್ನಿಸಿತು.

ಆದರೆ ಬರೀ ಮನಸ್ಸಿನಲ್ಲಿ ಬೆಂಗಳೂರಿಗೆ ಹೋಗಬೇಕೆಂದು ನಿರ್ಧರಿಸಿದರೆ ಆಯ್ತೆ? ಊರಲ್ಲಿ ರಾಯರ ಪೂಜೆ ಮಾಡುವವರು ಯಾರು? 'ವಾರದ ರಜ ಆದಿತ್ಯವಾರ' ಅಂತ ಮಠದ ಮುಂದೆ ಬೋರ್ಡ್ ತಗಲಿಸಲಾಗುತ್ತದೆಯೆ? ಜೊತೆಗೆ ಬೆಂಗಳೂರಿಗೆ ಹೋಗಿ ಬರುವ ಖರ್ಚು, ಪುಸ್ತಕ ಕೊಳ್ಳಲು ಹಣ ಬೇಡವೆ? ಎಲ್ಲಕ್ಕೂ ಮುಖ್ಯವಾಗಿ ಹೆಂಡತಿ ಪದ್ದಕ್ಕ ವೆಂಕಣ್ಣಾಚಾರ್ಯರ ಇಂತಹ ಶೋಕಿ ವ್ಯವಹಾರಗಳಿಗೆ ಸಮ್ಮತಿಸುತ್ತಾಳೆಯೆ?


ಸಾಮಾನ್ಯವಾಗಿ ಎಲ್ಲಾ ಬ್ರಾಹ್ಮಣ ದಂಪತಿಗಳಂತೆ ವೆಂಕಣ್ಣನದು ಮೇಷ ರಾಶಿ, ಪದ್ದಕ್ಕನದು ಸಿಂಹ ರಾಶಿ. ''ನನ್ನ ಗಂಡಗೆ ಬರೀ ಗಂಟೆ ಬಾರಿಸ್ಕೊಂಡು ಮಂಗಳಾರತಿ ಮಾಡೋದೊಂದೇ ಗೊತ್ತು. ಹೆಂಗಸು ನಾನು ಗರ್ಭಗುಡಿಯೊಳಗೆ ಹೋಗಂಗಿಲ್ಲ ಅಂತ ಅದೊಂದು ಮಾಡ್ತಾರೆ, ಅಷ್ಟೆ. ಅದೊಂದು ಬಿಟ್ರೆ ಮಠದ ಕೆಲಸ ಎಲ್ಲಾ ನೋಡ್ಕೊಳ್ಳೋದು ನಾನೇ. ನಾನು ಒಬ್ಬಾಕಿ ಇದ್ದೀನಿ ಅಂತ ಈ ಸಂಸಾರ ನಡೀತಾ ಅದೆ. ಇಲ್ಲಾ ಅಂದಿದ್ರೆ ಆ ಮಠದಾಗಿನ ರಾಯರೂ 'ನನ್ಕೈಲಾಗಲ್ಲಪ್ಪ' ಅಂತ ಕೈ ಕಟ್ಟಿಗೊಂಡು ತೆಪ್ಪಗೆ ಕೂಡ್ತಿದ್ರು'' ಅಂತ ಎಲ್ಲರ ಮುಂದೆ ಥಾಣಾ ಢಂಗುರ ಸಾರುತ್ತಾಳೆ. ಗುಡಿಗೆ ಬರುವ ಎಲ್ಲಾ ಆದಾಯಕ್ಕೂ ಆಕೆಯದೇ ಹಕ್ಕು. ವೆಂಕಣ್ಣ ನಶಿಪುಡಿಗೆ ಹಣ ಬೇಕೆಂದರೂ ಹೆಂಡತಿಯ ಮುಂದೆ ಕೈಯೊಡ್ಡಬೇಕು.

ಆದರೆ ಹೆಂಡತಿಗೆ ಗೊತ್ತಾಗದಂತೆ ಕಳ್ಳಗಂಟು ಮಾಡುವ ತನ್ನದೇ ಆದ ವಿಧಾನವನ್ನು ವೆಂಕಣ್ಣಾ



ವೆಂಕಣ್ಣಾಚಾರ್ಯರ ಜಾಗಂಟೆ ಯಂತ್ರದ ರೇಖಾಚಿತ್ರ

ಚಾರ್ಯರು ಕಂಡುಕೊಂಡಿದ್ದಾರೆ. ಕೆಲವೊಂದು ಭಕ್ತಾದಿಗಳು ಬೆಳಿಗ್ಗೆ ತಡವಾಗಿ ಬರುತ್ತಾರೆ. ಆ ವೇಳೆಗಾಗಲೇ ಗರ್ಭಗುಡಿಯ ಬಾಗಿಲನ್ನು ಹಾಕಿ ಬಿಟ್ಟಿರುತ್ತದೆ. ಆಗ ಅವರು ದಕ್ಷಿಣೆಯನ್ನು ಬಾಗಿಲಿನಲ್ಲಿ ರಾಯರನ್ನು ನೋಡುವುದಕ್ಕಾಗಿ ಮಾಡಿರುವ ಒಂದು ಸಣ್ಣ ಕಿಂಡಿಯಿಂದ ಹಾಕುತ್ತಾರೆ. ಮರುದಿನ ಬೆಳಿಗ್ಗೆ ಹಳಸು ಕಸವನ್ನು ಬಳಿಯಲು ವೆಂಕಣ್ಣಾಚಾರ್ಯರು ಮತ್ತು ಪದ್ದಕ್ಕ ಜೊತೆಯಲ್ಲಿಯೇ ಹೊರಟು ಬಂದರೂ, ಪದ್ದಕ್ಕನದು ಸ್ಥೂಲಕಾಯವಾದ್ದರಿಂದ ಗುಡಿ



ತಲುಪುವುದರಲ್ಲಿ ನಿಧಾನವಾಗುತ್ತದೆ. ಆ ಅಪ ರೂಪದ ವೇಳೆಯನ್ನು ಉಪಯೋಗಿಸಿಕೊಂಡು, ಗರ್ಭಗುಡಿಯಲ್ಲಿ ಬಿದ್ದಿರುವ ದಕ್ಷಿಣೆಗಳನ್ನು ಆರಿಸಿ, ಅಲ್ಲಿಯೇ ಯಾರಿಗೂ ಕಾಣದಂತೆ ಇಟ್ಟಿರುವ ಒಂದು ಮಣ್ಣಿನ ಕುಡಿಕೆಯಲ್ಲಿ ಸಂಗ್ರಹಿಸುತ್ತಾರೆ. ಪದ್ದಕ್ಕ ಎಷ್ಟೇ ಗಯ್ಯಾಳಿಯಾದರೂ ಗರ್ಭಗುಡಿ ಯಲ್ಲಿ ಕಾಲಿರಿಸುವಷ್ಟು ಧೂರ್ತಳಲ್ಲ.

ಈ ರೀತಿ ಸಂಗ್ರಹವಾದ ಹಣವನ್ನು ವೆಂಕಣ್ಣಾಚಾರ್ಯರು ತಮ್ಮ ಹೊಸ ಹೊಸ ಸಾಹಸಗಳಿಗೆ ಬೇಕಾಗುವ ಖರ್ಚುಗಳಿಗೆ ಉಪ ಯೋಗಿಸಿಕೊಳ್ಳುತ್ತಾರೆ. ಆದರೆ ಈ ಬಾರಿ ಬೆಂಗಳೂರಿಗೆ ಹೋಗಿ ಬರುವ ಮತ್ತು ಪುಸ್ತಕವನ್ನು ಕೊಳ್ಳುವ ಖರ್ಚು ತುಂಬಾ ಹೆಚ್ಚಾದ್ದರಿಂದ ಬರೀ ಈ ಹಣವೊಂದೇ ಸಾಕಾಗುತ್ತಿರಲಿಲ್ಲ. ಪದ್ದಕ್ಕನ ಸಹಾಯ ಬೇಕೇಬೇಕಿತ್ತು. ಅದಕ್ಕಾಗಿ ವೆಂಕಣ್ಣಾ ಚಾರ್ಯರು ಮತ್ತೊಂದು ಉಪಾಯವನ್ನು ಮಾಡಿದರು.

ಬುಧವಾರ ಬೆಳಿಗ್ಗೆ ಎದ್ದವರೇ, ತಮಗೆ ರಾತ್ರಿ ಕನಸು ಬಿದ್ದಿತ್ತೆಂದೂ, ಕನಸಿನಲ್ಲಿ ರಘೋತ್ತಮ ತೀರ್ಥರು ಕಾಣಿಸಿಕೊಂಡು ''ವೆಂಕಣ್ಣಾ, ನಿಂಗೆ ಇಷ್ಟು ದಿನ ಆದ್ರೂ ನನ್ನ ನೆನಪು ಆಗ್ಲಿಲ್ಲೇನೋ? ನಾಳೇನೇ ಹೊರಟು ಬಾ'' ಅಂತ ಸ್ವಲ್ಪ ಜೋರಾ ಗಿಯೇ ಹೇಳಿದರೆಂದೂ ಪದ್ದಕ್ಕನಿಗೆ ಹೇಳಿ, ಆ ದಿನವೇ ತಿರುಕೊಯಿಲೂರಿಗೆ ಹೋಗುವುದಾಗಿ ಹೇಳಿಬಿಟ್ಟರು. ಆದರೆ ಪದ್ದಕ್ಕನನ್ನು ಅಷ್ಟೊಂದು ಸುಲಭವಾಗಿ ನಂಬಿಸಲು ಸಾಧ್ಯವಿಲ್ಲ.

''ಕನಸಿನಾಗೆ ಬಂದಿದ್ದು ರಘೋತ್ತಮ ತೀರ್ಥರೇ ಅಂತ ಹೆಂಗ್ರಿ ಗೊತ್ತು?'' ಅಂತ ಸವಾಲು ಹಾಕಿದಳು. ಆಕೆಯ ಸವಾಲಿಗೆ ಸಾಕಷ್ಟು ಕಾರಣಗಳಿದ್ದವು. ಸಾಮಾನ್ಯವಾಗಿ ಎಲ್ಲೂ ರಘೋತ್ತಮತೀರ್ಥರ ಚಿತ್ರವಿರುವುದಿಲ್ಲ. ಅದರ ಬದಲು ಅವರ ಬೃಂದಾವನದ ಚಿತ್ರವಿರುತ್ತದೆ. ಆದರೆ ವೆಂಕಣ್ಣನೇನೂ ಕಡಿಮೆಯಲ್ಲ. ಇಂತಹ ಪ್ರಶ್ನೆಗಳನ್ನು ಮುಂಚೆಯೇ ಊಹಿಸಿದ್ದ.

''ಕನಸಿನಾಗೆ ಬಂದ ಬ್ರಾಹ್ಮಣ ರಣರಣ ಬಿಸಿಲಿನಾಗೆ ನಿಂತಿದ್ದ. ಅಷ್ಟೇ ಆಗಿದ್ರೆ, ನಂಗೂ ಗೊತ್ತಾಗ್ತಿದ್ದಿಲ್ಲ, ಆದರೆ ಆ ಬ್ರಾಹ್ಮಣ ತಮಿಳಿನಲ್ಲಿ ಮಾತಾಡ್ತಾ ಇದ್ದ'' ಎಂದು ಸಮಜಾಯಿಷಿ

ಕೊಟ್ಟರು. ತಮಿಳುನಾಡಿನ ಈ ಯತಿಗಳು ಕರ್ನಾಟಕದಲ್ಲಿ ಸಾಕಷ್ಟು ಸಂಚರಿಸಿ ತಿರುಕೊಯಿಲೂರಿನಲ್ಲಿ ಬೃಂದಾವನವಾಗಿದ್ದಾರೆ. ತಮಗೆ ರಣರಣ ಬಿಸಿಲೇ ಇಷ್ಟವೆಂದು ಬೃಂದಾವನವಾಗುವುದಕ್ಕೆ ಮುಂಚೆ ತಮ್ಮ ಶಿಷ್ಯರಿಗೆ ಹೇಳಿರುವುದರಿಂದ ಇವರ ಬೃಂದಾವನಕ್ಕೆ ಯಾವುದೇ ಮೇಲ್ಛಾವಣಿಯಿಲ್ಲ.

''ಆ ಬ್ರಾಹ್ಮಣ ತಮಿಳಿನಾಗೆ ಮಾತಾಡಿದ್ರೆ, ನಿಮಗೆ ಹೆಂಗ್ರೀ ಅರ್ಥ ಆಯ್ತು?'' ಇದು ಪದ್ದಕ್ಕನ ಮರುಸವಾಲು. ಕನ್ನಡ, ಸಂಸ್ಕೃತಗಳನ್ನು ಬಿಟ್ಟರೆ ವೆಂಕಣ್ಣಾಚಾರ್ಯರಿಗೆ ಬೇರೆ ಭಾಷೆಯ ಗಂಧವೇ ಇಲ್ಲ.

ವೆಂಕಣ್ಣಗೆ ಎಡವಿದಂತಾಯ್ತು. ಆದರೆ ಈ ರೀತಿಯ ಆಶುಪ್ರಶ್ನೆಗಳು ಅವರಿಗೀಗಾಗಲೇ ಅಭ್ಯಾಸವಾಗಿರುವುದರಿಂದ, ಅದಕ್ಕೆ ತಮಗೆ ಆ ಕ್ಷಣಕ್ಕೆ ತೋಚಿದಂತೆ ಉತ್ತರಿಸಿಬಿಟ್ಟರು. ''ನಂಗೆ ಕನಸಿನಾಗೆ ತಮಿಳು ಮಾತಾಡ್ಲಿಕ್ಕೆ ಬರ್ತಿತ್ತು, ಅರ್ಥಾನೂ ಆಗ್ತಿತ್ತು'' ಅಂತ ಹೇಳಿಬಿಟ್ಟರಲ್ಲದೆ ಕಡೆಗೆ ಮತ್ತೆ ಪದ್ದಕ್ಕ ಪ್ರಶ್ನೆಗಳನ್ನು ಕೇಳದಂತೆ ''ಯತಿಗಳ ಮಾತನ್ನೇ ಪರೀಕ್ಷಾ ಮಾಡ್ತಿಯೇನೆ?'' ಎಂದು ಹೆದರಿಸಿಬಿಟ್ಟರು.

ಕಡೆಗೆ ಪದ್ದಕ್ಕ ತಿರುಕೊಯಿಲೂರಿಗೆ ಹೋಗಿ ಬರುವ ಹಣವನ್ನು ಕೊಡುವುದಾಗಿ ಒಪ್ಪಿಕೊಂಡಳು. ಆಕೆಗೂ ಗಂಡನ ಜೊತೆ ಯತಿಗಳ ದರ್ಶನ ಪಡೆಯಲು ಹೋಗಬೇಕೆಂಬ ಆಸೆಯಿದ್ದರೂ, ಮರುದಿನವೇ ಗುರುವಾರವಾದ್ದರಿಂದ ಹೋಗಲಾಗಲಿಲ್ಲ. ಮರುದಿನದ ಪೂಜೆಗೆ ತಾಲೂಕಾಫೀಸಿನಲ್ಲಿ ಗುಮಾಸ್ತನಾಗಿರುವ ಕೇಶವನನ್ನು ವೆಂಕಣ್ಣಾಚಾರ್ಯರು ಒಪ್ಪಿಸಿದರು. ಹುಡುಗನಿಗೆ ಮಂತ್ರಗಳು ಸರಿಯಾಗಿ ಬರುವುದಿಲ್ಲವಾದರೂ, ತಂತ್ರವೆಲ್ಲಾ ಚೆನ್ನಾಗಿ ಗೊತ್ತು.

ಹೀಗೆ, ಜಾಗಂಟೆ ಯಂತ್ರ ಮಾಡುತ್ತೇನೆಂಬ ವಿಚಿತ್ರ ಹುರುಪಿನಿಂದ, ಗುರುವಾರದ ಆದಾಯವನ್ನೂ ಲೆಕ್ಕಿಸದೆ, ತನ್ನ ಕೈಯಿಂದ ಹಾಕಬೇಕಾದ ಖರ್ಚನ್ನೂ ಗಣನೆಗೆ ತೆಗೆದುಕೊಳ್ಳದೆ 'ಎಡವಟ್ಟು ಎಂಕಣ್ಣ' ಬೆಂಗಳೂರಿಗೆ ಹೊರಟುಬಿಟ್ಟರು. ಕಾಸಿಂ ಸಾಬರು ''ಖರ್ಚಿಗಿರ್ಲಿ, ದೊಡ್ಡ ಊರು'' ಎಂದು ಹೇಳಿ ಒಂದು ನೂರು ರೂಪಾಯಿಯನ್ನು ಕೊಟ್ಟರು. ತಾವು ಪದ್ದಕ್ಕನಿಗೆ ಕಾಣದಂತೆ ಬಚ್ಚಿಟ್ಟಿದ್ದ ಹಣದಿಂದ ಒಂದು ನೂರು ರೂಪಾಯಿ ಹಾಗೂ ಪದ್ದಕ್ಕ ''ಕಂಡಕಂಡದ್ದಕ್ಕೆಲ್ಲಾ ಖರ್ಚು ಮಾಡಬ್ಯಾಡ್ರಿ'' ಎಂದು ಹೇಳಿ ಕೊಟ್ಟ ನೂರಾಐವತ್ತು ರೂಪಾಯಿಗಳನ್ನು ಜೋಪಾನವಾಗಿಟ್ಟುಕೊಂಡಿದ್ದರು. ಬಸ್ಸು ಹೊರಟಾಗ ನಿಂತಲ್ಲೇ ಕೈ ಮುಗಿದು ''ರಘೋತ್ತಮತೀರ್ಥರೆ, ಬೆಂಗಳೂರಿಗೆ ಹೋಗೋ ದಸಿಯಿಂದ ನಿಮ್ಮ ಹೆಸರನ್ನು ಸುಳ್ಳಾಸುಳ್ಳೆ ಉಪಯೋಗಿಸಿಕೊಂಡೀನಿ. ಅದಕ್ಕೆ ಕ್ಷಮಾ ಮಾಡ್ರಿ. ಪುಸ್ತಕ ತಗೊಂಡ ಮೇಲೆ ನಿಮ್ಮ ದರ್ಶನಾನೂ ಮಾಡ್ಲಿಕ್ಕೆ ಬರ್ತೀನಿ'' ಎಂದು ಧ್ಯಾನಿಸಿದರು.

ಬೆಂಗಳೂರಿಗೆ ಬಂದು ಇಳಿದಾಗ ಹತ್ತು ಗಂಟೆಯ ಮೇಲಾಗಿತ್ತು. ತುಮಕೂರು ಬೆಂಗಳೂರಿನ ರಸ್ತೆಯ ಮೇಲೆ ಆದ ಯಾವುದೋ ಆಕ್ಸಿಡೆಂಟಿನಿಂದಾಗಿ ಬಸ್ಸು ತಡವಾಗಿತ್ತು. ಬಸ್ಸಿನ ಕಂಡಕ್ಟರನ್ನೇ ''ಪುಸ್ತಕದ ಅಂಗಡಿ ಎಲ್ಲಿ?'' ಅಂತ ಕೇಳಿ ಆ ದಿಕ್ಕಿನಲ್ಲಿ ನಡೆಯಲಾರಂಭಿಸಿದರು. ಕಂಡಕ್ಟರ್ ''ಇಲ್ಲೇ ಹತ್ತಿರದಾಗದೆ'' ಅಂತ ಅಂದಿದ್ದರೂ ಅದು ಹತ್ತಿರದಲ್ಲೆಲ್ಲೂ ಕಾಣಸಲಿಲ್ಲ. ಮತ್ತೊಬ್ಬರನ್ನು ಕೇಳಿದರು. ''ಇನ್ನೂ ಸ್ವಲ್ಪ ಮುಂದೆ ಹೋಗ್ರಿ, ಸಿಗ್ತದೆ. ಇಲ್ಲೇ ಹತ್ತಿರ'' ಅಂತ ಅವರೂ ಧ್ವನಿಗೂಡಿಸಿದರು. ಹೀಗೆ ನಾಲ್ಕಾರು ಜನರು ''ಇಲ್ಲೇ ಹತ್ತಿರ'' ಎಂದು ಹೇಳಿದ ದಿಕ್ಕಿನಲ್ಲಿ ನಡೆದ ಮೇಲೆ ಪುಸ್ತಕದ ಅಂಗಡಿ ಕಂಡು ಬಂತು. ಸುಮಾರು ಏನಿಲ್ಲವೆಂದರೂ ಸಂಡೂರಿನಲ್ಲಿ ಗಂಡಿ ನರಸಿಂಹಸ್ವಾಮಿಗೆ ಹೋದಷ್ಟು ದೂರ ನಡೆದಿದ್ದರೂ ಈ ಊರಿನ ಎಲ್ಲರೂ ''ಇಲ್ಲೇ ಹತ್ತಿರ'' ಅಂತಾರಲ್ಲ ಅಂತ ಎಂಕಣ್ಣಗೆ ಆಶ್ಚರ್ಯ

ಆಯ್ತು. ಬೆಂಗಳೂರಿನವರ 'ಹತ್ತಿರ'ನೇ ಬೇರೆ, ಸಂಡೂರಿನವರ 'ಹತ್ತಿರ'ನೇ ಬೇರೆ ಅಂತ ಅರ್ಥಮಾಡಿಕೊಂಡರು.

ಪುಸ್ತಕದ ಅಂಗಡಿ ತುಂಬಾ ದೊಡ್ಡದಿತ್ತು. ಮೊದಲ ಮಹಡಿಯಲ್ಲಿ ಇಂಗ್ಲೀಷಿನ ಪುಸ್ತಕಗಳಿದ್ದರೆ, ಎರಡನೆಯ ಮಹಡಿಯಲ್ಲಿ ಕನ್ನಡ ಪುಸ್ತಕಗಳಿದ್ದವು. ಇವರನ್ನು ನೋಡಿದ್ದೇ ಬಾಗಿಲಲ್ಲಿದ್ದ ಸೆಕ್ಯೂರಿಟಿಯವರು, ಇವರು ಕನ್ನಡ ಬಿಟ್ಟು ಬೇರೇನೂ ಓದುವುದಿಲ್ಲವೆಂಬಂತೆ, 'ಮೇಲೆ ಹೋಗ್ರಿ,' ಅಂತ ತಾವೇ ನಿರ್ಧರಿಸಿ ಕಳುಹಿಸಿಬಿಟ್ಟರು.

ಕನ್ನಡ ಪುಸ್ತಕಗಳು ರಾಶಿ ರಾಶಿಯಲ್ಲಿ ಜೋಡಿಸಿಟ್ಟಿರುವುದನ್ನು ನೋಡಿ ವೆಂಕಣ್ಣಾಚಾರ್ಯರಿಗೆ ತುಂಬಾ ಖುಷಿಯಾಯ್ತು. ಅಷ್ಟೊಂದು ಪುಸ್ತಕಗಳನ್ನು ಏಕಕಾಲಕ್ಕೆ ಅವರೆಂದೂ ನೋಡಿರಲಿಲ್ಲ. ಝುಗಝುಗಿಸುವ ಬೆಳಕಿನಲ್ಲಿ ಪುಸ್ತಕಗಳನ್ನು ನೋಡಿದಾಗ ತಮಗೆ ಬೇಕಾದ ಪುಸ್ತಕ ಸಿಗೋದು ಖಂಡಿತಾ ಅಂತ ಅನ್ನಿಸಿಬಿಟ್ಟಿತು. ಅಲ್ಲಿ ಸಮವಸ್ತ್ರಗಳನ್ನು ಧರಿಸಿ ಓಡಾಡುತ್ತಿದ್ದ ಅಂಗಡಿಯ ಹುಡುಗರಲ್ಲೊಬ್ಬ ಇವರ ಬಳಿ ಬಂದು, 'ಅಲ್ಲಿ ಹೋಗ್ರಿ, ಆ ಮೂಲೆಗೆ. ಅಲ್ಲಿ ನಿಮಗೆ ಬೇಕಾದ ಪುಸ್ತಕ ಸಿಗ್ತವೆ' ಅಂತ ಅವರಿಗೆ ನಿರ್ದೇಶಿಸಿದ. 'ತಾನು ತೊಗೋಬೇಕೆನ್ನುವ ಪುಸ್ತಕ ಇವನಿಗೆ ಹೇಗೆ ಗೊತ್ತಾಯ್ತು?' ಅಂತ ಆಶ್ಚರ್ಯವಾದರೂ ಆ ಪಟ್ಟಣದ ಹುಡುಗನ ಮಾತು ಆಜ್ಞೆಯೆಂಬಂತೆ ಅನಿಸಿಬಿಟ್ಟು 'ಹೂಂ' ಎಂದು ಗೋಣಲ್ಲಾಡಿಸಿ, ಆ ಮೂಲೆಗೆ ಹೋದರು. ಅಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಪುಸ್ತಕಗಳು, ದೇವತಾ ಪೂಜೆಯ ಪುಸ್ತಕಗಳು, ಯಾವುಯಾವುದೋ ವ್ರತ ನಿಯಮಗಳು, ನೂರೆಂಟು ದೇವರ ಸಹಸ್ರನಾಮಗಳ ಪುಸ್ತಕಗಳಿದ್ದವು. ವೆಂಕಣ್ಣಾಚಾರ್ಯರಿಗೆ ಸಿಟ್ಟು ಬಂತು. ಆದರೆ ಹಿಂದೆಯೇ ತನ್ನ ಜುಟ್ಟು, ಕಚ್ಚೆ ಹಾಕಿದ ಧೋತ್ರಗಳನ್ನು ನೋಡಿದ ಮೇಲೆ ಆ ಹುಡುಗ ಬೇರೇನು ತಾನೆ ಯೋಚಿಸಲು ಸಾಧ್ಯ ಅಂತನ್ನಿಸಿ, ಆ ಹುಡುಗನನ್ನು ಸನ್ನೆ ಮಾಡಿ ಕರೆದು, ತನಗೆ ಈ ತರಹ ಪುಸ್ತಕಗಳು ಬೇಡವೆಂದು ಹೇಳಿದರು. ಆ ಹುಡುಗ 'ಹಾಗಾದರೆ ಮತ್ತೆ ಯಾವ ಪುಸ್ತಕ ಬೇಕು?' ಎಂದು ಇವರನ್ನೇ ಕೇಳಿದ. ವೆಂಕಣ್ಣಾಚಾರ್ಯರಿಗೆ ಅವನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ತಮಗೆ ಅವಶ್ಯಕ ಏರುವ ಪುಸ್ತಕವನ್ನು ಏನಂತ ಕರೆಯಬೇಕೆನ್ನುವುದೂ ಅವರಿಗೆ ಗೊತ್ತಿರಲಿಲ್ಲ. 'ಮತ್ತೆ....' ಎಂದು ಏನೋ ಹೇಳಲು ಹೋಗಿ ತೋಚದೆ ಸುಮ್ಮನಾಗಿಬಿಟ್ಟರು. ಆ ಹುಡುಗ ಒಂದು ಕ್ಷಣ ಇವರ ಮುಖವನ್ನು ನೋಡಿ, ನಂತರ ಅರ್ಥವಾದವನಂತೆ ನಸುನಕ್ಕು 'ಆ ಪುಸ್ತಕಾನೂ ಸಿಗ್ತಾವೆ...' ಎಂದು ಹೇಳಿ, ರೂಮಿನೊಳಗೆಲ್ಲೋ ಹೋಗಿ ಅಶ್ಲೀಲ ಚಿತ್ರಗಳ ಮುಖಪುಟವನ್ನು ಹೊಂದಿದ ಕಾಮಶಾಸ್ತ್ರದ ಪುಸ್ತಕಗಳನ್ನು ತಂದು ವೆಂಕಣ್ಣಾಚಾರ್ಯರ ಕೈಯಲ್ಲಿಟ್ಟು 'ಪರವಾಗಿಲ್ಲ ನೀವೂ...' ಅಂತಂದು ನಕ್ಕ. ಆ ಪುಸ್ತಕಗಳನ್ನು ನೋಡಿ ವೆಂಕಣ್ಣಾಚಾರ್ಯರಿಗೆ ಗಲಿಬಿಲಿಯಾಗಿ, ಆ ಹುಡುಗನ ಕೈಯಲ್ಲಿ ಆ ಪುಸ್ತಕಗಳನ್ನು ವಾಪಾಸು ಕೊಟ್ಟು ಬಿಟ್ಟು 'ನನಗೆ ನಿನ್ನ ವಯಸ್ಸಿನ ಮೊಮ್ಮಗ ಇದ್ದಾನಪ್ಪ...' ಅಂತ ಹತಾಶೆಯ ಧ್ವನಿಯಲ್ಲಿ ಹೇಳಿದರು. ಅವರ ಮಾತಿನ ಧ್ವನಿಯನ್ನು ಕೇಳಿದ ಆ ಹುಡುಗನಿಗೂ ಬೇಜಾರಾಗಿ 'ಸಾರಿ ಸಾರ್.... ನಾನು ಏನೋ ಅಂತ ಅರ್ಥ ಮಾಡ್ಕೊಂಡು ಬಿಟ್ಟೆ.... ನಿಮಗೆ ಎಂಥಾ ಪುಸ್ತಕ ಬೇಕು ಅಂತ ಸರಿಯಾಗಿ ಹೇಳ್ರಿ' ಅಂತ ಪಶ್ಚಾತ್ತಾಪದ ಧ್ವನಿಯಲ್ಲಿ ಹೇಳಿದ. ವೆಂಕಣ್ಣಾಚಾರ್ಯರು ತಮ್ಮ ಜಾಗಂಟೆ ಯಂತ್ರವನ್ನು ಅವನಿಗೆ ವಿವರಿಸಿ, ತಮಗೀಗ ಒದಗಿರುವ ಸಮಸ್ಯೆಯನ್ನು ಹೇಳಿ ಅದಕ್ಕೆ ಸಹಾಯವಾಗುವಂತಹ ಪುಸ್ತಕ ಬೇಕೆಂದು ಕೇಳಿಕೊಂಡರು. ಆ ಹುಡುಗ ವೆಂಕಣ್ಣಾಚಾರ್ಯರು ತಮ್ಮ ಮಾತನ್ನು ಪೂರ್ತಿ ಮಾಡುವ ಮೊದಲೇ 'ಅಂಥಾ ಪುಸ್ತಕಗಳು ಕನ್ನಡದಾಗೆ ಸಿಗಲ್ಲ ಬಿಡ್ರಿ' ಅಂತ ದೃಢವಾಗಿ

ಹೇಳಿಬಿಟ್ಟ. ವೆಂಕಣ್ಣಾಚಾರ್ಯರಿಗೆ ಅವನ ಮಾತಿನ ಮೇಲೆ ನಂಬಿಕೆಯಾಗಲಿಲ್ಲ. 'ಇಷ್ಟೊಂದು ಪುಸ್ತಕ ಅವಲ್ಲಪ್ಪಾ ಇಲ್ಲಿ....' ಅಂತಂದರು.

''ಬೇಕಾದಷ್ಟು ಪುಸ್ತಕ ಇವೆ ಸಾರ್, ಇಲ್ಲಾ ಅಂತ ಯಾರು ಅಂತಾರೆ. ಆದರೆ ನೀವು ಹೇಳೋ ಅಂಥಾ ಪುಸ್ತಕ ಮಾತ್ರ ದೇವರಾಣೆಗೂ ಇಲ್ಲ ಬಿಡ್ರಿ. ನನ್ನ ಮಾತಿನ ಮೇಲೆ ನಿಮಗೆ ನಂಬಿಕೆ ಇಲ್ಲ ಅಂತಂದ್ರೆ, ನೀವೇ ಹುಡುಕ್ರಿ. ಬೇಕಾದ್ರೆ ಮೈಕ್ರೋಸ್ಕೋಪ್ ಇಟ್ಟು ಹುಡುಕ್ರಿ. ನಿಮಗೆ ಏನೂ ಸಿಗಲ್ಲ. ಬರೀ ಕತೆ, ಕಾವ್ಯ, ನಾಟಕ, ಕಾದಂಬರಿ ಪುಸ್ತಕಗಳು ರಾಶಿ ರಾಶಿ ಇವೆ. ಕನ್ನಡದಾಗೆ ಎಲ್ಲಾರೂ ಇಂಥಾ ಪುಸ್ತಕಾನೇ ಬರೆಯೋದು. ದೊಡ್ಡ ದೊಡ್ಡ ಪ್ರಶಸ್ತಿ ತೊಗೊಂಡೋರೂ ಹೆಚ್ಚುಕಮ್ಮಿ ಇಂಥಾವೇ ಬರೆದಿರೋದು. ಜನಾನೂ ಇಂಥಾ ಪುಸ್ತಕಗಳನ್ನೇ ಕೊಂಡ್ಕೋತಾರೆ. ನೀವು ಕೇಳೋ ಪುಸ್ತಕ ಸಿಗಲ್ಲ ಬಿಡ್ರಿ'' ಅಂತ ಖಡಾಖಂಡಿತವಾಗಿ ಹೇಳಿಬಿಟ್ಟು, ವೆಂಕಣ್ಣಾಚಾರ್ಯರನ್ನು 'ಅಯ್ಯೋ ಪಾಪ' ಎನ್ನುವ ದೃಷ್ಟಿಯಲ್ಲಿ ನೋಡಿದ.

ಅಷ್ಟಾದರೂ ವೆಂಕಣ್ಣಾಚಾರ್ಯರಿಗೆ ಅವನ ಮಾತಿನ ಮೇಲೆ ನಂಬಿಕೆ ಬರಲಿಲ್ಲ. 'ನಾನೂ ಒಂದು ಸಲ ಹುಡುಕಿ ನೋಡ್ತೀನಿ' ಅಂತ ಹೇಳಿ, ಮನಸ್ಸಿನಲ್ಲಿಯೇ 'ಹುಡುಗ ಮುಂಡೆಗಂಡ. ಇವನಿಗೇನು ಗೊತ್ತಿರ್ತದೆ' ಎಂದುಕೊಂಡರು. ಆ ಹುಡುಗ 'ನಿಮ್ಮಿಷ್ಟ' ಅಂತಂದು ಅವರ ಪಾಡಿಗೆ ಅವರನ್ನು ಬಿಟ್ಟು ಹೊರಟು ಹೋದ.

ವೆಂಕಣ್ಣಾಚಾರ್ಯರು ಪುಸ್ತಕಗಳನ್ನು ಜೋಡಿಸಿಟ್ಟ ಮೊದಲ ರ್‍ಯಾಕಿನಿಂದ ಹುಡುಕಲು ಆರಂಭಿಸಿದರು. ಒಂದೂ ಪುಸ್ತಕವನ್ನು ಬಿಡದಂತೆ, ಪ್ರತಿಯೊಂದು ಪುಸ್ತಕದ ಹೆಸರು, ಅದು ಯಾವ ತರಹದ ಪುಸ್ತಕವೆಂದು ನೋಡಿದರು. ಮೊದಲಿಗೆ ಬರೀ ಕಥಾಸಂಕಲನಗಳು ಸಿಕ್ಕವು. ಅನಂತರ ಕೆಲವು ನಾಟಕಗಳು, ಆತ್ಮಚರಿತ್ರೆಗಳು, ಕಾವ್ಯ ಸಂಕಲನಗಳು, ಕಾದಂಬರಿಗಳು, ಯಾರೋ ತೆಲುಗು ಲೇಖಕರ ಕಾದಂಬರಿಗಳು ಭಾಷಾಂತರಗೊಂಡು ಭರ್ಜರಿಯಾಗಿ ಮಾರಾಟವಾಗುತ್ತಿರುವ ಪುಸ್ತಕಗಳು, ಚಿತ್ರ-ವಿಚಿತ್ರ ಜಾತಿ-ಪಂಗಡಗಳ ಜೀವನ ಕ್ರಮಗಳ ಪುಸ್ತಕಗಳು, ಆಧ್ಯಾತ್ಮಿಕ ಪುಸ್ತಕಗಳು, ಪತ್ತೆದಾರಿ ಕಾದಂಬರಿಗಳು, ಓದಿದರೆ ಕಣ್ಣಲ್ಲಿ ಖಂಡಿತವಾಗಿಯೂ ನೀರು ತರಿಸುವ ಗೋಳೋ ಕಾದಂಬರಿಗಳು, ಹಸ್ತ ಸಾಮುದ್ರಿಕ–ಭವಿಷ್ಯ ಹೇಳುವ ಪುಸ್ತಕಗಳು, ದಾಂಪತ್ಯವನ್ನು ಸುಖಿಗೊಳಿಸುವ ಪುಸ್ತಕಗಳು, ಅಲ್ಲೆಲ್ಲೋ ಮೂಲೆಯಲ್ಲಿ ಮಕ್ಕಳಿಗಾಗಿ ಒಂದೆರಡು ಪುಸ್ತಕಗಳು, ಪ್ರಳಯವಾಗಿ ನಾವೆಲ್ಲಾ ಸತ್ತುಹೋಗಿ ಬಿಡುತ್ತೇವೆಂದು ಹೆದರಿಸಿ ಬಿಡುವ ಪುಸ್ತಕಗಳು, ಒಂದೆ ಎರಡೆ.... ವೆಂಕಣ್ಣಾಚಾರ್ಯರು ಪುಸ್ತಕವನ್ನು ಹುಡುಕುತ್ತಲೇ ಹೋದರು. ಹುಡುಗನ ಮಾತೇ ಸರಿಯೇನೋ ಎಂದನ್ನಿಸಿಬಿಟ್ಟು ಹತಾಶರಾಗಿ ಒಂದು ಕ್ಷಣ ಪುಸ್ತಕ ಹುಡುಕುವುದನ್ನು ನಿಲ್ಲಿಸಿದಾಗ, ಆ ಹುಡುಗ ಹತ್ತಿರ ಬಂದು 'ಸಿಗ್ತೇನ್ ಸಾರ್' ಅಂದ. ಏನೆಂದು ಉತ್ತರಿಸಬೇಕೋ ತಿಳಿಯದಾದಾಗ 'ನಾನು ಹೇಳ್ಲಿಲ್ವಾ ಸಾರ್' ಎಂದು ವಿಜಯದ ನಗೆಯನ್ನು ನಕ್ಕು ಹೊರಟು ಹೋದ. ಪುಸ್ತಕಗಳೆಲ್ಲಾ ಮುಗಿಯಲು ಬಂದಾಗ ತುಂಬಾ ಸುಸ್ತಾಗಿ ಬಿಟ್ಟಿದ್ದರು. ಈಗ ಹೊಸದೊಂದು ಪುಸ್ತಕವನ್ನು ಎತ್ತಿಕೊಂಡರೂ ಅದನ್ನು ಸರಿಯಾಗಿ ನೋಡದೆ ಅದು ಖಂಡಿತವಾಗಿಯೂ ತಮಗೆ ಬೇಕಾದ ಪುಸ್ತಕವಾಗಿರಲು ಸಾಧ್ಯವಿಲ್ಲವೆಂದು ನಿರ್ಧರಿಸಿ ಸ್ವಸ್ಥಾನಕ್ಕೆ ಇಟ್ಟು ಬಿಡುವ ಸ್ಥಿತಿಯನ್ನು ತಲುಪಿಬಿಟ್ಟಿದ್ದರು. ಯಾಕೋ ವೆಂಕಣ್ಣಾಚಾರ್ಯರಿಗೆ ದುಃಖವಾಗಿ ಕಣ್ಣುಗಳು ಮಬ್ಬಾದವು.

ಕೊನೆಯ ರ್‍ಯಾಕ್‌ನಲ್ಲಿ ದಪ್ಪನೆಯ ಪುಸ್ತಕವೊಂದಿತ್ತು. ವೆಂಕಣ್ಣಾಚಾರ್ಯರಿಗೆ ಚಿರಪರಿಚಿತವಾದ ಪುಸ್ತಕ-ನಾರಾಯಣಪ್ಪನ ಗದುಗಿನ

ಭಾರತ. ಚಿಕ್ಕಂದಿನಿಂದಲೂ ಬಾಯಿಪಾಠವಾಗಿರುವ ಆ ಪುಸ್ತಕವನ್ನು ಕೈಗೆತ್ತಿಕೊಂಡು ಒಮ್ಮೆ ಮೃದುವಾಗಿ ಅದನ್ನು ಸವರಿ, ಪುಟಗಳನ್ನು ತೆರೆದರು. ನಾರಾಯಣಪ್ಪನ ವಾಚಾಳಿತನಕ್ಕೆ ತಕ್ಕಂತೆ ರಂಗುರಂಗಿನ ವಾಕ್ಯಗಳು. 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ...' ಎಂಬ ವಾಕ್ಯ ಕಣ್ಣಿಗೆ ಬಿತ್ತು. ಮನಸ್ಸು ನಾರಾಯಣಪ್ಪನೊಡನೆ ಸಂವಾದಕ್ಕಿಳಿದು ಬಿಟ್ಟಿತು -ಗೆಳೆಯನ ಕೂಡ ಜಗಳಕ್ಕಿಳಿಯುವಂತೆ!

'ನಾರಾಯಣಪ್ಪ, ಆದಿಶೇಷ ರಾಮಾಯಣ ಕವಿಗಳ ಭಾರ ತಡೀಲಾರದೆ ತಿಣುಕ್ತಾ ಇದಾನೆ ಅಂತ ಎಷ್ಟು ಛಲೋ ಕಂಡುಕೊಂಡಿ. ಆದರೆ ಮಹಾಭಾರತ ಬರದೋರ ಭಾರನೂ ಅಷ್ಟೇ ಜಾಸ್ತಿ ಇತ್ತು ಅಂತ ನಿಂಗ್ಯಾಕೆ ಗೊತ್ತಾಗ್ಲಿಲ್ಲ? ಬೆಳಗಾಮುಂಜಾನೆ ಎದ್ದು, ಚಳಿ-ಗಾಳಿ ಅಂತ ನೋಡದಂಗೆ, ವದ್ದಿ ಸಣ್ಣಂಗೋಸ್ತ್ರ ಉಟ್ಟುಗೊಂಡು ಕಷ್ಟಪಟ್ಟು ನಮಗೆಲ್ಲಾ ಗೊತ್ತಿರೋ ಮಹಾಭಾರತದ ಕಥೀನೇ ಮತ್ತೆ ಬರೆಯೋದರ ಬದಲು ನನಗೆ ಜಾಗಂಟೆ ಯಂತ್ರ ಮಾಡಲಿಕ್ಕೆ ಅನುಕೂಲ ಆಗಂತ ಪುಸ್ತಕ ಬರಿಬಾರದಿತ್ತೇನು? ಸರಸ್ವತೀ ಪೂಜೆ ದಿನ ಎಲ್ಲಾ ಪುಸ್ತಕಗಳ ಮೇಲೆ ನಿನ್ನ ಪುಸ್ತಕ ಇಡ್ತಿದ್ದೆ. ನೀನೂ ಯಾಕೆ ನನ್ನ ಕಷ್ಟ ಅರ್ಥ ಮಾಡ್ಕೊಳ್ಳಿಲ್ಲ?'

ಆ ವೇಳೆಗೆ ಎಲ್ಲಾ ಪುಸ್ತಕಗಳು ಮುಗಿದವು. ವೆಂಕಣ್ಣಾಚಾರ್ಯರು ಸಪ್ಪೆಮೋರೆ ಹಾಕಿಕೊಂಡು ವಾಪಾಸು ಹೊರಡಲು ಅಣಿಯಾದರು. ಆ ಹುಡುಗ ಮತ್ತೊಮ್ಮೆ ಹತ್ತಿರಬಂದು, 'ಯಜಮಾನರೆ, ನಿಮಗೆ ಇಂಗ್ಲಿಷ್ ಬರ್ತದಾ?' ಎಂದು ಕೇಳಿದ. ಏಳನೆ ತರಗತಿಯವರೆಗೆ ಸ್ವಲ್ಪಮಟ್ಟಿಗೆ ಇಂಗ್ಲಿಷನ್ನು ಓದಿದ್ದರಾದರೂ, ಪುಸ್ತಕವನ್ನು ಸರಾಗವಾಗಿ ಓದುವಷ್ಟು ಗೊತ್ತಿಲ್ಲ. ಈಗಂತೂ ಮರತೇ ಹೋಗಿರಬೇಕು, ಎಷ್ಟೋ ವರ್ಷಗಳಾದವು.

''ನಿಮಗೆ ಇಂಗ್ಲೀಷ್ ಬರ್ತದೆ ಅಂತಂದ್ರೆ, ನಿಮಗೆ ಬೇಕಾದಂತಹ ಪುಸ್ತಕ ಬೇಕಾದಷ್ಟು ಇವೆ ನೋಡಿ. ಸಾಮಾನ್ಯವಾಗಿ ಇಂತಹ ಕೆಲಸ ಮಾಡೋರು ಇಂಗ್ಲಿಷ್ ಪುಸ್ತಕಗಳನ್ನೇ ಓದ್ತಾರೆ. ಮೊದಲನೇ ಮಹಡಿಯಲ್ಲಿ ಹೋಗಿ, 'ಮೆಕ್ಯಾನಿಸಮ್ಸ್' ಬಗ್ಗೆ ಪುಸ್ತಕ ಕೊಡಿ ಅಂತ ಕೇಳಿದ್ರೆ ಕೊಡ್ತಾರೆ'' ಎಂದು ಹೇಳಿದ.

ಆದರೆ ವೆಂಕಣ್ಣಾಚಾರ್ಯರಿಗೆ ಈಗ ಇಂಗ್ಲಿಷ್ ಪುಸ್ತಕಗಳನ್ನು ನೋಡುವ ಆಸಕ್ತಿಯಿರಲಿಲ್ಲ. ನಮಗೆ ಓದಲು ಬಾರದ ಪುಸ್ತಕಗಳನ್ನು ನೋಡಿ ಮಾಡುವುದಾದರೂ ಏನು? ಈಗ ಮತ್ತೆ ಇಂಗ್ಲಿಷ್ ಕಲಿಯಲು ಪ್ರಾರಂಭಿಸುವ ವಯಸ್ಸು ವೆಂಕಣ್ಣಾಚಾರ್ಯರದಲ್ಲ. ಸುಮ್ಮನೆ ಅಂಗಡಿಯಿಂದ ಹೊರಟು ಬಿಟ್ಟರು. ಮನಸ್ಸು ಭಾರವಾಗಿತ್ತು.

ಬಸ್ ಸ್ಟಾಂಡಿಗೆ ಬಂದವರೇ ಸಂಡೂರಿನ ಬಸ್ಸನ್ನು ಹುಡುಕಿ ಹತ್ತಿ ಕುಳಿತುಬಿಟ್ಟರು. ತಿರುಕೊಯಿಲೂರಿಗೆ ಹೋಗದೆ ವಾಪಾಸಾದೆ ಅಂತ ಗೊತ್ತಾದರೆ ಪದ್ದಕ್ಕ ಕೂಗಾಡುತ್ತಾಳೆ ಅಂತ ಅನ್ನಿಸಿದರೂ, 'ಏನಾದರೂ ಅಂದ್ಕೊಂಡು ಹಾಳಾಗೋಗ್ಲಿ. ಈಗ ನನ್ಕೈಲಿ ಎಲ್ಲೂ ಹೋಗ್ಲಿಕ್ಕಾಗಲ್ಲ' ಅಂತ ನಿರ್ಧರಿಸಿಬಿಟ್ಟರು. ಹೊಟ್ಟೆ ಹಸಿಯುತ್ತಿತ್ತು. ಆದರೆ ಹೋಟೆಲುಗಳಲ್ಲಿ ತಿನ್ನುವುದಿಲ್ಲವಾದ್ದರಿಂದ, ಮತ್ತೆ ರಾಯರ ಮಠವನ್ನು ಹುಡುಕಿಕೊಂಡು ಹೋಗುವ ಆಸಕ್ತಿಯಿರಲಿಲ್ಲ.

ಬಸ್ಸು ಪ್ರಾರಂಭವಾದಾಗ ಗೋಪಣ್ಣನ ಮಗ ತನಗೆ ಹೇಳಿದ ಬುದ್ಧಿ ಮಾತುಗಳು ನೆನಪಾಗಲಾರಂಭಿಸಿದವು. ರಾಯರ ಗುಡಿ ಅರ್ಚಕ ನಾನು, ನೆಟ್ಟಗೆ ರಾಯರ ಪೂಜೆ ಮಾತ್ರ ಮಾಡ್ಕೊಂಡಿರ್ಬೇಕೋ ಏನೋ? ಇಲ್ಲದ ಉಸಾಬರಿಗೆಲ್ಲಾ ನಾನ್ಯಾಕೆ ತಲಿ ಹಾಕ್ಲಿಕ್ಕೆ ಹೋಗ್ತೀನಿ? ಜನ 'ಎಡವಟ್ಟು ಎಂಕಣ್ಣ' ಅಂತ ಅನ್ನೋದು ಸರಿ ಅಂತ ಕಾಣ್ತದೆ ಎಂದೆಲ್ಲಾ ಯೋಚಿಸಲಾರಂಭಿಸಿದರು. ಆದರೆ ಹಿಂದೆಯೇ 'ಪುಸ್ತಕದ ಮನಿ ಹಾಳಾಯ್ತು, ಪುಸ್ತಕ

ನೋಡ್ಕೊಂಡೇ ನಾನು ಪೀರ್ಲು ದೇವರ ಕಿರೀಟದ ಹಿಂದೆ ಬಂಗಾರದ ಚಕ್ರ ಮಾಡಿದ್ದಾ? ಮಾವಿನ ಕಾಯಿ ಹೋಳು ಮಾಡೋ ಯಂತ್ರ ಮಾಡಿದ್ದಾ?' ಅಂತ ಅಂದುಕೊಂಡು ಸಮಾಧಾನ ಮಾಡಿಕೊಂಡರು.

ಸಂಡೂರಿಗೆ ವಾಪಾಸಾದ ಮೇಲೆ ಮತ್ತೆ ವೆಂಕಣ್ಣಾಚಾರ್ಯರು ಜಾಗಂಟೆಯನ್ನು ಸರಿಪಡಿಸಲು ಹಲವಾರು ರೀತಿಯಲ್ಲಿ ಪ್ರಯತ್ನ ಪಟ್ಟರು. ಆದರೆ ಅದ್ಯಾಕೋ ಏನೋ ಯಾವುದೂ ಸರಿಹೊಂದಲಿಲ್ಲ. ಹೊಸ ಆಲೋಚನೆಯೊಂದು ಹೊಳೆದು 'ಈ ರೀತಿ ಮಾಡಿದ್ರೆ, ಹೆಂಗೆ?' ಅಂತನ್ನಿಸಿ ಉತ್ಸಾಹದಿಂದ ಪ್ರಯತ್ನ ಮಾಡುತ್ತಿದ್ದರಾದರೂ, ಅದೂ ಸರಿಹೋಗದೆ ಹತಾಶರಾಗಿ ತಾನು ಹಿಂದೊಮ್ಮೆ ಯೋಚಿಸಿದ ರೀತಿಯಲ್ಲೇ ಇದೂ ಇತ್ತು ಹೊಸದೇನೂ ಆಗಿರಲಿಲ್ಲ ಅಂತ ಅಂದುಕೊಳ್ಳುತ್ತಿದ್ದರು. ವೆಂಕಣ್ಣ ಪ್ರಚಲಿತದಲ್ಲಿದ್ದ ಯಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಏನಾದರೂ ಮಾಡಬಲ್ಲವರಾಗಿದ್ದರೇ ಹೊರತು, ತಾವೇ ಒಂದು ಹೊಸ ತಂತ್ರಜ್ಞಾನವನ್ನು ಸೃಷ್ಟಿಸುವ ಶಕ್ತಿಯುಳ್ಳವರಲ್ಲ. ಯಾರಾದರೂ ಕಂಡುಹಿಡಿದ ಚಕ್ರವನ್ನು ಉಪಯೋಗಿಸಿಕೊಂಡು ಪೀರ್ಲು ದೇವರ ಹಿಂದೆ ಹೊಳೆಯುತ್ತಾ ತಿರುಗುವ ಕಿರೀಟ ಮಾಡಬಲ್ಲರೇ ಹೊರತು, ಚಕ್ರವನ್ನೇ ಕಂಡು ಹಿಡಿಯುವ ಬುದ್ಧಿವಂತರಲ್ಲ. ಆದರೆ ಈಗಾಗಲೇ ಅನ್ವೇಷಣೆಗೊಂಡಿರುವ ತಂತ್ರಜ್ಞಾನದ ಪರಿಚಯ ಅವರಿಗಾಗುವುದಾದರೂ ಹೇಗೆ?

ಜಾಗಂಟೆ ಯಂತ್ರ ಈಗ ಅಟ್ಟದಲ್ಲೆಲ್ಲೋ ಬಿದ್ದು ಜೇಡರ ಬಲೆಗಳಲ್ಲಿ ಸಿಕ್ಕಿ ಹೋಗಿದೆ. ಜನರೆಲ್ಲಾ ಮತ್ತೊಮ್ಮೆ ತಾವು 'ಎಡವಟ್ಟು ಎಂಕಣ್ಣ' ಅಂತ ಹೇಳೋದು ಸರಿ ಅನ್ನೋದಕ್ಕೆ ಈ ಉದಾಹರಣೆಯನ್ನೂ ಕೊಡುತ್ತಾರೆ. ಈ ಮಧ್ಯೆ ಮೌನವಾಗಿರುವ ವೆಂಕಣ್ಣಾಚಾರ್ಯರು ಮತ್ತೆ ಇಂತಹ ಹುಚ್ಚು ಸಾಹಸಗಳಿಗೆ ಹೆಚ್ಚಾಗಿ ಕೈ ಹಾಕುವುದಿಲ್ಲ. ಮಧ್ಯಾಹ್ನದ ಹೊತ್ತು ಕಾಸಿಂ ಸಾಬರ ಮೆಕ್ಯಾನಿಕ್ ಶಾಪಿನ ಬಳಿ ಹೋಗುವುದನ್ನೂ ಕಡಿಮೆ ಮಾಡಿದ್ದಾರೆ.

ನನ್ನ ಪಾಲಿಗೆ ಕತೆಯೆಂದರೆ,
ಜೀವನ ಪ್ರೀತಿಯನ್ನು ಖುಷಿಯಿಂದ
ಹಂಚಿಕೊಳ್ಳುವ ಒಂದು ಕ್ರಮ.



ಮಾನಸೋಲ್ಲಾಸ



ಸಂತೋಷಕುಮಾರ ಗುಲ್ವಾಡಿ

ಖಯಾಲ್, ಖಯಾಲಿ

ಪರ್ಶಿಯಾ ದೇಶದಿಂದ ಭಾರತ, ಹಾಗೂ ನಮ್ಮ ರಾಷ್ಟ್ರದಿಂದ ಪರ್ಶಿಯಾ ಸಾವಿರಾರು ವರ್ಷಗಳಿಂದ ಪರಸ್ಪರ ನಡೆಸಿದ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಅದ್ಭುತ 'ಕಸಿ'ಯ ಸಿಹಿ ಉಣಿಸಿರುವುದು ಐತಿಹಾಸಿಕ ಸತ್ಯ. ಭಾರತೀಯ ಸಂಗೀತದಲ್ಲಿ ಹೊಸ ಆಯಾಮವನ್ನು, ಸೊಬಗನ್ನು ತಂದ ಪರ್ಶಿಯಾದ ಸ್ವರಸಂಗಮಗಳಲ್ಲಿ ಖಯಾಲ್ ಬಹಳ ಮುಖ್ಯವಾದುದು.

ಖಯಾಲ್ ಎಂಬುದು ಪರ್ಶಿಯಾ ಭಾಷೆಯ ಒಂದು ಶಬ್ದ. ಅದರ ಅರ್ಥ ಕಲ್ಪನಾವಿಹಾರ. ಪರ್ಶಿಯಾದ ದಂತಕತೆಯಾದ ಸಂಗೀತಗಾರ-ಕವಿ ಅಮೀರ್ ಖುಸ್ರೊ (1253-1325) ಈ ಖಯಾಲ್ ಶೈಲಿಯ ಹಾಡುಗಾರಿಕೆಯನ್ನು ಭಾರತದಲ್ಲಿ ತಂದನು ಎಂಬುದು ಒಂದು ಐತಿಹ್ಯ.

ಅದುವರೆಗೆ ನಮ್ಮ ದೇಶದಲ್ಲಿ ಇದ್ದುದು ಧ್ರುಪದ್ ಹಾಡುಗಾರಿಕೆಯ ಒಂದು ಅದ್ಭುತ ಪದ್ಧತಿ. ಈ ಪದ್ಧತಿಯೇ ತಾನಸೇನನ ಕಾಲದ ವರೆಗೆ, ಅಂದರೆ ಸುಮಾರು 16ನೆಯ ಶತಮಾನದ ವರೆಗೂ ಮುಂದುವರೆದಿತ್ತು. ಬರಬರುತ್ತ ಖಯಾಲ್ ಶೈಲಿಯ ಹಾಡುಗಾರಿಕೆ ಜನಪ್ರಿಯವಾಯಿತು. ಇಂದು ಹಿಂದುಸ್ಥಾನೀ ಸಂಗೀತದಲ್ಲಿ ಖಯಾಲ್ ಹಾಡುವವರೇ ಮಹತ್ವದ ಹಾಡುಗಾರರು ಅನಿಸಿದ್ದಾರೆ. ಧ್ರುಪದ್ ಶೈಲಿ ಅಳಿದೇ ಹೋಯಿತು ಎಂಬಷ್ಟರಮಟ್ಟಿಗೂ ಪರಿಸ್ಥಿತಿಯಾಯಿತು.

ಖಯಾಲ್ ಅಥವಾ ಖ್ಯಾಲ್ ಎಂಬುದು ಕವ್ವಾಲಿ ಶೈಲಿಯ ಒಂದು ವಿಶಿಷ್ಟ ಶಾಖೆ ಅನಿಸಿತು. ಹೀಗೆ ಧ್ರುಪದ್ ಶೈಲಿಯನ್ನು ಹಿಂದೆ ಹಾಕಿ ಹಿಂದುಸ್ಥಾನೀ ಸಂಗೀತದಲ್ಲಿ ಬಹು ಜನಪ್ರಿಯವಾದ ಖಯಾಲ್ ಒಂದು ಕ್ರಾಂತಿಕಾರಿ ಬೆಳವಣಿಗೆ.

ಧ್ರುಪದದಲ್ಲಿ ಗಣಿತದ ಲೆಕ್ಕಾಚಾರ, ಲಯ ಚಮತ್ಕಾರ ಹೆಚ್ಚಾದರೆ ಖಯಾಲ್‌ನಲ್ಲಿ ಹಾಡುಗಾರನ ಸ್ವಂತ ಸೃಜನಶೀಲತೆಗೆ ಅನನ್ಯ ಅವಕಾಶ. ಅದು ಹಾಡುಗಾರನ ಸಾಧನೆ, ರಿಯಾಜ್ (ಅಭ್ಯಾಸ), ರಾಗದ ತಿಳಿವಳಿಕೆ, ಸ್ವರಗಳ ಮಾಧುರ್ಯ ಜ್ಞಾನ, ಲಯಗಾರಿಕೆ, ಸಾದರಪಡಿಸುವ ತಂತ್ರ-ಎಲ್ಲದರ ಬಗ್ಗೆಯೂ ಒಂದು ಸವಾಲು. ಹಾಡುವವನಿಗೂ, ಕೇಳುವವನಿಗೂ.

ಖಯಾಲ್ ಎಂಬುದು ಪ್ರತಿ ಕಲಾವಿದನ

ಸ್ವಯಂಪ್ರೇರಣೆಯ, ಆ ಕ್ಷಣ, ಆ ಸಂದರ್ಭದ ಸ್ಫೂರ್ತಿಯ ಸೃಷ್ಟಿ. ಅದು ಒಂದು ದೃಷ್ಟಿಯಲ್ಲಿ ರಾಗದ ನಿರಾಕಾರ ಹಾಗೂ ಸಾಕಾರ – ಎರಡೂ ಚಿತ್ರಣಗಳನ್ನು ಅನುಭವಜನ್ಯ ಮಾಡುವ ಸೃಜನಾತ್ಮಕತೆ. ಅದರ ಅನಂತ, ನಿರಂತರ ಮಾಂತ್ರಿಕತೆಗೆ ಶ್ರೋತೃ ಮುಗ್ಧ.

ರಾಗದ ಭಿನ್ನ ಭಿನ್ನ ಹಂತದಲ್ಲಿ, ಬೇರೆ ಬೇರೆ ಸ್ವರಗಳ ಸನ್ನಿಧಾನದಲ್ಲಿ ಇದ್ದಕ್ಕಿದ್ದಂತೆ 'ವಿಶಾವ್' ಕೊಡುವ ಈ ಕ್ರಿಯಾಶೀಲತೆಯೇ ಕಲಾವಿದರನ್ನು ಶ್ರೇಷ್ಠ ಸಂಗೀತಗಾರರನ್ನಾಗಿ ರೂಪಿಸುತ್ತದೆ. ಅದು ಸ್ವರ, ಧ್ವನಿ, ರಾಗಜನ್ಯವಾದ ಎಲ್ಲ ಮೆಟ್ಟಿಲುಗಳಲ್ಲಿ ಕುಪ್ಪಳಿಸುತ್ತ, ಕುಣಿಯುತ್ತ ಮುಂದುವರಿಯುತ್ತದೆ.

ಶಾಸ್ತ್ರದ ಚೌಕಟ್ಟಿನೊಳಗೆ, ಸ್ವರಸಂಧಾನದ ಹಾಸುಹೊಕ್ಕುಗಳ ನಡುವೆ ಆಧ್ಯಾತ್ಮಿಕ ಸ್ತರಗಳನ್ನೂ ಅದು ಮುಟ್ಟುತ್ತದೆ. ಶೃಂಗಾರ ಭಾವಗಳನ್ನು ತಟ್ಟುತ್ತದೆ. ವಿರಹ, ಕೋಪ, ದುಗುಡ, ವಿರಕ್ತಿ, ಆಹ್ಲಾದ, ರಸಿಕತೆ-ಹೀಗೆ ಬೇರೆ ಬೇರೆ ಭಾವಗಳನ್ನು (ಮೂಡ್‌ಗಳನ್ನು) ಬೇರೆ ಬೇರೆ ರಾಗಗಳಲ್ಲಿ, ಸ್ವರಸಂಚಾರದ ಪ್ರಯೋಗದಲ್ಲಿ ಮಾಡುತ್ತಾರೆ. ಕಲಾವಿದನ ತಾಕತ್ತು, ಸೂಕ್ಷ್ಮ ಕುಸುರಿ ಕೆಲಸದ ಪರಿಣತಿ, ನೈಪುಣ್ಯ, ಕೌಶಲ್ಯ, ಚಾತುರ್ಯ ಎಲ್ಲವುಗಳ ಸಮಗ್ರ ಅನುಭವ ರಸಿಕ ಶ್ರೋತೃಗಳಿಗೆ ಆಗುವುದು ಇಲ್ಲಿಯೇ. ಕಲಾವಿದನ ಯೋಗ್ಯತೆಯ ಮಟ್ಟವನ್ನು ಅಳೆಯುವುದೂ ಈ ಕಲಾತ್ಮಕ ಚೌಕಟ್ಟಿನಲ್ಲೇ. ಶ್ರೋತೃ ಹಾಗೂ ಹಾಡುಗಾರ ಇಬ್ಬರೂ ಮೈ ಮರೆತು ಒಂದಾಗುವುದು ಇಲ್ಲಿಯೆ.

ಇಲ್ಲಿ ಧ್ರುಪದದ ಗಣಿತ ಚಮತ್ಕಾರ, ತಾನ್, ಬೋಲ್‌ತಾನ್‌ಗಳ ಮೂಲಕ, ಲಯ ಗಾರಿಕೆಯ ದ್ವಿಗುಣ, ಚೌಗುಣದ ವೇಗ, ಬೌದ್ಧಿಕ ತಂತ್ರ ಎಲ್ಲ ಚಮತ್ಕಾರಗಳೂ ಇರುತ್ತವೆ. ಪ್ರತಿ ಕಲಾವಿದ ತನ್ನ ಖಯಾಲ್ ಹಾಡುಗಾರಿಕೆಯಲ್ಲಿ ರಸಿಕನ ಭಾವನೆಗಳನ್ನು ತಟ್ಟಿ, ಬೌದ್ಧಿಕ ಮಟ್ಟವನ್ನು ಮುಟ್ಟಿ, ಅದರಾಚೆ ಅವನನ್ನು ತಲಪಿಸುತ್ತಾನೆ. ಬೋಲ್‌ತಾನ್, ಗಮಕ, ಖಟಾಕಾ, ಸ್ಥಾಯೀ, ಸಂಚಾರೀ ಭಾವದ ಕುಸುರಿ ಕೆಲಸವನ್ನೂ ಮಾಡುತ್ತಾನೆ.

ಖಯಾಲ್ ಅಥವಾ ಖ್ಯಾಲ್ ಅಂದರೆ ಭಾರತೀಯ ತಿಳಿವಳಿಕೆಯಲ್ಲಿ ಧ್ಯಾನ ಎಂದೂ ಅರ್ಥವಾಗುತ್ತದೆ (ಖಯಾಲ್/ಖ್ಯಾಲ್ ರಖನಾ). ಅದೇ ಖಯಾಲಿ ಎಂದರೆ ಚಟ, ಹವ್ಯಾಸ, ದುರ್ಗುಣ ಎಂಬ ಅರ್ಥವೂ ಸಂದರ್ಭಕ್ಕೆ ಸರಿಯಾಗಿ ಬರುತ್ತದೆ. ಹೀಗೆ ಸಂಗೀತದಲ್ಲಿ ಮಾತ್ರವಲ್ಲ ನಮ್ಮ ಭಾವನೆಗಳಲ್ಲೂ ಖಯಾಲ್ ಒಂದು ಹೊಸ ಪ್ರಕಾರವನ್ನು, ಆಯಾಮವನ್ನು ತಂದುಕೊಟ್ಟಿತು.

■



ಪತ್ತೇದಾರರ ಪತ್ತೇದಾರ ಎನ್. ನರಸಿಂಹಯ್ಯ

● ಎ.ಎನ್. ವೆಂಕಟಲಕ್ಷ್ಮಿ
ಚಿತ್ರಗಳು: ಚಂದ್ರಪಾಲ್ ಸಿಂಗ್

''ಮಿಸ್ಟರ್ ಅಧೋಕ್ಷಜ?''

''ಎಸ್ ಸ್ಪೀಕಿಂಗ್'' ....

''ನೀವಿದರ ಪರಿಶೋಧನೆ ಮಾಡಬೇಕು... ಷಡ್ಯಂತ್ರ ಬಿಡಿಸಬೇಕು''

''ನಾನವನಿಗೆ ನನ್ನ ಕಾರ್ಡ್ ತೋರಿಸಿದೆ: ಅಧೋಕ್ಷಜ ಪ್ರೈವೇಟ್ ಡಿಟೆಕ್ಟಿವ್''

''ದುರ್ಘಟನೆ ನಡೆದದ್ದೆಲ್ಲಿ?''

''ಸೂಕ್ಷ್ಮವಾಗಿ ಅವಲೋಕಿಸಿದೆ, ನನ್ನ ಊಹೆ ನಿಜವಾಗಿತ್ತು''

–ಒಂದು ತಟ್ಟೆಯಲ್ಲಿ ಹಾಲು, ಬಿಸ್ಕತ್ತು ಹಣ್ಣು ಬಂದವು–



''ಮನದಲ್ಲಿ ಸಂಶಯ ಹೆಡೆಯಾಡಿತು; ಓಹ್ ಗಾಡ್, ಈ ಕೊಲೆ ಅವರೇ ಏಕೆ ಮಾಡಿರಬಾರದು?''

''ನಾನು ಯಾರವನೂ ಅಲ್ಲ; ಸತ್ಯದ ಕಡೆ ನನ್ನ ಪ್ರಾಶಸ್ತ್ಯ, ತಿಳಿಯಿತೇ?''

''ವ್ಯಕ್ತಿಯೊಂದು ಅತ್ತಿತ್ತ ನೋಡಿ ಕಾಂಪೌಂಡ್ ಹಾರಿತು. ಹೀಗಾಗುತ್ತದೆ ಅಂತ ಮೊದಲೇ ಊಹಿಸಿದ್ದ ನಾನು ಅವನನ್ನು ಹಿಂಬಾಲಿಸಿದೆ.''

''ಮಿಸ್ಟರ್, ನಾ ಹೆಣೆದ ಬಲೆಯಲ್ಲಿ ನೀನು ಬಿದ್ದೆ''

''ನಾನವರ ಕೈ ಕುಲುಕಿ ಹೊರಬಂದೆ... ಬೆಳಕು ಹರಿದಿತ್ತು.''

ಪತ್ತೇದಾರಿ ಕತೆಯೊಂದರ ವಾಸನೆ ಹಿಡಿದಿರಲ್ಲವೆ?.... ಮಸಾಲಾ ಸಿನಿಮಾಗಳ 'ಸಾಂಗ್ ಸೀಕ್ವೆನ್ಸ್' ನಂತೆ ಬಹುತೇಕ ಎಲ್ಲ ಪತ್ತೇದಾರಿ ಕತೆ, ಕಾದಂಬರಿಗಳಲ್ಲೂ ಇಂತಹದೊಂದು ಹಂದರ ಇರಲೇಬೇಕು. ಹಂತ ಹಂತವಾಗಿ ಸಮಸ್ಯೆ, ಪತ್ತೇದಾರ, ಪತ್ತೇದಾರಿಕೆ ಮತ್ತು ಸಮಸ್ಯಾ ಪರಿಹಾರಗಳಲ್ಲಿ ಬೆಳೆದು ಓದುಗನನ್ನು (ಹುಸಿ?!) ಉದ್ವೇಗಗೊಳಿಸುವ ಪತ್ತೇದಾರಿ ಕಾದಂಬರಿಗಳ ಓದು ಸಾಹಿತ್ಯಪ್ರಿಯರಿಗೆಲ್ಲ ಓನಾಮ. ಅವುಗಳಲ್ಲಿ

ಬರುವ ಸತ್ಯಸಂಧ, ನಿಷ್ಠುರ - ನ್ಯಾಯವಾದಿ ಪತ್ತೇದಾರ ಇಂದಿಗೂ ಭ್ರಷ್ಟನಾಗದೇ ಉಳಿದಿರುವ ಹೀರೋ!

ಈ 'ಹೀರೋ'ನ ಮುಖಾಮುಖಿ ನಮಗೆಲ್ಲ ಆದದ್ದು ಎಲ್ಲೆಂದು ತುಸುವೇ ತಲೆ ಕೆರೆದುಕೊಳ್ಳಿ. ನಿಸ್ಸಂಶಯವಾಗಿ ಅದು ಕನ್ನಡದ ಹೆಸರಾಂತ ಪತ್ತೇದಾರಿ ಕಾದಂಬರಿಕಾರ ಎನ್. ನರಸಿಂಹಯ್ಯನವರ ಪತ್ತೇದಾರಿ ಕತೆ, ಕಾದಂಬರಿಗಳಲ್ಲಿ. ಪುರುಷೋತ್ತಮನ, ಮಧುಸೂದನನ, ಅರಿಂಜಯನ, ಗಾಳಿರಾಯನ 'ಸತ್ಯಶೋಧನೆ'ಯ ಚಾತುರ್ಯದಲ್ಲಿ.

ಒಳ್ಳೆಯ ಆರೋಗ್ಯ, ಹರಿತವಾಗೇ ಕೆಲಸ ಮಾಡುವ ಜ್ಞಾನೇಂದ್ರಿಯಗಳಿಂದ ಇಂದಿಗೂ ಸುಟಿಸುಟಿಯಾಗಿ ಕಾಣುವ, ಉತ್ಸಾಹದಿಂದ ಮಾತನಾಡುವ ಎಪ್ಪತ್ತೈದರ ಹರೆಯದ ಎನ್. ನರಸಿಂಹಯ್ಯ 'ಕನ್ನಡದ ಜೇಮ್ಸ್ ಬಾಂಡ್' ಎಂಬ ಅಗ್ಗಳಿಕೆಗೆ ಪಾತ್ರರಾದವರು. 60-70ರ ದಶಕದಲ್ಲಿ ಸೆನ್ಸೇಶನ್ ಉಂಟುಮಾಡಿದ ಅವರ 'ಪುರುಷೋತ್ತಮನ ನೂರು ಸಾಹಸಗಳು', 'ಮಧುಸೂದನನ ನೂರು ಸಾಹಸಗಳು', ಪಿಶಾಚಿ ಕತೆ, ಭೂತದ ಕತೆ, ಬೇಕಾದಷ್ಟು ಪುನರ್ಮುದ್ರಣಗಳನ್ನು ಕಂಡ 'ಕೆರಳಿದ ಕೇಸರಿ', 'ಭಯಂಕರ ಬೈರಾಗಿ' ಇನ್ನಿತರ ಕಾದಂಬರಿಗಳನ್ನು ಎಲ್ಲ ಸಾಹಿತ್ಯಪ್ರೇಮಿಗಳೂ ಓದಿದ್ದಾರೆ; ಚರಿತ್ರಾರ್ಹ ವಿವರವಾಗಿ ಈ ವಿಷಯ ದಾಖಲೆಗೊಂಡಿದೆ.

ತನ್ನ ಐನೂರಿಪ್ಪತ್ತು ಕಾದಂಬರಿಗಳಲ್ಲಿ ಸಾವಿರಾರು ಕೊಲೆ 'ಮಾಡಿರುವ', 'ಮಾಡಿಸಿರುವ' ಈ ಪತ್ತೇದಾರನ ಅಂತರಂಗ ಅರಿಯಲು ಹೋದೆವು.

1935ರಲ್ಲಿ ತಂದೆ ತೀರಿಕೊಂಡ ಕಾರಣ ವಿದ್ಯಾಭ್ಯಾಸವನ್ನು ನಾಲ್ಕನೇ ತರಗತಿಗೇ ನಿಲ್ಲಿಸಿ ತಾಯಿಯ ತವರು ಚಿಕ್ಕಮಗಳೂರಿಗೆ ಬಂದ



ನರಸಿಂಹಯ್ಯನವರಿಗೆ ಬದುಕಿನ ಕಠೋರತೆಯ ಸಮಗ್ರ ದರ್ಶನ ಎಳವೆಯಲ್ಲೇ ಆಯ್ತು. "ಆಗೆಲ್ಲಾ ಬಹಳಾ ಕಷ್ಟಪಟ್ಟಿದ್ದೀನಿ", ಕಳೆದ ದಿನಗಳ ಕುರಿತು ಅವರು ಹೇಳುತ್ತಾರೆ. ಟೈಲರ್ ಕೆಲಸ, ಕಬ್ಬಿಣದ ಕೆಲಸ ಮಾಡಿ, ಕ್ಲೀನರ್, ಡ್ರೈವರ್, ಕಂಡಕ್ಟರ್ ಹುದ್ದೆಗಳ ಸಿಹಿ-ಕಹಿಯನ್ನೂ ರುಚಿ ನೋಡಿದವರಿಗೆ ಆಗ ಚಾಲ್ತಿಯಲ್ಲಿದ್ದ ಚಾರ್‌ಕೋಲ್ ಬಸ್ಸುಗಳ ಕಂಡಕ್ಟರ್ ಕೆಲಸ ಬದುಕಿಗೊಂದು ಹೊಸತಿರುವು ಕೊಡುವ ಸಂಚು ಹೂಡಿತ್ತು ಎನ್ನಬಹುದೇನೋ.

"ಆಗೆಲ್ಲಾ 'ಕೋಲ್‌ಬಸ್ಸ'ನ್ನು ಓವರ್ ಲೋಡ್ ಮಾಡಿದ್ದೀರಿ ಅಂತ ಕೇಸು ಹಾಕಿ ಬಿಡೋರು. ಕೋರ್ಟಿಗೆ ಹೋದ್ರೆ, ದಿನಗಟ್ಲೆ

ಕಾಯಿಸೋರು. ಆಗ ಸುಮ್ಮನೆ ಕೂತು **ಖೂನಿ, ಕೊಲೆ ಕೇಸುಗಳನ್ನೆಲ್ಲಾ ಕೇಳಿಸ್ಕೋತಿದ್ದೆ...''** ಮುಂದೊಮ್ಮೆ ಮುದ್ರಣ ಕಂಡ ಪತ್ತೇದಾರಿಕೆಯ ವಿವರಗಳನ್ನೆಲ್ಲಾ ಅವರ ಮನಸ್ಸು ಗ್ರಹಿಸುತ್ತಿದ್ದುದು, 'ಹೋಮ್ ವರ್ಕ್' ಮಾಡಿಟ್ಟುಕೊಳ್ಳುತ್ತಿದ್ದುದು ಬಹುಶಃ ಹೀಗೆ. ಇಷ್ಟರಮಧ್ಯೆ **''ಕಂಡಕ್ಟರ್ ಕೆಲಸದಲ್ಲಿ ಊರೂರು ಅಲೀವಾಗ ಎಲ್ಲ ಕಡೆಯೂ ಪುಸ್ತಕ ತಗೊಂಡು ಓದ್ತಿದ್ದೆ, ಆಗೆಲ್ಲಾ ನಾನೂ ಬರೆಯಬೇಕು ಅನ್ನಿಸ್ತಿತ್ತು.''**

ಸ್ವಾತಂತ್ರ್ಯ ಸಿಕ್ಕ 1947ರ ವರ್ಷ, ಮೇ 12ರಂದು ವಿವಾಹ ಬಂಧನಕ್ಕೊಳಗಾಗಿ ಒಂದರ್ಥದಲ್ಲಿ ಸ್ವಾತಂತ್ರ್ಯ ಕಳೆದುಕೊಂಡ ನರಸಿಂಹಯ್ಯನವರ ಜತೆಗೂಡಿದ ಅವರ ಅರ್ಧಾಂಗಿ ಸಹ ಅವರ ಸಾರಸ್ವತ ಒಲವುಗಳನ್ನು ಅರ್ಥಮಾಡಿಕೊಂಡದ್ದು, ಅದಕ್ಕೆ ಮನಃಪೂರ್ವಕವಾಗಿ ಸಹಕರಿಸಿದ್ದೊಂದು ಯೋಗಾಯೋಗ. ಪತಿಯ ಪುಸ್ತಕ ಪ್ರೇಮ, ಓದಿನ ಹುಚ್ಚು ಗಮನಿಸಿದ ಎಳೆ ಮದುವಣಗಿತ್ತಿ ''**ನಿಮ್ಮ ತಂದೆ ಕವಿ, ತಾತನವರು ಕವಿ, ನಿಮ್ಮ ಪ್ರತಿಭೇನೂ ಜನಕ್ಕೆ ಗೊತ್ತಾಗಲಿ, ಬರೀರಿ... ಎಷ್ಟು ಕಷ್ಟಬಂದ್ರೂ ನಾನಿದೀನಿ**'' ಎಂದು ಒತ್ತಾಸೆ ನೀಡಿದರು. ಇದಕ್ಕಿಂತ ಬೇರೆ ಪ್ರೇರಣೆ ಬೇಕೆ?

ಸಾಹಿತ್ಯಸೃಷ್ಟಿಯ ತಹತಹಿಕೆ ತುಂಬಿಕೊಂಡು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದ ನರಸಿಂಹಯ್ಯ ಬರೆದೇ ಬರೆದರು 1957ರಿಂದ ಸುಮಾರು 1981ರ ತನಕ, ಅವ್ಯಾಹತವಾಗಿ. **''ಆಗೆಲ್ಲಾ ಕೇವಲ 24 ಪುಟಗಳ ಪತ್ತೇದಾರಿ ಕಾದಂಬರಿಗಳು ಬರುತ್ತಿದ್ವು. ಅವೂ ಚೆನ್ನಾಗಿರ್ತಿರ್ಲಿಲ್ಲ. ಅವುಗಳನ್ನೆಲ್ಲಾ ಓದಿದಾಗ ನಾನು ಇದಕ್ಕಿಂತ ಎಷ್ಟೋ ಉತ್ತಮ ಮಟ್ಟದಲ್ಲಿ ಬರೀಬಲ್ಲೆ ಅನ್ನಿಸ್ತಿತ್ತು''** ನರಸಿಂಹಯ್ಯ ಹೀಗೆ ತಮ್ಮ ಆಕಾಂಕ್ಷೆ, ನಿರೀಕ್ಷೆಗಳನ್ನು ಟಿ.ನಾರಾಯಣಯ್ಯಂಗಾರ್ ಎನ್ನುವ ಪ್ರಕಾಶಕರ ಬಳಿ ತೋಡಿಕೊಂಡಿದ್ದೇ ತಡ ಅವರು 'ಆಯ್ತು, ಬರೆಯಿರಿ' ಎಂದು ಪ್ರೋತ್ಸಾಹಿಸಿದರು.

''ಆಮೇಲೆ 200 ಪುಟದ ಪತ್ತೇದಾರಿ ಕಾದಂಬರಿ ಬರೆದೆ; ನಾರಾಯಣಯ್ಯಂಗಾರ್ ಪ್ರಕಟಿಸಿದರು, 15 ದಿನಕ್ಕೇ ಎಲ್ಲ ಪ್ರತಿಗಳೂ ಖಾಲಿ'' ತಮ್ಮ ಸಾಹಿತ್ಯ ಕೈಂಕರ್ಯದ ಮೊದಲ ಇನ್ನಿಂಗ್ಸ್ ಅನ್ನು ಇಂದೂ ಅದೇ ಸಡಗರದಿಂದ ನೆನಪಿಸಿಕೊಳ್ಳುತ್ತಾರೆ, ನರಸಿಂಹಯ್ಯ.

ಅದಾದನಂತರ ಒಂದರ ಹಿಂದೆ ಒಂದು ಬರೆದ ಎಂಟು ಪುಸ್ತಕಗಳೂ ಪ್ರಕಟಣೆಗೊಂಡು ಭರ್ಜರಿ ಮಾರಾಟವನ್ನೇನೋ ಕಂಡವು. ಆದರೆ ಪ್ರಕಾಶ ಕರ ಕಡೆಯಿಂದ 'ರಾಯಲ್ಟಿ' ಕೊಡುವ ಸೊಲ್ಲೇ ಇಲ್ಲ! ಗೆಳೆಯ, ಹಿತೈಷಿ ಮ. ರಾಮಮೂರ್ತಿ ''ಗೌರವಧನ ಪಡೆದು ಕಾದಂಬರಿ ಕೊಡಿ'' ಎಂದು ವ್ಯಾವಹಾರಿಕತೆ ಹೇಳಿಕೊಟ್ಟರು. **''ಈ ವಿಷಯ ಪ್ರಸ್ತಾಪಿಸಿದ್ದೇ ತಡ ಎಲ್ಲ ಪ್ರಕಾಶಕರೂ ಮಾತಾಡಿಕೊಂಡವರಂತೆ ನನ್ನ ಜೊತೆ ವ್ಯವಹಾರವನ್ನೇ ನಿಲ್ಲಿಸಿಬಿಟ್ಟರು.''**

ಆದರೆ ಡಕಾಯಿತಿ ಬೇಕೆಂದರೆ ಡಕಾಯಿತಿ, ಸಸ್ಪೆನ್ಸ್ ಕೇಳಿದರೆ ಅದು, ಭೂತ, ಪಿಶಾಚಿ, ಮಂತ್ರವಾದಿಯರ ಕತೆ ಬರೆದುಕೊಡ್ತೀರಾ ಎಂದರೆ ಅದಕ್ಕೂ ಸೈ... ಹೀಗೆ 200 ಪುಟದ ಕಾದಂಬರಿಯನ್ನು 24 ಗಂಟೆಗಳಲ್ಲಿ ಬರೆದು 'ಬಿಸಾಡುವ' ಈ ಪ್ರಚಂಡ ಲೇಖಕ ಕರೆಯುವ ಹಸುವಿದ್ದಂತೆ ಎನ್ನುವುದನ್ನು ಪ್ರಕಾಶಕರು



ಪತ್ನಿ ನಾಗರತ್ನಮ್ಮನವರೊಂದಿಗೆ

ಕಡೆಗಣಿಸದಾದರು. ಒಬ್ಬೊಬ್ಬರಾಗಿ ಮತ್ತೆ ಬಾಲಮುದುರಿಕೊಂಡು ಬಂದು-ಈ ಬಾರಿ ರಾಯಲ್ಟಿ ಕೊಟ್ಟು-ನರಸಿಂಹಯ್ಯನವರ ಕಾದಂಬರಿ ಗಳನ್ನು ಕೈಗೆತ್ತಿಕೊಂಡರು. ಈ ಸಮಯದಲ್ಲೇ ಅವರ ಜನಪ್ರಿಯ ಕಾದಂಬರಿ 'ಭಯಂಕರ ಬೈರಾಗಿ' ವಿವಿಧ ಪ್ರಕಾಶನ ಸಂಸ್ಥೆಗಳಿಂದ 35,000ದ ತನಕ ಅಚ್ಚಾಗಿದ್ದು.

"ಆ ಟೈಮ್, ಈ ಟೈಮ್, ಸ್ಫೂರ್ತಿಬೇಕು ಎನ್ನುವುದೆಲ್ಲಾ ಆಸ್ಥಾನ ವಿದ್ವಾಂಸರ ರೀವಿ... ನಾನೋ ಶಾರದಾಂಬೆಯ 'ಕೃಪಾಕಟಾಕ್ಷ'ವಿರುವ 'ಕಾಳಿದಾಸ', ದಿನದ 24 ಗಂಟೆಯೂ ಬರೀಬಲ್ಲೆ."

"ಅವರಿಗೆ ಬರೆಯುವಾಗ ಎಷ್ಟು ಗಲಾಟೆ ಇದ್ರೂ ನಡೆಯುತ್ತೆ, ಟೀವಿ ಹಾಕಿದ್ರೂ ಪರವಾಗಿಲ್ಲ, ಆದ್ರೆ ಯಾರೂ ಅವರ ಹತ್ರ ಮಾತಾಡಬಾರ್ದು. ಮತ್ತು ಮೈ ತಗುಲಿಸ ಬಾರ್ದು!" - ಎನ್ನುತ್ತಾರೆ ಮಡದಿ.

ನೀಟಾಗಿ ಕಟ್‌ಮಾಡಿದ ಬಿಳಿಮೀಸೆಗೆ ಮ್ಯಾಚ್ ಆಗುವಂತೆ ದೊಗಳೆ ಬಿಳಿ ಅಂಗಿ, ಪಾಯಿಜಾಮ ದಲ್ಲಿದ್ದ ವಯೋವೃದ್ಧ 'ಪತ್ತೇದಾರ'ನನ್ನೊಮ್ಮೆ ವಿಸ್ಮಿತರಾಗಿ ನೋಡಿದೆವು.

ಪ್ರಸಿದ್ಧಿಯ ಸವಿಯುಂಡ ಮೇಲೆ ನರಸಿಂಹಯ್ಯ, ಅವರ 'ಟ್ರಂಪ್ ಕಾರ್ಡ್' ಆದ ಪತ್ತೇದಾರಿ ಕಾದಂಬರಿಗಳ ಜೊತೆ ಸಾಮಾಜಿಕ ಕಾದಂಬರಿಗಳನ್ನೂ ಅಷ್ಟು ಬರೆದರು. ಕುಹಕಿ ಯೊಬ್ಬರು 'ನೀವು ಹತ್ತು ವರುಷ ಕಷ್ಟಪಟ್ಟರೂ ಸಾಮಾಜಿಕ ಕಾದಂಬರಿ ಬರೆಯಲಾರಿರಿ' ಎಂದ ದ್ದನ್ನು ಸವಾಲಾಗಿ ಸ್ವೀಕರಿಸಿ ಕೇವಲ ಹತ್ತು ದಿನ ಗಳಲ್ಲಿ ಅಂಥದೊಂದು ಕಾದಂಬರಿ ಬರೆದು ಕೊಟ್ಟವರು ಅವರು.

ತೀರಾ ಇತ್ತೀಚೆಗೆ ರಸ್ತೆ ಅಪಘಾತವೊಂದರಲ್ಲಿ ಸಣ್ಣ ಪೆಟ್ಟು ತಗುಲಿ ಪೊಲೀಸ್ ಕೇಸ್ ಆಗಿ ಅವರು ಕೋರ್ಟಿಗೆ ಹಾಜರಿ ಹಾಕಬೇಕಾಯಿತು. ಆಗ ನ್ಯಾಯಾಧೀಶರು ಇವರನ್ನು ಕೇಳಿದ ಮೊದಲ



ಪ್ರಶ್ನೆ: "ನೀವು ಧಾರವಾಡದಲ್ಲಿ ಏರ್ಪಡಿಸಿದ್ದ ಪತ್ತೇದಾರಿ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಯಾಕೆ ಬರಲಿಲ್ಲ?"

ಅಪಾರ ಜನಪ್ರಿಯತೆಯೊಂದಿಗೆ ಪ್ರಶಸ್ತಿ, ಪುರಸ್ಕಾರಗಳೂ ನರಸಿಂಹಯ್ಯನವರಿಗೆ ಸಂದಿವೆ. 1994ರಲ್ಲಿ 'ಸಾಹಿತ್ಯರತ್ನ' ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ (1992), ದಾವಣಗೆರೆ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಅವರ ಅವಿರತ ಬರೆವಣಿಗೆಗೆ ಸಂದ ಗೌರವ. 500 ರೂಪಾಯಿಯ ಗೌರವ ಮಾಸಾಶನ ಮತ್ತು ಸೈಟೊಂದನ್ನು ರಾಜ್ಯಸರ್ಕಾರ ಕೊಡಮಾಡಿದೆ. ಮದುವೆಗೆ ಉಳಿದಿರುವ ಕಿರಿಯ ಮಗ ಮತ್ತು ಮಗಳೊಂದಿಗೆ ತಕ್ಕಮಟ್ಟಿಗೆ ನೆಮ್ಮದಿಯ ಜೀವನ ನಡೆಸುತ್ತಿರುವವರಿಗೆ "ನನ್ನ ಸರೀಕರಲ್ಲಿ ಬರೆ ವಣಿಗೆಯನ್ನೇ ನೆಚ್ಚಿ, ಈ ಮಟ್ಟದಲ್ಲಿ ಬದುಕಿದ ವನೆಂದರೆ ನಾನೊಬ್ಬನೇ" ಎನ್ನುವ ಸಂತೃಪ್ತಿ, ಆತ್ಮಗೌರವ ಇದೆ.

ಅವರ ಓರಗೆಯ ಲೇಖಕರಾದ ಮಾ.ಭಿ.ಶೇ., ಬಿ.ಕೆ. ಸುಂದರರಾಜ್, ಮ.ರಾಮಮೂರ್ತಿ ಮುಂತಾದವರಲ್ಲಿ ಕಾಣದ ಶಿಸ್ತಿನ ಜೀವನಕ್ರಮ ವನ್ನು ನರಸಿಂಹಯ್ಯನವರು ಕಟ್ಟೆಚ್ಚರದಿಂದ ಪಾಲಿಸಿಕೊಂಡು ಬಂದದ್ದೇ ಇದಕ್ಕೆ ಕಾರಣ. ಆ ಕಾಲದ ಎಲ್ಲ ಲೇಖಕ-ಅನಕೃ, ಕೃಷ್ಣಮೂರ್ತಿ ಪುರಾಣಿಕ, ಬಸವರಾಜ ಕಟ್ಟೀಮನಿ-ರೊಂದಿಗೆ ಒಡನಾಡಿರುವ ಅವರು ಆರು ಗಂಟೆಯ ಹೊತ್ತಿಗೆ ಅವರೆಲ್ಲ ಬಾರ್ ಕಡೆ ಹೆಜ್ಜೆಹಾಕುತ್ತಿದ್ದಂತೆ ವಿದಾಯ ಹೇಳಿ ಮನೆಗೆ ನಡೆಯುತ್ತಿದ್ದರು. ದುರ್ವ್ಯಸನ ಗಳನ್ನೆಲ್ಲ ಅವರು ತಮ್ಮ ಕಾದಂಬರಿಗಳಿಗೇ ಮೀಸಲಿಟ್ಟಿದ್ದರು.

(118ನೇ ಪುಟಕ್ಕೆ)

ಎನ್. ನರಸಿಂಹಯ್ಯ

ಬೆದರಿಕೆಯ ಫಲ

• ಪೂರ್ವಾರ್ಧ •

ಆಕಸ್ಮಿಕವಾಗಿ ತನ್ನಲ್ಲಿಗೆ ಬಂದ ಬಾಲ್ಯಗೆಳತಿ ನಳಿನಿಯನ್ನು ಕಂಡ ಮಂಜುಳಾಗೆ ಮಹದಾಶ್ಚರ್ಯವಾಯಿತು.

ಮಂಜುಳೆಯು ರೌಡಿ ಭೈರವನನ್ನು ಪ್ರೇಮಿಸಿ ಆತನನ್ನು ಗಂಡನನ್ನಾಗಿ ಅಂಗೀಕರಿಸಿದ ಮೇಲೆ ಅವಳ ಗೆಳತಿಯರೆಲ್ಲರೂ ಅವಳಿಂದ ದೂರವಾಗಿದ್ದಾರೆ.



ಗೆಳತಿಯರನ್ನು ಕಾಣಲು ಮಂಜುಳೆಯು ತಾನಾಗಿಯೇ ಅವರಲ್ಲಿ ಹೋದಾಗ, ಅವರಿಗೆ ಮಂಜುಳೆಯೊಡನೆ ಮಾತನಾಡಲು ಇಷ್ಟವಿಲ್ಲವಾದರೂ ಅವಳ ಕೈ ಹಿಡಿದವನು ಮಹಾ ರೌಡಿಯಾದ್ದರಿಂದ ಆತನ ಮೂಲಕ ತಮಗೇ ನಾದರೂ ತೊಂದರೆ ಕೊಡಬಹುದೆಂಬ ಭಯ ದಿಂದ ಮೇಲುಪಚಾರದ ಮಾತನಾಡಿ ಸಾಗ ಹಾಕುತ್ತಿದ್ದರು.

ಪೊಲೀಸ್ ಅಧಿಕಾರಿಗಳಿಗೆ ಚಿರಪರಿಚಿತ ವ್ಯಕ್ತಿ ಯಾಗಿರುವ ಭೈರವನು ಸಾಹುಕಾರರಿಗೆ ಸಿಂಹ ಸ್ವಪ್ನವಾಗಿದ್ದಾನೆ.

ಯಾವ ಸಾಹುಕಾರನಲ್ಲಿಗೇ ಆಗಲಿ ಇಂತಿಷ್ಟು ಹಣ ಬೇಕೆಂದು ತನ್ನ ಶಿಷ್ಯರಲ್ಲಿ ಯಾರನ್ನು ಕಳುಹಿ ಸಿದರೂ ಸರಿ, ಅವರು ಎದುರಾಡದೆ ಕೇಳಿದಷ್ಟು ರೂಪಾಯಿ ಕೊಟ್ಟು ಮುಂಬರುವ ಗಂಡಾಂತರ ದಿಂದ ಪಾರಾದೆವೆಂದು ಮನದಲ್ಲೇ ಹಿಗ್ಗುವರು.

ರೂಪಾಯಿ ಕೊಡದೆ ಉದಾಸೀನ ಮಾಡಿದ್ದೇ ಆದರೆ, ಅಥವಾ ಪೊಲೀಸಿಗೆ ದೂರು ಕೊಟ್ಟಿದ್ದಾದರೂ ಸರಿ ಅವರು ತಾವಾಗಿ ನೇಣು ಗಂಬಕ್ಕೆ ಶಿರವೊಡ್ಡಿದಂತೆಯೇ ಆಗುವುದಲ್ಲದೆ ಬೇರೆ ಯಾವ ಪ್ರಯೋಜನವೂ ಆಗದು.

ಭೈರವನು ಪೊಲೀಸರ ಆತಿಥ್ಯಕ್ಕೊಳಪಟ್ಟು ಹಲವು ಬಾರಿ ಜೈಲಿನ ಅತಿಥಿಯಾಗಿ ಬಂದಿದ್ದರೂ ಸದ್ಬುದ್ಧಿಗೆ ಶರಣಾಗದೆ ದುರ್ಬುದ್ಧಿಯನ್ನು ಮುಂದು ವರಿಸಿಕೊಂಡೇ ಬಂದಿರುವನು.

ಭೈರವನನ್ನು ಕೈ ಹಿಡಿದ ಗಂಡನನ್ನಾಗಿ ಅಂಗೀಕರಿಸಿಕೊಂಡು ಬಂದಿರುವ ಮಂಜುಳೆಯು ಆತನು ಜೈಲಿಗೆ ಹೋಗಿ ಬಂದಿದ್ದರೂ ಅವನನ್ನು ಬಿಡದೆ, ಆತನೊಡನೆ ಹೊಂದಿಕೊಂಡು ಬಾಳುವೆ ನಡೆಯಿಸಿಕೊಂಡೇ ಬಂದಿರುವಳು.

ಗೆಳತಿಯರು ತನ್ನ ಬಗ್ಗೆ ತಿರಸ್ಕಾರಭಾವ ತಾಳಿರುವುದನ್ನು ನೋಡಿ ವ್ಯಾಕುಲತೆಯಿಂದ ಯಾರಲ್ಲಿಗೂ ಹೋಗದೆ ತನ್ನ ಪಾಡಿಗೆ ತಾನಿರುವಳು.

ಭೈರವನು ಪಕ್ಕಾ ರೌಡಿಯಾಗಿದ್ದರೂ ಆತನೇ ತನ್ನ ಸರ್ವಸ್ವವೆಂದು ನಂಬಿಕೊಂಡಿರುವುದರಿಂದ ಅವನು ಯಾವ ವಿಧದಲ್ಲಿಯೂ ಅವಳ ಮನಸ್ಸಿಗೆ ನೋವಾಗದಂತೆ ಕಾಪಾಡಿಕೊಂಡು ಬರುತ್ತಿರುವನು.

ಪೊಲೀಸಿನವರು ಭೈರವನನ್ನು ದಸ್ತಗಿರಿ ಮಾಡಿದರೆ ಅವನ ಬಿಡುಗಡೆಗಾಗಿ ಹಗಲಿರುಳೆ ನ್ನದೆ ಓಡಾಡುವಳು. ಯಾರು ಯಾರನ್ನೋ ಆಶ್ರ ಯಿಸಿ ಅವರಲ್ಲಿ ಬೇಡಿಕೊಳ್ಳುವಳು. ವಕೀಲರನ್ನು ನೇಮಿಸಿ ಕೇಸು ನಡೆಯಿಸುವಳು. ಹಣವನ್ನು ನೀರಿನಂತೆ ವ್ಯಯ ಮಾಡುವಳು.

ಭೈರವನಿಗೆ ನ್ಯಾಯಾಧೀಶರು ಶಿಕ್ಷೆ ವಿಧಿಸಿ ಜೈಲಿಗೆ ಕಳುಹಿಸಿದರೆ, ಬಿಡುಗಡೆಯಾಗಿ ಬರುವ ವರೆವಿಗೆ ಒಪ್ಪೊತ್ತು ಊಟ ಮಾಡುವಳು.

ಆಕೆಯ ಜೀವನವು ಸುಖಮಯವಾಗಿ ನಡೆಯುವಂತೆ ಭೈರವನು ವ್ಯವಸ್ಥೆ ಮಾಡಿರುವು ದರಿಂದ ಮಂಜುಳೆಯು ಹೊಟ್ಟೆ ಬಟ್ಟೆಗಾಗಿ ಕೂಲಿ ಮಾಡಬೇಕಾಗಿಲ್ಲ.

ಭೈರವನು ಜೈಲಿಗೆ ಹೋಗಿ ಬಿಡುಗಡೆಯಾಗಿ ಬರುವವರೆವಿಗೆ ಪೊಲೀಸಿನವರೇ ಆಗಲೀ, ಇತರರೇ ಆಗಲಿ ಅವಳನ್ನು ಕೆಣಕಲು ಭಯ ಪಡುವರು.

ಯಾರಾದರೂ ಸರಿ, ಕೆಣಕಿದ್ದೇ ಆದರೆ ಭೈರ ವನು ಜೈಲಿನಿಂದ ಬಂದನಂತರ ಕೆಣಕಿದವರು ಜೀವಾವಧಿ ನೆನಪಿಡುವಂತೆ ಕೈಕಾಲುಗಳ ಸ್ವಾಧೀನ ತಪ್ಪಿಸುವನು.

ಮಂಜುಳೆಯನ್ನು ಕೆಣಕಿದ ಇಬ್ಬರು ಪೊಲೀಸಿ ನವರು, ನಾಲ್ವರು ಪೋಲಿ ಪಟಿಂಗರು ಅವನಿಂದ ಶಿಕ್ಷೆಗೊಳಗಾಗಿ ಸದಾಕಾಲ ಸ್ಮರಿಸು ವಂತಾಗಿದೆ.

ಮಂಜುಳೆಯು ತನ್ನ ಮೇಲಿಟ್ಟಿರುವ ಪ್ರೀತಿ, ಅವಳ ಗುಣಗಳಿಗೆ ಮೆಚ್ಚಿದ ಭೈರವನು ಆಕೆಯನ್ನು ತನ್ನ ಪ್ರಾಣದಂತೆ ಕಾಪಾಡಿಕೊಂಡು ಬರು ತ್ತಿರುವನು.

ಭೈರವನನ್ನು ಕಟ್ಟಿಕೊಂಡ ಮೇಲೆ ತನ್ನವರಿಂದ ದೂರವಾದ ಮಂಜುಳೆಯು, ಭೈರವನು ತನ್ನನ್ನು ಅಗಾಧವಾಗಿ ಪ್ರೀತಿಸುತ್ತಿರುವುದರಿಂದ ಅದೇ ನನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ತನ್ನ ಪಾಡಿಗೆ ತಾನು ನೆಮ್ಮದಿಯಿಂದ ಕಾಲ ಕಳೆದುಕೊಂಡಿರುವಳು.

ಇಂದು ನಳಿನಿಯು ತನ್ನಲ್ಲಿಗೆ ಬಂದುದನ್ನು ಕಂಡು ಆಶ್ಚರ್ಯಗೊಂಡು ಆಕಸ್ಮಾತ್ ಇಲ್ಲಿಗೆ ಬರಬೇಕೆಂದರೆ ಏನೋ ಕಾರಣವಿದೆ. ಕಾರಣ ವಿಲ್ಲದೆ ಬರುವುದೆಂದರೆ ಆಗದು ಎಂದು ತನ್ನ ಲ್ಲಿಯೇ ತೀರ್ಮಾನ ಮಾಡಿಕೊಂಡರೂ ಹಿಂದೊಮ್ಮೆ ಅವಳ ಮನೆಗೆ ಹೋದಾಗ ನಡೆದ ಪ್ರಕರಣವು ಮಂಜುಳೆಯ ಚಿತ್ತಫಲಕದ ಮೇಲೆ ಸಿನಿಮಾ ಆಟದಂತೆ ಮೂಡಿತು.

''ಏನು ನಳಿನಿ, ತುಂಬಾ ಅಪರೂಪಕ್ಕೆ ಅದೂ ಆಕಸ್ಮಿಕವಾಗಿ ಬಂದಿದ್ದೀಯಲ್ಲ. ಏನು ವಿಶೇಷ? ನಿಂತೇ ಇದ್ದೀಯಲ್ಲ, ಕುಳಿತುಕೊ.''

ಏಕಾಏಕಿ ಗದರದೆ ಸ್ನೇಹಪೂರ್ಣಳಾಗಿಯೇ ಮಾತನಾಡಿದಳು ಮಂಜುಳೆ.

''ಮಂಜುಳಾ, ನಿನ್ನಿಂದ ಬಹು ದೊಡ್ಡ ಉಪಕಾರವನ್ನು ಬಯಸಿ ಬಂದಿದ್ದೇನೆ. ಹಿಂದೆ ನನ್ನ ಮನೆಗೆ ಬಂದಾಗ ನಾನು ನಡೆದುಕೊಂಡ ನಡ ವಳಿಕೆಗೆ ಕ್ಷಮೆ ಕೋರುತ್ತೇನೆ.''

ನಿಂತ ಹಾಗೇ ಹೇಳಿದಳು ನಳಿನಿ.

''ಹಿಂದಿನ ಪ್ರವರ ಬೇಡ. ಈಗ ನನ್ನಿಂದ ಏನಾಗಬೇಕು ಹೇಳು. ಅತಿ ಶೀಘ್ರದಲ್ಲಿ ನಿನ್ನ ಮದುವೆ ನಡೆಯುವುದೆಂಬ ಸುದ್ದಿಯನ್ನೂ ಕೇಳಿದೆ. ಅದಿರಲಿ ನೀನೀಗ ಬಂದ ಕಾರಣ ಹೇಳು?''

''ನಾನೊಂದು ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿ, ಬಿಡುಗಡೆ ಕಾಣದೆ ಪರಿತಪಿಸುತ್ತಿದ್ದೇನೆ ಮಂಜುಳ. ಆ ಸಮಸ್ಯೆಯಿಂದ ನನ್ನನ್ನು ಪಾರು ಮಾಡಲು ನೀನೇ ಸಮರ್ಥಳೆಂದು ನಿನ್ನಲ್ಲಿಗೆ ಬಂದಿದ್ದೇನೆ.''

''ಅದೇನು ವಿಷಮ ಪರಿಸ್ಥಿತಿ, ವಿವರವಾಗಿ ಹೇಳು. ಒಗಟಿನ ಮೇಲೆ ಹೇಳಿದರೆ ನಾನೇನೆಂದು ತಿಳಿಯಲಿ? ನಿಂತುಕೊಂಡೇ ಇದ್ದೀಯಲ್ಲ, ಕುಳಿತುಕೋ. ನೀನು ನಿಂತಿದ್ದರೆ ನನ್ನ ಕಾಲುಗಳು ನೋಯುತ್ತೆ.''

ಕುರ್ಚಿಯ ಮೇಲೆ ಕುಳಿತ ನಳಿನಿಯು ಭಾರವಾದ ಧ್ವನಿಯಲ್ಲಿ-

''ನೀನು ಅಭಯ ನೀಡಬೇಕು ಮಂಜುಳಾ, ನಿನ್ನನ್ನೇ ನಂಬಿ ಬಂದಿದ್ದೇನೆ'' ಎಂದಳು.

''ಪೂರ್ಣ ವಿಷಯ ತಿಳಿಯದೆ ನಾನು ಮಾತು ಕೊಡಲಾರೆ. ಮೊದಲು ನಿನ್ನ ಕಥೆ ಏನೆಂದು ಹೇಳು?''

ನಳಿನಿಯು ಹೇಳಲಾರಂಭ ಮಾಡಿದಳು.

ಕಾಲೇಜಿನ ವ್ಯಾಸಂಗದಲ್ಲಿರುವಾಗ ನಳಿನಿಗೆ ಅದೇ ಕಾಲೇಜಿನಲ್ಲಿ ಓದಿಕೊಂಡಿರುವ ಗಂಗಾ ಧರನ ಪರಿಚಯವಾಯಿತು.

ಲಕ್ಷಣವಾದ ಮುಖವನ್ನು ಹೊಂದಿ ಐದೂವರೆ ಅಡಿ ಎತ್ತರವಿರುವ ಗಂಗಾಧರನ ಮುಖಬಿಂಬ, ಮಾತಿನ ಆಕರ್ಷಣೆಗೆ ಮರುಳಾದ ನಳಿನಿಯು ತನ್ನ ಮನದಲ್ಲಿ ಅವನನ್ನು ಪ್ರೇಮ ಮೂರ್ತಿಯಾಗಿ ಸ್ವೀಕರಿಸಿದಳು. ನಳಿನಿಯ ರೂಪಲಾವಣ್ಯಕ್ಕೆ ಗಂಗಾಧರನೂ ಆಕರ್ಷಿತನಾದ.

ಇಬ್ಬರೂ ರಹಸ್ಯವಾಗಿ ಸಂಧಿಸಿ ಮಾತ ನಾಡುವುದೂ, ಹೋಟೆಲುಗಳಿಗೆ ಹೋಗಿ ತಿಂಡಿ ತಿಂದು, ಕಾಫಿ ಕುಡಿಯುವುದೂ, ಉದ್ಯಾನವನ ಗಳಲ್ಲಿ ವಿಹಾರ ಮಾಡುವುದೂ ಆರಂಭವಾಯಿತು.

ಆದರೆ, ನಳಿನಿಯು ಗಂಗಾಧರನನ್ನು ಪ್ರೇಮಿ ಸಿದ್ದರೂ ತನ್ನ ಮಾನವೊಪ್ಪಿಸದೆ ಆ ಬಗ್ಗೆ ಸದಾ ಜಾಗರೂಕಳಾಗಿಯೇ ಇರುವಳು. ಗಂಗಾಧರನೂ ಆ ವಿಚಾರವಾಗಿ ಬಲಾತ್ಕಾರ ಮಾಡದೆ ಸತ್ಪುರುಷ ನಾಗಿಯೇ ಇರುವನು.

ಒಬ್ಬರನ್ನೊಬ್ಬರು ಸಂಧಿಸಿದಾಗ ಮಹದಾನಂದ ಭರಿತರಾಗಿ ಓಡಾಡಿಕೊಂಡಿದ್ದು, ಅಗಲುವಾಗ ನಿರಾಶಾಭಾವನೆ ತಾಳುವರು. ಪರಸ್ಪರ ಸಂಧಿಸದೆ

ಇದ್ದಾಗ ಪ್ರೇಮಪತ್ರಗಳ ವ್ಯವಹಾರವೂ ನಡೆಯಿತು.

ತಮ್ಮ ಪ್ರೀತಿ ವಾತ್ಸಲ್ಯದ ಕುರುಹಾಗಿ ಇಬ್ಬರೂ ಜೊತೆಯಾಗಿ ಫೋಟೋಗಳನ್ನೂ ಸಹ ತೆಗೆಯಿಸಿಕೊಂಡರು.

ತನ್ನ ತಂದೆತಾಯಿಯ ಬಳಿ ಗಂಗಾಧರನ ಗುಣ, ನಡವಳಿಕೆಯನ್ನು ಹೊಗಳಿ ಅವರ ಒಪ್ಪಿಗೆ ಪಡೆದು ಗಂಗಾಧರನನ್ನೇ ಮದುವೆಯಾಗ ಬೇಕೆಂಬ ಸಂಕಲ್ಪ ಹೊಂದಿರುವ ನಳಿನಿಯು ತನ್ನ ಮನದಿಚ್ಛೆ ಹೇಳಲು ಸಮಯ ನಿರೀಕ್ಷೆ ಯಲ್ಲಿರುವಳು.

ಮಗಳ ಕಾಲೇಜು ಕೊನೆಯ ವರ್ಷದ ಪರೀಕ್ಷೆ ಮುಗಿಯುತ್ತಲೇ ತಮ್ಮ ಯೋಗ್ಯತೆಗೆ ತಕ್ಕ ವರನನ್ನು ಹುಡುಕಿ ಮಗಳಿಗೆ ಮದುವೆ ಮಾಡ ಬೇಕೆಂಬ ಯೋಚನೆ ಕಾಳಿಂಗಯ್ಯ ದಂಪತಿಯರ ಮನಗಳಲ್ಲಿದೆ.

ನಳಿನಿಯ ಗಂಗಾಧರನನ್ನು ಪ್ರೇಮಿಸಿರುವ ವಿಷಯವೇನೂ ಅವರಿಗೆ ತಿಳಿಯದು.

ಕಾಲೇಜು ಪರೀಕ್ಷೆಯ ದಿನಗಳು ಸಮೀಪಿಸು ತ್ತಿದ್ದ ಹಾಗೆ ನಳಿನಿಯು ಗಂಗಾಧರನನ್ನು ಇನ್ನೂ ಹೆಚ್ಚು ಪ್ರೀತಿಸುವಂತಾದಳು.

ನಳಿನಿಯು ಮೈರುಚಿಯುಂಡು ನಲಿಯಲು ಗಂಗಾಧರನು ಹಲವು ಬಾರಿ ಪ್ರಯತ್ನಪಟ್ಟರೂ ಸಫಲನಾಗಲಿಲ್ಲ.

ದಿನಗಳು ಕಳೆಯುತ್ತಿದ್ದ ಹಾಗೆ ಗಂಗಾಧರನ ನಡವಳಿಕೆ ಸರಿಯಿಲ್ಲವೆಂದೂ, ಚೆಲುವೆಯ ರಿಬ್ಬರನ್ನು ಪ್ರೇಮಿಸಿ ಮದುವೆಯಾಗುವೆನೆಂದು ವಚನವಿತ್ತು, ಅವರಿಗೆ ವಂಚಿಸಿರುವನೆಂಬ ವಿಷಯವು ನಳಿನಿಯ ಕಿವಿಗಳನ್ನು ಸೋಂಕಿತು.

ವಿಷಯ ತಿಳಿಯುತ್ತಲೇ ನಳಿನಿಯ ಕಿವಿಗಳಿಗೆ ಕಾದ ಸೀಸವನ್ನು ಹುಯ್ದಂತಾದರೂ ಏಕಾಏಕಿ ಸಂದೇಹಪಟ್ಟು ಹುಚ್ಚಳಂತಾಗದೆ ಪರೀಕ್ಷೆ ಮಾಡಿ ತಿಳಿಯಬೇಕೆಂದು ತನ್ನಲ್ಲಿಯೇ ನಿರ್ಧಾರ ಮಾಡಿ ಕೊಂಡಳು.

ಅವಳ ಪರೀಕ್ಷೆ ಮುಂದುವರಿಯುತ್ತಿದ್ದ ಹಾಗೆ ಒಂದು ದಿನ ತಂದೆತಾಯಿ ಇಬ್ಬರೂ ಮಗಳನ್ನು ಹತ್ತಿರ ಕೂರಿಸಿಕೊಂಡು ನಳಿನೀ ನಿನ್ನ ಹತ್ತಿರ ಬಹುಮುಖ್ಯ ವಿಷಯ ಹೇಳಬೇಕಾಗಿದೆ ಯೆಂದರು.

ಅದೇನು ವಿಷಯವೆಂದು ಅಂತರಾರ್ಥ ತಿಳಿಯದ ನಳಿನಿಯು –

''ಅದೇನು ವಿಷಯ ಅಮ್ಮಾ?'' ಎಂದು ಹೆತ್ತವರ ಮುಖಗಳನ್ನು ನೋಡುತ್ತಾ ಕೇಳಿದಳು.

''ಅದೇ ನಿನ್ನ ಮದುವೆ ವಿಷಯ ಕಣಮ್ಮ, ಬೇರೆ ಇನ್ನೇನಿದೆ?'' ಕಾಳಿಂಗಯ್ಯನು ಮಗಳ ಮುಖ ನೋಡುತ್ತಾ ಪ್ರೀತಿ ತುಂಬಿದ ಧ್ವನಿಯಲ್ಲಿ ಹೇಳಿದ.

''ನನ್ನ ಮದುವೆಯೇ?''

ಬೆರಗಾಗಿ ಕೇಳಿದಳು ನಳಿನಿ.

''ಹೌದು ಕಣಮ್ಮ, ನಿನ್ನ ಮದುವೆಯೆ.''


''ಇದೇನಮ್ಮ ಇದ್ದಕ್ಕಿದ್ದ ಹಾಗೆ ಈ ಮಾತು?''

''ಇವತ್ತಿನ ಮಾತಲ್ಲ ಕಣಮ್ಮ, ನಿನ್ನಮ್ಮ ನಾನು ಬಹುದಿನಗಳಿಂದ ಮಾತಾಡಿಕೊಂಡೇ ಇದ್ದೇವೆ. ನಿನ್ನಲ್ಲಿ ಹೇಳಬೇಕೆಂದು ಸಮಯ ಕಾಯುತ್ತಿದ್ದೆವು. ಇಂದು ಕೂಡಿ ಬಂದುದರಿಂದ ಹೇಳ ಬೇಕಾಯಿತು.''

''ನೀವೇನೋ ಮದುವೆ ಮಾಡಬೇಕೆಂಬ ಯೋಚನೆಯಲ್ಲಿದ್ದೀರ. ನನಗೆ ಆ ಯೋಚ ನೆಯೇ ಇಲ್ಲ ಕಣಪ್ಪ.''

''ಹೀಗೆ ಹೇಳಿದರೆ ಹೇಗಮ್ಮ, ಹೆಣ್ಣಾಗಿ ಹುಟ್ಟಿದ ಮೇಲೆ ಮದುವೆ ಮಾಡಿಕೊಳ್ಳದೆ ಬ್ರಹ್ಮಚಾರಿಣಿಯಂತಿರಲು ಸಾಧ್ಯವೇ? ನೀನು ಹೀಗೆ ಹೇಳಿದೆಯೆಂದು ನಾವು ಸುಮ್ಮನಿರ ಲಾಗುವುದೇ? ನಿನಗೆ ಮದುವೆ ಮಾಡಿದ ಮೇಲೇ ನಮ್ಮ ಮನಸ್ಸಿಗೆ ಸಮಾಧಾನವಾಗೋದು.''

''ನಮ್ಮ ಯೋಗ್ಯತೆಗೆ ತಕ್ಕ ಗಂಡು ನೋಡೋದು ಬೇಡವೇ?''



“ಏನಮ್ಮಾ ನೀನ್ಹೇಳೋದು, ನಮಗಷ್ಟು ತಿಳಿಯದೇ? ಯಾವನೋ ಕುಂಟ, ಕುರುಡನ ಕೊರಳಿಗೆ ನಿನ್ನನ್ನು ಕಟ್ಟುತ್ತೇವೆಯೇ? ನಿನ್ನ ಮದುವೆಯಾದರೂ ನೀನು ನಮ್ಮ ಕಣ್ಣೆದುರಿಗೇ ಇರಬೇಕೆಂದು, ಈ ನಗರದಲ್ಲಿಯೇ ಇರುವ ಗಂಡು ಹುಡುಕುತ್ತೇವೆ.”

“ನೀವು ಹೇಳೋದು ಕೇಳಿದರೆ ಈಗಾಗಲೇ ಗಂಡು ನೋಡಿದ ಹಾಗೇ ತೋರುತ್ತೆ.”

“ಹಾಗೇನೂ ಇಲ್ಲ ಕಣಮ್ಮ, ನಿನ್ನಲ್ಲಿ ಸುಳ್ಳು ಹೇಳುತ್ತೇನೆಯೇ? ಮೊದಲು ನಿನ್ನ ಒಪ್ಪಿಗೆ ಪಡೆದು ಆಮೇಲೆ ಗಂಡು ಹುಡುಕೋದು.”

“ನನ್ನ ಒಪ್ಪಿಗೆ ಪಡೆಯಲು ಕೆಲವು ದಿನಗಳು ಕಾಲಾವಕಾಶ ಕೊಡಿ.”

ನಿನ್ನ ಇಷ್ಟದಂತೆಯೇ ಆಗಲೆಂದು ಕಾಳಿಂಗಯ್ಯ ದಂಪತಿಯರು ಏಕಕಂಠದಿಂದ ನುಡಿಯಲು ನಳಿನಿಗೆ ಮಹದಾನಂದವಾಯಿತು.

2

ನಳಿನಿಯ ಪರೀಕ್ಷೆಯಲ್ಲಿ ಗಂಗಾಧರನು ಕನಕ ಮತ್ತು ಸರಸ ಇಬ್ಬರಿಗೂ ನಿನ್ನನ್ನೇ ಮದುವೆ ಯಾಗುತ್ತೇನೆಂದು ವಚನವಿತ್ತು ಅವರೊಡನೆ ಲೀಲಾಜಾಲವಾಗಿ ಓಡಾಡಿಕೊಂಡಿದ್ದು, ಆ ಚೆಲುವೆಯರಿಬ್ಬರ ಮೈ ಸುಖದ ಸವಿಯುಂಡು ಅನಂತರ ಇಬ್ಬರಿಗೂ ವಂಚನೆ ಮಾಡಿದ್ದಾನೆಂದು ತಿಳಿಯಿತು.

ನಳಿನಿಗೆ ಗಂಗಾಧರನ ಬಗ್ಗೆ ಜಿಗುಪ್ಸೆ ಯುಂಟಾಯಿತು.

ಗಂಗಾಧರನನ್ನು ನಂಬಿ ಮಾನ ಒಪ್ಪಿಸಿದ್ದರೆ ನನ್ನ ಗತಿಯೂ ಕನಕ, ಸರಸಳಂತೆಯೇ ಆಗು ತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ದೇವರೇ ನನ್ನ ಮಾನ ಉಳಿಸಿದಂತಾಯಿತು. ಇನ್ನವನ ಸಹವಾಸ ದೂರಮಾಡುವುದು ಉತ್ತಮವೆಂದು ತನ್ನಲ್ಲಿಯೇ ನಿಷ್ಕರ್ಷೆ ಮಾಡಿಕೊಂಡಳು.

ಗಂಗಾಧರನಿಗೆ ಬರೆದಿರುವ ಪ್ರೇಮಪತ್ರ ಗಳು, ಅವನ ಜೊತೆಯಲ್ಲಿ ತೆಗೆಯಿಸಿಕೊಂಡಿ ರುವ ಫೋಟೋಗಳ ಪ್ರವರವನ್ನು ನೆನಪಿಗೆ ತಂದುಕೊಂಡು, ಮೊದಲು ಆ ಫೋಟೋಗಳು, ಪತ್ರಗಳನ್ನು ಅವನಿಂದ ಪಡೆಯದೆ ಬಿಡಬಾರ ದೆಂದು ನಿರ್ಧಾರ ಮಾಡಿಕೊಂಡಳು.

ಅಪ್ಪ ಅಮ್ಮನು ನೋಡಿದ ಗಂಡನ್ನು ಒಪ್ಪಿ ಮದುವೆ ಮಾಡಿಕೊಂಡು ಸುಖವಾಗಿ ಬಾಳಿ ಕೊಂಡಿರಬೇಕೆಂಬ ಯೋಚನೆಯಿಂದ ಕೂಡಿ ದವಳಾಗಿ ಮನೆಗೆ ಬಂದಳು.

''ಬಾಮ್ಮ ನಳಿನಿ, ನಿನಗಾಗಿ ಕಾಯುತ್ತಿದ್ದೆ. ಬೆಳಿಗ್ಗೆಯಿಂದ ಕಾಣಲಿಲ್ಲವಲ್ಲ ಎಲ್ಲಿ ಹೋಗಿದ್ದೆ?''

ಮಗಳು ಹೊಸಿಲೊಳಗೆ ಕಾಲಿಡುತ್ತಿದ್ದ ಹಾಗೆ ಮಾತನಾಡಿದ ಕಾಳಿಂಗಯ್ಯ.

''ಅದೇಕಪ್ಪ ನನಗಾಗಿ ಕಾಯುತ್ತಿದ್ದೆ? ನನ್ನಿಂದೇ ನಾಗಬೇಕು? ನಾನು ನನ್ನ ಗೆಳತಿ ಸುಲೋಚನಳನ್ನು ಕಾಣಲು ಹೋಗಿದ್ದೆ.'' ತಂದೆಯ ಹತ್ತಿರ ಬಂದು ಕುಳಿತ ನಳಿನಿಯು ಉತ್ತರವಿತ್ತು ಪ್ರಶ್ನಿಸಿದಳು.

''ಮಂಡಿಮರ್ಚೆಂಟ್ ಲೋಕೇಶಪ್ಪನು ಹೇಳಿ ಕಳುಹಿಸಿದ್ದಾನೆ.''

''ಏನೆಂದು ಹೇಳಿ ಕಳಿಸಿದ್ದಾರಪ್ಪ?''

''ಸಾಯಂಕಾಲ ಗಂಡಹೆಂಡತಿ ಇಬ್ಬರೂ ನಿನ್ನನ್ನು ನೋಡಲು ಬರ್ತಾರಂತೆ. ನೀನು ಮನೆ ಬಿಟ್ಟು ಎಲ್ಲಿಗೂ ಹೋಗಬೇಡ. ಅವರು ಬರುವ ವೇಳೆಗೆ ಅಲಂಕಾರ ಮಾಡಿಕೊಂಡು ಸಿದ್ಧವಾಗಿರ ಬೇಕು. ತಾನೇನು ಮಾತನಾಡಬೇಕೆಂದೇ ತೋಚ ದಂತಾಯಿತು ನಳಿನಿಗೆ.

''ಏಕಮ್ಮ, ಸುಮ್ಮನೆ ನಿಂತುಬಿಟ್ಟೆ? ನಾ ಹೇಳಿದ್ದು ಕೇಳಿಸಿತೋ ಇಲ್ಲವೋ?''

''ಕೇಳಿದೆ ಕಣಪ್ಪ.''

ಯೋಚನೆಯಿಂದ ಬಿಡುಗಡೆಯಾಗಿ ಹೇಳಿ ದಳು ನಳಿನಿ.

''ಲೋಕೇಶಪ್ಪನು ಭಾರಿ ಶ್ರೀಮಂತ ಕಣಮ್ಮ. ಹತ್ತು ತಲೆ ಕುಳಿತು ಊಟ ಮಾಡಿದರೂ ಸವೆಯದಷ್ಟು ಆಸ್ತಿ ಇದೆ. ಮೂವರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳಿದ್ದಾಳೆ. ಮಗಳಿಗೆ ಮದುವೆ ಮಾಡಿ ಆಗಿದೆ. ಗಂಡು ಮಕ್ಕಳಲ್ಲಿ ಮೊದಲನೇ ಮಗನ ಹೆಸರು ಪ್ರದೀಪ. ಅವನೇ ನಿನ್ನನ್ನು ನೋಡಲು ಬರೋದು. ಅವನು ನಿನ್ನನ್ನು ಒಪ್ಪಿದ್ದೇ ಆದರೆ, ನಿನ್ನ ಅದೃಷ್ಟದ ಬಾಗಿಲು ತೆಗೆದ ಹಾಗೆಯೇ. ಮನೆಗೆ ದೊಡ್ಡ ಸೊಸೆಯಾಗಿ ರಾಣಿ ಯಂತೆ ಕಾಲ ಕಳೆದುಕೊಂಡಿರಬಹುದು. ಮನೆ ತನದ ಬಗ್ಗೆ ಯಾರೂ ಬೆರಳೆತ್ತಿ ತೋರಿಸುವ ಹಾಗಿಲ್ಲ.''

ಭಾವಿ ಬೀಗರ ನಡವಳಿಕೆ, ಮನೆತನದ ಬಗ್ಗೆ ಹೊಗಳಿ ಮಾತನಾಡಿದ ಕಾಳಿಂಗಯ್ಯ.

ಗಂಡನ ಮಾತಿಗೆ ಪದ್ಮಾವತಿಯೂ ಪ್ರೋತ್ಸಾಹ ವಿತ್ತು ಮಾತನಾಡಿದಳು.

ಈ ದಿನ ಕಾರ್ಯ ಮುಗಿಸಿಕೊಂಡು ನಾಳೆಯೇ ಗಂಗಾಧರನನ್ನು ಕಂಡು ಆತನೊಡನೆ ಮಾತನಾಡಿ, ಪತ್ರಗಳು ಮತ್ತು ಫೋಟೋಗಳನ್ನು ಪಡೆದು ಆತನ ಸಂಗ, ಸಹವಾಸವನ್ನು ದೂರ ಮಾಡಬೇಕೆಂದು ತನ್ನಲ್ಲಿಯೇ ತೀರ್ಮಾನ ಮಾಡಿ ಕೊಂಡ ನಳಿನಿಯು ನೀವು ಹೇಳಿದಂತೆಯೇ ನಡೆಯುವೆನೆಂದು ನುಡಿದಳು.

ಹೆಣ್ಣು ನೋಡಲು ಬರುವವರಿಗೆ ಸ್ವಾಗತ ಬಯಸಿ ಉಪಚರಿಸಿ ಬೀಳ್ಕೊಡಲು ಆಗಿನಿಂದಲೇ ಬೇಕಾದ ಸಿದ್ಧತೆ ಮಾಡಿಕೊಂಡರು.

ಸಾಯಂಕಾಲ ಆರು ಘಂಟೆಯ ನಂತರ ಲೋಕೇಶಪ್ಪನು ತನ್ನ ಧರ್ಮಪತ್ನಿ, ಮಗನೊಡನೆ ಆಗಮಿಸಿದ.

ಅವರು ಕಾರಿನಿಂದ ಇಳಿಯುತ್ತಿದ್ದ ಹಾಗೆ ಎದುರು ಹೋಗಿ ಸಂತೋಷದಿಂದ ಸ್ವಾಗತಿಸಿದ ಕಾಳಿಂಗಯ್ಯನು ಮೂವರನ್ನೂ ಒಳಗೆ ಕರೆದು ಕೊಂಡು ಬಂದು ಹಾಲಿನಲ್ಲಿದ್ದ ಸೋಫಾಗಳ ಮೇಲೆ ಕೂರಿಸಿ, ತಾನು ಅವರ ಎದುರು ಸೋಫಾದ ಮೇಲೆ ಮಡದಿಯ ಪಕ್ಕದಲ್ಲಿ ಕುಳಿತ.

ತಾಯಿಯ ಪಕ್ಕದಲ್ಲಿ ಕುಳಿತ ಪ್ರದೀಪನು ಸುತ್ತಮುತ್ತ ದೃಷ್ಟಿ ಹಾಯಿಸಿ ಮನೆಯ ವಾತಾವರಣ ನೋಡಿದ.

ನಶ್ಯದ ಕಲರಿನ ಪ್ಯಾಂಟು ತೊಟ್ಟು ಬಿಳಿ ಷರಟು ಉಟ್ಟುಕೊಂಡಿರುವ ಪ್ರದೀಪನು ದುಂಡುಮುಖವನ್ನು ಹೊಂದಿದ್ದು, ಲಕ್ಷಣ ವಾಗಿಯೇ ಇರುವನು.

ಕಾಳಿಂಗಯ್ಯ ಲೋಕೇಶಪ್ಪ ಲೋಕಾಭಿರಾಮ ವಾಗಿ ಮಾತನಾಡುತ್ತಿದ್ದ ಹಾಗೆ ಪದ್ಮಾವತಿಯು ಎದ್ದು ಒಳಗೆಹೋಗಿ ತಯಾರಾಗಿ ನಿಂತಿದ್ದ ಮಗಳನ್ನು ಕರೆದುಕೊಂಡು ಹೊರಗೆ ಬಂದಳು.

ಗಿಣಿ ಹಸುರಿನ ಸೀರೆ, ರವಿಕೆ ತೊಟ್ಟಿದ್ದ ನಳಿನಿಯು ವಾಸನೆ ಎಣ್ಣೆಯಿಂದ ತಲೆಬಾಚಿ ಕೊಂಡು, ಮಲ್ಲಿಗೆ ಹೂ ಮುಡಿದು, ಸ್ನೋ, ಪೌಡರುಗಳಿಂದ ಅಲಂಕಾರ ಮಾಡಿಕೊಂಡಿದ್ದಾಳೆ.

ಕೈಬೆರಳುಗಳಲ್ಲಿ ಉಂಗುರಗಳೂ, ಮೂಗು ಕಿವಿಗಳಲ್ಲಿ ವಜ್ರದ ಮೂಗುಬೊಟ್ಟು, ವಾಲೆ ಗಳಿದ್ದು ಕೊರಳಿಗೆ ನೆಕ್‌ಲೇಸ್, ಮೋಪು ಹಾಕಿ ಕೊಂಡಿರುವ ನಳಿನಿಯು ಸ್ವರ್ಗಲೋಕದ ಅಪ್ಸರೆ ಯಂತೆ ಕಾಣುತ್ತಿರುವಳು.

ಬೆಳ್ಳಿಯ ತಟ್ಟೆಯಲ್ಲಿ ತಾಜಾತುಪ್ಪದಿಂದ ತಯಾರಿಸಿದ ನಾಲ್ಕು ಬಗೆಯ ಸಿಹಿತಿಂಡಿಯನ್ನು ಅವರ ಮುಂದಿರಿಸಿ ಭಾವಿ ಅತ್ತೆ-ಮಾವನ ಪಾದಗಳಿಗೆರಗಿ ಎದುರು ಸೋಫಾದ ಮೇಲೆ ತಲೆ ತಗ್ಗಿಸಿಕೊಂಡು ಕುಳಿತಳು.

ನಳಿನಿಯ ರೂಪಲಾವಣ್ಯವನ್ನು ಕಂಡು ಮಾರು ಹೋದ ಪ್ರದೀಪನು ತನಗೆ ತಕ್ಕ ಸತಿಶಿರೋಮಣಿಯೆಂದು ಮನದಲ್ಲೇ ಸಂತೋಷ ತಾಳಿ, ತಾಯಿಯ ಮುಖ ನೋಡಿ ತುಟಿಗಳಲ್ಲೇ ನಕ್ಕು, ತನಗೆ ಒಪ್ಪಿಗೆಯೆಂದು ಕಣ್ಣುಗಳ ನೋಟ ದಲ್ಲೇ ತೋರಿಸಿಕೊಂಡ.

ಲೋಕೇಶಪ್ಪನು ನಳಿನಿಯನ್ನು ಕುರಿತು ಅವಳ ಹೆಸರು, ವಯಸ್ಸು, ವಿದ್ಯಾಭ್ಯಾಸದ ಬಗ್ಗೆ ಪ್ರಶ್ನೆ ಗಳನ್ನು ಹಾಕಲು ನಳಿನಿಯು ತಲೆಯೆತ್ತಿ ಗಂಭೀರ ಭಾವದಿಂದ ಉತ್ತರಿಸುತ್ತಾ ವಾರೆ ನೋಟದಿಂದ ಪ್ರದೀಪನ ಮುಖ ನೋಡಿದಳು.

ಆ ವೇಳೆಯಲ್ಲಿ ಗಂಗಾಧರನೊಡನೆ ಓಡಾಡಿದ ನೋಟವು ಕಣ್ಣುಗಳ ಮುಂದೆ ಬಂದು ಶರೀರವು ನಡುಗಿತು.

ಬಂದವರು ಸಿಹಿತಿಂಡಿಯನ್ನು ಮೆಲ್ಲುತ್ತಾ ನಳಿನಿಯ ಮುಖವನ್ನೇ ನೋಡುತ್ತಿರಲು ಆಕೆಯು ಎದ್ದು ಒಳಗೆ ಹೋಗಿ, ಬಾದಾಮಿ ಹಾಲು ತುಂಬಿಟ್ಟಿದ್ದ ಬೆಳ್ಳಿಯ ಲೋಟಗಳನ್ನು ತಂದು ಅವರ ಮುಂದಿಟ್ಟಳು.

ಹಾಲಿನ ಲೋಟಾವನ್ನು ಕೈಗೆ ತೆಗೆದುಕೊಂಡ ಕಾಳಿಂಗಯ್ಯನು -

''ಬೇರೆ ಏನಾದರೂ ಪ್ರಶ್ನೆ ಹಾಕುವುದಿದ್ದರೆ ಧೈರ್ಯವಾಗಿ ಕೇಳಿ. ಈ ವೇಳೆಯಲ್ಲಿ ಹಿಂದೆ ಮುಂದೆ ನೋಡಬಾರದು'' ಎಂದ.

''ಕೇಳಿ ಉತ್ತರ ಪಡೆದಾಯಿತು. ನಮ್ಮ ಮನಸ್ಸಿಗೆ ನಿಮ್ಮ ಮಗಳು ಒಪ್ಪಿಗೆಯಾಯಿತು. ನೀವು ನಿಮ್ಮವರೊಡನೆ ನನ್ನ ಮನೆಗೆ ಬನ್ನಿ, ಮುಂದಿನ ವ್ಯವಹಾರದ ಬಗ್ಗೆ ಮಾತನಾಡೋಣ.''

ಲೋಕೇಶಪ್ಪನು ತನ್ನ ಮನದಭಿಪ್ರಾಯವನ್ನು ಸ್ಪಷ್ಟಪಡಿಸಿ, ಬರುತ್ತೇವೆಂದು ತಲೆಯಾಡಿಸಿದಾಗ ಒಪ್ಪಿಗೆಯಿತ್ತ ಕಾಳಿಂಗಯ್ಯ.

ದಂಪತಿಯರು ಮಗನೊಡನೆ ಹೊರಡಲು ತಯಾರಾದರು.

ಪ್ರದೀಪನು ನಳಿನಿಯ ಮುಖ ನೋಡಿ ನಗು ಸೂಚಿಸಲು ಆಕೆಯೂ ನಕ್ಕಳು.

ಬಾಗಿಲವರೆಗೆ ಬಂದ ದಂಪತಿಯರು ಲೋಕೇಶಪ್ಪ ದಂಪತಿಯರನ್ನು ಸಂತೋಷದಿಂದ ಬೀಳ್ಕೊಟ್ಟರು.

ಹೊರಡುವ ವೇಳೆಯಲ್ಲಿಯೂ ಪ್ರದೀಪನು ನಳಿನಿಯ ಮುಖ ನೋಡಿ ನಗೆಯಾಡಿದ.

''ಇವರು ನಳಿನಿಯನ್ನು ಒಪ್ಪಿದಂತಾಯಿತು. ಇವರ ಮನೆಗೆ ಹೋದಾಗ ಅದೇನು ಹೇಳು ತ್ತಾರೆಂದು ಕೇಳಿ ಮುಂದಿನ ಕಾರ್ಯ ನಿರ್ವಹಿಸ ಬೇಕು.''

ಮಡದಿಯ ಮುಖ ಈಕ್ಷಿಸುತ್ತಾ ನುಡಿದ ಕಾಳಿಂಗಯ್ಯ.

''ವರದಕ್ಷಿಣೆ ಎಷ್ಟು ಕೊಡುತ್ತೀರಾ? ಅಳಿಯ ನಿಗೆ ಏನೇನು ಒಡವೆ ಮಾಡಿಸಿ ಕೊಡುತ್ತೀರಾ? ಎಂದು ಕೇಳುವರಲ್ಲದೆ ಬೇರೆ ಇನ್ನೇನು ಮಾತ ನಾಡುವುದಿದೆ? ಸೂಟುಬೂಟು ಕೊಡಿಸುವು ದಿದ್ದೇ ಇದೆ. ಅವರೇನು ಕೇಳಿದರೂ ಇಲ್ಲವೆನ್ನದೆ ಸಂತೋಷದಿಂದ ಕೊಟ್ಟು ಮಗಳ ಮದುವೆ ಮಾಡೋಣ. ಕಳೆದುಕೊಂಡರೆ ಮುಂದೆ ಇಂತಹ ಒಳ್ಳೆಯ ಸಂಬಂಧ ಸಿಗುವುದಿಲ್ಲ.

ಪದ್ಮಾವತಿಯು ತನ್ನ ಅಭಿಪ್ರಾಯ ವ್ಯಕ್ತ ಪಡಿಸಲು ಕಾಳಿಂಗಯ್ಯನು ಮಗಳ ಮುಖ ನೋಡಿ ನಕ್ಕ.

ಆಗ ಏನೊಂದೂ ಮಾತನಾಡದೆ ತನ್ನ ಯೋಚನೆಯಲ್ಲಿ ಮುಳುಗಿದ್ದ ನಳಿನಿಯು ಆ ರಾತ್ರಿಯೆಲ್ಲಾ ಗಂಗಾಧರನ ಯೋಚನೆಯಲ್ಲೇ ಮುಳುಗಿದ್ದು ಮಾರನೆ ದಿನ ಗಂಗಾಧರನನ್ನು ರಹಸ್ಯವಾಗಿ ಸಂಧಿಸಿ ತಾನೇ ಮುಂದಾಗಿ ನಿನ್ನಲ್ಲಿ ಬಹುಮುಖ್ಯ ವಿಷಯ ಹೇಳಬೇಕಾಗಿದೆ ಯೆಂದಳು.

''ಅದೇನು ಅಂತಹ ಮುಖ್ಯ ವಿಷಯ?''

ಸಹಜ ಕಂಠದಿಂದಲೇ ಪ್ರಶ್ನಿಸಿದ ಗಂಗಾಧರ.

''ನನಗೆ ಗಂಡು ನಿಶ್ಚಯವಾಗಿದೆ.''

''ಓ ಗಂಡು ನೋಡಿಯಾಯಿತೇ? ಯಾರವನು?''

''ಅವನು ಯಾರಾದರೂ ಆಗಿರಲಿ. ನೀನು ನನ್ನನ್ನು ಮರೆಯಬೇಕು.''

''ಈ ಮಾತು ಹೇಳಲು ಇಲ್ಲಿಯವರೆಗೆ ಬಂದೆಯಾ?''

''ಹೌದು.''

''ಈಗ ನನ್ನಿಂದ ಏನಾಗಬೇಕು?''

''ನಾನು ನಿನಗೆ ಬರೆದಿರುವ ಪ್ರೇಮ ಪತ್ರಗಳು, ಜೊತೆಯಲ್ಲಿ ತೆಗೆಯಿಸಿಕೊಂಡಿರುವ ಫೋಟೋಗಳು ಬೇಕಾಗಿದೆ. ಅದಕ್ಕಾಗಿ ಬಂದಿ ದ್ದೇನೆ. ದಯವಿಟ್ಟು ಅವುಗಳನ್ನು ಕೊಟ್ಟರೆ ಮಹದುಪಕಾರ ಮಾಡಿದಂತಾಗುವುದು.''

''ನಾನು ಕೊಡುವುದಿಲ್ಲವೆಂದರೆ?''

''ಅದರಿಂದ ನಿನಗೇನೂ ಪ್ರಯೋಜನ ವಾಗದು.''

''ಪ್ರಯೋಜನವಾಗದೇ? ಆ ರೀತಿ ಭಾವಿಸುವುದು ನಿನ್ನ ಮೂರ್ಖತನವೆಂದೇ ಹೇಳ ಬೇಕಾಗುವುದು.''

''ನಿನಗೇನು ಅನುಕೂಲವಿದೆ?''

''ಅನುಕೂಲವೇ? ಬೇಕಾದಷ್ಟು ಅನು ಕೂಲವಿದೆ ಲಾಭವಿದೆ.''

''ಆ ಪತ್ರ, ಫೋಟೋಗಳಿಂದ ನನ್ನ ಮದುವೆಗೆ ತಡೆ ಹಾಕಬಹುದೆಂದು ಯೋಚಿ ಸಿದ್ದೀಯಲ್ಲವೇ?''

''ಅಷ್ಟು ಮಾತ್ರವೇನು? ನಿನ್ನ ಮರ್ಯಾದೆ ಯನ್ನು ಬೀದಿಪಾಲು ಮಾಡಿ ತಲೆಯೆತ್ತಿ ತಿರುಗ ದಂತೆ ಮಾಡುತ್ತೇನೆ.''

ನಳಿನಿಯು ಚಳಿ ಹಿಡಿದವರಂತೆ ನಡುಗಿ ದಳು. ಇವನನ್ನು ನಂಬಿ ನಾನು ಮಹಾಪರಾಧ ಮಾಡಿದೆನೆಂದು ತನ್ನನ್ನು ತಾನೇ ನಿಂದಿಸಿ ಕೊಂಡಳು.

ತಂದೆತಾಯಿಯ ಬಳಿ ಹೇಳಲು ಮನಸ್ಸಿಲ್ಲ. ಹೇಳಿದ್ದೇ ಆದರೆ ಅವಳಿಗೆ ದಂಡಿಸದೆ ಇದ್ದರೂ ಮಗಳ ಹೀನಕೃತ್ಯಕ್ಕೆ ನೊಂದು ಕಣ್ಣೀರು ಹಾಕುವರು.

ಪೊಲೀಸಿಗೆ ದೂರಿತ್ತರೆ ವಿಷಯವು ರಹಸ್ಯವಾಗಿ ಉಳಿಯದೆ ಬಹಿರಂಗವಾಗಿ ಭಾವಿಪತಿಯ ಮನೆಯವರಿಗೆ ತಿಳಿದು ಇವಳೊಬ್ಬ ಕಲಂಕಿಣಿಯೆಂದು ತಿರಸ್ಕರಿಸುವರು. ಆ ರೀತಿ ನಡೆದದ್ದೇ ಆದರೆ ನಳಿನಿಯನ್ನು ಮದುವೆಯಾಗಲು ಯಾವ ಗಂಡೂ ಬರುವುದಿಲ್ಲ.

ತಂದೆತಾಯಿಯು ಮಗಳ ಬಾಳು ಹೀಗಾಯಿತೆಂದು ಆ ಕೊರಗಿನಲ್ಲಿಯೇ ಸಾಯುವರು.

ನಾನಾಬಗೆಯ ಯೋಚನೆಗಳಲ್ಲಿ ಮುಳುಗಿದ ನಳಿನಿಗೆ ಮುಂದೇನು ಮಾಡಬೇಕೆಂದೇ ಆಗ ತೋಚದಂತಾಯಿತು.

ದೇವರೇ ಈ ಗಂಡಾಂತರದಿಂದ ನನ್ನನ್ನು ಪಾರು ಮಾಡೆಂದು ಭಗವಂತನಲ್ಲಿ ಮೊರೆಯಿಟ್ಟು ಪ್ರಾರ್ಥಿಸಿದಳು.

3

ಫೋಟೋ ಮತ್ತು ಪತ್ರಗಳನ್ನು ಹಿಂದಿರುಗಿಸುವಂತೆ ನಳಿನಿಯು ಪರಿಪರಿಯಾಗಿ ಬೇಡಿಕೊಂಡರೂ ಕಲ್ಲು ಹೃದಯದ ಗಂಗಾಧರನ ಮನಸ್ಸು ಕರಗಲಿಲ್ಲ.

''ನಿನಗೆ ಫೋಟೋ, ಪತ್ರಗಳು ಬೇಕೆಂದರೆ ನಾನು ಹೇಳಿದಂತೆ ಕೇಳಬೇಕು.''

ಗಂಗಾಧರನು ಗಡಸು ಧ್ವನಿಯಲ್ಲಿ ಹೇಳಲು ನಳಿನಿಯು ಕ್ಷೀಣ ಸ್ವರದಲ್ಲಿ ಅದೇನು ಮಾತೆಂದು ಕೇಳಿದಳು.

''ಈಗ ನಿನ್ನ ಮೈ ನನಗೆ ಒಪ್ಪಿಸಬೇಕು. ಮದುವೆಯಾದ ನಂತರ ನಾನು ನಿನ್ನನ್ನು ಬಯಸಿ ಯಾವಾಗ ಬಂದರೂ ನನಗಾಗಿ ಹಾಸಿಗೆ ಹಾಸಬೇಕು. ಅದಕ್ಕೆ ತಯಾರಿರುವುದಾದರೇ ಹೇಳು.''


ತನ್ನ ಷರತ್ತನ್ನು ನಳಿನಿಯ ಮುಂದಿರಿಸಿದ ಗಂಗಾಧರ.

ನಳಿನಿಯು ಭೀತಿಯಿಂದ ಕಂಪಿಸಿದಳು.

ಗಂಗಾಧರನ ಮಾತಿನಂತೆ ನಡೆದುಕೊಳ್ಳಲು ಅವಳ ಮನವೊಪ್ಪಲಿಲ್ಲ.

ಕಳ್ಳತನ, ಹಾದರವು ಯಾವ ಕಾಲಕ್ಕೂ ರಹಸ್ಯವಾಗಿ ಉಳಿಯದೆ ಯಾವುದೋ ಕೆಟ್ಟ ಗಳಿಗೆಯಲ್ಲಿ ಬಯಲಾಗಿ ಮರ್ಯಾದೆಗೆ ಮಸಿ ಬಳಿಯುವುದು.

''ಅದು ನನ್ನಿಂದಾಗದ ಕೆಲಸ. ಗಂಗಾಧರ, ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನಾನು ಈವರೆವಿಗೆ ಕಲಂಕಿಣಿಯಾಗಿಲ್ಲ. ಆ ಬಿರುದು ಹೊತ್ತು ಬಾಳಲೂ ನಾನು ಇಷ್ಟಪಡುವುದಿಲ್ಲ. ನನ್ನನ್ನು ನಿನ್ನ ತಂಗಿಯೆಂದು ಭಾವಿಸಿ ಪತ್ರ,



ಫೋಟೋಗಳನ್ನು ವಾಪಾಸು ಕೊಡು. ಈ ನಿನ್ನ ಉಪಕಾರವನ್ನು ನನ್ನ ಜೀವಾವಧಿ ಮರೆಯುವುದಿಲ್ಲ. ನೀನೇ ನನ್ನ ಬೆಳಕಿನ ದಾರಿದೀಪವೆಂದು ನಂಬಿ ಬಾಳಿಕೊಂಡಿರುತ್ತೇನೆ.''

ಗಹಗಹಿಸಿ ನಕ್ಕ ಗಂಗಾಧರನು–

''ನಾನು ನಿನಗೆ ದಾರಿದೀಪವಾಗಬೇಕೇ? ಆ ರೀತಿ ಆಗಬೇಕೆಂದರೆ ನೀನು ಮೊದಲು ನನ್ನವಳಾಗಬೇಕು. ನಾನೊಂದು ಬಾರಿ ಹೇಳಿದ ಮೇಲೆ ಮುಗಿಯಿತು. ಬದಲಾವಣೆಯ ಮಾತೇ ಇಲ್ಲ'' ಎಂದು ನುಡಿದ.

''ನಾನು ನಿನ್ನ ಒಡಹುಟ್ಟಿದ ತಂಗಿಯೇ ಆಗಿದ್ದರೆ ಈ ಮಾತು ಹೇಳುತ್ತಿದ್ದೆಯಾ?''

''ಸುಮ್ನೆ ಏನೇನೋ ಹೇಳಿ ನನ್ನ ಮನಸ್ಸು ಕೆಡಿಸಬೇಡ.''

''ಮಾನ ಒಪ್ಪಿಸೋದು ಬಿಟ್ಟು ಬೇರೆ ದಾರಿಯೇ ಇಲ್ಲವೇ?''

''ಬೇರೆ ದಾರಿಯೇ? ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟರೆ ಪತ್ರ, ಫೋಟೋಗಳನ್ನು ವಾಪಾಸ್ ಕೊಡುತ್ತೇನೆ.''

''ಇಪ್ಪತ್ತೈದು ಸಾವಿರ ರೂಪಾಯಿಯೇ?'' ಎಂದು ಕೇಳಿದಳು.



''ಹೌದು, ಇಪ್ಪತ್ತೈದು ಸಾವಿರ ರೂಪಾಯಿ. ಐವತ್ತಲ್ಲ, ಲಕ್ಷವಲ್ಲ. ನಿನ್ನ ಮಾನ ಉಳಿಸಿಕೊಳ್ಳಬೇಕೆಂಬ ಇಚ್ಛೆಯಿದ್ದರೆ ಆ ಕೆಲಸ ಮಾಡು. ನಾಳೆಯೇ ತಂದುಕೊಟ್ಟು ಫೋಟೋ, ಪತ್ರಗಳನ್ನು ತೆಗೆದುಕೊಂಡು ಹೋಗು.''

''ಆಮೇಲೆ ನನ್ನ ತಂಟೆಗೆ ಬರುವುದಿಲ್ಲವೆಂಬ ನಂಬಿಕೆಯೇನಿದೆ?''

''ಅಂತಹ ಅನುಮಾನವಿದ್ದರೆ ನೀನು ನನ್ನವಳಾಗು.''

''ಸತಿಸೂಳೆಯಾಗಿ ಬಾಳಲು ನಾನು ಇಷ್ಟಪಡುವುದಿಲ್ಲ.''

''ಗರತಿಯಾಗಿ ಬಾಳಬೇಕೆಂಬ ಮನಸ್ಸಿದ್ದರೆ ನನ್ನನ್ನೇ ಮದುವೆಯಾಗು. ಯಾವ ತರಹದ ತೊಂದರೆಯೂ ಇರುವುದಿಲ್ಲ. ನೆಮ್ಮದಿಯಾಗಿ ಬಾಳಿಕೊಂಡಿರಬಹುದು.''

''ನಿನ್ನನ್ನು ನಂಬಿದರೆ ನನ್ನ ಬಾಳು ಕನಕ, ಸರಳೆಗಿಂತ ಹೀನಾಯವಾಗುವುದು.''

''ಅವರಿಬ್ಬರ ಇತಿಹಾಸವೂ ನಿನಗೆ ತಿಳಿದಿರುವುದೇ? ಪರವಾಗಿಲ್ಲ, ನೀನು ಮಹಾ ಬುದ್ಧಿವಂತಳಾಗಿಯೇ ಇದ್ದೀಯ. ನಳಿನಿ, ಕೊನೆಯದಾಗಿ ಹೇಳುತ್ತೇನೆ ಕೇಳು. ನೀನು ನನ್ನವಳಾಗಬೇಕು. ಆಗುವುದಿಲ್ಲವೆಂದು ಹೇಳುವುದಾದರೆ ಇಪ್ಪತ್ತೈದು ಸಾವಿರ ರೂಪಾಯಿ ಕೊಡಬೇಕು. ಎರಡರಲ್ಲಿ ಒಂದಾಗಬೇಕಲ್ಲದೆ ಬೇರೆ ದಾರಿಯೇ ಇಲ್ಲ. ಒಂದು ವಾರ ಅವಧಿ ಕೊಡುತ್ತೇನೆ. ಅಷ್ಟರಲ್ಲಿ ಅದೇನಿದ್ದರೂ ಇತ್ಯರ್ಥ ಆಗಬೇಕು. ನೀನು ನನ್ನವಳಾಗದೆ, ಹಣವೂ ಬಾರದೆ ಹೋದರೆ ಮುಂದೇನು ಮಾಡಬೇಕೆಂದು ನನಗೆ ತಿಳಿದಿದೆ. ಇದೇ ನನ್ನ ಅಂತಿಮ ತೀರ್ಮಾನ.''

ಕರ್ಣ ಕಠೋರವಾಗಿ ನುಡಿದ ಗಂಗಾಧರನು ಅಲ್ಲಿ ನಿಲ್ಲದೆ ಹೊರಟು ಹೋದ.

ನಳಿನಿಗೆ ದಿಕ್ಕು ತೋಚದಂತಾಯಿತು.

ಈ ಗಂಡಾಂತರ ಸಮಸ್ಯೆಯಿಂದ ಹೇಗೆ ಪಾರಾಗಬೇಕೆಂದು ಆಗ ಅವಳಿಗೆ ತೋಚದೆ ಹೋಯಿತು.

ಫೋಟೋ, ಪತ್ರಗಳು ಗಂಗಾಧರನ ಬಳಿ ಇರುವಾಗ ಪ್ರದೀಪನನ್ನು ಮದುವೆಯಾಗುವ ಹಾಗಿಲ್ಲ.

ಪ್ರದೀಪನ ಮನೆಯವರಿಗೆ ವಿಷಯ ತಿಳಿದರೆ ನಳಿನಿಯನ್ನು ತಿರಸ್ಕರಿಸುವುದರಲ್ಲಿ ಸಂದೇಹವೇ ಇಲ್ಲ.

ಗೌರವಸ್ಥ ಮನೆತನದವರು ಕಲಂಕಿಣಿ ಎನಿಸಿಕೊಂಡ ಕನ್ಯೆಯನ್ನು ಸೊಸೆಯಾಗಿ ಸ್ವೀಕರಿಸಲೊಪ್ಪುವರೇ?

ನಳಿನಿಗೆ ಊಟೋಪಚಾರವೇ ಬೇಡವಾಯಿತು. ಕಾಲೇಜಿಗೆ ಹೋಗಲೂ ಮನಸ್ಸಿಲ್ಲ.

ಎರಡು ದಿನಗಳು ಚಿಂತೆಯಲ್ಲಿಯೇ ಕಳೆದು ಹೋಯಿತು.

ತನ್ನ ಗೆಳತಿಯರ ಮುಂದೆ ತನ್ನ ಬಾಳು ನಗೆಪಾಟಲಾಗಿ ಹೋಗುವುದೇ ಎಂದು ಗೆಳತಿಯರ ಚಿತ್ರಪಟಗಳನ್ನು ಚಿತ್ರಫಲಕದ ಮುಂದೆ ತಂದುಕೊಂಡು ಯೋಚನೆಗೀಡಾಗಿರಲು ಮಂಜುಳೆಯ ಬಾಳಿನ ಚಿತ್ರವು ಕಣ್ಣುಗಳ ಮುಂದೆ ಗೋಚರಿಸಲು ಆಕೆಯನ್ನು ಆಶ್ರಯಿಸಿದರೆ ತನ್ನ ಕಾರ್ಯ ಸುಗಮವಾಗಿ ನೆರವೇರುವುದೆಂಬ ನಂಬಿಕೆ ಮೂಡಿತು.

ಭೈರವನು ಮಹಾರೌಡಿಯಾಗಿದ್ದಾನೆ. ಅವನನ್ನು ಕಂಡರೆ ಬಹುಜನರು ಭಯಪಡುವರು. ಮಂಜುಳೆಯ ಬಳಿ ನನ್ನ ಪರಿಸ್ಥಿತಿಯನ್ನು ಹೇಳಿಕೊಂಡರೆ ಆಕೆಯು ನನ್ನ ಮೇಲೆ ಕನಿಕರ ತೋರಿ ಗಂಡನ ಬಳಿ ನನ್ನ ವಿಷಯ ಹೇಳಿದರೆ, ಆತನು ಗಂಗಾಧರನನ್ನು ಕಂಡು ಬೆದರಿಸಿದರೆ ಅವನು ಫೋಟೋ, ಪ್ರೇಮಪತ್ರಗಳನ್ನು ಕೊಡದಿರುವುದಿಲ್ಲ. ಈ ಸಮಯದಲ್ಲಿ ಮಂಜುಳೆಯೇ ನನಗೆ ದಿಕ್ಕು. ಬೇರೆ ಯಾರನ್ನು ಆಶ್ರಯಿಸಿದರೂ ಪ್ರಯೋಜನವಾಗದು ಎಂದು ತನ್ನಲ್ಲಿಯೇ ಅಂತಿಮ ನಿರ್ಣಯಕ್ಕೆ ಬಂದು ಮಂಜುಳೆಯನ್ನು ಕಾಣಲು ಹೊರಟಳು.

ತನ್ನ ಪ್ರೇಮಲೀಲೆಯ ಪೂರ್ಣ ಇತಿಹಾಸವನ್ನು ಚಾಚೂ ತಪ್ಪದಂತೆ ಹೇಳಿ ಮುಗಿಸಿದ ನಳಿನಿಯು ನಿನ್ನನ್ನೇ ನಂಬಿ ಬಂದಿರುವ ನನಗೆ ರಕ್ಷಣೆ ನೀಡಿ ಮಾನ ಉಳಿಸಬೇಕೆಂದು ಬೇಡಿಕೊಂಡಳು.

''ನಿನ್ನ ಕಥೆ ತುಂಬಾ ಸೊಗಸಾಗಿದೆ. ಸಿನಿಮಾ ಚಿತ್ರ ತೆಗೆಯಬಹುದು. ಆದರೊಂದು ಮಾತು, ನಿನಗೆ ನನ್ನಿಂದ ಯಾವ ಸಹಾಯವೂ ದೊರೆಯದು.''

ನಳಿನಿಯ ಕಥೆ ಕೇಳಿ ಆಕೆಯ ಬಗ್ಗೆ ಕನಿಕರವುಂಟಾದರೂ, ಅವಳ ಮುಖದ ಮೇಲೆ ಹೊಡೆದ ಹಾಗೆ, ಕಡ್ಡಿ ಮುರಿದ ಹಾಗೆ ಹೇಳಿದಳು ಮಂಜುಳ.

ಅಪ್ರತಿಭಳಾದ ನಳಿನಿಗೆ ಸಿಡಿಲು ಬಡಿದಂತಾಯಿತು. ಕಣ್ಣುಗಳಿಂದ ನೀರಿನ ಹನಿಗಳು ಮುತ್ತುಗಳಂತೆ ಉದುರಿದುವು.

''ಮಂಜುಳಾ, ನನ್ನ ಮೇಲೆ ಹಗೆತನ ಸಾಧಿಸುವೆಯಾ?''

ಕಣ್ಣೀರು ಸುರಿಸುತ್ತಲೇ ಜೀವಸತ್ತ ಧ್ವನಿಯಲ್ಲಿ ಮಾತನಾಡಿದಳು ನಳಿನಿ.

''ಛೇ! ನಿನ್ನ ಮೇಲೆ ದ್ವೇಷ ಸಾಧಿಸುವುದುಂಟೇ? ಮುಯ್ಯಿಗೆ ಮುಯ್ಯಿ ಅಷ್ಟೆ.''

ಉದಾಸೀನ ಭಾವದಿಂದ ನುಡಿದಳು ಮಂಜುಳ.

''ನಾನು ನಿನಗೆ ಮಾಡಿದ ಅಪರಾಧವಾದರೂ ಏನು?''

''ಅಪರಾಧವೇನೂ ಮಾಡಿಲ್ಲ. ಮಹದುಪಕಾರ ಮಾಡಿರುವೆ. ನಿನ್ನ ಮನೆ ಬಾಗಿಲಿಗೆ ಬಂದಾಗ ಪ್ರೀತಿವಾತ್ಸಲ್ಯದಿಂದ ಒಂದೇ ಒಂದು ಮಾತನಾಡಿದೆಯಾ? ಕುಳಿತುಕೊ ಎಂದು ಹೇಳಲೂ ನಿನಗೆ ಬಾಯಿ ಬಾರದಂತಾಯಿತು. ನಿನ್ನಮ್ಮನು ನಿನ್ನನ್ನು ಒಳಗೆ ಕರೆದು ಈ ಸೂಳೆಮುಂಡೆಯೊಡನೆ ನಿನಗೇನು ಮಾತು? ಒಂದು ತೊಟ್ಟು ನೀರೂ ಸಹ ಕೊಡಬೇಡ ಎಂದು ಹೇಳಿದ್ದನ್ನು ನಾನು ಕೇಳಲಿಲ್ಲವೆಂದುಕೊಂಡೆಯಾ? ನಾನು ನನ್ನ ಗೆಳತಿಯೆಂದು ನಿನ್ನ ಮನೆಗೆ ಬಂದೆನಲ್ಲದೆ ಬೇರೆ ಯಾವ ತರಹದ ಸಹಾಯವನ್ನೂ ಅಪೇಕ್ಷಿಸಿ ಬರಲಿಲ್ಲ. ನಿಮ್ಮೆಲ್ಲರ ಪಾಲಿಗೆ ನಾನು ಸೂಳೆಮುಂಡೆಯಾದೆ. ಆಗ ನಾಲ್ಕು ಪ್ರೀತಿಯ ಮಾತಾಡಿದರೆ ಸಾಕಾಗಿತ್ತು. ಇಂದು ನನ್ನ ಜೀವವನ್ನು ಪಣವಾಗಿಟ್ಟು ನಿನ್ನನ್ನು

ಉಳಿಸುತ್ತಿದ್ದೆ. ನೀನು ಮಾತ್ರವಲ್ಲ, ನಿನ್ನ ಸಹಪಾಠಿಗಳೆಲ್ಲರೂ ನನ್ನನ್ನು ತುಚ್ಛವಾಗಿ ಕಂಡರು. ನಾಯಿಯನ್ನು ಹೊರಗಟ್ಟುವಂತೆ ಅಟ್ಟಿದರು. ನನ್ನ ಗಂಡ ರೌಡಿಯಿರಬಹುದು. ನಿಮಗೆಲ್ಲಾ ಏನಾದರೂ ತೊಂದರೆ ಕೊಟ್ಟು ಕಾಡಿದ್ದರೇ? ಅವರು ಜೈಲಿಗೆ ಹೋಗಿ ಬಂದಿರಬಹುದು. ಆದರೂ ನನ್ನ ಭಾಗದ ಪ್ರತ್ಯಕ್ಷ ದೇವರಾಗಿದ್ದಾರೆ. ನನ್ನ ಪೂರ್ವಜನ್ಮದ ಪುಣ್ಯಫಲದಿಂದ ಈ ಜನ್ಮದಲ್ಲಿ ಅವರನ್ನು ಗಂಡನನ್ನಾಗಿ ಪಡೆದಿದ್ದೇನೆ. ಮುಂದಿನ ಜನ್ಮಗಳಲ್ಲಿ ಅವರೇ ನನ್ನ ಗಂಡನಾಗಿ ಬರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಗಂಗಾಧರನು ಮಹಾ ಉತ್ತಮ ಗುಣವುಳ್ಳವನೆಂದು ಅವನನ್ನು ಪ್ರೀತಿಸಿದೆ. ಮದುವೆಗೆ ಮೊದಲೇ ಅವನ ಯೋಗ್ಯತೆಯೇನೆಂದು ನಿನಗೆ ತಿಳಿಯಿತು. ಅವನು ನಿನ್ನ ಭಾಗದ ಮೃತ್ಯು ಸ್ವರೂಪನಾಗಿದ್ದಾನೆ. ನನ್ನ ಯಜಮಾನರು ರೌಡಿಯಾಗಿರಬಹುದಾದರೂ ಹೃದಯವು ಹಸುಗೂಸಿನಂತಿದೆ. ಗಂಗಾಧರನನ್ನೇ ಕಟ್ಟಿಕೊಂಡಿರು ಹೋಗು.''

ಹರಳುಗಳು ಸಿಡಿಯುವಂತೆ ಫಟಫಟನೆಂದು ನುಡಿದ ಮಂಜುಳೆಯು ಹಿಂದಿನ ತನ್ನ ಸೇಡು ತೀರಿಸಿಕೊಂಡಳು.

''ನಾನು ನಿನ್ನ ಮೇಲೆ ನಂಬಿಕೆಯಿಟ್ಟು ಬಂದುದಕ್ಕೆ ಮರ್ಯಾದೆ ಸಿಕ್ಕಿತು. ತುಂಬಾ ಸಂತೋಷ. ಸಾಕು, ನಿನ್ನ ಗಂಡನ ಪೌರುಷ ಕೇಳಲು ನಾನು ಬರಲಿಲ್ಲ. ನಿನ್ನೊಡನೆ ನನಗೇನು ಮಾತು.''

ನೊಂದು ನುಡಿದ ನಳಿನಿಯು ಅಲ್ಲಿಂದ ಹೊರಡಲನುವಾದಳು.

ಮಂಜುಳೆಯು ಈ ರೀತಿ ತನ್ನ ಮಾನ ಕಳೆಯುವಳೆಂದು ಊಹಿಸಿಯೇ ಇರಲಿಲ್ಲ.

''ನಿನ್ನ ಮುಖ ನೋಡಲೂ ಅಸಹ್ಯವಾಗುತ್ತೆ. ಮೊದಲು ಇಲ್ಲಿಂದ ಹೊರಡು. ನನ್ನ ಕಣ್ಣೆದುರಿಗಿರಬೇಡ.''

ಪ್ರತಿಯಾಡದ ನಳಿನಿಯು ಹಿಂದಿರುಗಿ ಬಾಗಿಲ ಹತ್ತಿರ ಬರುವ ವೇಳೆಗೆ ಸರಿಯಾಗಿ ಹೊರಗಡೆಯಿಂದ ಬಂದ ಭೈರವನು ನಳಿನಿಯ ಮುಖ ನೋಡಿದರೂ ಏನೊಂದೂ ಮಾತನಾಡದೆ ಮೌನವಾಗಿ ಒಳಗೆ ಅಡಿಯಿರಿಸಿದ.

ಮಂಜುಳೆಯು ನಿಂತೇ ಇದ್ದಾಳೆ.

''ಮಂಜುಳಾ! ಯಾರಾಕೆ? ಅಳುತ್ತಾ ಹೊರಟಿದ್ದಳಲ್ಲ? ಇಲ್ಲಿಗೇಕೆ ಬಂದಿದ್ದಳು?''

ವಿಷಯ ಅರಿಯುವ ಕುತೂಹಲವುಳ್ಳವನಾಗಿ ಕೇಳಿದ ಭೈರವ.

ಅದೊಂದು ಪೀಡೆ ಎಂದು ಮಂಜುಳೆಯು ಆಕೆ ಮನೆಯೊಳಗೆ ಬಂದಲಾಗಾಯ್ತು ಹಿಂದಿರುಗುವವರೆವಿಗೆ ನಡೆದುದನ್ನು ಹೇಳಿದಳು.

''ಎಂತಹ ತಪ್ಪು ಮಾಡಿದೆ ಮಂಜುಳಾ, ನಿನ್ನ ಸಹಾಯ ಬಯಸಿ ಮನೆ ಬಾಗಿಲಿಗೆ ಬಂದವರಿಗೆ ಹಾಗೆ ಗದರಿ ಕಳುಹಿಸುವುದೇ? ನಾಲ್ಕು ಸಾಂತ್ವನದ ಮಾತನಾಡಿ ನಾನು ಬರುವವರೆವಿಗೆ ಕೂರಿಸಿಕೊಂಡಿರಬಾರದಿತ್ತೇ?''

''ಮಹಾರಾಣಿ ಬಂದಳೆಂದು ಸಿಂಹಾಸನದ ಮೇಲೆ ಕೂರಿಸಿ ಉಪಚಾರ ಮಾಡಬೇಕಿತ್ತೇ? ನಾನು ಮಾಡಿದ್ದೇ ಸರಿ, ನೀವು ಸುಮ್ಮನಿರಿ.''

ಈಗ ತಾನೇನು ಮಾತನಾಡಿದರೂ ಇವಳ ಕಿವಿಗಳನ್ನು ಸೋಂಕುವುದಿಲ್ಲವೆಂದುಕೊಂಡ ಭೈರವನು ಮಾತು ಬೆಳೆಯಿಸಲು ಇಷ್ಟಪಡಲಿಲ್ಲ.


4



ಖ್ಯಾತ ಪತ್ತೇದಾರ ಗಾಳಿರಾಯನು ಅಪರಿಚಿತ ವ್ಯಕ್ತಿಯಿಂದ ಬಂದ ಪತ್ರವನ್ನು ಓದಿ ಮುಗಿಸುತ್ತಿದ್ದ ಹಾಗೆ ಆತನ ಗೆಳೆಯ ಬಾಲಚಂದ್ರನು ಆಗಮಿಸಿ, ತುಂಬಾ ಆಸಕ್ತಿವಹಿಸಿ ಪತ್ರ ಓದುತ್ತಾ ಇರುವ ಹಾಗಿದೆಯಲ್ಲ ಎಂದು ಕೇಳಿ ಆತನ ಎದುರು ಕುರ್ಚಿಯ ಮೇಲೆ ಕುಳಿತ.

''ಗಹನ ವಿಚಾರವಾಗಿ ಬಂದಿದೆ.''

ಪತ್ರವನ್ನು ಮೇಜಿನ ಮೇಲಿಟ್ಟು ಬಾಲ



ಎನ್. ನರಸಿಂಹಯ್ಯನವರ ರೋಚಕ ಶೀರ್ಷಿಕೆಗಳು

ವಿಚಿತ್ರ ವಿಲಾಸಿನಿ
ಮಾಯಾಂಗನೆಯ ಮರ್ಮ
ವಿಲಕ್ಷಣ ವಾರಾಂಗನೆ
ಪ್ರಣಯ ಪುಂಡಾಟ
ಎಂಟು ಕೊಲೆಯ ಭಂಟ
ರಾಗಿಣಿಯ ರಂಗಾಟ
ಅನುರಾಗದ ಅಂಬುಜ
ಪ್ರೇತವನದ ಪುಷ್ಪ
ಮಾರ್ಜಾಲ ಮಾಯ
ಕಣ್ಣಿಲ್ಲದ ಕೊಲೆಗಾರ
ಹೆಣ್ಣು ಹುಲಿಯ ಹಸಿವು
ಗುಟ್ಟಿನ ಗುಲಾಮ
ರೂಪವಿಲ್ಲದ ಭೂಪ
ಅದೃಶ್ಯಳಾದ ಅರ್ಧಾಂಗಿ

ಚಂದ್ರನ ಮುಖ ನೋಡುತ್ತಾ ಹೇಳಿದ ಗಾಳಿರಾಯ.

''ವಿಷಯವೇನೆಂದು ತಿಳಿಯಬಹುದೇ?''

''ಗಂಡಾಂತರ ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿ ಬಿಡುಗಡೆಯ ಮಾರ್ಗ ತೋಚದೆ ನಿವಾರಣೆಯ ಮಾರ್ಗವನ್ನು ಬಯಸಿ ತರುಣಿಯೋರ್ವಳು ಪತ್ರ ಬರೆದಿದ್ದಾಳೆ.''

''ವಿಷಯವೇನೆಂದು ಬರೆದಿಲ್ಲವೇ?''

''ಇಲ್ಲಾ! ಪತ್ರ ಬರೆದವಳು ಬಾರದೆ ತನ್ನ ಆತ್ಮೀಯ ಗೆಳತಿಯನ್ನು ಕಳುಹಿಸುವೆನೆಂದು ಆಕೆಯು ಎಲ್ಲಾ ಸಂಗತಿಯನ್ನೂ ತಿಳಿಸುವಳೆಂದು ಬರೆದಿದ್ದಾಳೆ.''

''ನೇರವಾಗಿ ನಿಮ್ಮಲ್ಲಿಗೆ ಬಂದು ಮಾತನಾಡಲು ಆಕೆಗೆ ಸಂಕೋಚವೆಂದು ತೋರುತ್ತೆ. ತನ್ನ ಹೆಸರನ್ನಾದರೂ ತಿಳಿಸಿದ್ದಾಳೋ ಅಥವಾ ಅದೂ ಇಲ್ಲವೋ?''

''ಹೆಸರು ತಿಳಿಸಿಲ್ಲ. ಪ್ರತಿಯೊಂದು ವಿಚಾರವನ್ನೂ ಅವಳ ಗೆಳತಿಯ ಮೂಲಕವೇ ಕೇಳಿ ತಿಳಿಯಬೇಕಂತೆ.''

''ಬಹು ಸೂಕ್ಷ್ಮ ವಿಚಾರವಾಗಿದೆಯೆಂದು ತೋರುತ್ತೆ.''

''ಹೌದು, ನನ್ನ ಗೆಳತಿ ಬರುವ ಸಮಯದಲ್ಲಿ ಆಫೀಸಿನಲ್ಲಿ ನಿಮ್ಮ ವಿನಃ ಬೇರೆ ಯಾರೂ ಇರಬಾರದೆಂದು, ದಯವಿಟ್ಟು ನನ್ನ ಈ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕೆಂದು ಬರೆದು ವಿನಂತಿ ಮಾಡಿಕೊಂಡಿದ್ದಾಳೆ.''

''ಯಾವಾಗ ಬರುತ್ತಾಳೆ ಅವಳ ಗೆಳತಿ?''

''ಇನ್ನು ಹದಿನೈದು ನಿಮಿಷಗಳಲ್ಲಿ ಬರುವವಳಿದ್ದಾಳೆ.''

ಕೈ ಗಡಿಯಾರದಲ್ಲಿ ವೇಳೆ ನೋಡಿ ಹೇಳಿದ ಗಾಳಿರಾಯ.

ಹಾಗಿದ್ದ ಮೇಲೆ ನಾನೂ ಸಹ ಇಲ್ಲಿರ ಬಾರದಲ್ಲವೇ?''

''ನೀವು ಮಾತ್ರ ಇಲ್ಲಿ ಇರಲೇಬೇಕು. ನಿಮ್ಮನ್ನು ಬಿಟ್ಟು ನಾನು ಬೇರೆ ಯಾವ ಪತ್ತೇದಾರಿಕೆ ನಡೆಯಿಸಿದ್ದೇನೆ. ಹಿಂದಿನ ಪತ್ತೇದಾರಿಕೆಗಳಲ್ಲಿ ನೀವಿದ್ದಿರಿ. ಮುಂದೆಯೂ ಇರಲೇಬೇಕು.''

''ನಾನು ಇಲ್ಲಿದ್ದರೆ ಬಂದವಳು ನಿಮ್ಮ ಬಳಿ ವಿಷಯ ಹೇಳಲು ಹಿಂದೇಟು ಹಾಕಬಹುದು.''

''ಅದೆಲ್ಲಾ ನನ್ನ ವಿಷಯವಿರಲಿ, ಈ ಪತ್ರ ಬರೆದಿರುವವಳ ಬಗ್ಗೆ ಏನು ಹೇಳುತ್ತೀರಾ?''

ಗಾಳಿರಾಯನ ನೈಪುಣ್ಯತೆ ಅರಿಯುವ ಉದ್ದೇಶವುಳ್ಳವನಾದ ಬಾಲಚಂದ್ರನು ತನ್ನ ಮನದಭಿಪ್ರಾಯವನ್ನು ಹೊರಗೆಡಹಿದ.

''ಈ ಪತ್ರ ಬರೆದಿರುವ ತರುಣಿಯು ವಿಷಮ ಸಂಕಟಕ್ಕೆ ಒಳಗಾಗಿರುವುದೇನೋ ನಿಜ. ಆದರೆ ಅವಳು ತನ್ನ ಗೆಳತಿಯನ್ನು ಕಳುಹಿಸದೆ ತಾನೇ ಖುದ್ದಾಗಿ ಬರುತ್ತಾಳೆ.''

ಸೋಜಿಗಗೊಂಡ ಬಾಲಚಂದ್ರನು –

''ಅದ್ದೇಗೆ ಹೇಳುತ್ತೀರಾ?'' ಎಂದು ಕೇಳಿದ.

''ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡವರು ತಮ್ಮ ರಹಸ್ಯವನ್ನು ಸಾಮಾನ್ಯವಾಗಿ ಬೇರೆ ಯಾರಲ್ಲಿಯೂ ಹೇಳಿಕೊಳ್ಳುವುದಿಲ್ಲ. ಮರ್ಮ ಬಯಲಾದರೆ ತಾವು ತಲೆಯೆತ್ತಿ ತಿರುಗದಂತಾಗುವುದೆಂದು ಭಾವಿಸಿ ತಮ್ಮಲ್ಲಿಯೇ ಅಡಗಿಸಿಟ್ಟುಕೊಳ್ಳುವರು.''

''ಹಾಗಾದರೀಕೆ ತಾನೇ ಖುದ್ದಾಗಿ ಬಂದರೂ, ತನ್ನ ಹೆಸರು ಹೇಳದೆ ಗೆಳತಿಯ ಹೆಸರು ಹೇಳಿ ನಿಮ್ಮನ್ನೂ ವಂಚಿಸುವ ತಂತ್ರ ಹೂಡಿರುವಳೆಂದು ಹೇಳುವಿರಾ?''

''ಆಕೆಯ ಭಾವನೆ ಆ ರೀತಿ ಇದೆ. ಗೆಳತಿಯ ಹೆಸರು ಮುಂದೆ ಮಾಡಿ ತನ್ನ ಪರಿಸ್ಥಿತಿಯನ್ನೆಲ್ಲಾ ಹೇಳಿಕೊಳ್ಳುವಳು.''

''ನೀವು ಹೇಗೆ ಬಯಲು ಮಾಡುತ್ತೀರ?''

''ನೀವೇ ನೋಡುವಿರಂತೆ''

ಗಾಳಿರಾಯನು ವೇಳೆ ನೋಡಿ, ಆಕೆ ಬರುವ ವೇಳೆಯಾಯಿತು. ನಾವೀಗ ಮೌನವಾಗಿರುವುದು ಉತ್ತಮವೆನ್ನಲು ಬಾಲಚಂದ್ರನು ಮೌನವಾಗಿ ತಲೆಯಾಡಿಸಿದ.

ಕೆಲ ನಿಮಿಷಗಳಲ್ಲಿಯೇ ಆಗಮನಸೂಚಕ ಬೆಲ್ಲಿನ ಶಬ್ದವಾಗಲು ಗಾಳಿರಾಯನ ಅನುಮತಿಯಂತೆ ಸೇವಕನು ಬಾಗಿಲು ತೆಗೆದು, ಹೊರಗೆ ಕಾದು ನಿಂತಿದ್ದ ಸುಂದರ ತರುಣಿಯನ್ನು ಪತ್ತೇದಾರನ ಬಳಿಗೆ ಕರೆತಂದು ತನ್ನ ಕೆಲಸದ ಮೇಲೆ ಹಿಂದಿರುಗಿದ.

ಇಬ್ಬರೂ ತರುಣಿಯ ಮುಖ ನೋಡಿದರು. ಸೌಂದರ್ಯವತಿಯಾಗಿದ್ದರೂ ಮುಖದಲ್ಲಿ ಕಳೆಯಿಲ್ಲ. ಗುಲಾಬಿ ಬಣ್ಣದ ಮೈಸೂರು ಸಿಲ್ಕ್ ಸೀರೆಯುಟ್ಟಿದ್ದಾಳೆ. ತಲೆ ಬಾಚಿಕೊಂಡಿದ್ದರೂ ಹೂ ಮುಡಿದಿಲ್ಲ.

ಗಾಳಿರಾಯನು ಆಕೆಯನ್ನು ಉದ್ದೇಶಿಸಿ –

''ಇವರು ನನ್ನ ಆತ್ಮೀಯ ಗೆಳೆಯರು. ನಾನೇನು ಪತ್ತೇದಾರಿಕೆ ನಡೆಸಿದರೂ ಇವರಿಗೆ ತಿಳಿದೇ ತಿಳಿಯುತ್ತದೆ. ನೀವು ಯಾವ ತರಹದ ಸಂಕೋಚ, ಅನುಮಾನ ಇಟ್ಟುಕೊಳ್ಳದೆ ಬಂದ ವಿಷಯ ಹೇಳಿ. ನಿಂತುಕೊಂಡೇ ಇರುವಿರೇಕೆ? ಕುಳಿತುಕೊಳ್ಳಿ'' ಎಂದು ಹೇಳಿದ.

ಚೆಲುವೆಯು ಪ್ರತಿಯಾಡದೆ ಕುರ್ಚಿಯ ಮೇಲೆ ಕುಳಿತಳು.

''ನಿಮ್ಮ ಹೆಸರೇನು? ನನಗೆ ಪತ್ರಬರೆದು ನಿಮ್ಮನ್ನಿಲ್ಲಿಗೆ ಕಳುಹಿಸಿದ ಆ ಪ್ರಾಣಾಪ್ತ ಗೆಳತಿಯ ನಾಮಧೇಯವೇನು?''

''ನನ್ನ ಹೆಸರು ಸುಮತಿ. ನನ್ನ ಗೆಳತಿಯ ಹೆಸರು ನಳಿನಿ.''

ತಲೆಯೆತ್ತಿ ಸಣ್ಣ ಸ್ವರದಲ್ಲಿ ಹೇಳಿದಳು ಸುಮತಿ.

(ಸಶೇಷ)

(103ನೇ ಪುಟದಿಂದ)



"ನಿಮ್ಮ ಕಾದಂಬರಿಗಳಿಂದ ಪ್ರೇರಣೆ ಪಡೆದು ಯಾವುದಾದರೂ ಕೊಲೆ, ಡಕಾಯಿತಿ ನಡೆದ ಉದಾಹರಣೆಗಳಿವೆಯೇ'' ಕುತೂಹಲಕ್ಕಾಗಿ ಪ್ರಶ್ನಿಸಿದಾಗ ತುಸು ಗಂಭೀರವಾಗಿ "ಒಮ್ಮೆ ಮಾತ್ರ ಚಿಕ್ಕಮಗಳೂರಿನಲ್ಲಿ ನಡೆದ ಕೊಲೆ ಕೇಸೊಂದರಲ್ಲಿ ಆರೋಪಿ 'ನರಸಿಂಹಯ್ಯನವರ ಕಾದಂಬರಿ ಓದಿ ಕೊಲೆಮಾಡಿದೆ' ಎಂದು ಹೇಳಿಕೆ ಕೊಟ್ಟಿದ್ದ'' ಮೆಲುದನಿಯಲ್ಲಿ ಅವರು ಹೇಳುತ್ತಾರೆ. 'ಕಲ್ಪನಾ ವಿಲಾಸದ ಕತೆ, ಕಾದಂಬರಿಗಳಲ್ಲಿರುತ್ತಿದ್ದ ಕ್ರೈಮ್ ಈಗ ನಿತ್ಯಜೀವನದ ಮಾಮೂಲಿ ಸಂಗತಿಯಾಗಿ ಬಿಟ್ಟಿದೆಯಲ್ಲ?' ಎಂದು ಕೇಳಿದರೆ.... "ಹೌದೌದು ಬೂಟ್ ಹೌಸ್ ಕುಮಾರ್, ಕೊತ್ವಾಲ ರಾಮಚಂದ್ರನ ಪ್ರಕರಣಗಳೆಲ್ಲ ಎಷ್ಟೊಂದು ಭೀಕರವಾಗಿವೆ; ಕ್ರೈಮ್ ವರದಿಗಾರರೂ ಅವುಗಳನ್ನು ಎಷ್ಟೆಲ್ಲ ರೋಚಕಗೊಳಿಸಿಬಿಟ್ಟಿದ್ದಾರೆ...'' ಅಪರಾಧ ಸಾಹಿತ್ಯ ಸೃಷ್ಟಿಸಿಯೂ ಅವುಗಳನ್ನೆಲ್ಲ ಅಂಟಿಸಿಕೊಳ್ಳದೆ ಸಂತನಂತೆ ಉಳಿದ ವ್ಯಕ್ತಿ ತಮಗೇ ಎಂಬಂತೆ ಹೇಳಿಕೊಳ್ಳುತ್ತಾರೆ.

"ಟೀವಿ ಬಂದಲಾಗಾಯ್ತು ನಾನು ಬರೆಯುವುದನ್ನು ನಿಲ್ಲಿಸಿಬಿಟ್ಟೆ'' ಎಂದ ಈ ಪತ್ತೇದಾರಿ ಸಾಹಿತ್ಯದ ಪಿತಾಮಹನಿಗೆ ಈಗಿನ ಗೃಹಿಣಿಯರು ತರಕಾರಿ ಹೆಚ್ಚುತ್ತಿರುವಾಗ, ಅಡುಗೆಮಾಡುತ್ತಿರುವಾಗ ಹೀಗೆ ಯಾವಾಗಲೂ ಟೀವಿಗೆ 'ಅಡಿಕ್ಟ್' ಆಗಿರುವ ಬಗ್ಗೆ ಖೇದವಿದೆ.

"ನನ್ನ ಓರಗೆಯ ಲೇಖಕರು ಇಂಗ್ಲಿಷ್ ಪತ್ತೇದಾರಿ ಕಾದಂಬರಿಕಾರರಾದ ಅಗಾಥಾ ಕ್ರಿಸ್ಟೀ, ಅರ್ಲ್ ಸ್ಟ್ಯಾನ್ಲೆ ಗಾರ್ಡ್ನರ್ ಮುಂತಾದವರನ್ನು ಯಥಾವತ್ ಭಟ್ಟಿಯಿಳಿಸುತ್ತಿದ್ದ ಕಾರಣ ಜನರಿಗೆ ಬೇಗ ಬೇಸರವಾಗಿಬಿಟ್ಟರು'' ಎನ್ನುವ ತಾಜಾ ಪ್ರತಿಭೆಯ ನರಸಿಂಹಯ್ಯನವರ ಕಾದಂಬರಿಗಳಲ್ಲಿ ಲೇಖನದ ಆರಂಭದಲ್ಲಿ ಬಂದ ಪತ್ತೇದಾರಿ ಸಾಹಿತ್ಯ ಹಂದರದ ಎಲ್ಲ ಚಪ್ಪರಗೋಲುಗಳೂ ಇವೆ. ಇನ್ನಷ್ಟು ಗಟ್ಟಿಯಾಗಿ, ಆ ಕಾಲಕ್ಕೆ ಅನ್ವಯಿಸುವ ವಿವರ, ವೈದೃಶ್ಯಗಳಲ್ಲಿ. ಅವರ ಬರವಣಿಗೆ ನೇರ, ಸರಳ. ಒಂದೇ ಡ್ರಾಫ್ಟ್‌ನಲ್ಲಿ ಪ್ರೆಸ್ಸಿಗೆ ಹೋಗುವ ಸ್ಫುಟವಾದ ಕೈ ಬರಹ ಅವರು ಈವತ್ತಿಗೂ ಜತನದಿಂದ ಕಾಪಾಡಿಕೊಂಡು ಬಂದಿರುವ ಆಸ್ತಿ.

ಅವರ 'ಕಾವ್ಯಮಯ'ವೆನಿಸುವ ಶೀರ್ಷಿಕೆಗಳ ಹಿಂದೂ ಒಂದು ಸ್ವಾರಸ್ಯವಿದೆ: "ವಾಕ್ ಹೋದಾಗ ಹೊಳೆದ ಟೈಟಲ್‌ಗಳನ್ನೆಲ್ಲ ಸಣ್ಣಸಣ್ಣ ಚೀಟಿಗಳಲ್ಲಿ ಬರೆದು ಅಂಗಿ ಜೇಬಲ್ಲಿ ಇಟ್ಟುಕೊಳ್ತಿದ್ದೆ, ಆಮೇಲೆ ಅವುಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಕೊಡುತ್ತಿದ್ದೆ... ಪ್ರಕಾಶಕರು ಟೈಟಲ್ ಮೊದಲೇ ಕೊಟ್ಟು ಪ್ರಚಾರ ಮಾಡಬೇಕು ಅಂದರೆ ಅದಕ್ಕೂ ರೆಡಿ.'' ಅವರ ಉದಾತ್ತ ನಾಯಕರುಗಳ ಹೆಸರುಗಳೆಲ್ಲ-ಪುರುಷೋತ್ತಮ, ಮಧುಸೂದನ, ಅರಿಂಜಯ-ದೈವಪ್ರೇರಣೆಯಿಂದ ಹೊಳೆದವು ಎನ್ನುವುದು ಅವರ ನಮ್ರ ಅನಿಸಿಕೆ.


ಪತ್ತೇದಾರಿಕೆಯ ಚಾಕಚಕ್ಯತೆಯೊಂದಿಗೆ ಅಮಾಯಕತೆಯನ್ನೂ ಧಾರಾಳವಾಗೇ ಹೊಂದಿರುವ ನರಸಿಂಹಯ್ಯ ಶೋಷಣೆಗೊಳಗಾದ ಪ್ರಕರಣಗಳೂ ಹತ್ತಾರು. "ಸಿನಿಮಾದವರು ಮನೆಗೆ ಬಂದು ಹೋಗ್ತಿದ್ದರು; ಆ ಕಾದಂಬರೀನ ಫಿಲ್ಮ್‌ಗೆ ತಗೋತೀವಿ, ಇದನ್ನ ತಗೋತೀವಿ ಅಂತ ಗಂಟೆಗಟ್ಟಲೆ ಮಾತಾಡಿ ಹೋದವರು ಮತ್ತೆ ಪತ್ತೆಯೇ ಇರುತ್ತಿರಲಿಲ್ಲ. ಇನ್ನು ಕೆಲವರು ನನ್ನದೇ ಆರೇಳು ಕಾದಂಬರಿ ಸೇರಿಸಿ ತಮ್ಮ ಒಂದು ಕತೆ ಹೊಸೆದು ಸಿನಿಮಾ ತೆಗೆದುಬಿಡುತ್ತಿದ್ದರು, ಅವರ ಹೆಸರೆಲ್ಲಾ ಯಾಕೆ ಬಿಡಿ...'' ನರಸಿಂಹಯ್ಯ ವಿಷಾದದಿಂದ ನುಡಿಯುತ್ತಾರೆ.

ಇಷ್ಟು ಸಾಲದೆಂಬಂತೆ ಬೇರೆ ಬೇರೆ ಪತ್ತೇ

ದಾರಿ ಲೇಖಕರ ಅಭಿಮಾನಿ ಗುಂಪುಗಳಿಂದ ಅವರಿಗೆ ಬೆದರಿಕೆ ಕರೆಯೂ ಬರುತ್ತಿತ್ತು. (ಅದ್ಯಾವುದಕ್ಕೂ ಜಗ್ಗದ ನರಸಿಂಹಯ್ಯ 'ಬೆದರಿಕೆಯ ಫಲ' ಎಂದೊಂದು ಕತೆಯನ್ನೇ ಬರೆದಿರುವುದು ಬೇರೆ ಮಾತು. ಅದರ ಮೊದಲ ಕಂತನ್ನು ಈ ಲೇಖನದೊಂದಿಗೆ ಪ್ರಕಟಿಸಿದ್ದೇವೆ.)

ಅವರನ್ನು ನೋಯಿಸಿದ ಇನ್ನೊಂದು ಪ್ರಕರಣವೆಂದರೆ ಬಿ.ಡಿ.ಎ. ಸೈಟಿಗಾಗಿ ಅರ್ಜಿ ಹಾಕಿ ಓಡಾಡುತ್ತಿದ್ದಾಗ ಸಂಬಂಧಪಟ್ಟ ಅಧಿಕಾರಿಗಳು ಅವರನ್ನು 'ಡೂಪ್ಲಿಕೇಟ್ ನರಸಿಂಹಯ್ಯ' ಎಂದು ಆಪಾದಿಸಿ ಅರೆಸ್ಟ್ ಮಾಡಿಸಲು ಮುಂದಾಗಿದ್ದು!... **''ದೇವರದಯೆ ಹಿರಿಯರೊಬ್ಬರು ಬಂದು ಗುರುತುಹಿಡಿದ ಕಾರಣ ಆ ವಿಚಿತ್ರ ಕಂಟಕ ಕಳೆಯಿತು.''**

ತಮ್ಮ ನಂತರ ಬಂದ ಟಿ.ಕೆ. ರಾಮರಾವ್ ಚೆನ್ನಾಗಿ ಬರೆದರು. ಈಗಿನ ಸಂದರ್ಭದಲ್ಲಿ ಬರೆಯುತ್ತಿರುವ ಬಿ.ವಿ. ಅನಂತರಾಮು, ಎಚ್.ಕೆ. ಅನಂತರಾವ್, ಕೌಂಡಿನ್ಯ, ಸುದರ್ಶನ ದೇಸಾಯಿ ಕೂಡ ಚೆನ್ನಾಗೇ ಬರೆಯುತ್ತಿದ್ದಾರೆ ಎಂದು ಹೇಳುವ ಔದಾರ್ಯ ಇರುವ ನರಸಿಂಹಯ್ಯ ಬಹಳಷ್ಟು ಓದಿ, ಸಾಕಷ್ಟು ಅನುಭವಿಸಿ, ಮಾಗಿದ ಬರಹಗಾರ. ಜನಪ್ರಿಯ ಪತ್ತೇದಾರಿ ಕಾದಂಬರಿ ಪ್ರಕಾರವನ್ನೇ ಆಯ್ದುಕೊಂಡರೂ ಅದಕ್ಕೆ ನಿಸ್ಪೃಹತೆಯಿಂದ ತನ್ನ ಪರಿಶ್ರಮ ಒದಗಿಸಿ, ಓದುಗರನ್ನು ರಂಜಿಸಿದ ಪ್ರೊಫೆಶನಲ್. ತಮ್ಮದನ್ನೂ ಸೇರಿಸಿ ''ಜನಪ್ರಿಯ ಸಾಹಿತ್ಯವೆಲ್ಲ 'ಮಸಾಲೆದೋಸೆ ಸಾಹಿತ್ಯ'-ಪುರಂದರದಾಸರು, ಕನಕದಾಸರು ಬರೆದದ್ದು, ಸರ್ವಜ್ಞನ ಪದ್ಯಗಳು ನೋಡಿ, ಚಿರಂತನ ಗಂಭೀರ ಸಾಹಿತ್ಯ'' ಎಂಬುದು ಅವರ ಅಂಬೋಣ.




ಕಂಡಕ್ಟರ್ ನರಸಿಂಹಯ್ಯ - 1950ರಲ್ಲಿ

''ಶಿವರಾಮ ಕಾರಂತರ ಕಾದಂಬರಿಗಳನ್ನು ಒಂದೂ ಬಿಡದೆ ಓದಿದ್ದೀನಿ'' ಎನ್ನುವ ಅವರಿಗೆ ಆಗಿನ ಕಾಲದಲ್ಲಿ ಹೆಸರು ಮಾಡಿದ್ದ ಅನಕೃ, ಕೃಷ್ಣಮೂರ್ತಿ ಪುರಾಣಿಕರು ತಮ್ಮ ಬರೆವಣಿಗೆಯನ್ನೂ ಚರ್ಚಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು ಎನ್ನುವುದೊಂದು ಸಂತಸದ ಸಂಗತಿ. **''ಕಾರಂತರು ನನ್ನನ್ನು 'ಏನಯ್ಯಾ ಪತ್ತೇದಾರ?' ಎಂತಲೇ ಮಾತಾಡಿಸುತ್ತಿದ್ದುದು''** ಎಂದವರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

''ಸಂದರ್ಶನ ಬೆಳಿಗ್ಗೆ 9-30ಕ್ಕೆ ಬೇಡ, ಅದು ರಾಹುಕಾಲ, ಮೂರು ಗಂಟೆಯ ನಂತರವೇ ಬನ್ನಿ'' ಎಂದರೂ ನರಸಿಂಹಯ್ಯ ಮೂಢನಂಬಿಕೆಗಳ ಬಗ್ಗೆಯೂ ಪುಸ್ತಕ ಪ್ರಕಟಿಸಿರುವ ಅಪ್ಪಟ ವೃತ್ತಿಪರ ಲೇಖಕ! ತಮ್ಮ ನಿರಂತರ ಸಂಘರ್ಷಗಳ, ಏಳುಬೀಳಿನ ಸಾಹಸಮಯ ಜೀವನವನ್ನು ಐದುನೂರು ಪುಟಗಳ ಆತ್ಮಚರಿತ್ರೆಯಾಗಿ ಬರೆದು, ಪ್ರಕಾಶಕರ ನಿರೀಕ್ಷೆಯಲ್ಲಿದ್ದಾರೆ. ಅವರ ಹೊಸ ಕತೆಗಳ ಹಸ್ತಪ್ರತಿಗಳನ್ನು ನಾವು ಹರಡಿಕೊಂಡು ನೋಡಿಯಾದ ಮೇಲೆ ಒಂದು ನೋಟ್‌ಪುಸ್ತಕ ಅದ್ಹೇಗೋ ಕಳ್ತಪ್ಪಿಸಿಕೊಂಡಿತು. ನಿಮಿಷವೆರಡು ನಿಮಿಷದಲ್ಲಿ 'ಎಲ್ಲದು, ಎಲ್ಲಿಹೋಯ್ತು' ಅಂತ ಕಣ್ಣು ನಿಮಿರಿಸಿ, ಚುರುಕಾಗಿ ಸುತ್ತಮುತ್ತ ಹುಡುಕಾಡಿದ ಅವರಲ್ಲಿ ಮೂವತ್ತು ವರ್ಷಗಳ ಹಿಂದಿನ 'ಪುರುಷೋತ್ತಮ'ನ ಸ್ಪಿರಿಟ್ ಇತ್ತು.

ಪ್ರತಿ ಕನ್ನಡ ಓದುಗನ ವಾಚನಾಭಿರುಚಿಯ ಆದ್ಯ ಪ್ರವರ್ತಕರಾಗಿದ್ದ ನರಸಿಂಹಯ್ಯನವರ ಅಪ್ಪಟ ಕೃತಿಗಳು ಮತ್ತೆ ಚಲಾವಣೆಗೆ ಬರಲಿ. ಯಾವ ಅರ್ಥದಲ್ಲೂ ನಿವೃತ್ತರಾಗಿರದ ಈ ದಂಪತಿಗಳಿಗೆ ಶುಭ, ನೆಮ್ಮದಿಗಳಿರಲಿ. ■

(ಎನ್. ನರಸಿಂಹಯ್ಯನವರನ್ನು 'ಪತ್ತೆ' ಹಚ್ಚಲು ನೆರವಾದ ಟಿ. ರಂಗನಾಥನ್ ಅವರಿಗೆ ಕೃತಜ್ಞತೆಗಳು)



ಸಂಗ್ಯಾ ಬಾಳ್ಯಾ

ಬೈಲಹೊಂಗಲದಲ್ಲಿ ಇಬ್ಬರು ಸ್ನೇಹಿತರು ಇದ್ದರು-ಸಂಗ್ಯಾ ಮತ್ತು ಬಾಳ್ಯಾ ಅಂತ. ಅದರಲ್ಲಿ ಸಂಗ್ಯಾ ಶ್ರೀಮಂತ, ಬಾಳ್ಯಾ ಬಡವ. ಆದರೆ ಅವರಿಬ್ಬರೂ ಎಂಥಾ ಜಿಗರಿ ಗೆಳೆಯರು ಅಂತಂದ್ರೆ, ಸಂಗ್ಯಾನ ಜೇಬಲ್ಲಿದ್ದ ಸಿಗರೇಟನ್ನು ಬಾಳ್ಯಾ ಸೇದತಿದ್ದ; ಬಾಳ್ಯಾನ ಜೇಬಲ್ಲಿದ್ದ ಬೀಡೀನ ಸಂಗ್ಯಾ ಎಳೀತಿದ್ದ. ಆದರೆ ಸಂಗ್ಯಾನದ್ದು ಜರೀ ರುಮಾಲು; ಬಾಳ್ಯಾನದು ಹರಕಂಗಿ. ಅದನ್ನು ನೋಡಿ ಬೇಸರ ಆಗಿ ಸಂಗ್ಯಾ ತನ್ನ ಗೆಳೆಯನನ್ನ ಬಟ್ಟೆ ಅಂಗಡಿಗೆ ಕರಕೊಂಡು ಹೊರಟ.

ಗುಜರಾತಿನಿಂದ ಬಂದು ಆ ಊರಲ್ಲಿ ಅಂಗಡಿ ಹಾಕಿರುವ ಒಬ್ಬ ಮಾರವಾಡಿಯ ಬಟ್ಟೆ ಅಂಗಡಿ ಅದು. ಇವರಿಬ್ಬರೂ ಅಲ್ಲಿಗೆ ಹೋಗತಿದ್ದ ಹಾಗೇ ಆ ಮಾರವಾಡಿ 'ಆವೋ ಆವೋ ಸಂಗಪ್ಪಣ್ಣಾ...' ಅಂತ ದೊಡ್ಡ ಬಾಯಿಮಾಡಿ ಕರೆದ; ಆದರೆ ಬಟ್ಟೆ ತಗೊಳ್ಳೋದು ಹರಕಂಗಿ ಬಾಳ್ಯಾನಿಗೆ ಅಂದ ಕೂಡಲೇ ಸ್ವಲ್ಪ ಅನುಮಾನ ಮಾಡಿದ. ಆದರೆ ಹಣ ಕೊಡೋದು ತಾನು ಅಂತ ಸಂಗ್ಯಾ ಹೇಳಿದಾಗ ಖುಶಿಯಾಗಿ ಬಟ್ಟೆ ತೆಗತೆಗದು ರಾಶಿ ಹಾಕಿದ. ಈ ಮಧ್ಯೆ ಸಂಗ್ಯಾ ದುಡ್ಡು ತರೋದು ಮರೆತು ಬಂದಿದ್ದ; ಹಾಗಾಗಿ ಮನೆಗೆ ಹೋದ. ಆಗ ಬಾಳ್ಯಾ ತನಗೆ ಬೇಕಾದ ಬಟ್ಟೆ ಆರಿಸಿ ಗಂಟು ಹಿಡಕೊಂಡು ಹೊರಟಾಗ ಮಾರವಾಡಿ ಬಿಡಲಿಲ್ಲ; 'ಕೊಟ್ಟು ಹೋಗೋ ನಮ್ಮ ಲೆಕ್ಕ...' ಅಂತ ಜಬರು ಮಾಡಿ ಅವನಿಗೆ ನಾಕು ಪೆಟ್ಟು ಕೊಟ್ಟ ಬಾಳ್ಯಾ ಬಚಾವಾಗಲಿಕ್ಕಾಗಿ ಸತ್ತ ಹಾಗೆ ಬಿದ್ದುಕೊಂಡ.

ಅಷ್ಟರಲ್ಲಿ ಸಂಗ್ಯಾನೇ ಬಂದ. ಸತ್ತ ಹಾಗೆ ಬಿದ್ದಿರೋ ಗೆಳೆಯನ್ನ ಕಂಡು ಗಾಬರಿಯಾದ. ಆದರೆ ಆಗ ಬಾಳ್ಯಾ ತಟ್ಟಂತ ಎದ್ದು ಕೂತು ನಡೆದಿದ್ದೆಲ್ಲ ಹೇಳಿಕೊಂಡ. ಸಂಗ್ಯಾಬಾಳ್ಯಾ ಇಬ್ಬರೂ ಸೇರಿ ಆಗ ಮಾರವಾಡಿಗೆ ಜಬರು ಮಾಡಿದರು; 'ಯಾಕೋ ಸೇಟಜಿ ಎಷ್ಟಾತೋ ನಿನ್ನ ಲೆಕ್ಕ?...' ಅಂತ ಹಂಗಿಸಿ ದುಡ್ಡು ಬಿಸಾಕಿ ಮುಂದಕ್ಕೆ ಹೊರಟರು.

ಅದೇ ಬೈಲಹೊಂಗಲದಲ್ಲಿ ಇನ್ನೊಬ್ಬ ಶ್ರೀಮಂತ ವ್ಯಾಪಾರಿ ಇದ್ದ- ಈರಪ್ಪ ಅಂತ. ಅವನಿಗೆ ಗಂಗಿ ಅಂತೊಬ್ಬ ಸುಂದರಿ ಹೆಂಡತಿ. ಹೊಲಮನೆ, ಆಳುಕಾಳು ಅಂತ ಸುಖವಾಗಿ ನಡೀಬಹುದಾಗಿದ್ದ ಸಂಸಾರ ಅದು. ಆದರೆ, ಈರಪ್ಪನಿಗೆ ಈಗ ಒಂದು ಕಾಗದ ಬಂದಿದೆ; ಅವನು ವ್ಯಾಪಾರಕ್ಕೆ ಅಂತ ಬಳ್ಳಾರಿಗೆ ಹೊರಟಿದ್ದಾನೆ. ಅವನ ಹೆಂಡತಿ ಬೇಡ ಅನ್ನತಾಳೆ; 'ಒಂದೂ ಹಡೆದಿಲ್ಲೋ ಪ್ರಿಯಾ..., ನನ್ನ ಬಿಟ್ಟು ಹೋಗಬೇಡವೋ' ಅನ್ನತಾಳೆ; ಆದರೆ ಈರಪ್ಪ ಕೇಳದೆ ಆ ಊರಿನ ಒಬ್ಬ ಮುದುಕಿಯನ್ನು ಆಕೆಗೆ ಜತೆಮಾಡಿ ತನ್ನ ಇಬ್ಬರು ತಮ್ಮಂದಿರನ್ನು ಮನೆ ನೋಡಿಕೊಳ್ಳಲಿಕ್ಕೆ ಹೇಳಿ ಹೊರಟೇ ಹೋಗತಾನೆ. ಸರಿ, ಕಷ್ಟವಾದರೂ ಗಂಗಿ 'ಅಂಜೂರಿ

ಬನದಾಗ ನಾ ಹ್ಯಾಂಗ ಇರಲೇ...' ಅಂದು ಕೋತಾ ಇರತಾಳೆ.

ಆಗ ಆ ಊರಿನ ಮರಡಿ ಬಸಣ್ಣನ ಜಾತ್ರೆ ಬರುತ್ತದೆ. ಮುದುಕಿ ಪರಮ್ಮನ ಜತೆಗೆ ಗಂಗಿಯೂ ಆ ಜಾತ್ರೆಗೆ ಹೋಗತಾಳೆ, ಓಡಾಡತಾಳೆ; ಆಗಲೇ ಸಂಗ್ಯಾನ ಕಣ್ಣಿಗೂ ಬೀಳತಾಳೆ. ಸರಿ, ಇಲ್ಲಿಂದ ಇನ್ನೊಂದು ದೊಡ್ಡ ಕಥೆಯೇ ಪ್ರಾರಂಭ ಆಗತದೆ. 'ಒಂದ ಹೆಣ್ಣ ಕಂಡೀನೋ ಬಾಳ್ಯಾಣ್ಣ...' ಅಂತ ಶುರು ಮಾಡಿ ಸಂಗ್ಯಾ, ಗಂಗಿಯನ್ನು ತನಗೆ ಒಲಿಸಿಕೊಡು ಅಂತ ಬಾಳ್ಯಾನಿಗೆ ದುಂಬಾಲು ಬೀಳುತ್ತಾನೆ; 'ರಾತ್ರಿ ಹಗಲು ಬೀಳತಾವೋ ಗಂಗಿ ಕನಸ...' ಅಂತ ಗೋಗರೆಯುತ್ತಾನೆ. ಆದರೆ ಸಂಗ್ಯಾನ ಮಾತು ಕೇಳಿ ಗಂಗಿಯ ಮನೆಗೆ ಹೋದ ಬಾಳ್ಯಾನಿಗೆ ಕಪಾಲಮೋಕ್ಷವೇ ಆಗುತ್ತದೆ. ಹಾಗೆಯೇ ಇನ್ನೊಂದು ದಿನ, ದಾರಿಯಲ್ಲಿ ಅಡ್ಡಗಟ್ಟಿದ ಸಂಗ್ಯಾನಿಗೂ ಗಂಗಿ ಬುದ್ಧಿಮಾತು ಹೇಳಿಕಳಿಸುತ್ತಾಳೆ.

ಈ ಯಾವ ಮಾರ್ಗದಿಂದಲೂ ಗಂಗಿಯನ್ನು ಒಲಿಸಲು ಸಾಧ್ಯವಾಗದಿದ್ದಾಗ, ಸಂಗ್ಯಾಬಾಳ್ಯಾರಿಬ್ಬರೂ ಮುದುಕಿ ಪರಮ್ಮಳಿಗೆ ಶರಣು ಹೋಗುತ್ತಾರೆ; ಆಕೆಗೆ ರುಷುವತ್ತು ಕೊಟ್ಟು ಬೇಡುತ್ತಾರೆ. ಇವರ ಸಂಚಿಗೆ ಸಮ್ಮತಿಸಿದ ಪರಮ್ಮ ಗಂಗಿಯ ಮನೆಗೆ ಹೋಗುತ್ತಾಳೆ; ಗಂಗಿಗೆ ಉಪಾಯದಿಂದ ಈ ವಿಷಯ ತಿಳಿಸುತ್ತಾಳೆ. ಆಕೆ ಇದನ್ನು



ಶಂಕರ ಪಾಟೀಲ

ವಿರೋಧಿಸಿದಾಗ 'ಆ ಸಂಗ್ಯಾ ನೀನು ಒಂದಾಗಿ, ನನ ಮುಂದ ಪಂಟ ಹೇಳತೀ' ಎಂದು ಬೆದರಿಕೆ ಹಾಕುತ್ತಾಳೆ. ಆ ಬೆದರಿಕೆಗೋ ಅಥವಾ ತನ್ನ ಒಳಮನಸ್ಸಿನ ಒತ್ತಡಕ್ಕೋ ಗಂಗಿ ಸೋತು ಸಂಗ್ಯಾನನ್ನು ಕೂಡಲು ಒಪ್ಪುತ್ತಾಳೆ; ಆತ ಬಂದಾಗ 'ರಂಗಮಂಚಾಕ ಹೋಗೋಣು ನಡೀರಿ, ಅಲ್ಲಿ ವಿಲಾಸ ಮಾಡೋಣು ಕೂಡಿ' ಎಂದು ವಿಜೃಂಭಿಸುತ್ತಾಳೆ.

ಅತ್ತ, ವ್ಯಾಪಾರಕ್ಕೆ ಹೊರಟ ಈರಪ್ಪ ಕೆಟ್ಟ ಕನಸೊಂದನ್ನು ಕಂಡು ಅಪಶಕುನವಾಯಿತೆಂದು ಭಾವಿಸಿ ಅರ್ಧದಾರಿಯಿಂದಲೇ ಊರಿಗೆ ಮರಳಿ

ನೀವು ಓದಿದ ಕಾದಂಬರಿ, ನೋಡಿದ ನಾಟಕ, ಸಿನಿಮಾ, ಯಾರೋ ಹೇಳಿದ ದೃಷ್ಟಾಂತ ನಿಮ್ಮ ಭಾವಕೋಶದಲ್ಲಿ ನೆಲೆಗೊಳ್ಳುವುದು ಒಂದು ಪುಟ್ಟ ಕತೆಯ ರೂಪದಲ್ಲಿಯೇ. ಅದನ್ನು ದಾಟಿಸಬೇಕಾದಾಗ, ಮೂಲದ ಸಾರವೆಲ್ಲ ಬೀಜವಾಗಿರುವ ಆ ಕತೆಗೆ ನಿಮಗೇ ಗೊತ್ತಿಲ್ಲದಂತೆ ನಿಮ್ಮದೇ ವ್ಯಾಖ್ಯಾನ, ಅಂತಃಕರಣ, ಮಿಡಿತ, ಧೋರಣೆ ಸೇರಿಸಿರುತ್ತೀರಿ. ಈ 'ಕತೆ ಹೇಳುವ' ಆಧುನಿಕ ಜನಪದ ನಮ್ಮ 'ಗರಿ'ಯ ಹಿಂದಿರುವ ಪ್ರೇರಣೆ.

ಈಗ ನಿಮ್ಮಲ್ಲಿರುವ 'ಗರಿ'ಯೊಂದನ್ನು 'ಭಾವನಾ'ಕ್ಕೆ ಹಾರಿಬಿಡಿ. ಓದುಗನಿಂದ, ಓದುಗನಿಗೆ ಹಾರುತ್ತಾ ಆ ಗರಿಯಿಂದ ಹಕ್ಕಿಯೊಂದು ಮೂಡಿಬರುವ ಪರಿ ನೋಡಿ! (ಜತೆಗೆ ನಿಮ್ಮ ವಿವರ, ಭಾವಚಿತ್ರವೂ ಇರಲಿ).

ಬರುತ್ತಾನೆ. ಬಂದರೆ, ಇಲ್ಲಿ ಅವನ ಮನೆ ಯಲ್ಲಿ ಎಲ್ಲ ಅಲ್ಲೋಲಕಲ್ಲೋಲವಾಗಿದೆ; ಊರವರು ಈ ಸುದ್ದಿಯನ್ನು ಗುಸುಗುಸು ಮಾತಾಡುತ್ತಿದ್ದಾರೆ. ಹೊರಗೆ ಈರಪ್ಪ ನಿಂತಿದ್ದಾನೆ; ಒಳಗೆ ಗಂಗಿ 'ಹೆಂಗಾರ ಮಾಡಿ ಉಳಿಸುವೆ ನಿನ್ನ ಪ್ರಾಣಾ' ಎನ್ನುತ್ತ ಸಂಗ್ಯಾನನ್ನು ಬಚ್ಚಿಡಲು ಪ್ರಯತ್ನಿಸು ತ್ತಿದ್ದಾಳೆ. ಗಂಗಿಯ ಉಪಾಯ ಒಲ್ಲದೆ ಸಂಗ್ಯಾ ಕತ್ತಲಲ್ಲಿ ಓಡಿ ಪಾರಾಗುತ್ತಾನೆ. ಆದರೆ ಹಾಗೆ ಹೋಗುವಾಗ ಅವನ ಜರಿ ರುಮಾಲು ಉರುಳಿ ಬಿದ್ದು ಆತನ ಪತ್ತೆ ಈರಪ್ಪನಿಗೆ ಸಿಗುತ್ತದೆ.

ಈರಪ್ಪ ಈಗ ಕ್ರುದ್ಧನಾಗಿ ಗಂಗಿಯನ್ನು ತವರಿಗೆ ಅಟ್ಟುತ್ತಾನೆ; ತನ್ನ ತಮ್ಮಂದಿರೊಂದಿಗೆ ಸಂಗ್ಯಾನನ್ನು ಕೊಲ್ಲುವ ಸಂಚು ಮಾಡುತ್ತಾನೆ. ಅದಕ್ಕಾಗಿ ಅವರೆಲ್ಲ ಈಗ ಬಾಳ್ಯಾನ ನೆರವು ಕೇಳುತ್ತಾರೆ. ಸಂಗ್ಯಾನನ್ನು ಕೊಲೆಯ ಸ್ಥಳಕ್ಕೆ ಕರೆದು ತಾ ಎಂದು ಹೇಳುತ್ತಾರೆ. ಬಾಳ್ಯಾ ಒಪ್ಪದಿದ್ದಾಗ ಅವನಿಗೆ ಜೀವಭಯ ಒಡ್ಡಿ ರುಷುವತ್ತು ಕೊಟ್ಟು ಅವನನ್ನು ಒಪ್ಪಿಸುತ್ತಾರೆ. ಕೊಲೆಯ ಭೀಕರ ದೃಶ್ಯಕ್ಕೆ ಈಗ ಎಲ್ಲ ಸಿದ್ಧವಾಗುತ್ತದೆ.


ನಾಗರಪಂಚಮಿಯ ದಿನ ಗಂಗಿಗೆ ಕೊಡ ಲೆಂದು ಕೊಬರಿ ಕುಬಸ ತೆಗೆದುಕೊಂಡು ಸಂಗ್ಯಾ ಮತ್ತು ಬಾಳ್ಯಾ ಇಬ್ಬರೂ ಬೈಲವಾಡದ ಸಮೀಪ ಕೆರೆಯ ದಂಡೆಯ ಮೇಲೆ ಹೋಗಿ ಕಾಯುತ್ತಾರೆ. ಅಲ್ಲಿಗೆ ಗಂಗಿಯೂ ಬರುತ್ತಾಳೆ. ಆದರೆ ಆಕೆ ಯೀಗ ಗಾಬರಿಗೊಂಡಿದ್ದಾಳೆ; ಸಂಗ್ಯಾನ ಕೊಲೆಯ ಸಂಚು ಆಕೆಗೆ ಹೇಗೋ ಗೊತ್ತಾಗಿದೆ. ಹುಣ್ಣಿಮೆ ಚಂದ್ರನಂಥ ಸಂಗ್ಯಾ ಇವತ್ತು ಮುಳುಗಿ ಹೋಗು ತ್ತಾನೆಂದು ಆಕೆ ಅಳುತ್ತಾಳೆ; ಬಾಳ್ಯಾ ಆತನಿಗೆ ಮೋಸ ಮಾಡುವವನಿದ್ದಾನೆಂದು ಹೇಳುತ್ತಾಳೆ. ಆದರೆ ಸ್ನೇಹದ ನೆನಪಿನಲ್ಲಿ ಸಂಗ್ಯಾ ಇದನ್ನು ಒಪ್ಪಲು ಸಿದ್ಧನಿಲ್ಲ. ಆಕೆಯನ್ನು ಕಳಿಸಿ ಭಯ ದಿಂದಲೇ ಬಾಳ್ಯಾನೊಡನೆ ಮರಳಿ ಬೈಲ ಹೊಂಗಲಕ್ಕೆ ಹೊರಡುತ್ತಾನೆ.


ಭಯಾನಕ ರಾತ್ರಿ ಅದು. 'ಊರ ದಾರಿಯ ಬಿಟ್ಟು ದೂರ ಬಂದೆವೋ' ಎಂದು ಆತನಿಗೆ ಅನಿಸುತ್ತಿದೆ. ಆದರೆ ಆತನನ್ನು ಸಮಾಧಾನ ಪಡಿಸುತ್ತಲೇ ಬಾಳ್ಯಾ ಆತನನ್ನು ಕೇದಗೆ ಮೆಳೆ ಯೊಂದರ ಬಳಿ ನಿಗದಿತ ಸ್ಥಳಕ್ಕೆ ತಲುಪಿಸಿ ಮಾಯವಾಗುತ್ತಾನೆ. ಅಲ್ಲಿ ಈರಪ್ಪ ಮತ್ತು ಅವನ ತಮ್ಮಂದಿರು ಕೊಡಲಿ ಕುಡುಗೋಲು ಹಿಡಿದು ಕಾದಿದ್ದಾರೆ. ಸಂಗ್ಯಾ ಬರುತ್ತಿದ್ದಂತೆ ಆತನನ್ನು ಆಕ್ರಮಿಸುತ್ತಾರೆ. ಗಂಗಿಗಾಗಿ ತಂದ 'ಕೊಬರಿ ಕುಬಸದ ಗಂಟು ತೆಗಿ' ಎಂದು ಹಂಗಿಸುತ್ತ ಅವರು ಅವನನ್ನು ಹೊಡೆಯುತ್ತಾರೆ, ಬಡಿಯು ತ್ತಾರೆ, ಕೊಲ್ಲುತ್ತಾರೆ.

ಕೊಲೆ ಆಗಿ ಹೋದದ್ದೇ ಅವರಿಗೂ ಭಯ ಆವರಿಸುತ್ತದೆ. 'ಏನಾತೋ ತಮ್ಮಗಳಿರಾ... ಕಣ್ಮುಚ್ಚಿ ಬಿಡುವುದರೊಳಗ ಖೂನಿಯು ಆಗಿ ಹೋತ' ಎಂದು ಗಾಬರಿಗೊಳ್ಳುತ್ತಾರೆ. ಮುಂದೇನು ಮಾಡಬೇಕೆಂದು ದಿಕ್ಕು ಕಾಣದೆ ಅವರು ಆಗಿನ್ನೂ ಉತ್ತರ ಕರ್ನಾಟಕಕ್ಕೆ ಪ್ರವೇಶ ಮಾಡಿದ್ದ ಬ್ರಿಟಿಷರ ನ್ಯಾಯಾಲಯವೊಂದಕ್ಕೆ ಹೋಗಿ ಅಲ್ಲಿ ರಾವ್‌ಸಾಹೇಬರಿಗೆ ಶರಣಾಗುತ್ತಾರೆ.

(ಸುಮಾರು ನೂರು ನೂರೈವತ್ತು ವರ್ಷಗಳ ಹಿಂದೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ನಡೆದಿತ್ತಂತೆ ಈ ಕಥೆ; ಆ ಊರಿನ ಪತ್ತಾರ ಮಾಸ್ತರರು ಇದನ್ನು ಬರೆದು ನಾಟಕ ಮಾಡಿ ಆಡಿಸಿದರು ಅಂತ ಹೇಳತಾರೆ).

■ ಕೆ.ವಿ. ಅಕ್ಷರ





ಪ್ರಾಪ್ತಿ

ಕ್ರಿಕೆಟ್ ಮ್ಯಾಚ್ ನೋಡಲು ಟಿಕೆಟ್ ಸಿಕ್ಕಿತ್ತು. ನನ್ನ ತಂಗಿಯೂ ಊರಿಂದ ಬಂದಿದ್ದಳು. ಸರಿ, ಇಬ್ಬರೂ ಹೊರಟೆವು. ಅಕ್ಕನ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದ ಆತ, ಊರಿನವ-ನಮ್ಮನ್ನು ಸ್ಟೇಡಿಯಂಗೆ ಡ್ರಾಪ್ ಮಾಡಲು ಬಂದ. ತನ್ನ ಅಕ್ಕ-ಭಾವನ ಜೊತೆ ವಾಸಿಸುತ್ತಿದ್ದ ಆತ ರಿಕ್ಷಾವೊಂದನ್ನು ಇಟ್ಟುಕೊಂಡಿದ್ದ. ಹೀಗೆ ಹೊರ ಹೊರಡುವ ಸಂದರ್ಭಗಳಲ್ಲಿ ಮೊದಲೇ ಆತನಿಗೆ ಹೇಳಿಟ್ಟಿರುತ್ತಿದ್ದೆವು. ಅಂದೂ ಆತ ಖುಷಿಯಿಂದಲೇ ಬಂದ.

ಸ್ಟೇಡಿಯಂನಲ್ಲಿ ಸಹ ನಮ್ಮೊಂದಿಗೆ ಕುಳಿತಿದ್ದ. ರಿಕ್ಷಾ ಪಾರ್ಕ್‌ಮಾಡಿ ಅಪರೂಪಕ್ಕೊಮ್ಮೆ ಮ್ಯಾಚ್ ನೋಡುತ್ತಾ ಕುಳಿತ. ಬಿಡುವಿನ ವೇಳೆಯಲ್ಲಿ ಒಂದಷ್ಟು ಸ್ನಾಕ್ಸ್, ತಂಪುಪಾನೀಯ ತರುತ್ತೇನೆಂದು ಹೊರಹೋದ.

ಬಹಳ ಹೊತ್ತಾದರೂ ಆತ ಬರಲಿಲ್ಲ ಎಂದು ನಮ್ಮಿಬ್ಬರಿಗೂ ಕಳವಳ ಶುರುವಾಯಿತು. ಮ್ಯಾಚ್ ನೋಡುವುದರಲ್ಲೂ ಆಸಕ್ತಿ ಕಳೆದುಕೊಂಡೆವು. ಆಚೀಚೆ ತಲೆಯೆತ್ತಿ ನೋಡುತ್ತಾ ಈಗ ಬಂದಾನು ಆಗ ಬಂದಾನು ಎಂದು ಕಂಗಾಲಾಗಿ ಕೂತವರಿಗೆ ಸ್ಟೇಡಿಯಂನಲ್ಲಿ ಸಣ್ಣ ಪುಟ್ಟ ಸಹಾಯ ಮಾಡುತ್ತಾ ಜನದಟ್ಟಣೆ ನಿಯಂತ್ರಿಸುತ್ತಿದ್ದ ಸ್ವಯಂಸೇವಕ ಹುಡುಗರು 'ಆ' ಸುದ್ದಿ ತಂದರು. ಕುರುಕಲು ತಿಂಡಿ, ಕೂಲ್‌ಡ್ರಿಂಕ್ಸ್ ಮಾರುತ್ತಿರುವ ಕಡೆ ಆತ ಪ್ರಜ್ಞೆತಪ್ಪಿ ಬಿದ್ದುಬಿಟ್ಟಿದ್ದ. ನಮಗೆ ಕೈಕಾಲೇ ಓಡಲಿಲ್ಲ. ಕಡೆಗೆ ಆ ವಾಲಂಟಿಯರ್ಸೇ ನಮ್ಮೊಂದಿಗೆ ಬಂದು ನಿಲ್ಲಿಸಿದ್ದ ರಿಕ್ಷಾದಲ್ಲಿ ಆತನನ್ನು ಮಲಗಿಸಿದರು. ಆ ಹುಡುಗರಿಗೆ ರಿಕ್ಷಾ ಓಡಿಸಲು ಸಹ ಗೊತ್ತಿದ್ದದ್ದು ನಮ್ಮ ಸುದೈವ.

ಮನೆಗೆ ತಲುಪುವ ಹಾದಿಯಲ್ಲಿ ಆತ ನೋವಿನಿಂದ ಮುಖ ಕಿವಿಚುತ್ತಾ ನರಳಾಡುತ್ತಿದ್ದ. ಮಧ್ಯೆ ಒಮ್ಮೆ ಉಮ್ಮಳಿಸಿ ಆ ಹುಡುಗರ ಮೇಲೆಯೇ ವಾಂತಿ ಮಾಡಿದ. 'ಅಕ್ಕಾ ತುಂಬ ನೋಯುತ್ತೆ' ಅಂತ ಮುಲುಗುತ್ತಿದ್ದವನನ್ನು ಬೇಗ ಟ್ಯಾಕ್ಸಿ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಆ ಹುಡುಗರನ್ನು ಮನೆಯೊಳಗೆ ಕರೆದು ಬಟ್ಟೆ ತೊಳೆದುಕೊಳ್ಳಲು ಹೇಳಿದೆ.

ಅತ್ತ ನರ್ಸಿಂಗ್ ಹೋಮ್ ತಲುಪುತ್ತಿದ್ದಂತೆ ಆತ ಸತ್ತೇಹೋದ ಅಂತ ಸುದ್ದಿ ಬಂತು.

(ಬಾಲ್ಕನಿಯಲ್ಲಿ ಅಂತಾಕ್ಷರಿ ಹಾಡುತ್ತಾ ಕುಳಿತಿದ್ದ ಗುಂಪಿನಲ್ಲಿ ಹುಡುಗಿಯೊಬ್ಬಳು ಕೆಳಗಿನ ರಸ್ತೆಯಲ್ಲಿ ಸಾಗುತ್ತಿದ್ದ ಒಂದು ತೆಳ್ಳಗಿನ ಮನುಷ್ಯಾಕೃತಿಯನ್ನು ನೋಡಿ ಹೇಳಿದ್ದು)

■ ಸಂಘಮಿತ್ರ

ಕ್ಯಾನ್‌ವಾಸ್

ರೇಖೆಗಳ ಕೈ ಹಿಡಿದ ಶಂಕರ ಪಾಟೀಲ





— ಜಯಂತ



"ರಿಂತವಾದ ಲಾಲಿತ್ಯ", "ಸಹಜ, ಸರಳ, ಸುಂದರ", "ಅಲೌಕಿಕ ಸಂಗೀತ" – ಸಂಗೀತ, ಸಾಹಿತ್ಯದ ಕುರಿತ ಉದ್ಗಾರಗಳಂತಿರುವ ಈ ಮಾತುಗಳನ್ನು ಆಡಿದವರು ಅನುಕ್ರಮವಾಗಿ ನಾಡಿನ ಉತ್ಕೃಷ್ಟ ಕಲಾವ್ಯಾಮೋಹಿಗಳಾಗಿರುವ ಮುಲ್ಕರಾಜ್ ಆನಂದ್, ಶಿವರಾಮ ಕಾರಂತ ಮತ್ತು ಧ್ಯಾನೇಶ್ವರ ನಾಡಕರ್ಣಿ. ಇವರೆಲ್ಲ ಹೀಗೆ ಪ್ರತಿಸ್ಪಂದಿಸಿದ್ದು ದಾವಣಗೆರೆಯ ಕಲಾವಿದ, ಕಲಾಶಿಕ್ಷಕ ಶಂಕರ ಪಾಟೀಲರ ರೇಖಾ ಚಿತ್ರಗಳಿಗೆ.

1-6-47 ರಂದು ಧಾರವಾಡ ಜಿಲ್ಲೆಯ ಗರಗಿನಲ್ಲಿ ಹುಟ್ಟಿದ ಶಂಕರಪಾಟೀಲ, ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಕಲಿತವರು. 1969ರಿಂದ ಈ ತನಕ ದೇಶದಲ್ಲಿ ಇಪ್ಪತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ದಾವಣಗೆರೆಯ ಕುವೆಂಪು ಲಲಿತಕಲಾ ಕಾಲೇಜಿನಲ್ಲಿ, ಅನ್ವಯಿಕ ಕಲಾ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿ


ದ್ದಾರೆ. ಕಲೆಗಾರಿಕೆಯನ್ನಷ್ಟೆ ವ್ಯಾಮೋಹವಾಗಿಟ್ಟುಕೊಳ್ಳದೆ, ಚಿತ್ರಕಲಾ ಶಿಕ್ಷಣತಜ್ಞರೂ ಆಗಿ ಆ ನಿಟ್ಟಿನಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ಕವಿತೆಗಳನ್ನೂ ಬರೆಯುತ್ತಾರೆ. ಬರೇ ಸ್ವಂತದ ಕಲೆಯಲ್ಲೇ ಮಗ್ನರಾಗದೆ, ಸ್ಥಳೀಯ ಎಷ್ಟೋ ಕಲಾವಿದರ ಪ್ರದರ್ಶನಗಳನ್ನು, ಸ್ಲೈಡ್ ಶೋಗಳನ್ನು ಹಮ್ಮಿಕೊಂಡು ಎಷ್ಟೊ ಹೊಸ ಗ್ರಾಮೀಣ ಕಲಾವಿದರಿಗೆ ಬೆಂಬಲ ಮತ್ತು ಅವಕಾಶ ಕೊಡುವ ಪ್ರೇರಕ ಶಕ್ತಿಯಾಗಿದ್ದಾರೆ.

ಅಳುಕದೆ ಬಳುಕುವ ರೇಖೆಗಳು, ಒಂದರೊಳಗೊಂದು ಸೇರಿ ಆಕಾರ ಬದಲಿಸಿ ಹೊರಬರುವ ಗೋಲಗಳು, ಬಂಡೆಗಳು, ಜನಪದದ ಅರ್ಕದಂತಿರುವ ಮಾನವಮುದ್ರೆಗಳು, ಸ್ಫೂರ್ತಿಯನ್ನೇ ಅಭಿನಯಿಸುವ ಸಮೂಹ ನಾಟ್ಯದ ಬಿಂಬಗಳು... ಹಿತಮಿತವಾದ ಬಣ್ಣಗಳು, ಕೇವಲ ಬಾಹ್ಯ ತಂತ್ರಗಾರಿಕೆಗೆ ಮಾರು ಹೋಗದ ನಿರಾಡಂಬರ ಸರಳ ಪ್ರತಿಮೆಗಳು... ಶಂಕರ ಪಾಟೀಲರ ಹೆಗ್ಗಳಿಕೆಗಳಾಗಿವೆ.

ನನ್ನ ಪಾಲಿಗೆ ಕಲೆ ಎಂದರೆ ಭಾವಕ್ಕೆ ರೂಪ ಕೊಡುವ ಮಾಧ್ಯಮ. ನನ್ನ ಜೀವನದ ಬಸಿರಿನಂತೆ, ನನ್ನ ಮನದ ಆಲೋಚನೆಗಳಂತೆ, ನನ್ನ ಒಳಗೂ ಹೊರಗೂ ಆವರಿಸಿದ ಸಹಜ ಆವರಣ. ಈ ಆವರಣದ ವಿಸ್ತಾರ ಹುಡುಕಿ ಹೊರಟಿರುವೆ. ದಾರಿ ಅನಿಶ್ಚಿತ, ಅಂತೆಯೇ ಆನಂದದಾಯಕ. ಪ್ರಯೋಗಶೀಲತೆಯೇ ದಾರಿ. ಅನಿಸಿದ್ದನ್ನು ಅನುಭವಕ್ಕೆ ಬಂದದ್ದನ್ನು ಚಿತ್ರಗಳ ಮೂಲಕ ಶಬ್ದಗಳ ಮೂಲಕ ದಾಖಲಿಸಿ ಆನಂದ ಪಡುತ್ತಿರುವೆ.

ಶಂಕರ ಪಾಟೀಲ.





ಈ ವರ್ಣಮೋಹದ ಪ್ರೇರಣೆ ಹೇಗಾಯಿತು?

''ಚಿಕ್ಕಮಗುವಿದ್ದಾಗಲೇ ಬಣ್ಣಗಳ ಆಕರ್ಷಣೆ ಆರಂಭವಾಯ್ತು. ಪ್ರೈಮರಿ ಶಾಲೆಯ ದಿನಗಳಿಂದಲೇ ಹಾಳೆಗಳಲ್ಲಿ ಏನೇನೋ ಗೀಚಿ ಹಾಳು ಮಾಡಿ ಮನೆಯವರಿಂದ ಬೈಸಿಕೊಂಡಿದ್ದೆ. ಹೈಸ್ಕೂಲಿನಲ್ಲಿ ಜತ್ತಿಮಾಸ್ತರರು ಪ್ರೋತ್ಸಾಹ ಕೊಟ್ಟರು.''

ನೀವು ರೇಖೆಗಳನ್ನು ಎಳೆಯುತ್ತೀರೋ, ರೇಖೆಗಳು ನಿಮ್ಮನ್ನು ಎಳೆಯುತ್ತಾವೋ?

ರೇಖೆಗಳು ಮೊದಲು ನನ್ನನ್ನು ಆಕರ್ಷಿಸುತ್ತವೆ. ನಂತರ ನಾನು ಅವುಗಳನ್ನು ಎಳೆಯತೊಡಗುತ್ತೇನೆ. ಈ 'ನಾನು ರೇಖೆಗಳನ್ನು ಎಳೆಯುವ ಆಟ'ದಲ್ಲಿ ಅವು ತಮ್ಮನ್ನು ತಾವೇ ಸೃಷ್ಟಿಸಿಕೊಳ್ಳುವ ಸೋಜಿಗ ಒದಗಿಬರುತ್ತದೆ. ಕಲಾವಿದ ಮತ್ತು ರೇಖೆಗಳು ಬೆರೆತಾಗಲೇ ಹೊಸ ಹೊಸ ರೂಪ, ಶೈಲಿ, ವಿನ್ಯಾಸಗಳು ಹೊರಬರುತ್ತವೆ.

ನಿಮ್ಮ ಮಾದರಿ ಕಲಾವಿದ ಯಾರು?

ನಾನು ಯಾವುದೇ ಸುಂದರ ಕಲಾಕೃತಿಯನ್ನು ನೋಡಿ ಆನಂದಪಡುವವನು. ರಚಿಸಿದ ಕಲಾವಿದ ಯಾರಾದರೇನು? ಒಂದೊಂದು ಕಾರಣಕ್ಕಾಗಿ ಒಂದೊಂದು ಕಲಾಕೃತಿ ಇಷ್ಟವಾಗಬಹುದು. ಕಲಾವಿದನಿಗೆ ಕಲೆಯೇ ಮುಖ್ಯ. ಇತಿಹಾಸಕಾರರಿಗೆ ಕಲಾವಿದನ ಹೆಸರು ಮುಖ್ಯ.

ಹೊಸ ವಿದ್ಯಾರ್ಥಿಗಳ ಕಲಾಪ್ರೇಮದಲ್ಲೇನಾದರೂ ಪಲ್ಲಟವನ್ನು ಮನಗಂಡಿದ್ದೀರಾ?

ಸಮಾಜದಲ್ಲೀಗ ಬರೀ 'ಪ್ರಯೋಜಕತೆ'ಯೇ ಮುಖ್ಯವಾಗುತ್ತಿದೆ. ಕಲಾಪ್ರೇಮ ಇದ್ದರೂ ಅದಕ್ಕೆ ಬೇಕಾದ ಸಮಯ, ಹಣ ಮಧ್ಯಮ ವರ್ಗಕ್ಕಿಲ್ಲ. ಉಳ್ಳವರಿಗೋ ಕಲೆ ಎಂದರೆ ಮನೆ, ಆಫೀಸುಗಳ ಅಲಂಕಾರಕ್ಕೆ ಮ್ಯಾಚ್ ಆಗುವ ಫರ್ನೀಚರಿನಂತೆ ಆಗಿದೆ. ಹೀಗಾಗಿ ಸಹಜವಾಗೇ ಹೊಸ ತಲೆಮಾರಿನ ವಿದ್ಯಾರ್ಥಿಗಳ ಮುಂದೆ ಕಲಾತ್ಮಕ ಆವಿಷ್ಕಾರಗಳಿಗಿಂತ ಬೇಗ ಬೇಗ ಹೆಸರು, ಹಣ ಮಾಡುವ ಆಮಿಷಗಳು ಹೆಚ್ಚಾಗುತ್ತಿವೆ. ಗುಣಮಟ್ಟ ಕುಸಿಯುತ್ತಿದೆ. ಪ್ರಯೋಗಗಳೇ ಹೆಚ್ಚಾಗಿ ಸೌಂದರ್ಯಪ್ರಜ್ಞೆ ಹಿಮ್ಮೆಟ್ಟಿದೆ.

ನಿಮ್ಮನ್ನು ಮತ್ತೆ ಮತ್ತೆ ಕೆಣಕುವ ಬಣ್ಣಗಳು, ಪ್ರತಿಮೆಗಳು ಯಾವುವು?

ಕವಿಗೂ ಕಲಾವಿದನಿಗೂ ಅಂಥ ವ್ಯತ್ಯಾಸವೇನಿಲ್ಲ. ಕವಿ ಚಿತ್ರಮಯವಾಗಿ ಬರೆದರೆ, ಕಲಾವಿದ ಕಾವ್ಯಮಯವಾಗಿ ಚಿತ್ರಿಸುತ್ತಾನೆ ಅಷ್ಟೆ. ಆಶಯಗಳು, ಪ್ರತಿಮೆಗಳು, ಪ್ರೇರಣೆಗಳು ಬದಲಾಗುತ್ತಲೇ ಇರುತ್ತವೆ. ಆದರೆ ಮೂಲಭೂತ ಮಾನವೀಯ ಗುಣಗಳು, ಮಮತೆಯ ಮೌಲ್ಯಗಳು ಸಾರ್ವಕಾಲಿವಾಗಿ ಉಳಿಯುತ್ತವೆ. ರೂಪಗಳು ಹೊಸದಾದರೂ ತುಡಿತ ಅದೇ ಇರುತ್ತದೆ. ■



ಶತಮಾನದ ಮೆಲುಕು - 4



ಕೆ. ಸದಾಶಿವ

ಜಾನಿ ಮೆಟ್ಟಿಲು ಹತ್ತಿದಳು

ಢಗ ಢಗ ಢಗ ಢಗ ಢಗ...

ಟೆಂಟಿನ ಹೊರಗೆ ಪೀಟರ್ ಮೋಟಾರು ಸೈಕಲ್ಲಿನ ಕ್ಲಚ್ಚನ್ನು ಅಮುಕಿದ್ದ-ಆಕ್ಸಿಲರೇಟರನ್ನು ತಿರುಗಿಸಿದ್ದ.

ಢಗ ಢಗ ಢಗ ಢಗ ಢಗ...

ಆ ಕರ್ಕಶ ಸದ್ದಿಗೂ ಮಿಗಿಲಾಗಿ ಹಾಡೊಂದು ತೆರೆತೆರೆಯಾಗಿ ಪ್ರಸರಿಸುತ್ತಿತ್ತು-ಟೆಂಟಿನ ಮೂಲೆಯಲ್ಲಿದ್ದ ಧ್ವನಿವರ್ಧಕ ಯಂತ್ರದಿಂದ...

ಹಾವು ಕ್ಯೂನಲ್ಲಿ ನಿಂತ ಜನ ಆಮೆಯಾಗಿ ಚಲಿಸುತ್ತಿದ್ದರು ಟಿಕೇಟು ಬೂತಿನ ಕಡೆ.


ಹುಡುಗರು... ಮುದುಕರು...


ಹರೆಯದ ಹೆಂಗಸರು... ಯುವಕ ಗಂಡಸರು...

ಹಾಡುವ ಸದ್ದು ಸತ್ತುಹೋಯಿತು. ಬದಲು ರೊಬೇರೋ ಅರಚುತ್ತಿದ್ದ ಮೈಕಿನಲ್ಲಿ-

''ಬನ್ನಿ... ಬನ್ನಿ... ಅತ್ಯದ್ಭುತ, ಚಮತ್ಕಾರದ ಸೈಕಲ್ಲಿನ ಆಟವನ್ನು ನೋಡುವ ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ... ಇದುವರೆಗೆ ನೀವು ನೋಡದಂಥ ಆಟ... ಇನ್ನು ಮುಂದೆಯೂ ನೋಡಲಾರದಂಥ ನೋಟ... ಹದಿನಾರು ಅಡಿ ಆಳದ ಬಾವಿಯಲ್ಲಿ ಮೂರು ಜನ... ಮಹನೀಯರೇ ನೆನಪಿನಲ್ಲಿಟ್ಟುಕೊಳ್ಳಿ- ಮೂರು ಜನ ಸೈಕಲ್ ಸವಾರಿ ಮಾಡುವುದನ್ನು ನೋಡಿರಿ... ತ್ವರೆಮಾಡಿರಿ... ತ್ವರೆಮಾಡಿರಿ...''

''ಮೇರೆ ಭಾಯಿಯೋ ಔರ್ ಬೆಹೆನೋ...''





'Ladies and gentlemen... Don't miss this golden opportunity... See and enjoy..."

ವಸ್ತು ಪ್ರದರ್ಶನದ ಹತ್ತಾರು ಆಕರ್ಷಣೀಯ ಕೇಂದ್ರಗಳಲ್ಲಿ ಒಂದಾದ Well of Death ಬಳಿ ಗುಂಪು ಘೇರಾಯಿಸುತ್ತಿತ್ತು...

ಟಿಕೇಟು ಪಡೆಯಲು ನಿಂತ ಜನ ಕೆಲವರಾದರೆ, ಪೀಟರ್ ಬಳಿಯೇ ಮೇಕಪ್ ಮಾಡಿಕೊಂಡು ಬಿಗಿಯಾದ ಬಟ್ಟೆ ತೊಟ್ಟು, ಮೈಯ ಆಕಾರವನ್ನು ನಗ್ನವಾಗಿ ತೋರಿಸುತ್ತ ನಿಂತ ಹೆಣ್ಣೊಂದನ್ನು ನೋಡುವ ಚಪಲದಿಂದ ನಿಂತವರು ನೂರು ನೂರು....

ಢಗ ಢಗ ಢಗ ಢಗ ಢಗ...

ತು ಕ್ಯೂ ಮುಜಕೋ ಪುಕಾರೇ...

"ಮಹನೀಯರೇ ಬೇಗ ಬನ್ನಿ, ಬೇಗ ಬನ್ನಿ..."

ಟೆಂಟಿನೊಳಗೆ ಹದಿನಾರು ಅಡಿ ಆಳದ ಬಾವಿಯ ಮೇಲಂಚಿನ ಬಳಿ ಕುರ್ಚಿಯೊರಗಿ ಕುಳಿತ ಜಾನಿಗೆ ಎಲ್ಲವೂ ಕೇಳಿಸುತ್ತಿತ್ತು...


ತನ್ನೆದೆಯಾಳದಲ್ಲಿ ನಡೆಯುತ್ತಿದ್ದ ವಿಪ್ಲವದ ಎದೆ ಬಡಿತ ಸದ್ದಿಗೆ ತಾಳ ಹಾಕುವ ಮೋಟಾರು ಸೈಕಲ್ಲಿನಲ್ಲಿ ಕರ್ಕಶ ಸದ್ದು...

ಆ ಹಾಡು...

ರೊಬೇರೋವಿನ ಆ ಕೂಗು...

ಜಾನಿ ಕುಳಿತಲ್ಲಿಯೇ ಜನ ಒಬ್ಬೊಬ್ಬರಾಗಿ ಒಳಗೆ ಬರುತ್ತಿದ್ದರು-ಪರದೆಯ ಬಳಿ ನಿಂತಿದ್ದ ಗೇಟ್‌ಕೀಪರನ ಕೈಗೆ ಟಿಕೀಟು ಕೊಡುತ್ತ.

ಹೆಂಗಸರು-ಗಂಡಸರು.





ಪ್ರತ್ಯೇಕವಾಗಿದ್ದ ಜಾಗದಲ್ಲಿ ಬಾವಿಯ ಸುತ್ತ ಬಂದು ಘೇರಾಯಿಸುತ್ತಿದ್ದರು.

ಜಾನಿ ಮನದಲ್ಲೆ ನಕ್ಕಳು-ಒಂದು ಬಗೆಯ ನಗು.

ಸಾಧ್ಯವಿದ್ದಿದ್ದರೆ ಗಂಡುಲೋಕವನ್ನೇ ಹೊಸಗಿ ಹಾಕಬಹುದಾದಂಥ ನಗೆ.

ಹೊರಗೆ ರೊಬೇರೋ ಕೂಗುತ್ತಲೇ ಇದ್ದ-

''ಅತ್ಯದ್ಭುತ ನೋಟ... ಮೂರು ಜನ ನಿಪುಣರು ಒಂದೇ ಬಾರಿಗೆ ಸಾವಿನ ಬಾವಿಯಲ್ಲಿ ಬೈಸಿಕಲ್ಲು ಬಿಡುವುದನ್ನು ನೋಡಲು ಮರೆಯ ಬೇಡಿರಿ... ಬನ್ನಿ... ಬನ್ನಿ... ಬೇಗ ಬನ್ನಿ... ಕೇವಲ ನಾಲ್ಕು ಆಣೆಗಳು... ನಾಲ್ಕೇ ಆಣೆ...''

"Gentlemen, hurry up now and here to witness the most dangerous yet, miraculous, wonderful feats which will be performed by Professor Peter and his party... Miss Jhony and Theresa... hurry up... hurry up..."

ಥೆರೇಸಾ....

ಜಾನಿ ಹಲ್ಲು ಕಡಿದಳು.

ತನ್ನ ಬದುಕಿಗೇ ಜ್ವಾಲೆಯಾಡಿಸಲೆತ್ನಿಸಿದ್ದ ಥೆರೇಸಾ...

ಜಾನಿ ಕಣ್ಣಾಡಿಸಿ ಜನರನ್ನು ನೋಡಿದಳು. ಆಗಲೇ ಮುಕ್ಕಾಲು ಸ್ಥಳವೆಲ್ಲ ತುಂಬಿತ್ತು. ಇದ್ದವರೆಲ್ಲ ತನ್ನೆಡೆಗೇ ನೋಡುತ್ತಿದ್ದರು- ಹಸಿದ ಕಣ್ಣುಗಳು ಗೆಬರಿ ಗೆಬರಿ ನೋಡುತ್ತಿದ್ದುವು.

ನಕ್ಕಳು-ಶೂನ್ಯವಾಗಿ ನಕ್ಕಳು.

ಧುಮ್ಮಿಕ್ಕಿ ಬರುವ ನಗೆಹೊಳೆಯನ್ನು ಹೆಬ್ಬಾಗಿಲಾಗಿ ತಡೆಯಿತು ತುಟಿದ್ವಯ. ಕಣ್ಣು ತಂಪಾಗುವವರೆಗೂ ಜನ ತನ್ನನ್ನೇ ನೋಡುತ್ತಾರೆ.

ತಾನೊಂದು ಆಕರ್ಷಕ ಬಿಂದು...

ಆಕರ್ಷಣೆ...

ಇಪ್ಪತ್ತೆರಡು ವರುಷದ ಜಾನಿ ತೊಟ್ಟಿದ್ದುದು ಮೈಗಂಟುವ ಒಂದೇ ಒಂದು ಉಡುಪು-ಕೆಂಪು ಉಡುಪು.

ಕಾಲಿನ ತುದಿಯಿಂದ ಎದೆಯವರೆಗೆ ತನ್ನ ಮೈಯನ್ನಪ್ಪಿದ್ದುದು ಒಂದೇ ಒಂದು ಉಡುಪು. ತನ್ನ ಮೈಮಾಟದ ಏರಿಳಿತಗಳ ಇಂಚು ಇಂಚನ್ನೂ ಎತ್ತಿ ತೋರಿಸುವಂಥ ಉಡುಪು- ಎದೆಯ ವರೆಗೇರಿದ್ದ ಕೆಂಪು ಉಡುಪು...

ಮುದುಕನ ಕಾಮವನ್ನೂ ಕೆರಳಿಸಿ ಹಸಿದ ಹುಲಿಯಾಗಿಸಬಹುದಾದಂಥ ಮೈಮಾಟ- ಅದಕ್ಕೆ ಅಂಟಿದ ಉಡುಪು.

ಏಳಲಾರದ ಹೆಳವನನ್ನೂ ಕಣ್ಣುಹೊಡೆದು ಕರೆಯುವಂಥ ತುಂಬು ಎದೆಯನ್ನು, ಮತ್ತಷ್ಟು ಎತ್ತಿ ನಿಲ್ಲಿಸುವ ಉಡುಪು.

ಸುತ್ತ ನಿಂತ ಹೆಂಗಸರೂ ಅಸೂಯೆ ಪಡುವಂಥ ಮೈಮಾಟ-ಕೆಂಪು ಉಡುಪು.

ಆದರೆ-

"The insipid creature... the bitch..."

ಬೆಳಿಗ್ಗೆಯಷ್ಟೆ ಪೀಟರ್ ಬೊಗಳಿದ್ದ ಹಾಗೆ.

ಟೆಂಟಗಲಕ್ಕೂ ಕಣ್ಣಾಡಿಸಿ, ನೋಡುತ್ತಿದ್ದವರ ಮುಖದಲ್ಲೇ ಓದಿದಳು-ಅವರ ಮನದಾಳದಲ್ಲಿ ಕೆರಳಿರಬಹುದಾದಂಥ ಬಯಕೆಯನ್ನು.

ಹಸಿದ ಕಣ್ಣು ಜೋಡಿಗಳು ತನ್ನ ಮೈಯ ಭಾಗ ಭಾಗವನ್ನೂ ನೆಕ್ಕಿ, ಚಟ ತೀರಿಸಿ ಕೊಳ್ಳುತ್ತಿದ್ದವು-ಮಾನವೀಯ ಬೇಲಿಯನ್ನು ಸಡಿಲಿಸಿ...

ಮೈಯಿಯ ಭಾಗ ಭಾಗ...

ತಲೆಯಿಂದ ಕಾಲಿನವರೆಗೂ...

ಗುಲಾಬಿ ಬಳಿದ ತುಂಬು ಕೆನ್ನೆ, ರಕ್ತ ರಂಜಿತ ತುಟಿ, ರೇಷ್ಮೆ ನುಣುಪಿನ ಕತ್ತು, ಅಂಟಿದ್ದ ಉಡುಪಿನಿಂದ ಅರ್ಧ ತಲೆಯೆತ್ತಿದ್ದ ಸ್ತನದ್ವಯ, ಸೊಂಟ, ತೊಡೆ...

ಜಾನಿ ಚೆನ್ನಾಗಿ ಅರಿತಿದ್ದಳು-

ಕೆನ್ನೆ...ತುಟಿ... ಕತ್ತು... ಕಂಕುಳು... ಸ್ತನ... ಸೊಂಟ... ತೊಡೆ...

ಹಸಿದ ಕಣ್ಣುಗಳಿಗೆ ಶಕ್ತಿಯಿದ್ದಿದ್ದರೆ ತಾನು ನಿಂತಲ್ಲಿಯೇ ಬೂದಿಯಾಗಬಹುದಾದಂಥ ಬೆಂಕಿಯ ದೃಷ್ಟಿ...

ಠಣ ಠಣ ಠಣ ಠಣ... ಠಣ್... ಠಣ್... ಠಣ್...

ಮೊದಲ ಗಂಟೆ ಬಾರಿಸಿತು.

ಅವಳನ್ನು ನೋಡುತ್ತಿದ್ದ ಜನರ ದೃಷ್ಟಿ ಮತ್ತೊಂದೆಡೆಗೆ ಮಗುಚಿ ಬಿತ್ತು.

ಆದರೆ ಅವಳು ಅತ್ತ ನೋಡಲಿಲ್ಲ.

ಅದು ಅವಳಿಗೆ ಹೊಸತಲ್ಲ-ಎಂದೇ ನೋಡಲಿಲ್ಲ.

ಒಳಗೆ ಯಾರು ಬರುತ್ತಿರಬಹುದೆಂದು ಅವಳಿಗೆ ತಿಳಿದಿತ್ತು-ಹಾಗೆಂದೇ ಆಸಕ್ತಿ ವಹಿಸಿ ಅತ್ತ ನೋಡಲಿಲ್ಲ.

ಥೆರೇಸಾ...

ಹೊಸ ಆಕರ್ಷಣೆ... ನೋಡುವ ಜನರ ಕಣ್ಣಿಗೆ ಕನಸಿನ ಔತಣ.

ಹೊರಗಿನಿಂದ ಬಂದ ಥೆರೇಸಾ ಜಾನಿಯ ಇದಿರಿನಲ್ಲೇ ಹಾಯ್ದು ಬಾವಿಯ ಇಳಿಜಾರು ಗೋಡೆಗೆ ಆನಿಸಿದ್ದ ಏಣಿಯಿಂದ ಸರಸರನೆ ಕೆಳಗಿಳಿದಳು-ಬಾವಿಯ ಒಳಗಿಳಿದಳು.


ಥೆರೇಸಾ-

ತನ್ನ ಬದುಕಿಗೆ ಮುಳ್ಳಾಗಿ ಬಂದ ಥೆರೇಸಾ...

ಜಾನಿಯ ಭಯಂಕರ ಬಯಕೆಯ ಗುರಿಗೆ ಆಹಾರ-ಬಾವಿಯೊಳಕ್ಕೆ ಇಳಿದು ನಿಂತ ಥೆರೇಸಾ,

ಮೈಕಿನಲ್ಲಿ ಅರಚುತ್ತಲೇ ಇದ್ದ ರೊಬೇರೋ-

Only a few minutes for your decision... hurry up... hurry up... See the miraculous feat you never did see



ಕೆ. ಸದಾಶಿವ

ಅರವತ್ತರ ದಶಕದ ನಾನ್-ಅಕೆಡಮಿಕ್ ಕತೆಗಾರರಾಗಿ ಹೆಸರು ಗಳಿಸಿಕೊಂಡ ಪ್ರಾಣಿಶಾಸ್ತ್ರ ಪ್ರಾಧ್ಯಾಪಕ ಕೆ. ಸದಾಶಿವ ತಮ್ಮ ಆಧುನಿಕ ಸಂವೇದನಾಶೀಲ ಶೈಲಿಗೆ, ಸರಳಸಂಗತಿಗಳನ್ನು ಕತೆಯಾಗಿಸಬಲ್ಲ ಭಾವತೀವ್ರ ಕಲೆಗಾರಿಕೆಗೆ ಹೆಸರಾದವರು. ವೈಯಕ್ತಿಕ ಜೀವನದಲ್ಲಿ ಸಾಕಷ್ಟು ನೋವುಂಡು ನಲ್ವತ್ತಾಲ್ಕರ ಹರೆಯದಲ್ಲೇ ಬದುಕಿಗೆ ವಿದಾಯ ಹೇಳಿದ ಸದಾಶಿವ, ಬರೆದದ್ದು ಬಹಳ ಕಡಿಮೆಯಾದರೂ ಗಟ್ಟಿಕಾಳುಗಳಾಗಿ ಅವರ ಕತೆಗಳು ಇಂದಿಗೂ ಉಳಿದುಕೊಂಡಿವೆ. ಸದಾಶಿವ ಅಂದೊಡನೆ 'ನಲ್ಲಿಯಲ್ಲಿ ನೀರು ಬಂತು', 'ಅಪರಿಚಿತರು', 'ರಾಮನ ಸವಾರಿ ಸಂತೆಗೆ ಹೋದದ್ದು' ಎಂಬ ಕತೆಗಳಷ್ಟನ್ನೆ ನೆನಸಿಕೊಳ್ಳುವುದು ವಾಡಿಕೆಯಾಗಿರುವುದರಿಂದ ಅವರ ವಿಶಿಷ್ಟ ಕತೆಯೊಂದನ್ನು ಕೊಡುತ್ತಿದ್ದೇವೆ.

in your life... Professor Peter and his party...

ಪ್ರೊಫೆಸರ್ ಪೀಟರ್-

ಜಾನಿ ಹಲ್ಲು ಕಡಿದಳು. ಕ್ರೋಧ ಹೆಡೆ ಯಾಡುತ್ತಿತ್ತು.

ಪೀಟರ್ ಮತ್ತು ತಾನು...

"Oh!... you-my angel!"

ಪೀಟರ್ ಹಾಗೆ ಹೇಳಿದ್ದ-ತಾನು ಅವನ ದೇವತೆಯಾಗಿದ್ದ ಅದೊಂದು ದಿನ...

ಅದೊಂದು ದಿನ-ಗ್ಲಿಬರ್ಟ್ ಸೆಲೂನಿನಲ್ಲಿ-

"Please meet Mr. Peter, the proprietor of 'Well of Death'... and this is Miss Jhony-the famous cyclist."

ಗೆಳತಿ ಈಸ್ವೆಲಾ ಭೇಟಿ ಮಾಡಿಸಿದ್ದಳು.

"Oh!... Glad to meet you... How do you do?"

ಔಪಚಾರಿಕ ವಿಚಾರ ವಿನಿಮಯದ ನಡುವೆ ಪೀಟರ್ ಬೇರರ್ ಅನ್ನು ಕರೆದು ಏನನ್ನೋ ಹೇಳಿದ. ನಿಮಿಷದಲ್ಲೇ ಆತ ಟ್ರೇಯೊಂದರಲ್ಲಿ ಬೀರ್ ಬಾಟಲು, ಖಾಲಿ ಗ್ಲಾಸು, ಬೇಯಿಸಿದ ಮೊಟ್ಟೆ, ಪರೋಟಾ ಮತ್ತು ಸೂಪ್ ತಂದಿಟ್ಟ.

ಜಾನಿಗೆ ಬೀರಿನದು ಮೊದಲ ಅನುಭವ. ನಾಲ್ಕು ನಾಲ್ಕು ಬಾರಿ ಬಾರ್‌ಗೆ ಬಂದಿದ್ದಳು. ತಿಂಡಿಯನ್ನು ತಿಂದಿದ್ದಳು. ಆದರೆ ಬೀರ್ ಮುಟ್ಟಿರಲಿಲ್ಲ.

ಅದು ತನಗೆ ಬೇಡ, ಮೊಟ್ಟೆಯಷ್ಟೇ ಸಾಕೆಂದು ಹೇಳಲು ಬಾಯಿ ತೆರೆಯುವಷ್ಟರಲ್ಲೇ, ಹೊಸ ವ್ಯಕ್ತಿ ಪೀಟರ್ ಹೇಳಿದ-

"Please... Please..."

ಕತ್ತೆತ್ತಿ ನೋಡಿದಳು. ಅವನ ಮುಖ ಬೇಡಿಕೆಯ ಮುದ್ದೆಯಾಗಿತ್ತು. ಸೂಜಿಗಲ್ಲಾಗಿತ್ತು.

ಮಾಯೆ ಬಲೆಯನ್ನು ಬೀಸಿತ್ತು. ಮಾತು ಮೋಡಿ ಹಾಕಿತ್ತು.

'ಪ್ಲೀಸ್' ಅವಳ ಯೋಚನೆಗೆ ಲಕ್ವ ಬಡಿಸಿತ್ತು. ಮಂತ್ರಮುಗ್ಧಳಾಗಿ ಕೈಗೆತ್ತಿಕೊಂಡಳು, ಅವನು ಬಗ್ಗಿಸಿದ ನೊರೆನೊರೆಯಾದ ಬೀರಿನ ಗ್ಲಾಸನ್ನು.

ಮೊದಲ ಅನುಭವ-ಮಂಜು ಹೊಳೆ ಹೊಟ್ಟೆಗಿಳಿಯುವ ಅನುಭವ; ಸಿಹಿ ಸಾಗರ ನುಂಗುವ ಅನುಭವ.

ಸುಪ್ತವಾಗಿದ್ದ ಬಯಕೆಯನ್ನು ಕೆದಕಿ ಕೆದರಿ ಮೇಲೇಳಿಸುತ್ತಿತ್ತು- ಅವನ ಒಂದೊಂದು ಮಾತು ಕೂಡ. ಪುಂಗಿಯಾಗಿ ಅವಳ ಹೃದಯವನ್ನು ಗೆದ್ದಿತ್ತು-ಪ್ರತಿ ಮಾತಿಗೂ ಅವನು ಸೇರಿಸುತ್ತಿದ್ದ 'ಪ್ಲೀಸ್... ಪ್ಲೀಸ್...'



ಆ 'ಪ್ಲೀಸ್' ಮೋಡಿ, ನೊರೆನೊರೆ ಯಾಗಿದ್ದ ಬೀರಿನ ಬಟ್ಟಲು ಅವಳ ಕೈಗೇರಿಸಿ ದಂತೆ, ಒಂದು ದಿನ ಅವನ ತೊಡೆಯೇರುವಂತೆ ಮಾಡಿತ್ತು.

"Oh! Darling! I love you... I love you... I love you..."

ಬರಸೆಳೆದಪ್ಪಿ, ಮುತ್ತಿಟ್ಟನು-ಕೆನ್ನೆ, ತುಟಿ, ತೋಳು, ತೊಡೆಗಳೆನ್ನದೆ...

ಬಿಸಿರಕ್ತ ತುಂಬಿದ ಮಾಂಸದ ಚೀಲ-ಹೂವು ಹಾಸಿಗೆಯಾಗಿತ್ತು; ಅವನ ಬಯಕೆಯ ಸರ್ಕಸ್ಸಿಗೆ ಮೇಣವಾಗಿ ಬಗ್ಗಿತ್ತು.

ಠಣ ಠಣ ಠಣ ಠಣ... ಠಣ್... ಠಣ್...ಠಣ್

ಎರಡನೆಯ ಗಂಟೆ ಬಾರಿಸಿತು.

ಗತ ಜೀವನದ ಕನಸಿಂದ ಎಚ್ಚೆತ್ತ ಜಾನಿಯ ಕಿವಿಗೆ ಮತ್ತೆ ಮತ್ತೆ ಕೇಳಿಸುತ್ತಿತ್ತು...

''ಮೇರೇ ಭಾಯಿಯೋ, ಬೆಹೆನೋ... ಔರ್ ದೋಸ್ತೋ...''

"My dear gentlemen..."

''ಅಕ್ಕ ತಂಗಿಯರೇ... ಸ್ನೇಹಿತರೇ... ಬೇಗ ಬನ್ನಿ... ಅದ್ಭುತ ಆಟ, ರೋಮಾಂಚಕ ದೃಶ್ಯ... ಭಯಂಕರ ಆಟ...''

ಜಾನಿ ಯೋಚಿಸಿದಳು-

ಹೌದು-ಇಂದಿನಂಥ ಆಟ ಇನ್ನೊಮ್ಮೆ ಜನ ನೋಡಲಾರರು...

ನಿಜ...ನಿಜ...ನಿಜ...

ತಾನೆಂದೂ ಇನ್ನಿಂಥ ಆಟ ಆಡಲಾರೆ...

ಥೆರೇಸಾ ಕೂಡಾ...

ಅಂಥ ಭಯಂಕರ ಅದ್ಭುತ ಆಟ...

Well of Death.

-ಸಾವಿನ ಬಾವಿ...

ಅದರಲ್ಲಿ ತಾನು, ಥೆರೇಸಾ, ಪೀಟರ್...

ಜಾನಿ ನಕ್ಕಳು-ಬಾವಿಯ ಆಳದಲ್ಲಿ ಆಹಾರ ವಾಗಿ ನಿಂತ ಥೆರೇಸಾಳನ್ನು ನೋಡಿ, ನೋಡಿ.

ಥೆರೇಸಾ-

ತನ್ನ ಬದುಕಿನ ಹೂದೋಟದಲ್ಲಿ ಹಾವಾಗಿ ಹೆಡೆಯಾಡಿದ ಥೆರೇಸಾ... ತಾನು... ಬಣ್ಣ ಬಳೆದುಕೊಂಡು, ಜನರ ಕಣ್ಣಿನ ಬಯಕೆಗೆ ತೃಪ್ತಿ ಕೊಡುವಂಥ ಅರೆನಗ್ನ ವಸ್ತ್ರತೊಟ್ಟು, ಬಾವಿಯಲ್ಲಿ ನೇಮಿತವಾದ ವೃತ್ತದಲ್ಲಿ ತಿರುಗುತ್ತ, ಪೀಟರನ ಮಾಂಸದ ಬಯಕೆಯ ಜ್ವಾಲೆಯನ್ನು ಆರಿಸುತ್ತ, ಬದುಕಿರುವ ಗೊಂಬೆ.

''ಜಾನಿ ಮೆಟ್ಟಿಲು ಹತ್ತಿದಳು ಕತೆಯ well of death ಬಾಹ್ಯ ಹಾಗೂ ಆಂತರಿಕ ಲೋಕಗಳನ್ನು ಅಭಿನ್ನವಾಗಿ ಬೆಸೆಯುವ ಮೂಲಕ ಸಾರ್ಥಕ ಸಂಕೇತವಾಗುತ್ತದೆ. ತನ್ನನ್ನು ಮೋಸಗೊಳಿಸಿದ ಪೀಟರ್‌ನ ವಿರುದ್ಧದ ಸೇಡಿನ ಭಾವನೆ ಹಾಗೂ ತನ್ನ ಜಾಗೆಯನ್ನು ಆಕ್ರಮಿಸಿದ ಥೆರೆಸಾಳ ಬಗೆಗಿನ ಲೈಂಗಿಕ ಅಸೂಯೆ ಇವುಗಳಿಂದ ಹುಟ್ಟಿದ ಜಾನಿಯ ಆಂತರಿಕ ತುಮುಲ ಹಾಗೂ well of death ನಲ್ಲಿ ಸೈಕಲ್ಲುಗಳ ಭೀಕರ ತಿರುಗುವಿಕೆಯ ಕ್ರಿಯೆ – ಇವುಗಳಲ್ಲಿ ಅನ್ಯೋನ್ಯ ಸಂಬಂಧ ಬೆಳೆದು ಬರುವುದರಿಂದ ಕತೆಯ ಯಾವ ವಿವರಗಳೂ ಅನವಶ್ಯವೆನಿಸುವುದಿಲ್ಲ. ಕತೆಯ ಕೊನೆಯಲ್ಲಿ ಬರುವ ತಿರುವು ಅನಿರೀಕ್ಷಿತವಾದರೂ ಅತ್ಯಂತ ಸಹಜವಾಗಿದೆ. ಈರ್ಷೆ, ಅಸೂಯೆ, ವೈಫಲ್ಯಗಳ ಅನುಭವದಿಂದ ಕೆರಳಿದರೂ ಜಾನಿ ಒಬ್ಬ ಪರಿಪೂರ್ಣ ಕಲಾವಿದೆ. ಕಲೆ ಅವಳಿಗೆ ಸ್ತಿಮಿತತೆಯನ್ನು ತಂದುಕೊಡುತ್ತದೆ. ಹೀಗಾಗಿ ಅವಳಿಗೆ ತನ್ನ ಮೇಲೆಯೇ ಜಯ ಸಾಧಿಸುವುದು ಸಾಧ್ಯವಾಗುತ್ತದೆ: 'ಪದರ ಪದರದಾಳದಲ್ಲಿ ಹರಿಯುತ್ತಿದ್ದ ಮದ, ಮಾತ್ಸರ್ಯ, ಸೇಡಿನ ಬೆಂಕಿಹೊಳೆಯಿಂದೆದ್ದ ಜಾನಿ – ಬಾವಿಯ ನೆಲದಿಂದ ಮೇಲೆದ್ದ ಜಾನಿ, ಮತ್ತೊಂದು ಲೋಕವನ್ನು ಮುಟ್ಟಿದಳು.' ಇಲ್ಲಿ ಇಳಿಯುವ ಹಾಗೂ ಏರುವ ಕ್ರಿಯೆ ಎರಡೂ ಸ್ತರಗಳಲ್ಲಿ ನಡೆಯುವುದನ್ನು ಗಮನಿಸಬೇಕು.''

ಜಿ.ಎಸ್. ಅಮೂರ



The insipid creature! The bitch!!

"I love you... I love you... I love you..."

ತೋಳು ತೊಡೆಯೆನ್ನದೆ ಮುತ್ತಿಟ್ಟ ಪೀಟರ್,

"You are my angel"

ಎನ್ನುತ್ತ ತೊಡೆಯೇರಿಸಿಕೊಂಡ ಪೀಟರ್.

"You-a Miraculous Girl"

ಎನ್ನುತ್ತ ಮೈಮೇಲೆ ಮಗುವಿನಂತೆ ಆಟ ವಾಡಿದ ಪೀಟರ್.


ಅವನ ಮಾತಿನ ಮೋಡಿಗೆ ಮರುಳಾಗಿ ಅವನ ಹಿಂದೆ ಹಿಂದೆ ಊರೂರು ಅಲೆದ ತಾನು...

ಠಣ ಠಣ ಠಣ ಠಣ... ಠಣ್.... ಠಣ್....ಠಣ್...

ಮೂರನೆಯ ಗಂಟೆ ಬಾರಿಸಿತು.

ಹೊರಗೆ ಮೋಟಾರು ಸೈಕಲ್ಲಿನ ಸದ್ದು ನಿಂತಿತು.

ಅಲ್ಲಿಂದ ಒಳಬಂದ ಪೀಟರ್ ಬಾವಿ ಯೊಳಗೆ ಇಳಿದ. ಹಾಕಿದ್ದ ಏಣಿಯನ್ನು ಆಳು ಮೇಲೆಳೆದುಕೊಂಡ.



ಕುತೂಹಲ ಕೆರಳಿ ನಿಂತ ಜನರ ಗುಜು ಗುಜು ಸದ್ದಿಗೆ ಲಕ್ಷ ಬಡಿಯಿತು.

ಮೌನವಾವರಿಸಿತು.

ಬಾವಿಯೊಳಗಿದ್ದ ಎರಡು ಬೈಸಿಕಲ್ಲು ಮತ್ತು ಒಂದು ಮೋಟಾರು ಸೈಕಲ್ಲಿನಲ್ಲಿ, ಪೀಟರ್ ಮೋಟಾರು ಸೈಕಲ್ಲನ್ನು ಏರಿ, ಕ್ಲಚ್ಚನ್ನು ಸಡಿಲಿಸಿ ಆಕ್ಸಿಲರೇಟರನ್ನು ತಿರುಗಿಸಿದ...

ಜಾನಿಯ ಪಕ್ಕದಲ್ಲಿದ್ದ ವೆಸ್ಲಿ ಪೀಪಿಯನ್ನೂದಿದ.

ಧಡ ಧಡ ಧಡ ಧಡ...

ಮೊದಲು ತಳದ ಗುಂಡು ಜಾಗದಲ್ಲೇ ಸುತ್ತುತ್ತ ಸುತ್ತುತ್ತ ಕೊನೆಗೆ ಇಳಿಜಾರಾದ ಗೋಡೆ ಯೇರಿಸಿ ರೌಂಡು ಹೊಡೆದನು ಪೀಟರ್. ಮಧ್ಯದಲ್ಲಿದ್ದ ಆಧಾರಸ್ತಂಭವನ್ನೊರಗಿ ನಿಂತಿದ್ದಳು ಥೆರೇಸಾ...

ಮೇಲಿದ್ದ ಜಾನಿ ನೋಡಿದಳು ಕೆಳಗೆ.

ಥೆರೇಸಾ... ಅವಳ ಸುತ್ತ ತಿರುಗುತ್ತಿದ್ದ ಪೀಟರ್.

ಸಾಂಕೇತಿಕ ದೃಶ್ಯವಾಗಿ ಕಂಡಿತು ಅದು ಜಾನಿಗೆ.

ಥೆರೇಸಾ ಮತ್ತು ಪೀಟರ್... ತಾನು ಮತ್ತು ಪೀಟರ್

ವೃತ್ತದೊಳಗೊಂದು ವೃತ್ತ...

''ಜಾನಿ... ನೋಡು, ಹೊಸ ಗೆಳತಿ ಯೊಬ್ಬಳನ್ನ ತಂದಿದ್ದೇನೆ...''

ಪೀಟರ್ ಥೆರೇಸಾಳನ್ನು ಕರೆದು ತಂದ ದಿನ ಹಾಗಂದಿದ್ದನು.

''ಜಾನಿ... ಅವಳಿಗೂ ಚೆನ್ನಾಗಿ ಸೈಕಲ್ಲು ಬಿಡಲು ಬರುತ್ತದೆ... ನಾನು, ನೀನು, ಮತ್ತು ಅವಳು... ಓ ಎಷ್ಟು ಚಂದ... ಅಲ್ಲವೆ ಜಾನಿ?''

ಮಗುವಿನಂತೆ ಕೇಳಿದ್ದ ಪೀಟರ್. ಅವಳು ಉತ್ತರಿಸಿಯೂ ಇದ್ದಳು ಹೌದೆಂದು.

ಅವನು ಮಾಡಿದುದೆಲ್ಲ ಅವಳಿಗೆ ಸರಿ.

ಅವನ ಅಭಿಪ್ರಾಯ, ಧ್ಯೇಯ, ಆಸೆಯೇ ಅವಳ ಅಭಿಪ್ರಾಯ, ಧ್ಯೇಯ, ಆಸೆ.

ಅವನ ಬುದ್ಧಿಯೇ ಅವಳ ಬುದ್ಧಿ.

ತನ್ನ ಹೃದಯವನ್ನೇ ಅವನಿಗಾಗಿ ಮುಡುಪಾಗಿಟ್ಟಿದ್ದಳು.

"Jhony... you are my inspiration... and... and... I am your creation. Oh... Jhony... my darling..."

ಆದರೆ ಒಂದು ದಿನ ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ ತಾನು ನಂಬಲಾರದಂಥ ದೃಶ್ಯವನ್ನು ನೋಡಿದಳು-

ಅಂದು ಬಾಗಿಲು ತೆಗೆದಾಗ ಕಂಡಿದುದು ಪೀಟರ್-ತನ್ನ ಒಲವಿನ ಪೀಟರ್, ತನ್ನ ಬದುಕಾದ ಪೀಟರ್, ತನ್ನ ನಾಡಿಯಾದ ಪೀಟರ್, ತನ್ನ ಸರ್ವಸ್ವವಾದ ಪೀಟರ್. ಮತ್ತು

ಹಾವು ತುಳಿದವಳಂತೆ ಬೆಚ್ಚಿ, ತನ್ನ ರೂಮಿಗೋಡಿ ಮಂಚದ ಮೇಲೆ ಬಿದ್ದು ಹೊರಳಿ ಹೊರಳಿ ಅತ್ತಳು.

ಬೆನ್ನ ಹಿಂದೇ ಓಡಿ ಬಂದ ಪೀಟರ್ ನರಳಿದ-

"Oh... sorry dear... sorry... forget it... please... please... forget all that has happened..."

"No... no... don't disturb me... let me be alone... go out of my sight... you...you..."

ಏನನ್ನಾದರೂ ಹೇಳಬೇಕೆಂದು ಬಾಯಿ ತೆರೆದವಳು ಏನು ಹೇಳಬೇಕೆಂಬುದನ್ನೇ ಅರಿಯದೆ ಅತ್ತಳು... ಬಿಕ್ಕಿ ಬಿಕ್ಕಿ ಅತ್ತಳು... ದಿಂಬು ಮುಖವಾಡ ಮಾಡಿಕೊಂಡು ಅತ್ತಳು.

ವೆಸ್ಲಿ ಪೀಪಿಯೂದಿದ.

ಪೀಟರ್ ಆಕ್ಸಿಲರೇಟರನ್ನು ಹಿಂದಕ್ಕೆ ತಿರುಗಿಸಿದ. ನಿಧಾನವಾಗಿ ನೆಲ ಮುಟ್ಟಿದ ಜನ ಚಪ್ಪಾಳೆ ಹೊಡೆದರು.

ಈಗ ಅದೇ ಮೋಟಾರು ಸೈಕಲ್ಲಿನ ಮೇಲೆ ಥೆರೇಸಾ ಕುಳಿತಳು. ಒಂದು ಬೋಳು ಬೈಸಿಕಲ್ಲನ್ನು ಪೀಟರ್ ಏರಿದ. ಗುಂಡಾದ ನೆಲದ ಮೇಲೆ ಇಬ್ಬರೂ ಇದಿರುಬದಿರಾಗಿ ನಿಂತರು.

ಗಳಿಗೆ ಬಿಟ್ಟು ವೆಸ್ಲಿ ಪೀಪಿಯೂದಿದ.

ಬೇರೆ ಬೇರೆ ವೃತ್ತದಲ್ಲಿ ಗೋಡೆಯೇರಿದರು ಇಬ್ಬರು.

ಪೀಟರ್ ಮತ್ತು ಥೆರೇಸಾ ತಿರುಗುತ್ತಲೇ ಇದ್ದರು-ಬೇರೆ ಬೇರೆ ವೃತ್ತದಲ್ಲಿ ಸುತ್ತುತ್ತಲೇ ಇದ್ದರು.

ಪೀಟರ್ ಮತ್ತು ಥೆರೇಸಾ...

ಜಾನಿಯ ಮೈಕೂದಲು ಮುಳ್ಳಾಯಿತು.

ದಿನ ಕಳೆದಂತೆ ಪೀಟರ್ ತನ್ನಿಂದ ದೂರವಾಗುತ್ತಿದ್ದುದನ್ನು ಜಾನಿ ಕಂಡುಕೊಂಡಳು.

ಎಷ್ಟೋ ಬಾರಿ ಅವನನ್ನು ಎದುರಿಸಲೆತ್ನಿಸಿದಳು. ಆದರೆ ಅವನು ಹೇಳುತ್ತಿದ್ದನು.

"Please dear... please..."

ಕಳ್ಳು ಕುಡಿದ ಕೆಂಪುಗಣ್ಣು ತೋರಿಸಿ ಹೇಳುತ್ತಿದ್ದ ಮಾತದು.

ಒಳಒಳಗೆ ಹರಿಯುತ್ತಿದ್ದ ಕೆಂಡ ಹೊಳೆ ಕೆರಳಿ ಜ್ವಾಲೆಯಾಡಿದುದು ಬೆಳಿಗ್ಗೆಯಷ್ಟೆ.

ಜಾನಿ ಮತ್ತೆ ಮತ್ತೆ ಬೆಳಗಿನ ಪ್ರಸಂಗವನ್ನೇ ಮಗುಚಿ ಹಾಕುತ್ತಿದ್ದಳು.

ಥೆರೇಸಾ ಮಾರುಕಟ್ಟೆಗೆಂದು ಹೋದ ಹೊತ್ತಿನಲ್ಲಿ ಪೀಟರನ್ನು ಮಾತನಾಡಿಸಿದ್ದಳು.

"Dear... ನಾನು ನಿನ್ನನ್ನು ಪ್ರೀತಿಸಲಿಲ್ಲವೆ?"

ಮಾತು ಎಲ್ಲಿಗೆ ಒಯ್ಯಬಹುದೆಂದು ತಿಳಿದ ಪೀಟರ್ ನಿರಾಸಕ್ತಿಯಿಂದ ಹೂಂಗುಟ್ಟಿದ.

"ನನ್ನೀ ದೇಹವನ್ನೇ ನಿನಗರ್ಪಿಸಲಿಲ್ಲವೆ?"

"Please..."

ಮತ್ತೆ ಮತ್ತೆ ಅದೇ ಮಾತು- 'ಪ್ಲೀಸ್... ಪ್ಲೀಸ್...'

"ಮತ್ತೇಕೆ ನೀನು ಹಾಗೆ ಮಾಡಿದೆ?"

"ನಿನಗೆ ಆ ವಿಷಯ ಬಿಟ್ಟು ಬೇರೆ ಮಾತೇ ಇಲ್ಲವೇ ಜಾನಿ?...."

''ನನಗೆ ನೀನೊಬ್ಬನೇ ಎಂದು ತಿಳಿದೆ. ನೀನು ಹಾಗೆ ತಿಳಿಯಲಿಲ್ಲ. ಒಂದು ದಿನ ನೀನು ಡಾರ್ಲಿಂಗ್ ಎಂದೆ... ಏಂಜೆಲ್ ಎಂದೆ... ಬ್ಯೂಟಿ ಎಂದೆ... ಆದರೆ... ಈಗ... ಈಗ ನಾನು ಮಲಗೆದ್ದ ಹಾಸಿಗೆಯಲ್ಲಿ...''

''ಜಾನಿ... ಪ್ಲೀಸ್... ಮತ್ತೆ ಮತ್ತೆ ಅದೇ ಮಾತನ್ನೇ ಹೇಳಬೇಡ...''

''ನನ್ನ ಬದುಕಿಗೆ ಆಧಾರವಾಗಿದ್ದ ಮಾತುಗಳು ಅವು-ಪೀಟರ್, ಆದರೆ ಎಲ್ಲ ಭ್ರಮೆಯಾಯಿತು... ಇಂದು ಅವಳು ನಿನ್ನ ಬ್ಯೂಟಿ... ನಿನ್ನ ಏಂಜೆಲ್...''

ಹಾವಿನಂತೆ ಸುತ್ತಲೆತ್ನಿಸಿದ ಅವಳ ಕೈಯನ್ನು ಕೊಡವಿ ಕೂಗಿದ-

"Damn... the insipid creature, the bitch...."

ಕೂಗಿ ಹೊರಗೋಡಿದ ಪೀಟರ್.

ಅನಿರೀಕ್ಷಿತವಾಗಿ ಬಂದ ಮಾತು. ಅವನು ತನ್ನ ಕತ್ತು ಹಿಸುಕಿದ್ದರೂ ವ್ಯಥಿಸುತ್ತಿರಲಿಲ್ಲ. ಆದರೆ ಆ ಮಾತನ್ನು ಕೇಳಲಾರದವಳಾದಳು.

ಅವನಾಡಿದ ಒಂದೊಂದು ಮಾತೂ ಬಸಿರಾಳದಲ್ಲಡಗಿದ್ದ ಸೇಡನ್ನು ತಿವಿದೆಬ್ಬಿಸುತ್ತಿತ್ತು. ಹೃದಯವೇ ಹೋಳಾಗುತ್ತಿತ್ತು.

ಅವನ ಬೆನ್ನಿಗೇ ಓಡಿ ಬೊಬ್ಬೆಯಿಟ್ಟಳು.

"You... you... I will prove that I am not a bitch, not an insipid creature... I will prove that I am a woman-woman with flesh and blood..."

ಅವನಿಗೆಷ್ಟು ಕೇಳಿಸಿತ್ತೊ?

ಆದರೂ ಬೀಸುತ್ತಿದ್ದ ಗಾಳಿಯೇ ತನ್ನೆದುರಾಳಿಯೆನ್ನುವಂತೆ, ಮುಷ್ಟಿ ಬಿಗಿಮಾಡಿಕೊಂಡು ಕಿರುಚಿದಳು.

"If you just go out of the way... finish... there ends the matter."

-ತನಗೂ ಥೆರೇಸಾಳಿಗೂ ಸರ್ಕಸ್ಸು ಕಲಿಸುವಾಗ ಪೀಟರ್ ಹೇಳಿಕೊಟ್ಟ ಪ್ರಥಮ ಪಾಠ....

There ends the matter...

ವೆಸ್ಲಿ ಪೀಪಿಯೂದಿದ.

ಇಬ್ಬರೂ ನೆಲ ಮುಟ್ಟಿದರು.

ಜನ ಮತ್ತೆ ಚಪ್ಪಾಳೆ ಹೊಡೆದರು.

ಒಳಗೆ ಬಂದು ನಿಂತ ರೊಬೇರೋ ಮತ್ತೆ ಮೈಕಿನಲ್ಲಿ ಹೇಳಿದ.

''ಈಗ ಕೊನೆಯ ಅದ್ಭುತ ನೋಡಿರಿ....''

"Now see the most courageous feat which will be performed by the three great giants..."

ಈಗ ತನ್ನ ಸರದಿ.

ಏಣಿಯಿಂದ ತಳ ಮುಟ್ಟಿದಳು.

ಥೆರೇಸಾ ಇಳಿದ ಮೋಟಾರು ಸೈಕಲ್ಲನ್ನೇ ನೋಡಿದಳು-ತನ್ನ ಸೇಡನ್ನು ತೀರಿಸಿಕೊಳ್ಳಲು ಸಿದ್ಧವಾದ ಆಯುಧ; ತನ್ನ ನೋವನ್ನೆಲ್ಲ ಸುಟ್ಟು ಬೂದಿ ಮಾಡುವ ಆಯುಧ.

ಬದಿಯಲ್ಲಿ ನಿಂತು, ಕ್ಲಚ್ ಒತ್ತಿ ಆಕ್ಸಿಲರೇಟರನ್ನು ತಿರುಗಿಸಿದಳು.

ಬೋಳು ಸೈಕಲ್ಲನ್ನೇರಿದರು-ಪೀಟರ್ ಮತ್ತು ಥೆರೇಸಾ.

ಮೂವರೂ ಮೂರು ದಿಕ್ಕಿನಲ್ಲಿ, ತ್ರಿಕೋನಗಳಲ್ಲಿ ವಾಹನಗಳ ಮೇಲೆ ಕುಳಿತು, ವೆಸ್ಲಿ ಪೀಪಿಯೂದುವುದನ್ನೇ ಕಾಯುತ್ತಿದ್ದರು.

ರೊಬೇರೋ ಕೂಗುತ್ತಿದ್ದ-

''ಮಹನೀಯರೇ, ಈಗ ಅತ್ಯಂತ ಚಮತ್ಕಾರಿಕ ಹಾಗೂ ಭಯಂಕರ ಆಟ ಪ್ರಾರಂಭವಾಗುತ್ತದೆ... ಮೂವರೂ ಏಕಕಾಲದಲ್ಲಿ ಸೈಕಲ್ಲುಗಳನ್ನು ಗೋಡೆಯ ಮೇಲೆ ಏರಿಸುತ್ತಾರೆ... ಮಹಾಜನರು ನಿಶ್ಶಬ್ದವಾಗಿ ನಿಂತು ನೋಡಿ ಸಹಕರಿಸಬೇಕಾಗಿ ವಿನಂತಿ...''

ವೆಸ್ಲಿ ಪೀಪಿಯೂದಿದ.

ಬಟ್ಟಲಗಲ ಕಣ್ಣು ಬಿಟ್ಟ ಜನ, ಉಸಿರು ಬಿಗಿಹಿಡಿದು ನಿಂತರು.

ಜಾನಿ ಕ್ಲಚ್ಚನ್ನು ಸಡಿಲಿಸಿದಳು. ವಾಹನ ಮುಂದೋಡಿತು.

ಅವಳನ್ನು ಅನುಸರಿಸಿ ಥೆರೇಸಾ ಮತ್ತು ಪೀಟರ್ ಪೆಡಲನ್ನು ಒತ್ತಿದರು. ಒಂದು ನಿಮಿಷ ತಳದಲ್ಲೇ ಒಬ್ಬರನ್ನೊಬ್ಬರು ಹಿಂಬಾಲಿಸಿ ಸುತ್ತುತ್ತಿದ್ದರು-ಗೂಟಕ್ಕೆ ಕಟ್ಟಿದ ಪಶುಗಳಂತೆ. ಎರಡು ಮೂರು ಬಾರಿ ಸುತ್ತಿದ ನಂತರ ಕ್ರಮ ಕ್ರಮವಾಗಿ ಇಳಿಜಾರು ಗೋಡೆಯನ್ನೇರಿದರು.

ವೇಗವನ್ನು ಮೆಟ್ಟಿಲು ಮೆಟ್ಟಿಲಾಗಿ ಗೆದ್ದುಕೊಂಡರು.

ಆದರೆ ಜಾನಿ ಗೆದ್ದುಕೊಂಡದ್ದು ಬರೀ ಶೂನ್ಯ.

ಒಮ್ಮೆ ಮೇಲೆ, ಒಮ್ಮೆ ಕೆಳಗೆ- ಅಂಕುಡೊಂಕಾಗಿ, ಯಾವುದೋ ವೃತ್ತದಲ್ಲಿ ಹಾಕಿಟ್ಟ ಗೆರೆಯಂತೆ ಓಡಾಡಿದರು ಮೂವರೂ.

ಒಮ್ಮೆ-ನಿಂತ ಜನರ ಕಾಲಿನ ಬುಡ; ಮತ್ತೊಮ್ಮೆ-ತಳದ ನೆಲದಂಚು...

ರೊಂಯಿ... ಸರ್... ರೊಂಯಿ... ಸರ್...

ಧಗ ಧಗ ಧಗ ಧಗ...

ಜನ ಭ್ರಾಂತರಾಗಿ ಚಪ್ಪಾಳೆ ಹೊಡೆಯುತ್ತಿದ್ದರು...

ಒಂದು... ಎರಡು... ಮೂರು... ನಾಲ್ಕು...

ವೇಗ ಹೆಚ್ಚಿದಂತೆ ಜನ ಜಾನಿಯ ಕಣ್ಣಿಂದ ದೂರ ದೂರ ಹೋದರು...

ದೂರ... ದೂರ... ಬಲು ದೂರ...

ಅವಳಿಗೆ ಕಂಡದ್ದು ಬರೀ ಶೂನ್ಯ...

ದೂರ... ದೂರ... ಬಲು ದೂರ...

ಭೂಮಿ ಆಗಸಗಳಂತರ...

ಕಪ್ಪು ಬಿಳುಪಿನಂತರ...

ಸಾವು ಬದುಕಿನಂತರ...

ಶೂನ್ಯಲೋಕ...

ಪದರ ಪದರದಾಳದಲ್ಲಿ ಹರಿಯುತ್ತಿದ್ದ ಮದ, ಮಾತ್ಸರ್ಯ, ಸೇಡಿನ ಜೆಂಕಿ ಹೊಳೆಯಿಂದೆದ್ದ ಜಾನಿ-ಬಾವಿಯ ನೆಲದಿಂದ ಮೇಲೆದ್ದೆ ಜಾನಿ ಮತ್ತೊಂದು ಲೋಕವನ್ನು ಮುಟ್ಟಿದ್ದಳು...

ಆಗ ಅವಳಿಗೆ ಕಂಡಿದ್ದು ತಾನು ಹಿಡಿದಿದ್ದ ಮೋಟಾರು ಸೈಕಲ್ಲು ಮಾತ್ರ. ಮುಂದೆ ಕಾಣುತ್ತಿದ್ದುದು ಧ್ಯೇಯದ ಕೋಲಿಗೆ ತೂಗು ಬಿಟ್ಟಿದ್ದ ಕರ್ತವ್ಯ ಮಾತ್ರ. ಮಣ್ಣು ಲೋಕದಿಂದ ಶೂನ್ಯಕ್ಕೇರಿದವಳ ಕಿವಿಗೆ ಬೀಳುತ್ತಿದ್ದುದು ಚಪ್ಪಾಳೆ ಸುರಿಮಳೆಯ ಸದ್ದು ಮಾತ್ರ.

ರೊಂಯಿ.... ಸರ್... ರೊಂಯಿ... ಸರ್...

ಕರ್ತವ್ಯದ ಬೆಳಕಿನಲ್ಲಿ ಕಣ್ಣು ಮಂಜಾಗುವಾಗಲೇ ಮತ್ತೆ ಕೇಳಿಸಿದುದು ಪೀಪಿಯ ಸದ್ದು-ಮೇಲೆ ಹಾರುತ್ತಿರುವವಳನ್ನು ಕೊಕ್ಕೆ ಹಾಕಿ ಎಳೆದಂತೆ ಬಂದ ಪೀಪಿಯ ಸದ್ದು. ಅವಳಿಗರಿವಿಲ್ಲದಂತೆ ಆಕ್ಸಿಲರೇಟರು ತಿರುಗಿತು. ಕ್ಲಚ್ಚು ಬಿಗಿಯಾಯಿತು.

ಅವಳಿಗರಿವಿಲ್ಲದಂತೇ ವಾಹನ ನೆಲ ಮುಟ್ಟಿತು; ನಿಂತಿತು.

ನಿಂತಾಗ ಅವಳು ಕಂಡಿದ್ದು ಬಾವಿಯ ಮೇಲಂಚಿನ ತುದಿಯಲ್ಲಿ ನಿಂತು, ಸಂತೋಷ ಭರಿತರಾಗಿ, ದಿಗ್ಭ್ರಾಂತರಾಗಿ ಮೈಮರೆತು ಚಪ್ಪಾಳೆ ತಟ್ಟುತ್ತಿದ್ದ ಜನ; ಏದುಸಿರು ಬಿಡುತ್ತಿದ್ದರೂ ಅದನ್ನು ಕಂಡು ಹಸನ್ಮುಖಿಗಳಾದ ಪೀಟರ್ ಮತ್ತು ಥೆರೇಸಾ.

ಸುತ್ತ ನೆರೆದ ಪ್ರೇಕ್ಷಕರ ಕಣ್ಣಿನಲ್ಲಿ ವಿಜಯೋತ್ಸಾಹಿಯಾಗಿ ಕಂಡ ಜಾನಿ ಸೋತಿದ್ದಳು-ಹೊಸ ಅನುಭವ ಪಡೆದಿದ್ದಳು.


ಆಳು ಏಣಿಯೊಂದನ್ನು ಇಳಿಬಿಟ್ಟನು.

ಜನ ಚಪ್ಪಾಳೆ ಹೊಡೆಯುತ್ತಲೇ ಇದ್ದರು.

ಮೆಟ್ಟಲು ಮೆಟ್ಟಲಾಗಿ ಏರಿದಳು ಜಾನಿ-ಬಾವಿಯ ಆಳದಿಂದ ಮೇಲಕ್ಕೆ ಮೇಲಕ್ಕೆ.

1956

(ಪ್ರಸಂ ಕಥಾಮಾಲಿಕೆಯ ಕೆ. ಸದಾಶಿವ-
ಸಮಗ್ರ ಕತೆಗಳು ಸಂಗ್ರಹದಿಂದ)



ಶಂಕರ ಪಾಟೀಲ

ವಿಶ್ವ ಭಾರತಿ – 5

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್

ಮಂಗಳವಾರದ ಒಂದು ಮಧ್ಯಾಹ್ನ

ಭಾವನಾ ಮೇ, 2000

ರೈಲು ಮರಳು ಬಂಡೆಗಲ್ಲಿನ ಗವಿಯಿಂದ ಹೊರಬಂದು ಬಾಳೆಗಿಡದ ವಿಶಾಲ ಬಯಲಿನ ನಡುವೆ ಹೋಗುತ್ತಿತ್ತು. ಸಮುದ್ರದ ಮೇಲಿನ ಬಿಸಿಗಾಳಿಗೆ ಬದಲಾಗಿ ಈಗ ತಣ್ಣನೆಯ ಗಾಳಿ ಬೀಸುತ್ತಿತ್ತು. ಅದರ ಜೊತೆಗೇ ಧೂಳು ತುಂಬಿದ ಹೊಗೆಯೂ ಕಿಟಕಿ ಮೂಲಕ ಒಳನುಗ್ಗಿತು. ರೈಲು ಹಳಿಗಳಿಗೆ ಸಮಾನಾಂತರವಾಗಿದ್ದ ಕಿರುದಾರಿಯಲ್ಲಿ ಹಸುರು ಬಾಳೆಕಾಯಿಗಳನ್ನು ತುಂಬಿದ್ದ ಎತ್ತಿನ ಗಾಡಿಗಳು ಸಾಲಾಗಿ ಹೋಗುತ್ತಿದ್ದವು. ರಸ್ತೆಯಿಂದಾಚೆಗೆ ಕೃಷಿ ಮಾಡದ ಭೂಮಿಯ ನಿರ್ದಿಷ್ಟವಾದ ಜಾಗಗಳಲ್ಲಿ ಆಫೀಸು ಕಟ್ಟಡಗಳಿದ್ದವು. ವಿದ್ಯುತ್ ಫ್ಯಾನುಗಳಿದ್ದ ಆ ಆಫೀಸುಗಳನ್ನು ಕೆಂಪು ಇಟ್ಟಿಗೆಗಳಿಂದ ಕಟ್ಟಿದ್ದರು. ಕೆಲವು ಮನೆಗಳೂ ಇದ್ದು, ಅವುಗಳ ಟೆರೇಸ್ ಮೇಲೆ ಬಿಳಿಯ ಪುಟ್ಟ ಟೇಬಲ್‌ಗಳು ಹಾಗೂ ಕುರ್ಚಿಗಳನ್ನು ಇಟ್ಟಿದ್ದರು. ಮನೆಯ ಸುತ್ತ ಉದ್ದ ಮರಗಳೂ, ಗುಲಾಬಿ ಪೊದೆಗಳೂ ಇದ್ದವು. ಬೆಳಗಿನ ಹನ್ನೊಂದು ಗಂಟೆಯ ಆ ಸಮಯದಲ್ಲಿ ಬಿಸಿಲಿನ್ನೂ ತೀಕ್ಷ್ಣವಾಗಿರಲಿಲ್ಲ.

'ಕಿಟಕಿ ಮುಚ್ಚು, ತಲೆಕೂದಲಿಗೆಲ್ಲ ಧೂಳು ಮೆತ್ತಿಕೊಳ್ಳುತ್ತದೆ' ಹೆಂಗಸು ಹೇಳಿದಳು.

ಹುಡುಗಿ ಕಿಟಕಿ ಮುಚ್ಚಲು ಪ್ರಯತ್ನಿಸಿದಳು. ಆದರೆ ಬಿಗಿಯಾಗಿದ್ದ ಅದನ್ನು ಅವಳಿಂದ ತಳ್ಳಲಾಗಲಿಲ್ಲ.

ಥರ್ಡ್‌ಕ್ಲಾಸಿನ ಆ ಕಂಪಾರ್ಟ್‌ಮೆಂಟಿನಲ್ಲಿ ಅವರಿಬ್ಬರೇ ಪ್ರಯಾಣಿಕರಿದ್ದದ್ದು. ತೆರೆದೇ ಇದ್ದ ಕಿಟಕಿಯಿಂದ ಹೊಗೆ, ಕಿಡಿ ದಟ್ಟವಾಗಿ ಬರುತ್ತಿದ್ದುದರಿಂದ ಹುಡುಗಿ ಎದ್ದು, ಎದುರಿನ ಸೀಟಿಗೆ ಹೋಗಿ, ಸೀಟಿನ ಮೇಲಿಟ್ಟಿದ್ದ ವಸ್ತುಗಳನ್ನು ಪಕ್ಕಕ್ಕಿಟ್ಟು, ಅಲ್ಲಿ ಕುಳಿತಳು. ಅವರ ಜೊತೆ ಹೆಚ್ಚು ವಸ್ತುಗಳೇನೂ ಇರಲಿಲ್ಲ; ತಿಂಡಿಯಿದ್ದ ಒಂದು ಪ್ಲಾಸ್ಟಿಕ್ ಚೀಲ ಹಾಗೂ ದಿನಪತ್ರಿಕೆಯಿಂದ ಸುತ್ತಿದ್ದ ಒಂದು ಹೂಗುಚ್ಛ ಅಷ್ಟೆ. ಈಗ ಹುಡುಗಿ ತನ್ನ ತಾಯಿಗೆದುರಾಗಿ ಕಿಟಕಿಯಿಂದ ಸ್ವಲ್ಪ ದೂರ ಕುಳಿತಿದ್ದಳು. ಅವರಿಬ್ಬರೂ ದುಃಖಸೂಚಕವಾದ ಸಾಮಾನ್ಯ ಉಡುಪು ತೊಟ್ಟಿದ್ದರು.

ಹುಡುಗಿಗೆ ಹನ್ನೆರಡು ವರ್ಷಗಳಿದ್ದಿರಬಹುದು. ಮೊದಲ ಸಲ ಅವಳು ರೈಲು ಪ್ರಯಾಣ ಮಾಡುತ್ತಿದ್ದಳು. ಕೃಶವಾದ ದೇಹ, ಸುಕ್ಕುಗಟ್ಟಿದ ಮುಖ, ಮಾಸಿದ ಉಡುಪು-ಇವುಗಳಿಂದಾಗಿ ಆ ಹೆಂಗಸು ಅವಳ ತಾಯಿ ಎನ್ನಬಹುದಾದುದಕ್ಕಿಂತ ಹೆಚ್ಚು ವಯಸ್ಸಾದವಳಂತೆ ಕಾಣುತ್ತಿದ್ದಳು. ಬೆನ್ನು ಸೆಟೆಸಿ ಕುಳಿತಿದ್ದ ಆಕೆಯ ತೊಡೆಯ ಮೇಲೆ ಒಂದು ಚರ್ಮದ ಬ್ಯಾಗ್ ಇದ್ದು ಅದನ್ನವಳು ಎರಡೂ ಕೈಗಳಿಂದ ಭದ್ರವಾಗಿ ಹಿಡಿದುಕೊಂಡಿದ್ದಳು. ಬಡತನದ ಪ್ರತಿರೂಪದಂತಿದ್ದ ಅವಳಲ್ಲಿ ಒಂದು ರೀತಿಯ ಘನತೆಯಿರುವುದನ್ನು ಕಾಣಬಹುದಿತ್ತು.

ಹನ್ನೆರಡರ ವೇಳೆಗೆ ಬಿಸಿಲು ತೀಕ್ಷ್ಣವಾಯಿತು. ಪಟ್ಟಣವಿಲ್ಲದ ನಿಲ್ದಾಣದಲ್ಲಿ ಹತ್ತು ನಿಮಿಷಗಳ ಕಾಲ ನಿಂತ ರೈಲು ನೀರು ತುಂಬಿಸಿಕೊಂಡಿತು. ಕಿಟಕಿಯಿಂದಾಚೆ ನಿಗೂಢ ಮೌನವಿದ್ದು ಬಾಳೆಗಿಡಗಳ ನೆರಳು ಸದ್ದಿಲ್ಲದೆ ಮಲಗಿತ್ತು. ಆದರೆ ಕಂಪಾರ್ಟ್‌ಮೆಂಟಿನೊಳಗೆ ಗಾಳಿ ಹಸಿಚರ್ಮದ ವಾಸನೆಯಿಂದ ಕೂಡಿದ್ದು ಅಸಹನೀಯವಾಗಿತ್ತು. ರೈಲು ಅದೇ ನಿಧಾನ ಗತಿಯಲ್ಲಿಯೇ ಹೋಗುತ್ತಿದ್ದು, ಮರದ ಮನೆಗಳಿದ್ದ ಒಂದೇ ರೀತಿಯ ಎರಡು ಪಟ್ಟಣಗಳಲ್ಲಿ ನಿಂತು ಮತ್ತೆ ಹೊರಟಿತ್ತು. ಹೆಂಗಸು ತೂಕಡಿಸುತ್ತಿದ್ದು ಹಾಗೇ ನಿದ್ದೆ ಹೋದಳು. ಹುಡುಗಿ ತನ್ನ ಶೂಗಳನ್ನು ಕಳಚಿ ಪಕ್ಕಕ್ಕಿಟ್ಟು, ವಾಷ್‌ಬೇಸಿನ್ನಿನ ಬಳಿ ಹೋಗಿ ಹೂಗುಚ್ಛಕ್ಕೆ ಸ್ವಲ್ಪ ನೀರು ಹಾಕಿದಳು.

ಹುಡುಗಿ ಹಿಂತಿರುಗುವ ವೇಳೆಗೆ ಹೆಂಗಸು ಎದ್ದು ತಿಂಡಿ ತಿನ್ನಲು ಕಾಯುತ್ತಿದ್ದಳು. ಮಗಳಿಗೆ ಸ್ವಲ್ಪ ಚೀಸ್, ಅರ್ಧ ಕೇಕ್ ಮತ್ತು ಸ್ವಲ್ಪ ಬ್ರೆಡ್ ಕೊಟ್ಟು, ತಾನೂ ಅಷ್ಟನ್ನೇ ಚೀಲದಿಂದ ತೆಗೆದು

ಕೊಂಡಳು. ಅವರು ತಿಂಡಿ ತಿನ್ನುತ್ತಿದ್ದಾಗ ರೈಲು ಕಬ್ಬಿಣದ ಸೇತುವೆಯೊಂದನ್ನು ನಿಧಾನವಾಗಿ ದಾಟಿ, ಹಿಂದೆ ಸಿಕ್ಕಿದಂತಹುದೇ ಮತ್ತೊಂದು ಪಟ್ಟಣವನ್ನು ದಾಟಿ ಮುಂದೆ ಹೋಗುತ್ತಿತ್ತು. ಹಿಂದಿನ ಪಟ್ಟಣಗಳಿಗೂ ಈಗ ಸಿಕ್ಕಿದ ಪಟ್ಟಣಕ್ಕೂ ಇದ್ದ ಒಂದೇ ಒಂದು ವ್ಯತ್ಯಾಸವೆಂದರೆ ಈ ಪಟ್ಟಣದ ಪೇಟೆಬೀದಿಯಲ್ಲಿ ಜನಜಂಗುಳಿಯಿತ್ತು. ಸುಡುಬಿಸಿಲಿನಲ್ಲಿ ವಾದ್ಯವೃಂದವೊಂದು ಉತ್ಸಾಹದಿಂದ ಹಾಡೊಂದನ್ನು ನುಡಿಸುತ್ತಿರುವುದು ಕೇಳಿಸಿತು. ದಾರಿಯ ಇನ್ನೊಂದು ಬದಿಯಲ್ಲಿ ಬಾಳೆಗಿಡಗಳ ತೋಟ ಮುಗಿದು, ಬಿರುಕು ಬಿಟ್ಟ ನೆಲ ಉದ್ದಕ್ಕೂ ಕಾಣಿಸುತ್ತಿತ್ತು.


ಹೆಂಗಸು ತಿನ್ನುವುದನ್ನು ನಿಲ್ಲಿಸಿದಳು.

''ನಿನ್ನ ಶೂಗಳನ್ನು ಹಾಕಿಕೊ' ಆಕೆ ಹೇಳಿದಳು.

ಹುಡುಗಿ ಕಿಟಕಿಯಿಂದಾಚೆ ಕಣ್ಣಾಡಿಸಿದಳು. ಬಂಜರು ನೆಲ ಬಿಟ್ಟರೆ ಬೇರೇನೂ ಕಾಣಿಸಲಿಲ್ಲ. ರೈಲು ಈಗ ಮೊದಲಿಗಿಂತ ಹೆಚ್ಚು ವೇಗವಾಗಿ ಹೋಗುತ್ತಿತ್ತು. ಹುಡುಗಿ ಕೈಯಲ್ಲಿದ್ದ ತಿಂಡಿಯ ಚೂರನ್ನು ಪುನಃ ಪ್ಲಾಸ್ಟಿಕ್ ಬ್ಯಾಗಿಗೆ ಹಾಕಿ ಸರಸರನೆ ಶೂ ಹಾಕಿಕೊಂಡಳು. ತಾಯಿ ಅವಳಿಗೆ ಬಾಚಣಿಗೆ ಕೊಟ್ಟು 'ತಲೆ ಬಾಚಿಕೋ' ಎಂದಳು.

ಹುಡುಗಿ ತಲೆಬಾಚಿಕೊಳ್ಳುತ್ತಿದ್ದಾಗ. ರೈಲು ಜೋರಾಗಿ ಸಿಳ್ಳು ಹಾಕಿತು. ಹೆಂಗಸು ತನ್ನ ಕತ್ತಿನ ಸುತ್ತ ಇದ್ದ ಬೆವರನ್ನು ಒರೆಸಿಕೊಂಡು, ಮುಖದ ಜಿಡ್ಡನ್ನು ಕೈಯಿಂದ ಉಜ್ಜಿಕೊಂಡಳು. ಹುಡುಗಿ ತಲೆಬಾಚಿ ಮುಗಿಸುವ ವೇಳೆಗೆ ರೈಲು ಪಟ್ಟಣದ ಹೊರವಲಯವನ್ನು ಪ್ರವೇಶಿಸಿತ್ತು. ಹಿಂದಿನ ಪಟ್ಟಣಗಳಿಗೆ ಹೋಲಿಸಿದರೆ ಈ ಪಟ್ಟಣದ ಮನೆಗಳು ದೊಡ್ಡವಿದ್ದವು. ಆದರೆ ಲವಲವಿಕೆಯ ವಾತಾವರಣ ಕಾಣದೆ ಮಂಕು ಕವಿದಂತೆ ತೋರುತ್ತಿದ್ದವು.

'ಬಾತ್‌ರೂಮಿಗೆ ಹೋಗಿ ಬರುವುದಿದ್ದರೆ ಬೇಗ ಹೋಗಿ ಬಾ. ಆಮೇಲೆ ಬಾಯಾರಿಕೆಯಾದರೂ ಎಲ್ಲೂ ನೀರು ಕುಡಿಯಬೇಡ, ಮತ್ತೆ ಚಂಡಿಮಾಡಬೇಡ' ಎಂದು ಹೆಂಗಸು ಹುಡುಗಿಗೆ ಎಚ್ಚರಿಕೆ ನೀಡಿದಳು.



ಹುಡುಗಿ ವಿಧೇಯಳಾಗಿ ತಲೆಯಲ್ಲಾಡಿಸಿದಳು. ಕಿಟಕಿಯಿಂದ ಹೊಗೆ ಗಾಳಿ ಒಳಗೆ ತೂರಿ ಬಂದು, ಕಣ್ಣಲ್ಲಿ ನೀರು ಬರಿಸಿತು. ಅದರ ಜೊತೆಗೇ ಕಿವಿಗಡಚಿಕ್ಕುವ ರೈಲಿನ ಸಿಳ್ಳು ಕೇಳಿಸಿತು. ಹೆಂಗಸು ಉಳಿದ ತಿಂಡಿಯನ್ನು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಸರಿಯಾಗಿ ಜೋಡಿಸಿಕೊಂಡು, ಅದನ್ನು ಕೈಚೀಲದಲ್ಲಿಟ್ಟುಕೊಂಡಳು. ಕಿಟಕಿಯ ಮೂಲಕ ಊರು ಆ ಒಂದು ಕ್ಷಣ ಇಡಿಯಾಗಿ ಕಾಣಿಸಿತು. ಹುಡುಗಿ ಒದ್ದೆಯಾಗಿದ್ದ ಹೂಗುಚ್ಛವನ್ನು ಕಿಟಕಿಯ ಬಳಿ ತಂದು ನೀರನ್ನು ತೋರಿಸುತ್ತ ತಾಯಿಯ ಕಡೆ ನೋಡಿದಳು. ಆಕೆ ಸಂತೋಷದ ನೋಟ ಬೀರಿದಳು. ಹುಡುಗಿಯ ಮುಖದಲ್ಲಿ ಹೂ ನಗೆ ಅರಳಿತು. ರೈಲು ಸಿಳ್ಳು ಹಾಕುತ್ತ, ನಿಧಾನವಾಗತೊಡಗಿ, ಕ್ರಮೇಣ ನಿಂತಿತು.

ರೈಲು ನಿಲ್ದಾಣ ನಿರ್ಜನವಾಗಿತ್ತು. ರಸ್ತೆಯ ಆ ಬದಿಯಲ್ಲಿ ಬಾದಾಮಿ ಮರದ ನೆರಳು ಉದ್ದಕ್ಕೂ ಹಬ್ಬಿದ್ದು ದೂರದಲ್ಲಿ ಮದ್ಯದಂಗಡಿ ಮಾತ್ರ ತೆರೆದಿರುವುದು ಕಾಣಿಸುತ್ತಿತ್ತು. ಇಡೀ ಪಟ್ಟಣದಲ್ಲಿ ಬಿಸಿಲಿನ ಝಳ ತೀಕ್ಷ್ಣವಾಗಿತ್ತು. ಹುಡುಗಿ ಮತ್ತು ಹೆಂಗಸು ರೈಲಿನಿಂದಿಳಿದು, ರಸ್ತೆಯನ್ನು ದಾಟಿ,

ನೆರಳಿದ್ದ ಆ ಬದಿಗೆ ಬಂದು, ಮಧ್ಯೆ ಮಧ್ಯೆ ಹುಲ್ಲು ಬೆಳೆದಿದ್ದ ಚಪ್ಪಡಿ ಹಾಸುಗಳ ಮೇಲೆ ನಡೆಯ ತೊಡಗಿದರು.

ಸಮಯ ಆಗಲೇ ಎರಡು ಗಂಟೆಯಾಗಿತ್ತು. ಇಡೀ ಪಟ್ಟಣ ಆಗ ವಿಶ್ರಾಂತಿಯಲ್ಲಿತ್ತು. ಅಂಗಡಿಗಳು, ಆಫೀಸುಗಳು, ಶಾಲೆ – ಎಲ್ಲವೂ ಹನ್ನೊಂದಕ್ಕೇ ಮುಚ್ಚಿ ನಾಲ್ಕು ಗಂಟೆಗೆ ಸ್ವಲ್ಪ ಮುಂಚೆ ರೈಲು ಹಿಂತಿರುಗಿ ಹೋದನಂತರ ತೆಗೆಯುತ್ತಿದ್ದವು. ರೈಲು ನಿಲ್ದಾಣದ ಆ ಕಡೆಗೆ ಬಾರ್ ಜೊತೆಗಿದ್ದ ಒಂದು ಹೋಟೆಲ್ ಹಾಗೂ ಅಂಗಡಿ ಬೀದಿಯಲ್ಲಿನ ಟೆಲಿಗ್ರಾಫ್ ಆಫೀಸ್ ಮಾತ್ರ ತೆರೆದಿದ್ದವು. ಎಲ್ಲ ಮನೆಗಳ ಬಾಗಿಲೂ ಹಾಕಿದ್ದು, ಬಹುಪಾಲು ಮನೆಗಳು ಬನಾದ ಕಂಪೆನಿ ಮನೆಗಳ ಮಾದರಿಯಲ್ಲಿದ್ದವು. ಅವುಗಳಲ್ಲಿ ಕೆಲವು ಮನೆಗಳ ಜನರು ಒಳಗಿನ ಸೆಕೆ ತಡೆಯಲಾರದೆ ಬಾಲ್ಕನಿಯಲ್ಲಿ ಕುಳಿತು ಊಟ ಮಾಡುತ್ತಿದ್ದರು. ಮತ್ತೆ ಕೆಲವರು ಗೋಡೆ ಮಗ್ಗುಲ ಮರದ ನೆರಳಲ್ಲಿ ಆರಾಮ ಕುರ್ಚಿಯಲ್ಲಿ ಒರಗಿ ವಿಶ್ರಾಂತಿ ಪಡೆಯುತ್ತಿದ್ದರು.

ಹೆಂಗಸು ಮತ್ತು ಹುಡುಗಿ ರಸ್ತೆ ಬದಿಯ ಮರಗಳ ನೆರಳಿನಲ್ಲಿಯೇ ನಡೆಯುತ್ತ ಪಟ್ಟಣ ಪ್ರವೇಶಿಸಿದರು. ಅವರು ನೇರ ಪಾದ್ರಿ ಮನೆಗೆ ಹೋದರು. ಹೆಂಗಸು ಮನೆಯ ಮುಂದೆ ನಿಂತು ಕಬ್ಬಿಣದ ತಂತಿಜಾಲರಿಯಿದ್ದ ಬಾಗಿಲನ್ನು ಮೆಲ್ಲಗೆ ತಟ್ಟಿದಳು. ಒಳಗೆ ವಿದ್ಯುತ್‌ಫ್ಯಾನ್ ತಿರುಗುತ್ತಿದ್ದ ಶಬ್ದ ಕೇಳಿಸುತ್ತಿತ್ತು. ಆದರೆ ಹೆಜ್ಜೆಗಳ ಸಪ್ಪಳ ಕೇಳಿಬರಲಿಲ್ಲ. ಬದಲಾಗಿ ಒಳಬಾಗಿಲಿನ ಕಿರ್ರ್ ಶಬ್ದ ಕೇಳಿಬಂತು. ನಂತರ ಜಾಲರಿಯ ಹಿಂಭಾಗದಿಂದ ಎಚ್ಚರಿದಿಂದೆಂಬಂತೆ ಮಾತನಾಡುತ್ತಿದ್ದ ಧ್ವನಿಯೊಂದು 'ಯಾರದು?' ಎಂದು ಕೇಳಿತು. ಹೆಂಗಸು ಪ್ರಶ್ನೆ ಕೇಳಿದ ವ್ಯಕ್ತಿಯನ್ನು ನೋಡಲು ಪ್ರಯತ್ನಿಸಿದಳು, ಕಾಣಿಸಲಿಲ್ಲ.

'ಪಾದ್ರಿ ಇದ್ದಾರೆಯೇ?'

'ಅವರು ಮಲಗಿದ್ದಾರೆ.'

'ತುಂಬ ತುರ್ತಿನ ಕೆಲಸ'-ಹೆಂಗಸು ಒತ್ತಾಯದ ಧ್ವನಿಯಲ್ಲಿ ಹೇಳಿದಳು. ಅವಳ ಧ್ವನಿ ಮೆಲ್ಲಗಿದ್ದರೂ ಮಾತುಗಳಲ್ಲಿ ಒಂದು ರೀತಿಯ ದೃಢತೆಯಿತ್ತು.

ಒಳಬಾಗಿಲು ಸ್ವಲ್ಪವೇ ತೆರೆದು, ದಪ್ಪ ಹೆಂಗಸೊಬ್ಬಳು ಬಾಗಿಲಲ್ಲಿ ಕಾಣಿಸಿಕೊಂಡಳು.



1982ರಲ್ಲಿ ತನ್ನ ಕಾದಂಬರಿ ''ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'ಗೆ ನೊಬೆಲ್ ಪ್ರಶಸ್ತಿ ಪಡೆದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್, ವಿಶ್ವವ್ಯಾಪಿ ಓದುಗರನ್ನು ತನ್ನ ಪ್ರತಿಭೆಯಿಂದ ತಲ್ಲಣಿಸಿರುವ ಲ್ಯಾಟಿನ್ ಅಮೆರಿಕನ್ ಕಥನಕಾರ. ಸಹಜ ಅಮಾಯಕನೊಬ್ಬನ ಸ್ವಂತದ ಸ್ವರ್ಗನರಕಗಳ ನಡುವೆ ಬೆಳಕಿನ ಉಯ್ಯಾಲೆಯಂತೆ ತೂಗುವ ಮಾರ್ಕ್ವೆಜ್‌ನ ಬರವಣಿಗೆ ತನ್ನೆಲ್ಲ 'ಸ್ವಪ್ನವಾಸ್ತವ' ಮಾರ್ಗಗಳನ್ನು ದಾಟಿಯೂ ನಮ್ಮನ್ನು ತಟ್ಟುವದು ಅದರ ಅಪ್ಪಟ ಮಾನವೀಯ ಹವಣಿಕೆಗಳಲ್ಲಿ. ''ಮಂಗಳವಾರದ ಒಂದು ಮಧ್ಯಾಹ್ನ'' ನಮ್ಮನ್ನು ಸ್ಪರ್ಶಿಸುವುದೆ ಹಾಗೆ. ಈ ಕಥೆಯನ್ನು ಕನ್ನಡಕ್ಕೆ ತಂದಿರುವ ನರಹಳ್ಳಿ ಬಾಲಸುಬ್ರಹ್ಮಣ್ಯ ರಸಗ್ರಾಹಿ ವಿಮರ್ಶಕರಾಗಿ ಕನ್ನಡಿಗರಿಗೆ ಪರಿಚಿತರು.

ವಯಸ್ಸಾಗಿದ್ದ ಆಕೆಯ ಮುಖ ಪೇಲವವಾಗಿದ್ದು, ತಲೆಗೂದಲು ಒರಟಾಗಿತ್ತು. ದಪ್ಪ ಗಾಜಿನ ಕನ್ನಡಕದ ಹಿಂದೆ ಅವಳ ಕಣ್ಣುಗಳು ತೀರ ಸಣ್ಣದಾಗಿ ಕಾಣಿಸುತ್ತಿದ್ದವು.

ಮುಂಬಾಗಿಲನ್ನು ತೆರೆದ ಅವಳು 'ಒಳಗೆ ಬನ್ನಿ' ಎಂದಳು.

ಒಣಗಿದ ಹೂಗಳ ಪರಿಮಳ ತುಂಬಿದ್ದ ವರಾಂಡವನ್ನು ಅವರು ಪ್ರವೇಶಿಸಿದರು. ಮನೆಯ ಹೆಂಗಸು ಮರದ ಬೆಂಚನ್ನು ತೋರಿಸಿ, ಅಲ್ಲಿ ಕುಳಿತುಕೊಳ್ಳಲು ಸೂಚಿಸಿದಳು. ಹುಡುಗಿ ಅಲ್ಲಿ ಹೋಗಿ ಕುಳಿತಳು. ಹೆಂಗಸು ಮೈಮರೆತವಳಂತೆ ಹಾಗೇ ನಿಂತಿದ್ದಳು. ಅವಳ ಕೈಗಳು ಚರ್ಮದ ಬ್ಯಾಗನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದವು. ಎಲೆಕ್ಟ್ರಿಕ್ ಫ್ಯಾನ್‌ನ ಶಬ್ದ ಬಿಟ್ಟರೆ ಉಳಿದಂತೆ ಅಲ್ಲಿ ಗಾಢ ಮೌನವಿತ್ತು.

ಒಳಬಾಗಿಲಿನಲ್ಲಿ ಮತ್ತೆ ಕಾಣಿಸಿಕೊಂಡ ಆ ದಪ್ಪ ಹೆಂಗಸು 'ಈಗ ತಾನೇ ಐದು ನಿಮಿಷಗಳ ಹಿಂದೆ ಅವರು ಮಲಗಿದ್ದಾರೆ. ಮೂರು ಗಂಟೆಯ ಮೇಲೆ ನೀವು ಬರಬೇಕಂತೆ' ಎಂದು ಸಣ್ಣ ಧ್ವನಿಯಲ್ಲಿ ಹೇಳಿದಳು.

'ರೈಲು ಮೂರೂವರೆಗೆ ಹೊರಟುಬಿಡುತ್ತದೆ' ಹೆಂಗಸು ಹೇಳಿದಳು. ಅವಳ ಧ್ವನಿಯಲ್ಲಿ ಒತ್ತಾಯದ ಧಾಟಿಯಿದ್ದರೂ, ಮಾತು ಪ್ರಸನ್ನವಾಗಿತ್ತು. ಆತ್ಮವಿಶ್ವಾಸದಿಂದ ಕೂಡಿದ್ದ ಆ ಮಾತುಗಳನ್ನು ಕೇಳಿದ ಮನೆಯ ಹೆಂಗಸು ಮೊದಲ ಬಾರಿಗೆ ಮುಗುಳ್ನಕ್ಕಳು.

'ಸರಿ' ಎಂದು ಹೇಳಿ ಅವಳು ಒಳಗೆ ಹೋದಳು.

ಒಳಬಾಗಿಲು ಮುಚ್ಚಿಕೊಂಡ ನಂತರ ಹೆಂಗಸು ತನ್ನ ಮಗಳ ಬಳಿ ಹೋಗಿ ಕುಳಿತುಕೊಂಡಳು. ಅವರು ಕುಳಿತಿದ್ದ ಆ ಚಿಕ್ಕವರಾಂಡ ಸರಳವಾಗಿದ್ದು, ಶುಚಿಯಾಗಿತ್ತು. ಮರದ ಜಾಲರಿಯೊಂದು ಆ ಕೋಣೆಯನ್ನು ಇಬ್ಭಾಗ ಮಾಡಿದ್ದು, ಆ ಬದಿಗೆ ಒಂದು ಟೇಬಲ್, ಅದರ ಮೇಲೆ ಒಂದು ಟೈಪ್‌ರೈಟರ್ ಇದ್ದು, ಪಕ್ಕದಲ್ಲಿ ಹೂದಾನಿ ಇತ್ತು. ಅದರ ಹಿಂದೆ ಫೈಲುಗಳು ಕೆಲವು ಜೋಡಿಸಲ್ಪಟ್ಟಿದ್ದವು. ನೋಡಿದ ತಕ್ಷಣ ಅದೊಂದು ವ್ಯವಸ್ಥಿತವಾದ ಆಫೀಸ್‌ರೂಮ್ ಎಂದು ಯಾರಾದರೂ ಹೇಳಬಹುದಿತ್ತು.

ಒಳಬಾಗಿಲು ತೆರೆದಾಗ ಅಲ್ಲಿ ಪಾದ್ರಿ ಕಾಣಿಸಿಕೊಂಡನು. ಕನ್ನಡಕವನ್ನು ಕರವಸ್ತ್ರದಿಂದ ಒರೆಸುತ್ತ ಬಂದು ಆತ ಮತ್ತೆ ಕನ್ನಡಕ ಹಾಕಿಕೊಂಡಾಗ ಆ ಹೆಂಗಸಿನ ಅಣ್ಣನೆಂದು ಹೇಳಬಹುದಾದಷ್ಟು ಹೋಲಿಕೆ ಕಾಣಿಸಿತು.

'ನನ್ನಿಂದ ನಿಮಗೇನಾಗಬೇಕು?' ಆತ ಕೇಳಿದ.

'ರುದ್ರಭೂಮಿಯ ಕೀಗಳು ಬೇಕು' ಹೆಂಗಸು ಹೇಳಿದಳು.

ಹುಡುಗಿ ಬೆಂಚಿನ ಕೆಳಗೆ ಕಾಲುಗಳನ್ನು ಕತ್ತರಿಯಂತೆ ಹಾಕಿ ಕುಳಿತಿದ್ದಳು. ಅವಳ ತೊಡೆಯ ಮೇಲೆ ಹೂಗುಚ್ಛವಿತ್ತು. ಪಾದ್ರಿ ಆ ಹುಡುಗಿಯನ್ನೊಮ್ಮೆ, ಹೆಂಗಸನ್ನೊಮ್ಮೆ ನೋಡಿ ನಂತರ ಜಾಲರಿಯಿಂದಾಚೆ ದೃಷ್ಟಿ ಹಾಯಿಸಿ, ನಿರಭ್ರ ಆಕಾಶದಲ್ಲಿ ಕಣ್ಣು ನೆಟ್ಟು ನಿಂತನು.

'ಈ ಬಿಸಿಲಲ್ಲಿ ಹೋಗುತ್ತೀರಾ? ತಂಪಾಗುವವರೆಗೂ ಕಾಯಬಹುದಿತ್ತು'' ಆತ ಹೇಳಿದ.

ಹೆಂಗಸು ಮೌನವಾಗಿಯೇ ತಲೆಯಲ್ಲಾಡಿಸಿ ತನ್ನ ಅಸಮ್ಮತಿ ಸೂಚಿಸಿದಳು. ಪಾದ್ರಿ ಮರದ ಜಾಲರಿಯ ಆ ಕಡೆಗೆ ಹೋಗಿ ಬೀರುವಿನಿಂದ ನೋಟ್ ಪುಸ್ತಕವೊಂದನ್ನು ತೆಗೆದು ಲೇಖನಿ, ಇಂಕ್‌ಬಾಟಲ್‌ಗಳನ್ನು ಸಿದ್ಧಪಡಿಸಿಕೊಂಡು ಮೇಜಿನ ಮುಂದೆ ಕುಳಿತ. ಆತನ ತಲೆಯಲ್ಲಿ ಇಲ್ಲದ ಕೂದಲು ಕೈಗಳ ಮೇಲಿದೆಯೋ ಎಂಬಂತೆ ಪಾದ್ರಿಯ ಕೈಗಳ ಮೇಲೆ ದಟ್ಟವಾಗಿ ಕೂದಲು ಬೆಳೆದಿತ್ತು.

'ಯಾವ ಸಮಾಧಿಗೆ ನೀವು ಹೋಗ

ಬೇಕೆಂದಿರುವುದು?' ಪಾದ್ರಿ ಕೇಳಿದ.

'ಕಾರ್ಲೋಸ್ ಸೆಂಟಿನೋ' ಹೆಂಗಸು ಪುನರುಚ್ಚರಿಸಿದಳು.


ಪಾದ್ರಿಗೆ ಅವಳ ಮಾತುಗಳು ಇನ್ನೂ ಸ್ಪಷ್ಟವಾಗಲಿಲ್ಲ.

'ಕಳೆದ ವಾರ ಇಲ್ಲಿ ಕೊಲ್ಲಲ್ಪಟ್ಟ ಕಳ್ಳನವನು, ನಾನವನ ತಾಯಿ' ಹೆಂಗಸು ಕಿಂಚಿತ್ತೂ ವಿಚಲಿತಳಾಗದೆ ಅದೇ ಸ್ವರದಲ್ಲಿಯೇ ದೃಢವಾಗಿ ಹೇಳಿದಳು.

ಪಾದ್ರಿ ಅವಳನ್ನು ಪರೀಕ್ಷಿಸುವವನಂತೆ ನೋಡಿದ. ಅವಳೂ ಅವನನ್ನೇ ನೇರ ದಿಟ್ಟಿಸಿ ನೋಡಿದಳು. ಆತ್ಮಸಂಯಮದಿಂದ ಕೂಡಿದ್ದ ಅವಳ ಸರಳ ನೋಟಕ್ಕೆ ಪಾದ್ರಿ ನಾಚಿದವನಂತಾಗಿ ತಲೆತಗ್ಗಿಸಿ ಬರೆಯತೊಡಗಿದ. ಪುಟಗಳ ಮೇಲೆ ಅಕ್ಷರಗಳು ಮೂಡುತ್ತಿದ್ದಂತೆ ಆತ ಅವಳ ಗುರುತು ಹೇಳುವಂತೆ ಕೇಳಿದ. ಅವಳು ನಿಸ್ಸಂಕೋಚವಾಗಿ ಆತನ ಪ್ರಶ್ನೆಗಳಿಗೆಲ್ಲ ಸ್ಪಷ್ಟ ಉತ್ತರ ನೀಡಿದಳು. ಪಾದ್ರಿ ಇದ್ದಕ್ಕಿದ್ದಂತೆ ಬೆವರತೊಡಗಿದ. ಹುಡುಗಿ ತನ್ನ ಎಡಗಾಲಿನ ಶೂ ಬಿಚ್ಚಿ ಪಕ್ಕಕ್ಕಿಟ್ಟು, ಬೆಂಚಿನ ಕೆಳಪಟ್ಟಿಯ ಮೇಲೆ ಆ ಕಾಲನ್ನಿಟ್ಟು ನಂತರ ಬಲಗಾಲಿನ ಶೂ ಬಿಚ್ಚತೊಡಗಿದಳು.

ಆ ಎಲ್ಲ ಶುರುವಾದದ್ದು ಕಳೆದ ಸೋಮವಾರ ಬೆಳಗಿನ ಮೂರು ಗಂಟೆಯ ಸಮಯದಲ್ಲಿ. ಪಾದ್ರಿಯ ಮನೆಗೆ ಸ್ವಲ್ಪ ದೂರದಲ್ಲಿಯೇ ವಿಧವೆ ರೆಬೆಕ್ಕಾಳ ಮನೆಯಿತ್ತು. ಅನೇಕ ತೊಂದರೆಗಳ ನಡುವೆ ಅವಳೊಬ್ಬಳೇ ಆ ಮನೆಯಲ್ಲಿ ಹೇಗೋ ಜೀವನ ಸಾಗಿಸುತ್ತಿದ್ದಳು. ಆ ಸೋಮವಾರ ಸುರಿಯುತ್ತಿದ್ದ ಮಳೆಸದ್ದಿನ ನಡುವೆ ಮುಂಬಾಗಿಲನ್ನು ಬಲವಂತವಾಗಿ ತೆಗೆಯುತ್ತಿರುವ ಶಬ್ದ ಕೇಳಿದ ರೆಬೆಕ್ಕಾ ದೀಪ ಹಾಕದೆ, ರಿವಾಲ್ವರ್ ತೆಗೆದುಕೊಂಡು ಬಾಗಿಲ ಬಳಿ ಬಂದಳು. ಕರ್ನಲ್ ಅರೇಬಿಯಾನೋ ಕಾಲದಿಂದಲೂ ಯಾರೂ ಆ ರಿವಾಲ್ವರ್ ಬಳಸಿದ್ದಿಲ್ಲ. ಇಪ್ಪತ್ತೆರಡು ವರ್ಷಗಳ ಏಕಾಕಿತನ ಅಸಹನೆಯ ರೂಪತಾಳಿ ಒಂದು ರೀತಿಯ ವ್ಯಗ್ರತೆಯಿಂದ ಕೂಡಿದ ಮನಸ್ಥಿತಿಯಲ್ಲಿ ಅವಳಿದ್ದಳು. ಕತ್ತಲೆಯಲ್ಲಿಯೇ ಅವಳು ಬಾಗಿಲನ್ನು ಮಾತ್ರವಲ್ಲ ಬೀಗವಿದ್ದ ಜಾಗವನ್ನೂ ಸರಿಯಾಗಿ ಗುರ್ತಿಸಿ ಗುರಿಯಿಟ್ಟಳು. ಕಣ್ಣುಮುಚ್ಚಿ, ಎರಡೂ ಕೈಗಳಿಂದ ರಿವಾಲ್ವರ್ ಟ್ರಿಗರನ್ನು ಬಲವಾಗಿ ಅದುಮಿದಳು. ಅವಳ ಬದುಕಿನಲ್ಲಿ ಇದೇ ಮೊದಲ ಬಾರಿಗೆ ಅವಳು ಗುಂಡು ಹಾರಿಸಿದ್ದಳು. ಗುಂಡು ಹಾರಿಸಿದ ನಂತರ ಟೆರೇಸಿನ ಮೇಲೆ ನಿಂತ ಮಳೆನೀರು ಕೆಳಗೆ ಬೀಳುತ್ತಿದ್ದ ಶಬ್ದ ಬಿಟ್ಟರೆ ಬೇರೇನೂ ಅವಳಿಗೆ ಕೇಳಿಸಲಿಲ್ಲ. ಸ್ವಲ್ಪ ಹೊತ್ತಿನ ನಂತರ ಸಿಮೆಂಟ್ ನೆಲದ ಮೇಲೆ ಯಾರೋ ಬಿದ್ದದ್ದು, 'ಅಮ್ಮಾ' ಎಂದು ಕ್ಷೀಣವಾಗಿ ನರಳಿದ್ದು ಕೇಳಿಸಿತು. ಆ ಧ್ವನಿಯಲ್ಲಿ ಆರ್ತತೆಯಿದ್ದುದನ್ನು ಆ ಸ್ಥಿತಿಯಲ್ಲೂ ಅವಳು ಗುರುತಿಸಿದಳು.

ಬೆಳಿಗ್ಗೆ ನೋಡಿದಾಗ ಮನೆಯ ಮುಂದೆ ಸತ್ತು ಬಿದ್ದಿದ್ದ ವ್ಯಕ್ತಿಯ ಮೂಗು ಚೂರುಚೂರಾಗಿತ್ತು. ಪಟ್ಟೆ ಪಟ್ಟೆ ಅಂಗಿ ತೊಟ್ಟಿದ್ದ ಆತ ದಿನನಿತ್ಯದ



ಸಾಮಾನ್ಯ ಪ್ಯಾಂಟು ತೊಟ್ಟು ಬೆಲ್ಟ್ ಬದಲಿಗೆ ಸೊಂಟಕ್ಕೆ ದಾರ ಕಟ್ಟಿಕೊಂಡಿದ್ದ. ಬರಿಗಾಲಿನಲ್ಲಿದ್ದ ಆತ ಆ ಊರಿನಲ್ಲಿ ಯಾರಿಗೂ ಗೊತ್ತಿರಲಿಲ್ಲ.

'ಓಹೋ! ಆತನೆ ಹಾಗಿದ್ದರೆ ಕಾರ್ಲೋಸ್ ಸೆಂಟಿನೊ!' ಬರೆಯುವುದನ್ನು ಮುಗಿಸಿದ್ದ ಪಾದ್ರಿ ತನ್ನಲ್ಲೇ ಹೇಳಿಕೊಂಡ.

'ಸೆಂಟಿನೋ ಅಯಾಲ, ನನ್ನ ಒಬ್ಬನೇ ಮಗ' ಹೆಂಗಸು ಹೇಳಿದಳು.

ಪಾದ್ರಿ ಮತ್ತೆ ಒಳಬಾಗಿಲ ಬಳಿ ಹೋದ. ತುಕ್ಕು ಹಿಡಿದಂತಿದ್ದ ಎರಡು ದೊಡ್ಡ ಕೀಗಳು ಬಾಗಿಲ ಹಿಂಭಾಗದಲ್ಲಿ ತೂಗುಬಿದ್ದಿದ್ದವು. ತನ್ನ ತಾಯಿ ತನ್ನಂತೆ ಚಿಕ್ಕವಳಾಗಿದ್ದಾಗ ಇಂಥ ಕೀ ಬಳಸಿರಬಹುದು ಎಂದು ಹುಡುಗಿ ಯೋಚಿಸಿದಳು; ಅಷ್ಟೇಕೆ ಪಾದ್ರಿಯೇ ಎಂದಾದರೊಮ್ಮೆ 'ಇವು ಸೇಂಟ್‌ಪೀಟರ್ಸ್'ನ ಕೀಗಳು ಎಂದು ಯೋಚಿಸಿದ್ದರೆ ಆಶ್ಚರ್ಯವಿಲ್ಲವೆನ್ನುವಷ್ಟು ಆ ಕೀಗಳು ಹಳೆಯದಾಗಿದ್ದವು. ಪಾದ್ರಿ ಆ ಕೀಗಳನ್ನು ತೆರೆದಿಟ್ಟ ಪುಸ್ತಕದ ಮೇಲಿಟ್ಟು, ತನ್ನ ತೋರು ಬೆರಳಿನಿಂದ ಆಗ ತಾನೇ ಬರೆದಿದ್ದ ಜಾಗವನ್ನು ತೋರಿಸುತ್ತ, ಹೆಂಗಸಿನ ಕಡೆ ತಿರುಗಿ 'ಇಲ್ಲಿ ಸಹಿ ಮಾಡು' ಎಂದನು.

ಹೆಂಗಸು ತನ್ನ ಚರ್ಮದ ಚೀಲವನ್ನು ಕಂಕುಳಲ್ಲಿಟ್ಟುಕೊಂಡು ಪಾದ್ರಿ ತೋರಿಸಿದ ಕಡೆ ತನ್ನ ಹೆಸರು ಬರೆದಳು. ಹುಡುಗಿ ಹೂಗುಚ್ಛವನ್ನೆತ್ತಿಕೊಂಡು ತನ್ನ ತಾಯಿಯ ಬಳಿ ಬಂದು ಅವಳು ಬರೆಯುತ್ತಿದ್ದುದನ್ನೇ ತದೇಕಚಿತ್ತದಿಂದ ನೋಡುತ್ತಿದ್ದಳು.

ಪಾದ್ರಿ ನಿಟ್ಟುಸಿರುಬಿಡುತ್ತ 'ಅವನನ್ನು ಸರಿದಾರಿಗೆ ತರಲು ನೀನೆಂದೂ ಪ್ರಯತ್ನಿಸಲಿಲ್ಲವೇ?' ಎಂದನು.

ಹೆಸರು ಬರೆದು ಮುಗಿಸಿ ಹೆಂಗಸು ಹೇಳಿದಳು, 'ಅವನು ಸ್ವಭಾವತಃ ತುಂಬ ಒಳ್ಳೆಯವನಾಗಿದ್ದ'

ಪಾದ್ರಿ ಮೊದಲು ಹೆಂಗಸಿನತ್ತ, ಆಮೇಲೆ ಹುಡುಗಿಯತ್ತ ನೋಡಿದ. ಅವರು ದುಃಖಿಸುತ್ತಿಲ್ಲದಿರುವುದನ್ನು ಗಮನಿಸಿ ಆತನಿಗೆ ಆಶ್ಚರ್ಯವಾಯಿತು.

ಹೆಂಗಸು ಮೊದಲಿನಂತೆಯೇ ಸಮಾಧಾನಕರ ಸ್ವರದಲ್ಲಿ 'ಬೇರೆಯವರಿಗೆ ಅಗತ್ಯವಿರುವ, ನಿನ್ನದಲ್ಲದ ವಸ್ತುವಿಗೆ ನೀನೆಂದೂ ಆಸೆಪಡಬೇಡ, ಕದಿಯಬೇಡ ಎಂದು ನಾನವನಿಗೆ ಹೇಳಿದ್ದೆ. ಅದನ್ನು ಆತ ಒಪ್ಪಿ ನಡೆಯುತ್ತಿದ್ದ. ಎಂದೂ ಆತ ಯಾರಿಗೂ ಹೊಡೆದದ್ದಾಗಲಿ, ಕಟುವಾಗಿ ನಡೆದುಕೊಂಡದ್ದಾಗಲಿ ಇಲ್ಲ. ಬದಲಾಗಿ ಕುಸ್ತಿಗೆ ಹೋದಾಗ ಏಟು ತಿಂದು ನಂತರ ಮೂರು ದಿನಗಳ ಕಾಲ ಮನೆಯಲ್ಲಿ ಮಲಗಿಕೊಳ್ಳುತ್ತಿದ್ದ' ಎಂದಳು.

'ಆತನ ದವಡೆ ಅಸಾಧ್ಯ ಊದಿರುತ್ತಿತ್ತು,' ಹುಡುಗಿ ಮಧ್ಯೆ ಮಾತನಾಡಿದಳು.

'ಹೌದು' ಎಂದು ಮಗಳ ಮಾತಿಗೆ ಒಪ್ಪಿಗೆ ಸೂಚಿಸಿದ ಹೆಂಗಸು, ಆ ದಿನಗಳಲ್ಲಿ ನಾನು ತಿನ್ನುತ್ತಿದ್ದ ಪ್ರತಿ ತುತ್ತಿನ ಹಿಂದೆ ನನ್ನ ಮಗ ತಿನ್ನುತ್ತಿದ್ದ ನೋವಿರುತ್ತಿತ್ತು' ಎಂದಳು.

'ದೇವರ ಇಚ್ಛೆ ಏನೆಂಬುದೇ ಅರ್ಥವಾಗುವುದಿಲ್ಲ', ಪಾದ್ರಿ ತನಗೆ ತಾನೇ ಎಂಬಂತೆ ಹೇಳಿಕೊಂಡ.

ಪಾದ್ರಿ ಆ ಮಾತುಗಳನ್ನು ಹೇಳುವಾಗ ಒಂದು ರೀತಿಯ ಗೊಂದಲ ಆತನ ಮನಸ್ಸಿನಲ್ಲಿದ್ದಂತಿತ್ತು. ತನ್ನ ಮಾತುಗಳ ಬಗ್ಗೆ ಆತನಿಗೇ ವಿಶ್ವಾಸವಿರಲಿಲ್ಲ. ಬದುಕಿನ ಅನುಭವಗಳು ಆತನ ತಿಳಿವಳಿಕೆಯನ್ನು ಪ್ರಶ್ನಿಸುತ್ತಿದ್ದವು. ಬಿಸಿಲಿನ ಝಳ ತೀವ್ರವಾಗಿದ್ದುದರಿಂದ ತಲೆಯನ್ನು ಯಾವುದರಿಂದಲಾದರೂ ಮುಚ್ಚಿಕೊಳ್ಳುವಂತೆ ಆತ ಅವರಿಗೆ ಸಲಹೆ ನೀಡಿದ. ಆಕಳಿಸುತ್ತ, ನಿಂತಲ್ಲೇ ನಿದ್ದೆ ಮಾಡುತ್ತಿದ್ದಾನೋ ಎಂಬಂತಿದ್ದ ಪಾದ್ರಿ, ಕಾರ್ಲೋಸ್ ಸೆಂಟಿನೋನ ಸಮಾಧಿಯನ್ನು ಹೇಗೆ

ಹುಡುಕಬೇಕೆಂದು ಅವರಿಗೆ ವಿವರಿಸಿದ. ಹಿಂತಿರುಗಿ ಬಂದಾಗ ಅವರು ತನ್ನನ್ನು ಎಚ್ಚರಿಸುವ ಅಗತ್ಯವಿಲ್ಲವೆಂದೂ, ಕೀಗಳನ್ನು ಬಾಗಿಲೊಳಗೆ ಹಾಕಿ ಹೋಗಬಹುದೆಂದು ಹೇಳಿದ ಆತ, ಇಷ್ಟವಿದ್ದರೆ ಚರ್ಚ್‌ಗೆ ಕೊಡಬಹುದಾದ ಕಾಣಿಕೆಯನ್ನು ಅಲ್ಲಿಯೇ ಇಟ್ಟುಹೋಗಬಹುದೆಂದೂ ಸೂಚಿಸಿದ.

ಹೆಂಗಸು ಆತನ ಸೂಚನೆಗಳೆಲ್ಲವನ್ನೂ ಗಮನವಿಟ್ಟು ಕೇಳಿಸಿಕೊಂಡ ನಂತರ ಆತನಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸಿದಳು. ಆದರೆ ಕೃತಜ್ಞತೆ ಸಲ್ಲಿಸುವಾಗ ಅವಳ ಮುಖದಲ್ಲಿ ಮಾರ್ದವತೆಯಿರಲಿಲ್ಲ.

ಪಾದ್ರಿ ಹೊರಬಾಗಿಲನ್ನು ತೆರೆದು, ಅವರನ್ನು ಕಳಿಸಬೇಕೆನ್ನುವಷ್ಟರಲ್ಲಿ ಹೊರಗಡೆ ನಿಂತು ಯಾರೋ ಈ ಕಡೆಯೇ ನೋಡುತ್ತಿರುವುದನ್ನು ಗಮನಿಸಿದ. ಹೊರಗಡೆ ಮಕ್ಕಳ ಒಂದು ಗುಂಪಿತ್ತು. ಪಾದ್ರಿ ಬಾಗಿಲು ತೆರೆದು ಹೊರಬಂದಾಗ ಮಕ್ಕಳು ಹೆದರಿ ಓಡಿಹೋದರು. ಸಾಮಾನ್ಯವಾಗಿ ಆ ಹೊತ್ತಿನಲ್ಲಿ ರಸ್ತೆಯಲ್ಲಿ ಯಾರೂ ಇರುತ್ತಿರಲಿಲ್ಲ. ಆದರೆ ಇಂದು ಮಕ್ಕಳು ಮಾತ್ರವಲ್ಲ, ದೂರದ ಮರದ ನೆರಳಿನಲ್ಲಿ ದೊಡ್ಡವರೂ ಗುಂಪಾಗಿ ನಿಂತಿದ್ದರು. ಪಾದ್ರಿ ಬಿಸಿಲಿನ ಝಳದಲ್ಲಿ ಇಡೀ ಬೀದಿಯನ್ನೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಿ, ಅರ್ಥವಾದವನಂತೆ, ನಿಧಾನವಾಗಿ ಬಾಗಿಲು ಮುಚ್ಚಿದ.

‘ಸ್ವಲ್ಪ ಹೊತ್ತು ಇಲ್ಲೇ ಇರಿ’, ಹೆಂಗಸಿನ ಕಡೆ ನೋಡದೆಯೇ ಪಾದ್ರಿ ಹೇಳಿದ.

ಒಳಬಾಗಿಲಿನಲ್ಲಿ ಕಪ್ಪು ನಿಲುವಂಗಿ ತೊಟ್ಟ ಆತನ ತಂಗಿ ಕಾಣಿಸಿದಳು. ಅವಳ ತಲೆಗೂದಲು ಭುಜದ ಮೇಲೆ ಹರಡಿತ್ತು. ಪಾದ್ರಿಯನ್ನೊಮ್ಮೆ ಅವಳು ನೋಡಿ, ಮೌನತಾಳಿದಳು,

‘ಏನದು ಗಲಾಟೆ?’ ಪಾದ್ರಿ ಕೇಳಿದ.

‘ಜನಗಳಿಗೆ ಗೊತ್ತಾಗಿದೆ’ ಆತನ ತಂಗಿ ಪಿಸುಗುಟ್ಟಿದಳು.



‘ನೀವು ಹಿಂಬಾಗಿಲಿನಿಂದ ಹೋಗುವುದು ಒಳ್ಳೆಯದು’, ಪಾದ್ರಿ ಹೇಳಿದ.

‘ಅಲ್ಲಿಯೂ ಜನರಿದ್ದಾರೆ. ಎಲ್ಲ ಕಿಟಕಿ ಬಳಿ ನಿಂತು ನೋಡುತ್ತಿದ್ದಾರೆ’, ಆತನ ತಂಗಿ ಹೇಳಿದಳು.


ಇದುವರೆಗೆ ಆ ಹೆಂಗಸಿಗೆ ಅವರಾಡುತ್ತಿದ್ದ ಮಾತುಗಳ ಅರ್ಥ ಸ್ಪಷ್ಟವಾಗಿ ತಿಳಿದಿರಲಿಲ್ಲ. ಈಗವಳು ಅರ್ಥವಾದವಳಂತೆ ತಂತಿ ಜಾಲರಿಯ ಮೂಲಕ ಆಚೆ ನೋಡಿದಳು. ನಂತರ ಹೂಗುಚ್ಛವನ್ನು ಹುಡುಗಿಯಿಂದ ತೆಗೆದುಕೊಂಡು ಮುಂಬಾಗಿಲಿನತ್ತ ದೃಢವಾಗಿ ಹೆಜ್ಜೆ ಹಾಕಿದಳು. ಹುಡುಗಿ ಅವಳನ್ನು ಹಿಂಬಾಲಿಸಿದಳು.

‘ಬಿಸಿಲು ಕಡಿಮೆಯಾಗುವವರೆಗೂ ಇಲ್ಲೇ ಇರಿ’, ಪಾದ್ರಿ ಹೇಳಿದ.

‘ಈ ಬಿಸಿಲಿನಲ್ಲಿ ಹೋದರೆ ನೀವು ಕರಗಿ ಹೋಗುತ್ತೀರಿ. ಸ್ವಲ್ಪ ತಡೆಯಿರಿ, ಹೋಗಲಿ ಒಂದು ಛತ್ರಿಯನ್ನಾದರೂ ಕೊಡುತ್ತೇನೆ.' ನಿಂತಲ್ಲಿಂದ ಕದಲದೆಯೇ ಪಾದ್ರಿಯ ತಂಗಿ ಹೇಳಿದಳು.

‘ಕೃತಜ್ಞತೆಗಳು. ಪರವಾಗಿಲ್ಲ ನಾವು ಹಾಗೇ ಹೋಗಬಲ್ಲೆವು’ ಎಂದು ಹೇಳಿದ ಹೆಂಗಸು ಹುಡುಗಿಯ ಕೈಹಿಡಿದುಕೊಂಡು ನಿಧಾನವಾಗಿ ಬೀದಿಗಿಳಿದಳು.

ಮಧುವನ



ಪುಟ್ಟತ್ತೆ-ಕಮ್ಮತ್ತೆ

ಕಸ್ತೂರಿ ಬಾಯರಿ



ಪಾಂಡೇಶ್ವರದ ಚಡಗರ ಅಗ್ರಹಾರವೆಂದರೆ ಬುದ್ಧಿಜೀವಿಗಳು, ಬದುಕಿನ ಉಲ್ಲಾಸಗಳು, ಕಣ್ಣುಮುಚ್ಚಾಲೆಗಳು, ಭಕ್ತಿ, ಗಣಪತಿ ದೇವಸ್ಥಾನ, ಸಾಯಂಕಾಲ ಭಜನೆ, ಒಂದೊಂದು ಮನೆಯಲ್ಲಿ 8-10 ಮಕ್ಕಳು, ಒಬ್ಬರಾದರೂ ಮಡಿಹೆಂಗಸು, ಪಾಳಿ ಮೇಲೆ ಮುಟ್ಟಾಗುವ ಹೆಂಗಳೆಯರು, ಇವುಗಳ ಮಧ್ಯೆ ಅಲ್ಲಲ್ಲಿ ಗದ್ದೆಗಳು, ಸಾಕಷ್ಟು ತೆಂಗಿನಮರಗಳು, ಪಕ್ಕದಲ್ಲಿ ಹರಿಯುವ ನೇತ್ರಾವತಿ ನದಿ, ದೂರದಲ್ಲಿ ಕಾಣುವ ಮಾಬುಕಳ ಸೇತುವೆ, ಮದುವೆಯ ಕನಸು ಕಾಡುವ ಹದಿಹರೆಯದ ಹುಡುಗಿಯರು ಸಾಯಂಕಾಲ ಕೂಡುವ ನಾಗನ ಚಿಟ್ಟೆ, ಒಂದು ಮನೆಯಿಂದ ಮತ್ತೊಂದು ಮನೆಗೆ ಸುದ್ದಿ ಮುಟ್ಟಿಸುವ ನಮ್ಮಂತಹ ಮಕ್ಕಳ ಹಿಂಡು, ದೇವರ ಪೂಜೆಗೆ ಸ್ನಾನ ಮಾಡಿ ಬರೀ ಕಚ್ಚೆಯ ಮೇಲೆ ನೀರಿನ ಕೊಡಪಾನ ಹೊತ್ತು ಹೋಗುವ ಚಡಗರ ಕೇರಿಯ ಬ್ರಾಹ್ಮಣರು. ಆಗೊಮ್ಮೆ ಈಗೊಮ್ಮೆ ಅಮೆ ಸೂತಕ. ನವರಾತ್ರಿ ಬಂತೆಂದರೆ ಗಣಪತಿಯ ರಂಗಪೂಜೆ. ಅದೊಂದು ಪುಟ್ಟ ಅಲ್ಲಾವುದ್ದೀನನ ಸಿಮ್‌ಸಿಮ್ ಖುಲ್‌ಜಾವೋ

ಅನ್ನುವ ಹಾಗೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಒಂದಲ್ಲ ಒಂದು ಚಟುವಟಿಕೆ. ಸುದ್ದಿ ಸೂರುಗಳ, ಕರುಳು ಬಳ್ಳಿಗಳ, ಹೊಟ್ಟೆಕಿಚ್ಚಿನವರ, ಉರಿದುಕೊಳ್ಳುವವರ, ದಯೆತೋರುವ ಇಡೀ ಜಗತ್ತನ್ನು ನಿಮಗೆ ತೋರಿಸುವ ಹದಿನೈದರಿಂದ ಇಪ್ಪತ್ತು ಮನೆಗಳುಳ್ಳ ಒಂದು ಸಮೂಹ ಸಮಾಜ. ಪಕ್ಕದಲ್ಲಿಯೇ ಒಕ್ಕಲುಗಳಾದ ಶೂದ್ರರ ಮನೆಗಳ ಸಮೂಹ. ಇಂತಹ ಒಂದು ಸಮೂಹ ಸಮಾಜದ ಅಂಗಗಳಾದ ಎರಡು ಆತ್ಮಗಳು ಮೊನ್ನೆ ಮೊನ್ನೆ ಸವೆದು ಸವೆದು ಮುಕ್ತಿ ಹೊಂದಿದವು. ಅವರೇ ಎಲ್ಲರೂ ಪ್ರೀತಿಯಿಂದ ಅಥವಾ ಅಸಡ್ಡೆಯಿಂದಲೋ ಕರೆಯುತ್ತಿದ್ದ ಪುಟ್ಟತ್ತೆ ಮತ್ತು ಕಮ್ಮತ್ತೆ.

ಹೋದವರ್ಷ ಊರಿಗೆ ಆಪರೇಶನ್‌ಗೆ ಅಂತ ಹೋದವಳಿಗೆ ನಮ್ಮಮ್ಮನ ಮನೆಯಲ್ಲಿ ಎರಡು-ಮೂರು ಪುಟ್ಟ ಪುಟ್ಟ ಸ್ಟೀಲಿನ ಪಾತ್ರೆಗಳು ಹೊಸದಾಗಿ ಗೋಚರಿಸಿದವು. ಅಮ್ಮನಿಗೆ ಕೇಳಿದೆ, 'ಈ ಪುಟ್ಟಪಾತ್ರೆಗಳು ಮೊದಲು ಇರಲಿಲ್ಲವಲ್ಲ?' (ನಮ್ಮಮ್ಮನ ಮನೆಯ ಅಟ್ಟದ ಮೇಲಿನ, ಕೆಳಗಿನ ಪಾತ್ರೆಗಳೆಲ್ಲಾ ನನಗೆ ಚೆನ್ನಾಗಿ ಗೊತ್ತು) ''ಅಯ್ಯೋ ಮಗಾ ಅದು ಶೀನು ಉಪಾಧ್ಯಾಯರದ್ದು, ಅವರ ಮನೆಯ ಕಮ್ಮತ್ತೆ ತಮ್ಮ ನೆನಪಿಗೆ ಕೊಟ್ಟು ಹೋಗಿದ್ದಾರೆ.''

'ಅವರೆಲ್ಲಿ ಹೋಗಿದ್ದಾರೆ?' ಎಂದೆ.

ಪುಟ್ಟತ್ತೆ ತೀರಿಕೊಂಡು ನಾಲ್ಕು ತಿಂಗಳಾಯ್ತು ಕಮ್ಮತ್ತೆ ಒಬ್ಬರೇ ಈಗ ಇರೋದು. ಮನೆ, ತೋಟ ಎಲ್ಲಾ ಅವರ ದೂರದ ಸಂಬಂಧಿಗೆ ಮಾರಿ ಬೆಂಗಳೂರಿಗೆ ಕರೆದುಕೊಂಡು ಹೋದರು. ತುಂಬಾ ಮರುಕ್ತಾ ಹೋದ್ರು'', ಅಮ್ಮ ಖಿನ್ನಳಾಗಿ ಹೇಳಿದಳು. ಆ ಇಡೀ ರಾತ್ರಿ ಪುಟ್ಟತ್ತೆ-ಕಮ್ಮತ್ತೆ ಅವರ ಬಣ್ಣದ ಮನೆ, ದರ್ಬಾರು, ನಮ್ಮ ಪುಟ್ಟ ಪುಟ್ಟ ಕನಸುಗಳು ಬಹಳ ಕಾಡಿದವು.

ಪುಟ್ಟತ್ತೆ-ಕಮ್ಮತ್ತೆ ಅಜ್ಜಯ್ಯನ ಅಕ್ಕನ ಮಕ್ಕಳು. ಅಜ್ಜಯ್ಯ ಪ್ರೀತಿಯಿಂದ ಪುಟ್ಟಾ, ಕಮಲೂ ಅಂತ ಕರೆಯುತ್ತಿದ್ದರು. ಸಾಯಂಕಾಲ ಪೇಟೆಗೆ ಹೋಗಿ ಪೇಪರ್ ಓದಿ, ಅಗ್ರಹಾರ ದಾಟಿ ಬರುವಾಗ ಅಕ್ಕಂದಿರ ಜೊತೆ ಒಂದಷ್ಟು ಹರಟೆ, ನಸ್ಯ ಸೇದಿ ಒಂದು ಚೂರು ತಮಾಶೆ ಮಾಡಿ ಮನೆಗೆ ಬರುತ್ತಿದ್ದರು. ಅಜ್ಜಯ್ಯನ ಮನೆಗೂ ಅಕ್ಕಂದಿರ ಮನೆಗೂ ಮಧ್ಯೆ ಒಂದೆರಡು ಗದ್ದೆಗಳು, ಒಂದು ತೆಂಗಿನ ತೋಟ ಒಂದು ಪುಟ್ಟ ಕೆರೆ. ಗದ್ದೆ ಕಟ್ಟುದಾಟಿ ಪೇಟೆಗೆ ಏರುವ ಏರಿಯ ಪಕ್ಕದಲ್ಲಿಯೇ ಶೀನು ಉಪಾಧ್ಯಾಯರ ಬಣ್ಣಬಣ್ಣದ ದೊಡ್ಡ ಮನೆ.

ಆ ದೊಡ್ಡ ಮನೆಯ ಮುಂದೆ ಇದ್ದ ಸುರಗಿ ಹೂವಿನ ಮರ, ಅದರ ಪರಿಮಳ ಒಮ್ಮೊಮ್ಮೆ ಅಜ್ಜಯ್ಯನ ಮನೆಯ ಅಂಗಳಕ್ಕೂ ಸೂಸುವುದುಂಟು. ಅಂಗಳದಲ್ಲಿರುವ ಪಾರಿಜಾತದ ಗಿಡ. ಇಗರ್ಜಿ ಶಾಲೆ ಗಂಟೆ ಬಾರಿಸುವುದರೊಳಗೆ, ಅಕ್ಕ, ನಾನು ದಿನಾಲೂ ಪುಟ್ಟತ್ತೆ-ಕಮ್ಮತ್ತೆ ಮನೆಯ ಅಂಗಳದಲ್ಲಿ ಬಿದ್ದ ಹೂಗಳನ್ನು ಹೆಕ್ಕಲು ಪೈಪೋಟಿ ಮಾಡಿ, ಪೆಟಿಕೋಟ್ ಮೇಲೆಯೇ ಓಡಿ ಹೋಗುತ್ತಿದ್ದೆವು. ಬಿದ್ದ ಹೂಗಳನ್ನು ಆರಿಸುತ್ತ ನಮ್ಮ ಲಕ್ಷ್ಯವೆಲ್ಲಾ ಅವರ ಮನೆಯ ಕಿಟಕಿಗೆ ಹೊಂದಿಸಿದ ಬಣ್ಣದ ಗ್ಲಾಸುಗಳ ಮೇಲೆ. ಆ ದೊಡ್ಡಮನೆಯ ಸುತ್ತಲೂ ಇರುವ ದೊಡ್ಡ ದೊಡ್ಡ ಕಿಟಕಿಗೆ ಕೆಂಪು ನೀಲಿ ಹಳದಿ ಗ್ಲಾಸುಗಳನ್ನು ಹಾಕಿದ್ದರು. ಅಕ್ಕ ನಾನು ತಪ್ಪದೇ ಕಿಟಕಿಯ ಗ್ಲಾಸಿನಿಂದ ಒಮ್ಮೆ ಹಣಕಿ ಹಾಕಿಯೇ ಮನೆಗೆ ಬರುತ್ತಿದ್ದೆವು. ಆ ಬಣ್ಣಗಳ ಪಾರದರ್ಶಕ ಕಿಟಕಿ ನೋಟ ಬಹಳಷ್ಟು ಈಸ್ಟ್‌ಮನ್ ಕಲರಿನ ಕನಸುಗಳನ್ನು, ಖುಷಿಯನ್ನು ಕೊಟ್ಟಿದ್ದವು. 'ಬೆಳಿಗ್ಗೆ ಎದ್ದೊಡನೆ ಬೇರೆಯವರ ಮನೆಗೆ ಇವುಗಳ ತಿರುಗಾಟ ಪ್ರಾರಂಭವಾಯ್ತು' ಅಂತ ಒಮ್ಮೊಮ್ಮೆ ಚಿಕ್ಕಿಯರು ಕೋಲು ತೆಗೆದುಕೊಂಡು ಬಾರಿಸುತ್ತಿದ್ದರು. ಅಜ್ಜಯ್ಯ ನಮ್ಮನ್ನು ಮೇಲುಗಟ್ಟಿದರೆ, ಅಮ್ಮ ಗದರುತ್ತಿದ್ದಳು. 'ಹೆಣ್ಣು ಮಕ್ಕಳು ಮನೆ ಮನೆಗೆ ತಿರುಗುವ ಹುಚ್ಚು ಒಳ್ಳೆಯದಲ್ಲ, ಅವುಗಳನ್ನು ಹೀಗೆಯೇ ಹದ್ದುಬಸ್ತಿನಲ್ಲಿಡಬೇಕು.''

ಪುಟ್ಟತ್ತೆ-ಕಮ್ಮತ್ತೆಯ ಮನೆಯ ಬಾವಿಯ ಕಟ್ಟೆಗೆ ಕೆಂಪು ಕಲ್ಲು ಹೊಂದಿಸಿದ್ದರು. ಸಾಯಂಕಾಲ ಶಾಲೆಯಿಂದ ಬರುವಾಗ ಒಮ್ಮೊಮ್ಮೆ ಅವರ ಅಂಗಳಕ್ಕೆ ಕಾಲಿಟ್ಟಾಗ ''ಮಕ್ಕಳೇ ಬಾವಿಯಲ್ಲಿ ನೀರು ಸೇದಿ ಕೈಕಾಲು ತೊಳೆದು ಒಳಗೆ ಬನ್ನಿ. ಒಂದು ಚೂರು ಕಾಯಿಬೆಲ್ಲ ಕೊಡ್ತೀನಿ'' ಅಂತ ಕಮ್ಮತ್ತೆ ಕಕ್ಕುಲತೆಯಿಂದ ಕರೆಯುತ್ತಿದ್ದರು. ಆ ಮನೆಯ ಪಕ್ಕದಲ್ಲೇ ಒಂದು ನಾಗನ ಬನವಿತ್ತು. ಅಲ್ಲಿ ಕೇದಿಗೆ ಮಡು ಇತ್ತು. ಆದರೆ ಪುಟ್ಟತ್ತೆ-ಕಮ್ಮತ್ತೆ ಅಪ್ಪಿತಪ್ಪಿಯೂ ಆ ಬನದೊಳಗೆ ನಮಗೆ ಹೋಗಲು ಬಿಡುತ್ತಿದ್ದಿಲ್ಲ.

ಶೀನು ಉಪಾಧ್ಯಾಯರಿಗೆ ಮಕ್ಕಳಿರಲಿಲ್ಲ. ಆಗಿನ ಕಾಲಕ್ಕೆ ಶ್ರೀಮಂತರು. ಕುದುರೆ ಸವಾರಿ ಮಾಡುತ್ತಿದ್ದರಂತೆ. ಕಮ್ಮತ್ತೆ ಅವರ ಎರಡನೆಯ ಹೆಂಡತಿ. ಕಿವಿಯಲ್ಲಿ ಸದಾ ಕೆಂಪು ಹರಳಿನ ಓಲೆ, ಚಿನ್ನದ ಸರ, ಬಳೆಗಳನ್ನು ಹಾಕಿಕೊಂಡಿರುತ್ತಿದ್ದ ಕಮ್ಮತ್ತೆ ನಾವು ಪ್ರಾಥಮಿಕ ತರಗತಿಯಲ್ಲಿ ಇರುವಾಗಲೇ ವಿಧವೆ ಆದರು. ಶೀನು ಉಪಾಧ್ಯಾಯರ ಮುಖ ನೆನಪಿಗೆ ಬರುತ್ತಲಿಲ್ಲ. ಆದರೆ ಕಮ್ಮತ್ತೆ ತೆಳ್ಳಗೆ ಬೆಳ್ಳಗೆ, ತುಟಿಯಲ್ಲಿ ಒಂದು ಮುಗುಳ್ನಗೆ, ಸ್ನೇಹದ ಎರಡು ಮಾತು. ಸದಾ ತೋಟದ ಸಸಿಗಳೊಂದಿಗೆ ಒಂದಲ್ಲಾ ಒಂದು ಕೆಲಸ ಮಾಡುತ್ತ, ತೆಂಗಿನ ಸಸಿಗಳಿಗೆ ನೀರು ಹಾಕುತ್ತ, ಹಗುರವಾದ ಹಕ್ಕಿಯಂತೆ ತೇಲುತ್ತಿದ್ದರು. ಕಮ್ಮತ್ತೆ ಬಗ್ಗೆ ಒಂದು ವಿಷಯ ಹೇಳಬೇಕೆಂದರೆ ಅವರು ವಿಧವೆಯಾದ ನಂತರ ಬರೀ ಗಾಢನೀಲಿ ಬಣ್ಣದ ಪಟ್ಟೆಯ ಸೀರೆ ಉಡುತ್ತಿದ್ದರು.

ಇಂತಹ ಒಂದು ಕೋಮಲ ಜೀವಕ್ಕೆ ಮತ್ತೊಂದು ಜೀವ ಜೋಡಾಗಿ ಅವರಿಬ್ಬರೂ ಒಂದು ದಾರಿಯ ಸರಳರೇಖೆಗಳಾದರು. ಅದು ಪುಟ್ಟತ್ತೆ. ಬಾಲ ವಿಧವೆ. ಕಮ್ಮತ್ತೆಯ ಅಕ್ಕ. ಸದಾ ಕೆಂಪು ಸೀರೆ ಉಡುತ್ತಿದ್ದ ಪುಟ್ಟತ್ತೆ ದೇಹದಲ್ಲಿ ಧಡೂತಿ, ಹಲ್ಲುಮುಂದು, ಮಡಿಯಾದ ಹೆಂಗಸು. ಅಗ್ರಹಾರದಲ್ಲಿ ಯಾರ ಮನೆಯಲ್ಲಿ ತಿಥಿ ಶ್ರಾದ್ಧ ಆದರೆ ಅಲ್ಲಿಗೆ ಪುಟ್ಟತ್ತೆ ವಡೆ, ಸುಂಕ್ರುಂಡೆ ಕರೆಯಲು ಹೋಗಲೇಬೇಕು. ''ಹೌದಾ ಕಮಲು, ಇವತ್ತು ವಡೆ ಎಣ್ಣೆಯೇ ಕುಡಿದಿಲ್ಲ ಎರಡು ಹಿಡಿದುಕೊಂಡು ಬಂದೆ, ಇಗಾ'' ಅನ್ನುತ್ತಿದ್ದರು. ಒಮ್ಮೊಮ್ಮೆ ನಾವು ವಡೆಗಳ ಪಾಲುದಾರರಾಗಿಬಿಡುತ್ತಿದ್ದೆವು. ಪುಟ್ಟತ್ತೆ ಒಂಥರಾ ಸ್ನೇಹಜೀವಿ, ಚಟುವಟಿಕೆ ಬಿಂದು. ಅಗ್ರಹಾರದ ಎಲ್ಲರ ಮನೆಯ ಎಲ್ಲಾ ದುಃಖ ಖುಷಿಗಳಲ್ಲಿ ಭಾಗಿಯಾಗುವ ಪ್ರವೃತ್ತಿ. ದೇವಸ್ಥಾನದಲ್ಲಿ ರಂಗಪೂಜೆಗೆ ಒಂದು ಗಂಟೆಯ ಮುಂಚೆಯೇ ಬಂದುಕೂತು, ಬಂದವರೊಡನೆ ಹರಟೆ ಸುಖ-ದುಃಖ, ಕಾಯಿ ಹೆರೆದು ಕೊಡುವುದು ಒಂದಲ್ಲಾ ಒಂದು ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದರು. ರಾತ್ರಿ ರಂಗಪೂಜೆ ಮುಗಿಸಿ ಸೂಡಿಯ ಬೆಳಕಿನಲ್ಲಿ ನಾವು ಗದ್ದೇ ಕಟ್ಟಿನಲ್ಲಿ ನಡೆಯುವಾಗ ಪುಟ್ಟತ್ತೆ ನಾವು ಅರ್ಧ ಬಯಲಂಚಿನಲ್ಲಿ ಇರುವಾಗಲೇ ತೋಟದ ಮೂಲೆ ತಲುಪಿ 'ಕೂ' ಹಾಕುತ್ತಿದ್ದರು. ಅಜ್ಜಯ್ಯ ನಮಗೆ ಹೇಳುತ್ತಿದ್ದರು, ''ಪುಟ್ಟಾ ಮನೆ ಮುಟ್ಟಿಯಾಯ್ತು ಮಕ್ಕಳೇ ಬೇಗ ಬೇಗ ಹೆಜ್ಜೆ ಹಾಕಿ''. ನಮಗೋ ಹಾಳೆಯಲ್ಲಿ ಹಿಡಿದ ಪಂಚಗಜ್ಜಾಯ ಕತ್ತಲಲ್ಲಿ ಎಲ್ಲಿ ಬೀಳುತ್ತದೆಯೋ ಎಂಬ ಭಯ. ಪುಟ್ಟತ್ತೆಯ ದಿನಚರಿ ಎಂದರೆ ದಿನಾಲೂ ಹಟ್ಟಿಯಲ್ಲಿದ್ದ ದನ ಕರೆದು, ಕಾಫಿ ಮಾಡಿ, ಮುಸುರೆ, ಕಾಫಿಪಾತ್ರೆಗಳನ್ನು ಬಾವಿಕಟ್ಟೆಯಲ್ಲಿ ನೀರುಹಾಕಿಟ್ಟು, ಇಡೀ ಮನೆಯನ್ನು ತಿಕ್ಕಿ ತಿಕ್ಕಿ ಒರೆಸುತ್ತಿದ್ದದ್ದು. ಅದೇ ಹೊತ್ತಿಗೆ ಸುರಗಿ ಹೂವು ಹೆಕ್ಕಲು ಜಯಕ್ಕ, ನಾನು ಅವರ ಅಂಗಳಕ್ಕೆ ಕಾಲಿಡುತ್ತಿದ್ದೆವು. ಆಗ ಪುಟ್ಟತ್ತೆ ಒರೆಸಿದ ಆ ಸಿಮೆಂಟ್ ನೆಲದಲ್ಲಿ ಆ ಬಣ್ಣದ ಗ್ಲಾಸಿನ ಕಿಡಕಿಗಳ ಪ್ರತಿಬಿಂಬ ಬೆಳಗಿನ ಸೂರ್ಯನ ಕಿರಣಕ್ಕೆ ಆ ಕೆಂಪು ಸಿಮೆಂಟಿನ ನೆಲದ ಮೇಲೆ ಬಿಂಬಿಸುವುದನ್ನು ನೋಡುವುದು ಒಂದು ಅಪೂರ್ವ ಸನ್ನಿವೇಶವಾಗಿತ್ತು. ಸಾಯಂಕಾಲ ಪಶ್ಚಿಮದಿಂದ ಬಿದ್ದ ಸೂರ್ಯಕಿರಣ ಆ ಮುಖವಾಗಿ ಇರುವ ಕಿಟಕಿಗಳ ಮೂಲಕ ಹಾಯ್ದು ಆ ದೊಡ್ಡ ಪಡಸಾಲೆಯಲ್ಲಿ ಬಿಂಬಿಸುತ್ತಿತ್ತು. ಅಂತಹ ಮತ್ತೊಂದು ಮನೆ ನಮ್ಮ ಪಾಂಡೇಶ್ವರದಲ್ಲಿತ್ತು. ಅದು ಗೋಳಿಗುಡ್ಡೆಯ ಶಾಲೆಯ ಹತ್ತಿರವಿದ್ದ ಕಸ್ನವದ

ಮಹಾನ್ ಗಾಯಕ ಪಿ. ಕಾಳಿಂಗರಾಯರದಾಗಿತ್ತು. ಶೂದ್ರಹಾಡಿ ದಾಟಿ ಗೇರುಗುಡ್ಡೆ ಹತ್ತಿಳಿದರೆ ಸಿಗುವ ಗೋಳಿಗುಡ್ಡೆಯ ಆ ಭವ್ಯ ಮನೆಗೂ ಸಹ ಬಣ್ಣದ ಕಿಟಕಿಗಳಿದ್ದವು. ಶನಿವಾರ ಲೈಬ್ರರಿ ಪುಸ್ತಕ ಬದಲಿ ಮಾಡುವ ದಿವಸ ನಮಗೆ ಆ ಮನೆಯ ದರ್ಶನವಾಗುತ್ತಿತ್ತು. ಶಾಲೆ ಬಿಟ್ಟು ಮನೆಯಲ್ಲಿದ್ದ ಚಿಕ್ಕಿಯರಿಗೆ ಲೈಬ್ರರಿಯಿಂದ ಪುಸ್ತಕ ತಂದುಕೊಡುವುದಕ್ಕೇ ಒಂದು ಪೈಪೋಟಿ ನಡೆದು ಬಿಡುತ್ತಿತ್ತು ನನ್ನಕ್ಕ ಹಾಗೂ ನನ್ನಲ್ಲಿ. ಯಾಕೆಂದರೆ ಬೀಗಹಾಕಿದ ಆ ಮನೆಯ ಕಿಟಕಿಯಲ್ಲಿ ಹಣಕಿಹಾಕುವ ಅವಕಾಶವನ್ನು ನಾವಿಬ್ಬರೂ ತಪ್ಪಿಸಿಕೊಳ್ಳಲು ತಯಾರಿರಲಿಲ್ಲ.

ಒಮ್ಮೊಮ್ಮೆ ಪುಟ್ಟತ್ತೆ ಏನೋ ಹೇಳಲು ನಮ್ಮಜ್ಜಯ್ಯನ ಮನೆಯ ಕಡೆಗೆ ಬರುತ್ತಿದ್ದರೆ ದೂರದಲ್ಲಿ ಗದ್ದೆ ಅಂಚಿನಲ್ಲಿ ಅವರ ಸೀರೆ ಕಂಡು ಅಮ್ಮ ಗದರುತ್ತಿದ್ದಳು. ಯಾಕೆಂದರೆ ಅಜ್ಜಯ್ಯ ಬಹಳ ಪ್ರೀತಿಯಿಂದ, ಖುಷಿಯಿಂದ ಪುಟ್ಟತ್ತೆಯೊಂದಿಗೆ ಮಾತನಾಡುವ ದೃಶ್ಯದಿಂದ ಬಹುಶಃ ಅವಳಿಗೆ ಕಿರಿಕಿರಿಯಾಗುತ್ತಿತ್ತೋ ಏನೋ. ಮಲಯಾಳದಲ್ಲಿ ಚಿಕ್ಕಿಯಂದಿರಿಗೆ ಹೇಳುತ್ತಿದ್ದಳು, ''ಇನ್ನು ವಾಲಗ ಶುರುವಾಯ್ತು.'' ಚಿಕ್ಕಿಯರಿಬ್ಬರೂ ಪುಟ್ಟತ್ತೆ-ಕಮ್ಮತ್ತೆ ಅಂತ ಕರೆಯುತ್ತಿದ್ದರಿಂದ ನಾವು ಮಕ್ಕಳು ಸಹ ಅವರನ್ನು ಅದೇ ಹೆಸರಿನಿಂದ ಕರೆಯುತ್ತಿದ್ದೆವು. ಪುಟ್ಟತ್ತೆ ಹೇಳುತ್ತಿತ್ತು, ''ದೊಡ್ಡಮ್ಮ ಅಂತ ಕರೀರಿ ಮಕ್ಕಳೇ ಅಂತ'' ಆದರೂ ಅವರನ್ನು ನಾವು ಹೆಸರು ಹಿಡಿದೇ ಕರೆಯುತ್ತಿದ್ದೆವು.

ಆ ಭವ್ಯ ಮನೆಯ ಈ ಎರಡು ಅತೃಪ್ತ ಜೀವಿಗಳು ದಾರಿಯನ್ನು ಸವೆದ ಬಗೆ, ಒಂಟಿತನವನ್ನು ಎದುರಿಸಿದ ಧೈರ್ಯ, ಮುಪ್ಪಿನಲ್ಲೂ ಬಹಳ ದಿನಗಳವರೆಗೆ, ಸುಮಾರು 60 ವರ್ಷಗಳ ಕಾಲ ಒಂದೇ ಸೂರಿನಡಿ ಯಾವ ಭಿನ್ನಾಭಿಪ್ರಾಯ ಇಲ್ಲದೇ ಕಳೆದದ್ದು ಒಂದು ಅದ್ಭುತವಲ್ಲದೇ ಮತ್ತೇನು?

ತಾಯಿಯನ್ನು ಕಳೆದುಕೊಂಡ ನನ್ನ ತಮ್ಮನ ಮೇಲೆ ಆ ಇಬ್ಬರು ಅತ್ತೆಗಳಿಗೂ ಬಹಳ ಪ್ರೀತಿ. 'ಹೋಯ್ ರಘು ಮಾಣಿಗೆ ಏನು ವ್ಯವಸ್ಥೆ' ಅಂತ ಕೇಳಿದರೆ, ನಮ್ಮಮ್ಮನ ''ನಮ್ಮ ಮೊಮ್ಮಗನನ್ನು ನಾವು ಸಾಕುತ್ತೇವೆ ಅತ್ತಿಗೆ, ಅನ್ನನೋ, ಗಂಜಿನೋ ತಿನ್ನುತ್ತಾನೆ'' ಎಂಬ ಜೋರಾದ ಮಾತುಗಳು ಆ ಮಕ್ಕಳಿಲ್ಲದ ಮುದಿ ಹೃದಯಕ್ಕೆ ನೆಟ್ಟು ಕಲಕಿ ಬಿಡುತ್ತಿದ್ದವು. ಮಾಣಿಗೆ ಅವರ ತೋಟದ ಎಳನೀರು, ಪೇರಲೆಹಣ್ಣು, ರಂಗಪೂಜೆಯ ಕಜ್ಜಾಯ, ಶ್ರಾದ್ಧದ ವಡೆ, ಸುಂಕ್ರುಂಡೆಗಳು ಪೇಟೆಗೆ ಹೋದ ಅಜ್ಜಯ್ಯನ ಜೊತೆ ಒಮ್ಮೊಮ್ಮೆ ನಮ್ಮ ಮನೆಗೆ ತಲುಪುತ್ತಿದ್ದವು.

ಕೇವಲ 7 ವರ್ಷದ ನಾನು ಮತ್ತು 8 ವರ್ಷದ ಅಕ್ಕ ಪುಟ್ಟತ್ತೆ-ಕಮ್ಮತ್ತೆ ಇಬ್ಬರೇ ಇರುವುದನ್ನು ಕಂಡು ಒಳಗೊಳಗೆ ಚಕಿತರಾಗುತ್ತಿದ್ದೆವು. ಅವರ ತಳಮಳ, ಒಂಟಿತನ, ಯಾವುದೂ ನಮಗೆ ಅರ್ಥವಾಗುತ್ತಿರಲಿಲ್ಲ. ಸುರಗಿ ಹೂವು, ಪಾರಿಜಾತ ಹೂ ಹೆಕ್ಕಲು, ಕಾಯಿಬೆಲ್ಲ ತಿನ್ನಲು ನಾವಿಬ್ಬರೂ ಮನೆಯವರಿಗೆ ತಿಳಿಯದ ಹಾಗೆ ಅವರ ಮನೆಗೆ ಹಾಜರಾಗುತ್ತಿದ್ದೆವು. ಒಮ್ಮೊಮ್ಮೆ ಕಮ್ಮತ್ತೆ ಒಬ್ಬರೇ ತೋಟದ ಮುಂದಿರುವ ಕಲ್ಲ ಮೇಲೆ ಶಾಂತವಾಗಿ ಕುಳಿತು ಪ್ರಕೃತಿ ವೀಕ್ಷಣೆಯಲ್ಲೋ, ಯಾವುದೋ ವಿಚಾರದಲ್ಲೋ ಮಗ್ನರಾಗಿರುತ್ತಿದ್ದರು. ''ಪುಟ್ಟತ್ತೆ ಎಲ್ಲಿ'' ಅಂದರೆ 'ಪೇಟೆಗೆ ಹೋಗಿದ್ದಾಳೆ ಅಕ್ಕ' ಅಂದು ಒಳಗಿನಿಂದ ಏನಾದರೂ ತಂದು ಕೈ ಮೇಲೆ ಇಡುತ್ತಿದ್ದರು. ಕೆಂಪು ಸೀರೆಯ ಮಡಿ ಹೆಂಗಸು ಪೇಟೆಗೆ ಹೋದಳೆಂದರೆ ಅವರು ತಲೆ ಬೋಳಿಸಲೇ ಹೋಗಿದ್ದಾರೆ ಎಂಬ ಅರ್ಥ ನಾವಿಬ್ಬರೂ ಮಾಡಿಕೊಂಡಿದ್ದೆವು. ಯಾಕೆಂದರೆ ನಮ್ಮಜ್ಜಯ್ಯನ ಇನ್ನೊಬ್ಬ ಅಕ್ಕ ಕಾವೇರಿ ದೊಡ್ಡಮ್ಮ ಪೇಟೆಗೆ ಹೋಗುತ್ತಿದ್ದಾಗ (ತಲೆ ಬೋಳಿಸಲು ಆಗೆಲ್ಲಾ ಕ್ಷೌರಿಕರು ಮನೆಗೆ ಬರುತ್ತಿರಲಿಲ್ಲ) ನನಗೆ, ಅಕ್ಕನಿಗೆ ತೋಟ, ಮನೆ ಕಾಯಲು ಇಡೀ



ದಿವಸ ಹಚ್ಚಿ ಹೋಗುತ್ತಿದ್ದರು. ಕೇವಲ ಎರಡು ಪೆಪ್ಪರ್‌ಮಿಂಟಿನ ಆಸೆಗೆ ಅಕ್ಕ, ನಾನು ಅವರ ತೆಂಗಿನ ತೋಟ, ಮನೆಯನ್ನು ಸಂಜೀವರೆಗೆ ಕಾಯುತ್ತಿದ್ದೆವು, ಹಾಗಾಗಿ 'ಕಮ್ಮತ್ತೆಯೂ ಪೇಟೆಗೆ ಹೋಗಿ ಅವರ ಮನೆ ಬೀಗ ಹಾಕಲಿ, ನಾವಿಬ್ಬರು ಅವರ ಮನೆ ಕಾಯೋಣ' ಅಂತ ಮಾತನಾಡಿಕೊಳ್ಳುತ್ತಿದ್ದೆವು.

ಕಾವೇರಿ ದೊಡ್ಡಮ್ಮನ ಮನೆ ಕಾಯಲು ಹೋದಾಗಲೆಲ್ಲ ಅಮ್ಮ ಅಜ್ಜಯ್ಯನೊಂದಿಗೆ ಜಗಳವಾಡುತ್ತಿದ್ದಳು. 'ನನ್ನ ಮೊಮ್ಮಕ್ಕಳೇನು ಬಿಟ್ಟಿ ಬಿದ್ದಾವೇನು ನಿಮ್ಮಕ್ಕನ ಮನೆ ಕಾಯಲು' ಅಂತ. ಒಂದು ಕೈಯಲ್ಲಿ ಸೀಮೆಎಣ್ಣೆ ಮತ್ತೊಂದು ಕೈಯಲ್ಲಿ ಕೇವಲ ಎರಡು ಲಿಂಬೆಹುಳಿ ಪೆಪ್ಪರ್‌ಮಿಂಟು ಹಿಡಿದು ಬರುವ ಕಾವೇರಿ ದೊಡ್ಡಮ್ಮ, 'ಮಕ್ಕಳೇ ಎಷ್ಟು ಕಾಯಿ ಬಿತ್ತು' ಅಂತ ಜಿಬಿಜಿಬಿಯಾದ ಸೀಮೆಎಣ್ಣೆಯ ವಾಸನೆಯ ಎರಡು ಪೆಪ್ಪರ್‌ಮಿಂಟ್‌ನ್ನು ಕೈಯಲ್ಲಿ ಇಡುತ್ತಿದ್ದರು. ಎಂದೂ ಪುಟ್ಟತ್ತೆ-ಕಮ್ಮತ್ತೆ ಇಬ್ಬರೂ ಒಟ್ಟಿಗೆ ಪೇಟೆಗೆ ಹೋಗಲೇ ಇಲ್ಲ. ಪುಟ್ಟತ್ತೆ ಪೇಟೆಯಿಂದ ಕ್ಷೌರಮಾಡಿಸಿಕೊಂಡು ಬರುವ ಹೊತ್ತಿಗೆ ಕಮ್ಮತ್ತೆ ಹಂಡೆಯಲ್ಲಿ ಬಿಸಿನೀರು ತುಂಬಿ ಕಾಯಿಸಿಡುತ್ತಿದ್ದರು. ಗೇಣಿಯಲ್ಲಿ ಬಹಳಷ್ಟು ಗದ್ದೆಗಳು ಹೋದ ಕಾರಣ ಸ್ವಲ್ಪ ಬೇಸಾಯ, ತೆಂಗಿನ ಕಾಯಿ ಮಾರಾಟದಿಂದ ಅವರಿಬ್ಬರ ಜೀವನ ಸಾಗುತ್ತಿತ್ತು.

ನನಗೆ ಒಂದು ಘಟನೆ ಬಹಳ ನೆನಪಿದೆ. ಅವರಮ್ಮನ ಶ್ರಾದ್ಧಕ್ಕೆ ಅಜ್ಜಯ್ಯನ ಮನೆಗೆ ಬಂದ ಪುಟ್ಟತ್ತೆ ಸಂಜೆ ನಾಲ್ಕರವರೆಗೆ ವಡೆ ಕರೆದು, ಊಟ ಮಾಡಿ ಹೋಗುವಾಗ ಒಂದೆರಡು ವಡೆಗಳನ್ನು ಬಾಳೆ ಎಲೆಯಲ್ಲಿ ಕಟ್ಟಿಕೊಂಡು ಮನೆಗೆ ತೆಗೆದುಕೊಂಡು ಹೋಗಲು ಇಟ್ಟಿದ್ದರು. ಅದನ್ನು ಕಂಡ ಚಿಕ್ಕಿ, ಅಮ್ಮನೊಂದಿಗೆ ಚಾಡಿ ಹೇಳಿದಳು. ಅಮ್ಮ ಅಜ್ಜಯ್ಯನ ಮುಂದೆ ಗದರಿದಾಗ ''ರಘು, ಅವಳು (ಕಮಲ) ಇವೊತ್ತು ಹೊರಗೆ ಮಾರಾಯ. ಬಹುಶಃ ಇದು ಅವಳ ಕಡೆಯ ಮುಟ್ಟು ಮಾರಾಯ. ಏನಾದರೂ ತಿನ್ನಬೇಕೆನಿಸುತ್ತದೆ ಮುಟ್ಟಾದಾಗ, ಅದಕ್ಕೆ ಎರಡು ಹಿಡಿದುಕೊಂಡೆ'' ಎಂದು ಅಲವತ್ತುಕೊಂಡಾಗ ಆ ಮುಖದ ಮೇಲಿನ ಅಸಹಾಯಕತೆಯ ಛಾಯೆ ಇನ್ನೂ ಕಣ್ಣಮುಂದೆ ಕಟ್ಟಿದೆ. ಆವಾಗ ನಮಗೆ ಮುಟ್ಟಾಗುವುದೆಂದರೆ ಕಾಗೆ ಬಂದು ಮುಟ್ಟುವುದು ಅಂತ ಮಾತ್ರ ಗೊತ್ತಿತ್ತು. ಮರುದಿನ ಅವರ ಅಂಗಳಕ್ಕೆ ಕಾಲಿಟ್ಟ ಕೂಡಲೇ ತೆಂಗಿನ ಗರಿಯ ಸಿಪ್ಪೆ ಸುಲಿಯುತ್ತಿದ್ದ ಕಮ್ಮತ್ತೆಯ ಬಳಿ ಹೋಗಿ 'ಕಮ್ಮತ್ತೆ ನಿಮ್ಮನ್ನು ಕಾಗೆ ಮುಟ್ಟಿತಂತೆ. ನೀವು ಮುಟ್ಟಂತೆ. ಯಾಕೆ ಕಾಗೆ ಬಂದು ಮುಟ್ಟಿತು ಅಂತ ಅಕ್ಕ, ನಾನು ಅವರನ್ನು ಪೀಡಿಸಿ ಕೇಳಿದಾಗ ಒಂದು ಹೂವಿನ ನಗೆ ಬೀರಿ 'ಮಕ್ಕಳೇ ಇನ್ನು ಎರಡು ಮೂರು ವರ್ಷ ಹೋಗಲಿ, ನಿಮ್ಮನ್ನು ಕೂಡಾ ಕಾಗೆ ಬಂದು ಮುಟ್ಟುತ್ತದೆ, ಆವಾಗ ತಿಳಿಯುತ್ತದೆ'' ಅಂತ ಎಷ್ಟೊಂದು ಕೂಲಾಗಿ ಹೇಳಿದರೆಂದರೆ, ಮುಂದಿನ ದಿನಗಳಲ್ಲಿ ಶಾಲೆಗೆ ಹೋಗುವ ಗದ್ದೆ ಅಂಚಿನಲ್ಲೋ, ಜೋಯಿಸರ ಮನೆಯ ಹಾಡಿಯಲ್ಲೋ ಕಾಗೆಗಳು ಕಂಡರೆ, ಮಗ್ಗಿ ಬರೆದ ಸ್ಲೇಟ್ ಅಲ್ಲಿಯೇ ಒಗೆದು, ನಾನು, ಅಕ್ಕ ಕಾಗೆಗಳನ್ನು ಮುಟ್ಟಲು ಹಾತೊರೆಯುತ್ತಿದ್ದೆವು. ಯಾಕೆಂದರೆ ನಮಗಿಬ್ಬರಿಗೂ ಮುಟ್ಟಾಗುವ ಆಟ ಬಹಳ ಹಿಡಿಸಿತ್ತು, ಮುಟ್ಟಾಗುವ ತವಕ ಇತ್ತು. ಚಿಕ್ಕಿಯರು ಮುಟ್ಟಾದಾಗ ಅಮ್ಮ ಕಮ್ಮತ್ತೆ ಹೇಳಿದ ಮಾತುಗಳನ್ನೇ ಹೇಳುತ್ತಿದ್ದಳು.

ಉತ್ಸಾಹದ ಚಿಲುಮೆಯಂತಿದ್ದ ಪುಟ್ಟತ್ತೆ ಒಮ್ಮೊಮ್ಮೆ ಅಗ್ರಹಾರದಲ್ಲಿ ಯಾವುದಾದರೂ ಮನೆಯಲ್ಲಿ ತಿಥಿ ಶ್ರಾದ್ಧಕ್ಕೆ ಹೋಗಿಬಂದ ನಂತರ ಅಜ್ಜಯ್ಯನ ಮುಂದೆ ಪಡುಕೋಣೆಯ ಮೂಲೆಯ ಜಗಲಿಯಲ್ಲಿ ಕುಳಿತು ಖಿನ್ನರಾಗುತ್ತಿದ್ದರು. 'ಪುಟ್ಟಾ ಕಿರಿಕಿರಿ ಮಾಡಿಕೊಳ್ಳಲಿಕ್ಕೆ ಅವರಿವರ ಮನೆಗೆ ಯಾಕೆ ಹೋಗುತ್ತೀಯಾ, ಬಿಟ್ಟುಬಿಡು' ಎಂದು ಅಜ್ಜಯ್ಯ ಹೇಳಿದರೆ 'ಮನೇಲಿ ಬರೀ ಬೇಜಾರು ಮಾರಾಯ, ನಡಿಬೇಕಲ್ಲ ನಮ್ಮಿಬ್ಬರ ಹೊಟ್ಟೆ ಪಾಡು' ಅನ್ನುತ್ತಿದ್ದರು. ಅಜ್ಜಯ್ಯನಿಗೂ ಕೊಟ್ಟು ನಡೆಸುವ ತಾಕತ್ತಿರಲಿಲ್ಲ. ಚಿಕ್ಕಿಯರ ಮದುವೆ ಚಿಂತೆ ಅವರನ್ನು ಬಹಳ ಕಾಡುತ್ತಿತ್ತು. ಒಮ್ಮೊಮ್ಮೆ ತೋಟಕ್ಕೆ ನೀರು ಬಿಡುವ

ಸಮಯದಲ್ಲಿ ಬಂದರೆ ಪುಟ್ಟತ್ತೆ ತಮ್ಮನಿಂದ ಹಾರೆ ತೆಗೆದುಕೊಂಡು ಗಿಡಗಳಿಗೆ ನೀರು ಬಿಡುತ್ತಿದ್ದರು. ಪುಟ್ಟತ್ತೆ ಒಂದು ದೈತ್ಯ, ಕಮ್ಮತ್ತೆ ಒಂದು ಗಿಳಿ. ಪುಟ್ಟತ್ತೆ ಎಂಟೆದೆಯ ಛಾತಿ ಉಳ್ಳವಳಾದರೆ, ಕಮ್ಮತ್ತೆ ಕೋಶದೊಳಗೆ ಹುದುಗುವ 'ರೇಶ್ಮೆ ಹುಳದಂತೆ' ನಯ. ಕೆಂಪು ಸೀರೆಯ ಪುಟ್ಟತ್ತೆ ಬಂಡೆಯಂತೆ ಅಚಲವಾದರೆ ನೀಲಿ ಸೀರೆಯ ಕಮ್ಮತ್ತೆ ಅರಬ್ಬಿ ಸಮುದ್ರದಂತೆ ಒಡಲೊಳಗೆ ಎಲ್ಲವನ್ನು ಸುರಿದುಕೊಳ್ಳುವ ಸದ್ದಿಲ್ಲದ ಜೀವಜಲ. ಒಂದು ಹೂವಿನಂಥ ಮುಗುಳ್ನಗೆ, ಸುರಿಗೆಯ ಸುವಾಸನೆಯ ಮಾತು ಕಮ್ಮತ್ತೆಯದಾದರೆ, ಕಾಯಿ ತುರಿಯುವ ಹೆರೆಮಣೆಯ ಸ್ವರ ಪುಟ್ಟತ್ತೆಯದು.

ಒಂದು ಸಲ ಅಧಿಕ ಪ್ರಸಂಗದಿಂದ ಪುಟ್ಟತ್ತೆಯನ್ನ ಕೇಳಿದ್ದೆ 'ನಿಮ್ಮ ಗಂಡ ಹ್ಯಾಂಗಿದ್ದರು'. ಎದೆ ಆಳದಿಂದ ಹೇಳಿದರು ''ಅವರ ಮುಖವನ್ನೇ ನಾನು ನೋಡಿಲ್ಲ ಮಗಾ''. ಅಂತಹ ಪುಟ್ಟತ್ತೆಗೆ ಯಾಕೆ ತಲೆ ಬೋಳಿಸಿದರು ಅಂತ ಕಡೇವರೆಗೆ ನನ್ನ ತಲೆಗೆ ಹೊಳೆಯಲೇ ಇಲ್ಲ.

ಈಗ ಎರಡು ವರ್ಷದ ಕೆಳಗಿನ ಮಾತು. ಮಾತಿಗೆ ಅಮ್ಮ ನನ್ನೊಂದಿಗೆ ಹೇಳಿದಳು. ಶೀನು ಉಪಾಧ್ಯಾಯರು ಜೀವಂತ ಇರುವಾಗಲೇ ಪುಟ್ಟತ್ತೆ ಮತ್ತು ಕಮ್ಮತ್ತೆಯನ್ನು ಗೋಕರ್ಣಕ್ಕೆ ಕರೆದುಕೊಂಡು ಹೋಗಿ ಘಟಶ್ರಾದ್ಧ ಮಾಡಿಸಿದರು ಅಂತ. ಯಾಕೆ ಅಂತ ಕೇಳಿದೆ. ಅಮ್ಮ ಹೇಳಿದಳು ಶೀನು ಉಪಾಧ್ಯಾಯರು ತೀರಿಹೋದ ಬಳಿಕ, ಮಕ್ಕಳಿಲ್ಲದ ಆ ಇಬ್ಬರಿಗೂ ಯಾರು ಅಪರಕರ್ಮ ಮಾಡಿ ಪಿಂಡ ಹಾಕುವರೂಂತ ಜೀವಂತ ಇರುವಾಗಲೇ ಘಟಶ್ರಾದ್ಧ ಮಾಡಿಸಿದರೆಂದು. ನಾನು ಅವತ್ತು ಮನಸ್ಸಿನಲ್ಲಿಯೇ ಗಟ್ಟಿ ನಿರ್ಧಾರ ಮಾಡಿಬಿಟ್ಟೆ. ಸತ್ತರೂ ಶ್ರಾದ್ಧ ಬೇಡ. ಜೀವಂತವಿದ್ದರೆ ಬೇಡವೇ ಬೇಡ. ಮೋಕ್ಷ ಸಿಗದಿದ್ದರೆ ಅಷ್ಟೇ ಹೋಯ್ತು. ಹಾಗಂತ ಆಪರೇಶನ್ ವೇಳೆಗೆ ನನಗೇನಾದರೂ ಆದರೆ ಡೆಡ್ ಬಾಡಿಯನ್ನು ಮೆಡಿಕಲ್ ಕಾಲೇಜಿಗೆ ಕೊಟ್ಟುಬಿಡಬೇಕು ಅಂತ ವಿಲ್ ಬರೆದಿದ್ದೆ. ಸರ್ಜನ್ ದಂಗಾಗಿ ಹೋಗಿದ್ದರು. ಬಹುಶಃ ಪುಟ್ಟತ್ತೆ-ಕಮ್ಮತ್ತೆಗೆ ಜೀವಂತ ಇದ್ದಾಗ ಮಾಡಿದ ಘಟಶ್ರಾದ್ಧದ ವಿಷಯ ನನಗೆ ಅಷ್ಟೊಂದು ಪರಿಣಾಮ ಬೀರಿರಬಹುದು.

ಪುಟ್ಟತ್ತೆ-ಕಮ್ಮತ್ತೆ ಒಂದು ವಿಷಯವನ್ನು ಮಾತ್ರ ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅದೇನೆಂದರೆ ಅವರ ಮನೆಯಲ್ಲಿ ಚಾವಡಿಯಲ್ಲಿ ಇದ್ದ ಕಪ್ಪು ತೆಂಗಿನ ಮರದ ಉದ್ದ ಕೈಯುಳ್ಳ ಆರಾಮ ಖುರ್ಚಿ ಶೀನು ಉಪಾಧ್ಯಾಯ್ರು ಖಾಯಂ ಆಗಿ ಕೂಡುತ್ತಿದ್ದ ಖುರ್ಚಿ. ಅದರ ಮೇಲೆ ಅವರಿಬ್ಬರಾಗಲೀ ಅಥವಾ ಮನೆಗೆ ಬಂದ ಅತಿಥಿಗಳಾಗಲೀ, ನಾವು ಮಕ್ಕಳಾಗಲೀ ಯಾರೂ, ಎಂತಹ ಪ್ರಸಂಗದಲ್ಲೂ ಕೂಡ್ರುವ ಹಾಗಿಲ್ಲ. ಬಹುಶಃ ಶೀನು ಉಪಾಧ್ಯಾಯರು ತೋರಿಸಿದ ಪ್ರೀತಿ ಮಮತೆಗೋ ಅಥವಾ ಗೌರವಕ್ಕೋ ಗೊತ್ತಿಲ್ಲ. ಮುಟ್ಟಿದರೆ ಮಾಸಬೇಕು ಅಂತಹ ಖುರ್ಚಿ ಅದು. ಬಣ್ಣದ ಗಾಜಿನ ಕಿಟಕಿಯ ನೆರಳು ಆ ಖುರ್ಚಿಯ ಮೇಲೆ ಬಿದ್ದಾಗ ಖುರ್ಚಿಯು ಥಳಥಳ ಹೊಳೆಯುತ್ತಿತ್ತು. ಮೊನ್ನೆ ಮನೆ ಮಾರಿದಾಗ ಆ ಖುರ್ಚಿ ಯಾರ ಮನೆಯ ದಿವಾಣ ಅಲಂಕರಿಸಿತೋ. ಆ ಖುರ್ಚಿಯಲ್ಲಿ ಇದೇ ಮೂರು ಜನರ ಬದುಕಿನ ಸಂಕೀರ್ಣತೆ ಇತ್ತು.

ಲವಲವಿಕೆಯ ಪುಟ್ಟತ್ತೆ ಎರಡು ವರ್ಷದಿಂದೀಚೆ ಯಾಕೋ ಮಂಕಾಗುತ್ತ ಬಂದರು. ವಿಶೇಷದ ಊಟಕ್ಕೆ ಅಡುಗೆಗೆ ಬರುವುದನ್ನು ನಿಲ್ಲಿಸಿಬಿಟ್ಟಿದ್ದರು. ಒಂದು ರಾತ್ರಿ ಇದ್ದಕ್ಕಿದ್ದಹಾಗೆ ಗೂಡುಬಿಟ್ಟ ಪಾರಿವಾಳದ ಹಾಗೆ ಸದ್ದಿಲ್ಲದೇ ಹೋಗಿಬಿಟ್ಟರು. ಶೂದ್ರಮನೆಯ ಶೀನು ಬಂದು ಅಮ್ಮನಿಗೆ ಸುದ್ದಿ ತಿಳಿಸಿದರಂತೆ. ಬೆಳಿಗ್ಗೆವರೆಗೆ ಕಾಯ್ದು ಎಲ್ಲಾ ಮುಗಿಸಿ ಬಂದಾಗ, ಇದೇ ದೊಡ್ಡ ಮನೆಯಲ್ಲಿ ಕಮ್ಮತ್ತೆ ಒಬ್ಬರೇ ಆ ಬಣ್ಣದ ಕಿಟಕಿಗೆ ಒರಗಿ ಶೂನ್ಯಭಾವದಲ್ಲಿ ನಿಂತೇ ಇದ್ದರಂತೆ. ಒಂದೆರಡು ದಿವಸ ಅಮ್ಮ ಊಟ ಕಳಿಸಿದಳಂತೆ. 'ಅತ್ತಿಗೆ ನಾಳೆಯಿಂದ ನಾನೇ ಅಡುಗೆ ಮಾಡಿಕೊಳ್ಳುತ್ತೇನೆ', ಎಂದರಂತೆ ಸ್ವಲ್ಪ


ಆತಂಕ ಗಲಿಬಿಲಿಗಳೊಂದಿಗೆ ಕಮ್ಮತ್ತೆ. ಹೇಗೋ ಸುಮಾರು ಒಂದು ವರ್ಷದವರೆಗೆ ಒಂಟಿತನದಲ್ಲಿ ಜೀವನ ನೂಕಿದರು. ಕೋಮಲ ಮೃದು ಮಾತಿನ ಕಮ್ಮತ್ತೆ, ಪುಟ್ಟತ್ತೆ ಹೋದಾಗಿನಿಂದ ತೀರ ಮೌನವಾಗಿಬಿಟ್ಟರಂತೆ.

ಕ್ರಮೇಣ ವರ್ಷದಲ್ಲಿ ಆಸ್ತಿಪಾಸ್ತಿಗೆ ದೂರದ ನೆಂಟರು ಬಂದರು. ಒಂದೊಂದು ಸಾಂತ್ವನದ ಎಳೆಗಳಿಂದ ಮೆಲ್ಲಗೆ ಕೋಮಲ ಮೃದು ಹೃದಯದ ಕಮ್ಮತ್ತೆಯ ಭಾವನೆಗಳನ್ನೆಲ್ಲಾ ವಶೀಕರಣ ಮಾಡಿಕೊಂಡು ಮನೆ ತೋಟ ಎಲ್ಲಾ ಮಾರಿ ಬೆಂಗಳೂರಿಗೆ ಕರೆದುಕೊಂಡು ಹೋಗುವ ವಿಚಾರಮಾಡಿದರು. ಕಮ್ಮತ್ತೆ ಬಹಳ ದುಃಖದಿಂದ ''ವಾಗ್ದೇವಿ ನಾನು ನಮ್ಮ ಯಜಮಾನರು ಮಾಡಿದ ಈ ಮನೆಯಲ್ಲಿಯೇ ಕಡೇವರೆಗೆ ಇರಬೇಕು. ಎಂತ ಮಾಡುವುದು ವೆಂಕಟ ಮನೆ ಮಾರಿ ಬೆಂಗಳೂರಿಗೆ ಕರೆದೊಯ್ಯುತ್ತಾನಂತೆ'' ಎಂದು ಅಮ್ಮನಲ್ಲಿ ಬಿಕ್ಕಿ ಬಿಕ್ಕಿ ಅತ್ತರಂತೆ. ಆ ದಿನ ಮೈಸೂರಿನಿಂದ ಬಂದ ಮಾವ ಅವರ ದುಃಖ ಹಾಗೂ ಅಳು ನೋಡಲಾಗದೇ ಹೇಳಿದನಂತೆ ''ಕಮ್ಮತ್ತೆ ನೀವು ಅಮ್ಮನೊಟ್ಟಿಗೆ ಬಂದು ನಮ್ಮ ಮನೆಯಲ್ಲಿಯೇ ಇರಿ. ಅಮ್ಮ ಒಬ್ಬಳೇ ಇದ್ದಾಳೆ. ಅಡುಗೆಗೆ ಒಂದು ಹೆಣ್ಣನ್ನು ನೋಡೋಣ'' ಎಂದನಂತೆ. ಆದರೆ ಭಾವನೆಗಳೇ ಇಲ್ಲದ ಸಂಬಂಧಿಕರು ಬಿಡಬೇಕಲ್ಲಾ. ಕಡೆಗೂ ಮನೆ-ತೋಟ ಮಾರಾಟಕ್ಕೆ ಹಚ್ಚಿಯೇ ಬಿಟ್ಟರು. ದುಬೈಲಿ ಇದ್ದ ಕ್ರಿಶ್ಚಿಯನ್ ಕುಟುಂಬವೊಂದು ಐದು ಲಕ್ಷಕ್ಕೆ ಮನೆ ಖರೀದಿಸಿ ವಾಸಕ್ಕೆ ಬರುವುದೆಂಬ ತೀರ್ಮಾನ ಮಾಡಿಕೊಂಡುಬಿಟ್ಟರು.

ಮನೆಯಲ್ಲಿದ್ದ ಪುಟ್ಟ ಪುಟ್ಟ ಸ್ಟೀಲಿನ ಪಾತ್ರೆಗಳನ್ನು ಕಮ್ಮತ್ತೆ ದುಃಖದಿಂದ ತಮ್ಮ ನೆನಪಿಗಾಗಿ ಅಗ್ರಹಾರದ ಎಲ್ಲರ ಮನೆಗೂ ಹೋಗಿ ಹಂಚಿ, ಮರಕಿ ಮರಕಿ ಸಾಕಾಗಿ ಕಾಲೆಳೆಯುತ್ತ ಬೆಂಗಳೂರು ಬಸ್ಸು ಹತ್ತಿದರಂತೆ. ಸುಮಾರು ಆರು ತಿಂಗಳಾದನಂತರ ಅಗ್ರಹಾರದವರು ಒಬ್ಬರು ಕಳ್ಳು ಎಳೀತಂತ ಬೆಂಗಳೂರ ಬದಿಗೆ ಹೋದವರು, ಕಮ್ಮತ್ತೆಯನ್ನು ನೋಡಲು ನೆಂಟರ ಮನೆಗೆ ಹೋಗಿ ತಂದ ವರ್ತಮಾನ ಏನೆಂದರೆ ಕಮ್ಮತ್ತೆಯನ್ನು ಒಂದು ಚಿಕ್ಕರೂಮಿನಲ್ಲಿ ಕೂಡಿಹಾಕಿದ್ದರಂತೆ. ಅವರು ಯಾರನ್ನು ಗುರುತಿಸುವ ಸ್ಥಿತಿಯಲ್ಲಿ ಇರಲಿಲ್ಲವಂತೆ. ಆ ನೆಂಟರ ಮನೆಯ ಗೋಡೆ ಗಡಿಯಾರ ಹಾಗೂ ಟಿ.ವಿ.ಯನ್ನು ಕಮ್ಮತ್ತೆ ಒಡೆದು ಹಾಕಿದ್ದರಂತೆ. ಕಮ್ಮತ್ತೆಗೆ ತುಂಬಾ ಮರಲಂತೆ. ಆ ಸುದ್ದಿ ಅಮ್ಮ ಹೇಳಿದಾಗ ಶೀನು ಉಪಾಧ್ಯಾಯರ ಮುದ್ದಿನ ಮಡದಿ ಕಮ್ಮತ್ತೆ, ಅವರ ಬಣ್ಣದ ಮನೆ, ಅಂಗಳದ ಪಾರಿಜಾತ, ಸುರಗಿ ಹೂ, ಒಂದು ಮಂದಸ್ಮಿತ ಮುಗುಳ್ನಗೆ, ಒಂದು ಕೋಮಲ ನುಡಿ, ಒಂದು ಪ್ರೀತಿಯ ಸ್ಪರ್ಶ, ಕಾಯಿಬೆಲ್ಲ ಎಲ್ಲವೂ ನೆನಪಾಗಿ ಎದೆಯಲ್ಲಿ ಮಂಜುಗಡ್ಡೆ ಹೊಯ್ದಂತಾಯಿತು.

ಮೊನ್ನೆ ತಮ್ಮ ಎಲ್ಲರೂ ಅಂಗಳದಲ್ಲಿ ಕುಳಿತಾಗ ಹೇಳಿದ ''ಪುಟ್ಟತ್ತೆ-ಕಮ್ಮತ್ತೆ ಎರಡೂ ಹೋಗಿ ಆಯ್ತಾ'' ತಕ್ಷಣ ನಾನು ಹೇಳಿದೆ ನಾನು, ಬೋಯ ಸತ್ತಾಗ ನಿನ್ನ ಮಕ್ಕಳು ಇದೇ ರೀತಿ ಕೇಳುತ್ತಾರೆ. ''ಕಕ್ಕಿ, ಬೋಯ ಹೋಗಿ ಆಯ್ತು'' ಅಂತ.

ಇದೇ ಆರುತಿಂಗಳು ಹೇಳಲಾಗದ ದುಗುಡ ದುಮ್ಮಾನ ಕಾಡಿತು. ದಿನಕ್ಕೆ ಒಮ್ಮೆಯಾದರೂ ತಂಗಿಗೆ ಹೇಳುತ್ತೇನೆ, ಇನ್ನು ನಾಲ್ಕೈದು ವರ್ಷಗಳಲ್ಲಿ ನಾವಿಬ್ಬರೂ ಪುಟ್ಟತ್ತೆ-ಕಮ್ಮತ್ತೆಗಳಾಗುತ್ತೇವೆ ಎಂದು. ತಂಗಿ ಅದೇ ಬುದ್ಧನ ಸಾತ್ವಿಕ ನಗೆ ನಕ್ಕು ತೀರಾ ಮೌನವಾಗುತ್ತಾಳೆ. ಆ ಮೌನದಲ್ಲಿ ನನಗೆ ಕಮ್ಮತ್ತೆಯ ಆತ್ಮ ಗೋಚರಿಸಿದಂತಾಗುತ್ತದೆ.



■

ಭಾವನಾ

[illegible]

ಸ್ಫೂರ್ತಿದೇವತೆ!

ನೀವು ಓದಿದ ಕೃತಿಯ ಪಾತ್ರವೊಂದು ಇಷ್ಟ ದೇವತೆಯಾಗಿ ನಿಮ್ಮನ್ನು ಕಾಡಿರಬಹುದು. ರೋಲ್‌ಮಾಡೆಲ್ ಆಗಿ ನಿಮ್ಮನ್ನು ರೂಪಿಸುತ್ತಿರಬಹುದು. ನಿಮ್ಮನ್ನು ಕಲಕಿ ಮನದಲ್ಲಿ ನೆಲೆಯೂರಿದ ಇಂತಹ ಸ್ಫೂರ್ತಿದೇವತೆಗಳ ಬಗ್ಗೆ, ಅವರು ನಿಮ್ಮ ನಿಲುವನ್ನು, ದಾರಿಯನ್ನು ಪ್ರಭಾವಿಸಿದ ಬಗ್ಗೆ ಒಂದು ಫುಲ್‌ಸ್ಕೇಪ್ ಹಾಳೆಗೆ ಮೀರದಂತೆ ಬರೆದು ಕಳುಹಿಸಿ. ನಿಮ್ಮ ಈ ಪುಟ, ಸಾಹಿತ್ಯ ಮತ್ತು ಬದುಕಿನ ವಿಶಿಷ್ಟ ಗುಣಾತ್ಮಕ ಸಂಬಂಧದ ಮೇಲೆ ಬೆಳಕು ಚೆಲ್ಲಬಹುದು. ಇತರರಿಗೂ ಉಪಯುಕ್ತವಾಗಬಲ್ಲುದು.

ನಿಮ್ಮ ಮುದ್ದು ತಪ್ಪು !

ನೀವು ಮಾಡಿದ ತಪ್ಪಿನಿಂದಾಗಿ ಅನಿರೀಕ್ಷಿತ ವಾಗಿ ನಿಮಗೋ, ಇತರರಿಗೋ ಒಳ್ಳೆಯದಾಗಿದೆಯೇ? 'ಬ್ಲೆಸಿಂಗ್ ಇನ್ ಡಿಸ್‌ಗೈಸ್'ಥರದ ಪ್ರಮಾದ ಮಾಡಿ ಆ ಕುರಿತು ಹೆಮ್ಮೆಪಟ್ಟುಕೊಳ್ಳುವಂತಾಗಿತ್ತೆ? ಅಂತಹ ಕುತೂಹಲಕಾರಿ ತಪ್ಪಿನ ಬಗ್ಗೆ ನಮಗೆ ಸಂಕ್ಷಿಪ್ತವಾಗಿ ಬರೆದು ತಿಳಿಸಿ. ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ. ಆಯ್ಕೆಯಾದ ಬರಹಗಳಿಗೆ ಬಹುಮಾನ ಉಂಟು.

ಮಧುವನ

ಉತ್ತಮ ಶೈಲಿಯ, ನವಿರು ಅನುಭವಗಳನ್ನು ಹೇಳುವ ಒಳ್ಳೆಯ ಲಲಿತ ಪ್ರಬಂಧಗಳು 'ಭಾವನಾ'ಕ್ಕೆ ಬೇಕಾಗಿವೆ. ಮಧುವನ ಶೀರ್ಷಿಕೆ ಯಡಿ ಅವುಗಳನ್ನು ಪ್ರಕಟಿಸಲಾಗುವುದು. ನಿಮ್ಮ ನೆನಪಿನ ತೋಟದಿಂದ, ನಿತ್ಯಜೀವನದ ಅನುಭವಗಳಿಂದ ಇಂತಹ ಸಂಗ್ರಹಯೋಗ್ಯ ನಾಲ್ಕೈದು ಪುಟಗಳಿಗೆ ಮೀರದ ಪ್ರಬಂಧ ರಚಿಸಿ ನಮಗೆ ಕಳಿಸಿ.

ಕತೆಗಳಿಗಾಗಿ ವಿನಂತಿ

ಒಳ್ಳೆಯ ಕಥಾಸಾಹಿತ್ಯಕ್ಕೆಂದೇ ಮೀಸಲಾದ ಸುಮಧುರ ಮಾಸಿಕ 'ಭಾವನಾ'ಕ್ಕೆ ಕತೆಗಳನ್ನು ಆಹ್ವಾನಿಸುತ್ತಿದ್ದೇವೆ. ಅನ್ಯಭಾಷೆಯಿಂದ ಅನುವಾದಿತ, ಸಂವೇದಿತ ಕತೆಗಳಿಗೂ ಸ್ವಾಗತ. ಆದರೆ ಅವು ಕನ್ನಡದಲ್ಲಿ ಚೆನ್ನಾಗಿ ಮೂಡಿ ಬರುವುದು ಮುಖ್ಯ. ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದು /ಬೆರಳಚ್ಚು ಮಾಡಿಸಿ ಕಳಿಸಿಕೊಡಿ. ಸ್ವೀಕೃತ ಕತೆಗಳ ಕುರಿತು ತಿಳಿಸಲಾಗುವುದು.

ಉತ್ತಮ ವರ್ಣಪಾರದರ್ಶಿಕೆಗಳಿಗಾಗಿ ಕೋರಿಕೆ

ಸುಮಧುರ ಮಾಸಿಕ 'ಭಾವನಾ'ದ ಮುಖಪುಟಕ್ಕಾಗಿ ಒಳ್ಳೆಯ ತೈಲವರ್ಣ ವ್ಯಕ್ತಿಚಿತ್ರಗಳು ಬೇಕು.ಅವುಗಳ ಛಾಯಾಚಿತ್ರ/ ವರ್ಣಪಾರದರ್ಶಿಕೆ ಕಳಿಸಿ. ಬಳಕೆಯ ನಂತರ ಗೌರವ ಧನದೊಂದಿಗೆ ಮರಳಿಸಲಾಗುವುದು. ಶೀಘ್ರವೇ ಕಳಿಸಿಕೊಡಿ.

■

ಭಾವನಾ
ಸಂಪಾದಕೀಯ ಕಾರ್ಯಾಲಯ
ಪವನಜ ಕಾಂಪ್ಲೆಕ್ಸ್
ನಂ. 32, 2ನೆಯ ಮುಖ್ಯರಸ್ತೆ,
ವೈಯಾಳಿಕಾವಲ್, ಬೆಂಗಳೂರು-560 003

ತೆರೆದ ಅಂಚೆ

'ಭಾವನಾ'ದ ಪುಟಪುಟವೂ ಸುಂದರ. ಲವಲವಿಕೆಯಿಂದ ಕೂಡಿದೆ. ಓದುಗರ ಅಂಕಣಗಳ ಕಲ್ಪನೆ ವಿಭಿನ್ನವಾಗಿದ್ದು, ಕುತೂಹಲಕರವಾಗಿದೆ.

ಬೆಂಗಳೂರು ಎಂ.ದಿನೇಶ ತೊಡಿಕಾನ

'ಭಾವನಾ'ದ ಚಿಹ್ನೆಯಂತೂ ಅದ್ಭುತ. ಅಷ್ಟು ಸರಳ ಗೆರೆಗಳಲ್ಲಿ ಎಷ್ಟೊಂದು ಅರ್ಥ!

ತುಮಕೂರು ರೇಖಾ ಕುಂದಾರು

'ಭಾವನಾ' ಬೊಂಬಾಟಾಗಿದೆ. ಬದುಕಿ ಬಾಳಲಿ.

ಹೊಸಪೇಟೆ ವಿ. ಪ್ರಾಣೇಶ ರಾವ್

ಈ ಸಂಚಿಕೆಯ ಹಿಂದೆ ಇರುವ ಶ್ರಮ, ಕಾಳಜಿ ಪ್ರತಿ ಪುಟದಲ್ಲಿ ಎದ್ದು ಕಾಣುತ್ತವೆ. ತುಂಬಾ ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗಿದೆ.

ಬೆಂಗಳೂರು ಡಾ॥ ಎಚ್. ಚಂದ್ರಶೇಖರ

'ಭಾವನಾ'ಳ get up ಒಂದು ಬಗೆಯ ನಿರಾಭರಣ ಸುಂದರಿಯ ಸಹಜ ಚೆಲುವನ್ನು ನೆನಪಿಸುತ್ತದೆ. ಸದಭಿರುಚಿಯನ್ನು ಬೆಳೆಸುವುದೇ ಭಾವನಾಳ ಪ್ರಮುಖ ಗುರಿಯಾಗಿರಲಿ.

ಹೊನ್ನಾಳಿ ಬಿದರಹಳ್ಳಿ ನರಸಿಂಹಮೂರ್ತಿ

ಮೊದಲ ಸಂಚಿಕೆಯಲ್ಲೇ ನಮ್ಮೆಲ್ಲರ ನಿರೀಕ್ಷೆಯನ್ನು ನಿಜವಾಗಿಸಿದ್ದೀರಿ.

ಬೆಂಗಳೂರು ಎಂ.ಎಚ್. ನಾಯಕ ಬಾಡ

'ಭಾವನಾ' ಕನ್ನಡದ ಮಹತ್ವದ ಮಾಸಪತ್ರಿಕೆಯಾಗುವ ನಂಬಿಕೆ ಮತ್ತು ಭರವಸೆಯನ್ನು ಮೂಡಿಸುತ್ತದೆ.

ಬೆಂಗಳೂರು ಟಿ.ಜಿ. ರಾಘವ

ಕನ್ನಡಿಗರಿಗೆ ಒಂದು ಹೊಸಾ ರುಚಿ ನೀಡೀರಿ. ಮುಂದಿನ ಸಂಚಿಕೆ ಬರೂತನಕ ಇದನ್ನ ಮೆಲಕಾಡಸ್ತಿರ್ತೀವಿ. ನಿಮಗ ನಿಮ್ಮ 'ಬಳಗಕ್ಕ ನಮ್ಮ ಸಾವಿರ ಸಾವಿರ ಶರಣರೀ.

ಬೆಂಗಳೂರು ಶಶಿಕಲಾ ವೀರಯ್ಯಸ್ವಾಮಿ

ಮುಖಪುಟದ ಹೆಣ್ಣುಮಗಳ ಮುಗ್ಧತೆ-ಚೆಲುವುಗಳನ್ನೇ ಒಳಗೂ ತುಂಬಿಕೊಂಡು ಅತ್ಯಂತ ಆಪ್ಯಾಯಮಾನವಾಗಿ ಮೂಡಿಬಂದಿರುವ 'ಭಾವನಾ' ಎತ್ತರದ ಮೌಲ್ಯಗಳನ್ನು ಬಿಂಬಿಸುವಲ್ಲಿ ಸಫಲವಾಗಿದೆ. ಪ್ರತಿಪುಟವೂ ತನ್ನ ಸೌಂದರ್ಯದ ಹಿಂದಿರುವ ಪರಿಶ್ರಮದ ಕತೆಯನ್ನು ಮುದ್ದಾಗಿ ಬಿತ್ತರಿಸುತ್ತಿದೆ.

ಬೆಂಗಳೂರು ಭಾರತೀ ಕಾಸರಗೋಡು

'ಭಾವನಾ' ಹೇಗೆ ಇರಬೇಕೆಂದು ಊಹಿಸಲಾಗಿತ್ತೋ, ಅದೇ ರೀತಿಯಲ್ಲಿ ಮೂಡಿಬಂದಿದೆ. ನಗೆಯೇ ತರಿಸದ ವ್ಯಂಗ್ಯಚಿತ್ರಗಳು, ಪುಟಗಳನ್ನು ನುಂಗುವ ಜಾಹೀರಾತುಗಳು, ಬಿಗಿ ಇರದ ಕತೆಗಳು, ಭಾವನೆಯೇ ಇಲ್ಲದ ಕಾವ್ಯಗಳು -ಇವುಗಳಿಂದೆಲ್ಲಾ ಹೊರತಾದ 'ಭಾವನಾ' ಕನ್ನಡದ ಒಂದು ಸುಂದರ ಮಾಸಪತ್ರಿಕೆಯಾಗಿ ಮೂಡಿಬಂದಿದೆ. ಮಾಸಭವಿಷ್ಯ, ಧರ್ಮ, ರಾಜಕೀಯ, ವೈದ್ಯರ ಸಲಹೆ, ಕಾನೂನು ಸಲಹೆ, ಹೊಸರುಚಿ – ಇವುಗಳನ್ನೆಲ್ಲಾ ಪ್ರಕಟಿಸಲು ಬೇರೆ ಮಾಸಪತ್ರಿಕೆಗಳಿವೆ. ಅವುಗಳಿಗೆಲ್ಲಾ 'ಭಾವನಾ'ದಲ್ಲಿ ಖಂಡಿತವಾಗಿಯೂ ಅವಕಾಶ ಬೇಡ.

ದ.ರಾ.ಬೇಂದ್ರೆಯವರು ಕತೆಯನ್ನೂ ಬರೆದಿದ್ದಾರೆ ಎಂದು ಗೊತ್ತೇ ಇರಲಿಲ್ಲ. ಅದೇ ರೀತಿ ಚಾರ್ಲಿ ಚಾಪ್ಲಿನ್ ಕೂಡ. ಯಾವುದೇ ಕಾರಣಕ್ಕೂ ಕೊನೇ – ಸಿಪ್ ನಿಲ್ಲಿಸಬೇಡಿ.

ಬೆಂಗಳೂರು **ಎಸ್. ಶಂಕರ್**

ಪ್ರತಿ ಪುಟದಲ್ಲೂ ಸಾರ್ಥಕ ಓದಿನ ಸರಕು ಹೊಂದಿಸಿದ್ದೀರಿ. ಕಾಗದದ ದೋಣಿ, ಶಬ್ದ ತೀರ, ಕಥನ ಕುತೂಹಲ, ಗರಿ, ಕವಿಸಮಯ, ಇನ್ನೇನು ಕಡೇ ಪುಟವೊಂದೇ ಬಾಕಿ ಎನ್ನುವಾಗ ಅಲ್ಲೂ ಎಂತಹುದೋ ಆರ್ದ್ರತೆಯನ್ನು ಓದು ಗನದಾಗಿಸುವ ಕೊನೇ ಸಿಪ್.... ಪುಟ ವಿನ್ಯಾಸ, ಚಿತ್ರ ಬೆಂಬಲ ಎಲ್ಲವೂ ಚೆನ್ನಾಗಿದೆ.

ಬೆಂಗಳೂರು **ವೆಂಕಟ್ರಮಣ ಗೌಡ**

ಬೆಳಿಗ್ಗೆ 'ಭಾವನಾ' ನೋಡಿದಾಗಿನಿಂದ ಯಾಕೊ ಬಹಳ ದಿನಗಳ ನಂತರ ಕಂಡ ಆಪ್ತ ಗೆಳತಿಯ ಬಗೆಗಿನ ತಲ್ಲಣಗಳಂತೆನಿಸಿ, ಖುಷಿ, ಖುಷಿಯಾಗಿದ್ದೇನೆ.


ರಾಯಚೂರು **ತುರುವಿಹಾಳ ಚಂದ್ರು**

ಭಾವನಾ ಇಂದಿನ ಮಾಸಿಕಗಳಿಗಿಂತ ತೀರಾ ಭಿನ್ನವಾಗಿ ಬಂದಿದೆ. ಶತಮಾನದ ಮೆಲುಕು, ವಿಶ್ವಭಾರತಿ, ಶಬ್ದತೀರ, ಕಾಗದದ ದೋಣಿ, ಗರಿಯಂತಹ ಅಂಕಣಗಳ ಮೂಲಕ ಹೊಸತನ್ನು ಸಂಯೋಜಿಸಿರುವಿರಿ. ಅಕ್ಥರ್, ಗುಲ್ಜಾರ್, ಚಾಪ್ಲಿನ್, ಜೇಮ್ಸ್ ಥರ್ಬರ್‌ರನ್ನು ಸೇರಿಸಿದ್ದು ತಮ್ಮ ಸೃಜನಶೀಲ ಮನಸ್ಸಿನ ತುಡಿತದ ಸಂಕೇತ.

ರಾಜಲಕ್ಷ್ಮಿರಾವ್, ಎ.ಕೆ. ರಾಮಾನುಜನ್, ಬಿ.ಸಿ. ದೇಸಾಯಿ, ಶ್ರೀಕೃಷ್ಣ ಆಲನಹಳ್ಳಿಯವರಂತಹ ಮರೆತು ಹೋಗುತ್ತಿರುವ ಕತೆಗಾರರ ಕತೆ ಪ್ರಕಟಿಸಿ.

ಚಿಕ್ಕದಿನಕೊಪ್ಪ **ಮಹಾವೀರ ಪಾಟೀಲ**

ನೀರಿನ ಪಾತ್ರೆಯಲ್ಲಿ ಹಾಕಿದ ಎರಡು ಹನಿ ಬಣ್ಣ ಪೂರ್ತಿಯಾಗಿ ಹರಡಿಕೊಳ್ಳುವ ಹಾಗೆ



'ಭಾವನಾ' ಎಲ್ಲರ ಒಳಗೆ ಹರಡಿಕೊಳ್ಳುತ್ತಿದ್ದಾಳೆ. ಪ್ರತಿಪುಟವೂ ಹುಡುಗನೊಬ್ಬ ತನ್ನ ಹುಡುಗಿಗೆ ಬರೆದ ಪತ್ರದಂತೆ ಕಲಾತ್ಮಕವಾಗಿದೆ, ರೋಚಕವಾಗಿದೆ. ಅದರ ಹಿಂದೆ ಅಷ್ಟೇ ಅಕ್ಕರೆಯ, ಮನಸ್ಸೊಂದು ಕೆಲಸಮಾಡಿದೆ.

ಅಂಕೋಲಾ **ಸಂದೀಪ ನಾಯಕ**

'ಭಾವನಾ' ಹುಟ್ಟಿನಲ್ಲೇ ಮೃದು ಹರೆಯದ ಹುಡುಗಿಯಂತಿದ್ದಾಳೆ! 'ಭಾವನಾ'ದಲ್ಲಿ, ಹೊಸ ಹುಡುಗ-ಹುಡುಗಿಯರು ನಾವು ಹೊಸ-ಹೊಸತನ್ನು ನಿರೀಕ್ಷಿಸುತ್ತಿ ದ್ದೇವೆ.


ಮಹಾಲಿಂಗಪುರ **ವಿಭಾ ತಿರಕಪಡಿ**

'ಪತ್ರಿಕೆಗಳೆಂದರೆ ಹೇಗಾದರೂ ಮಾಡಿ ಓದುಗರನ್ನು ಸೆಳೆಯಬೇಕು ಎಂದು ಹಾತೊರೆಯುವವು' ಎಂಬ ಸಂದರ್ಭದಲ್ಲಿ ಸದಭಿರುಚಿಯ ಚೌಕಟ್ಟಿನಲ್ಲಿ ನವಿರಾದ 'ಭಾವನಾ' ಲೋಕಕ್ಕೆ ಓದುಗರನ್ನು ಕರೆದೊಯ್ಯುವ ನಿಮ್ಮ ಪ್ರಯತ್ನ ಯಶಸ್ವಿಯಾಗಲಿ ಎಂದು ನನ್ನ ಹಾರೈಕೆ.

ಬೆಂಗಳೂರು **ಪ್ರಾಣ್**

ಮೊದಲ ಸಂಚಿಕೆಯೇ ಆಕರ್ಷಕವಾಗಿದೆ. ನೋಡಿದ ತಕ್ಷಣ ಕೈಗೆತ್ತಿಕೊಳ್ಳುವಂತಿದೆ. ಕತೆ-ಕತೆಗಾರರ ಜೋಡಣೆ ಸೂತ್ರರೂಪಿಯಂತಿದ್ದರೂ ನಿಮ್ಮ ಆಶಯಗಳ ಹಿಂದಿರುವ ಕಳಕಳಿ-ಆಸೆ-ಹುಮ್ಮಸ್ಸು ಮೆಚ್ಚುಗೆಗೆ ಅರ್ಹವಾಗಿದೆ.

ಮೈಸೂರು **ಎ.ಎನ್. ಲಕ್ಷ್ಮೀನಾರಾಯಣ**







ವಿಜಯ ಕರ್ನಾಟಕ, ನೂತನ ಮತ್ತು ಭಾವನಾ ಸಂಪಾದಕ ಬಳಗದೊಂದಿಗೆ ಬರಗೂರು ಮತ್ತು ಸ್ವಾಮಿ ಪುರುಷೋತ್ತಮಾನಂದಜೀ

ಭಾವನಾ ಮೊದಲ ಸಂಚಿಕೆಯ ಬಿಡುಗಡೆ

ಏಪ್ರಿಲ್ 5, 2000 ಯುಗಾದಿಯಂದು 'ಭಾವನಾ'ದ ಚೊಚ್ಚಲು ಸಂಚಿಕೆಯನ್ನು ಸಾಹಿತಿ, ಕನ್ನ
ಸಂಪಾದಕೀಯ ಕಾರ್ಯಾಲಯದಲ್ಲಿ ಪ್ರಕಾಶಕ ವಿಜಯ ಸಂಕೇಶ್ವರರ ಅಧ್ಯಕ್ಷತೆಯಲ್ಲಿ ನಡೆದ
ಆಗಮಿಸಿದ್ದರು. ಸಾಹಿತ್ಯ, ಕಲೆ, ಸಂಗೀತ, ಸಿನಿಮಾ, ರಂಗಭೂಮಿ ಹೀಗೆ



ಪ್ರಕಾಶಕ
ವಿಜಯ ಸಂಕೇಶ್ವರ
ಮತ್ತು
ಬರಗೂರು ರಾಮಚಂದ್ರಪ್ಪ



ಉಪಸ್ಥಿತ ಹಿತೈಷಿಗಳ
ನೋಟ

ಧಿಕಾರದ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ನಮ್ಮ ಬೆಂಗಳೂರಿನ
ಂಭಕ್ಕೆ ರಾಮಕೃಷ್ಣಾಶ್ರಮದ ಸ್ವಾಮಿ ಪುರುಷೋತ್ತಮಾನಂದಜೀ ಅವರು ವಿಶೇಷ ಅತಿಥಿಗಳಾಗಿ
ಅತಿಥಿಗಳು ಆತ್ಮೀಯವಾಗಿ ಪಾಲ್ಗೊಂಡು ಪತ್ರಿಕೆಗೆ ಶುಭ ಹಾರೈಸಿದರು.



ಕೊನೇ-ಸಿಪ್

ಚಂದಮಾಮ್

- ''ಕಹೋನಾ ಪ್ಯಾರ್ ಹೈ'' ಹೀರೋ ಹೃತಿಕ್ ರೋಷನ್‌ಗೆ ಬಲಗೈಲಿ, ಎರಡೆರಡು ಹೆಬ್ಬೆರಳಂತೆ! ಹೀಗಾಗಿ ''ಥಮ್ಸ್ ಅಪ್'' ಕಂಪೆನಿಗೆ ಬಹಳ ಖುಷಿಯಾಗಿದೇಂತ ಸುದ್ದಿ. ಆತ ಎರಡು ''ಬೆರಳ್'' ಎತ್ತಿದರೆ ಸಾಕು, ಕೋಟಿಗಟ್ಟಲೆ ''ಕೊರಳ್'' ತಂಪಾಗಿಸುವಂತೆ ಮಾರಾಟ ಹೆಚ್ಚುತ್ತದೆ ಅಂತವರ ಅಂಬೋಣ.

  ಕಟ್ಟುಮಸ್ತಾಗಿರುವ ಢಿಶುಂ ಢಿಶುಂ ''ರೋಷ''ನ್ ನರಪೇತಲನಾಗಿಬಿಟ್ಟರೆ, ಆತನನ್ನು ಹೃತಿಕ್ ರೇಷನ್ ಅಂತ ಕರೀಬೇಕಾಗಬಹುದು.

- ಕನ್ನಡದ ಸಮನ್ವಯ ಕವಿಗಳಲ್ಲೊಬ್ಬರ ಅಭಿಮಾನಿ ''ನೀವು ಎರಡೂ ಬಗೆಯ ಕಾವ್ಯ ಚೆನ್ನಾಗಿಯೇ ಬರೀತೀರಿ'' ಎಂದು ಹೇಳಿದಾಗ, ಕವಿ ಮುಖ ಗಂಟಿಕ್ಕಿ ''ಕೊನೆಗೂ ಎರಡೇ ರೀತಿಯ ಕಾವ್ಯ ಇರೋದು ಕಣ್ರೀ – ಒಳ್ಳೇ ಕಾವ್ಯ, ಕೆಟ್ಟ ಕಾವ್ಯ'' ಎಂದು ಗುಡುಗಿದರಂತೆ. ಅದಕ್ಕೆ ಅಭಿಮಾನಿ ''ಅದೇ ಸಾರ್, ನಾನು ಹೇಳಿದ್ದು – ನೀವು ಇವೆರಡನ್ನೂ ಸಮಸಮನಾಗೇ ಬರೆದಿದ್ದೀರಿ'' ಎಂದರಂತೆ!

- ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಕವಿಗೋಷ್ಠಿಯೊಂದನ್ನು 'ಬೋರ್‌ವೆಲ್' ಕಂಪೆನಿಯೊಂದು ''ಪ್ರಾಯೋಜಿಸಿ''ತ್ತು. ತಲೆನೋವಿನ ಗುಳಿಗೆಗಳ ತಯಾರಕರೂ ಇತ್ತ ಗಮನ ಹರಿಸುವುದು ಲೇಸು!

- ''ಅವಳನ್ನು ತಬ್ಬುವುದೋ, ಇವಳನ್ನು ತಬ್ಬುವುದೋ ತಿಳಿಯದೇ ಅವನು ತಬ್ಬಿಬ್ಬು'' – ಎಂಬ ವೈ.ಎನ್ಕೆ ಸಾಲುಗಳನ್ನು ಓದಿ ನಟಿ ''ತಬ್ಬು'' ಅಭಿಮಾನಿಗಳು ಕಂಡಾಪಟ್ಟೆ ಖುಷಿಪಡ್ತಾರಂತೆ.

- ಸ್ವತಃ ಮಾತಿನ ಮಲ್ಲರಾಗಿದ್ದ ಮತ್ತು ಬೇರೆ ಮಾತುಗಾರರನ್ನು ಅಷ್ಟೊಂದು ಸಹಿಸಿಕೊಳ್ಳದ ವೈಎನ್ಕೆ, ''ಅಂತ'' ಕಾದಂಬರಿ ಖ್ಯಾತಿಯ ಎಚ್.ಕೆ. ಅನಂತರಾವ್‌ಗೆ ಒಮ್ಮೆ ''ಹೆಚ್ ಕೆ ಅನಂತರಾವ್, ಹೆಚ್‌ಗೆ ಮಾತಾಡ್‌ಬೇಡಿ'' – ಎಂದರಂತೆ!

- **ಕಚಗುಳಿ:** ಎ.ಕೆ. ರಾಮಾನುಜನ್ ಚಿಕಾಗೋದಲ್ಲಿ ದೊಡ್ಡ ಪ್ರೊಫೆಸರ್ ಆಗುವುದಕ್ಕೆ ಮೊದಲು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕಲಿಸುತ್ತಿದ್ದರು. 'ನರಪೇತಲ' ಮೇಷ್ಟ್ರು, ದನದ ದೊಡ್ಡಿಯಂತೆ ಸೇರಿರುತ್ತಿದ್ದ ದಾಂಡಿಗರ ಕ್ಲಾಸನ್ನು ಕಂಟ್ರೋಲ್ ಮಾಡಬೇಕಾದಾಗಲೆಲ್ಲ 'ಸೈಲೆನ್ಸ್' ಅನ್ನುವ ಬದಲು ಇದ್ದಕ್ಕಿದ್ದಂತೆ ಗಟ್ಟಿಯಾಗಿ 'ಸೆಕ್ಸ್' ಎಂದು ಕೂಗುತ್ತಿದ್ದರು... ಎಲ್ಲಾ ಗಪ್‌ಚುಪ್! ಈಗ? ಕಾಲಕೆಟ್ಟಿದೆ ಬಿಡಿ, ಅದೂ ಸಾಧ್ಯವಿಲ್ಲ! ■

Printed, published and owned by **Vijay Sankeshwar**, Published at 1st Floor, "Giriraj Annexe', P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-253630
Printed at Anand Printers & Publishers, 6/127, 5th Cross, KPN Extn., Bangalore - 560 022
Editor-in-Chief: **Santoshkumar Gulvady** Editor: **Jayant Kaikini**

ರಕ್ಷಾಪುಟ ಮುದ್ರಣ : ರಾಜ್‌ಹನ್ಸ್ ಎಂಟರ್‌ಪ್ರೈಸಸ್, ಬೆಂ. -44 ✆: 3357070



BHAVANA-Monthly May 20
AFD. CR. 1/2000-01